ಸೋಮವಾರ, ಫೆಬ್ರುವರಿ 2, 2026| ₹ 7.00
prajavani.net prajavani
www.prajavani.net

ಕಾಳಿ...
ಮಧ್ಯಪ್ರದೇಶದ ಭೋಪಾಲದಲ್ಲಿ ‘ಥೈಪುಸಂ’ ಆಚರಣೆಯಲ್ಲಿ ಕಾಳಿ ದೇವರ ವೇಷ ತೊಟ್ಟಿದ್ದ ವ್ಯಕ್ತಿ



ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ



ತಿಂಡಿಪ್ರೋತ...
ಪಶ್ಚಿಮ ಬಂಗಾಳದ ನಾದಿಯಾದಲ್ಲಿ, ಜನರು ಕೊಟ್ಟಿದ್ದ ಬಿಸ್ಕತ್ತುಗಳನ್ನು ತಿನ್ನುತ್ತಾ ಆಸ್ವಾದಿಸುತ್ತಿದ್ದ ಲಂಗೂರ್



- D C ಪರಿವರ್ತಿಸಲಾಗಿದೆ No: 677016 dated 24/06/2024
- E - ಖಾತಾ ಬಿಡುಗಡೆಯಾಗಿದೆ
- 80% ಬ್ಯಾಂಕಿನಿಂದ ಸಾಲ ಲಭ್ಯವಿರುತ್ತದೆ
- ತಕ್ಷಣ ನೊಂದಣಿ ಸಿದ್ಧವಾಗಿದೆ
- ಎಲ್ಲಾ ರಾಷ್ಟ್ರೀಕೃತ ಬ್ಯಾಂಕುಗಳಲ್ಲಿ ಸಾಲ ಸೌಲಭ್ಯ ಲಭ್ಯವಿರುತ್ತದೆ

BY: KDSC LIC TATA CAPITAL HINDUJA

ನಿಗದಿತ ಬೆಲೆ

₹2,499/-

(1 Sqft = 0.09290304 Sqm)

ಐಷಾರಾಮಿ ಸೌಲಭ್ಯಗಳು

- ಸೆಕ್ಯುರಿಟಿ ಗಾರ್ಡ್
- ಫಿಟ್ನೆಸ್ ಸೆಂಟರ್
- ಕ್ಲಬ್ ಹೌಸ್
- ಎಲೆಕ್ಟ್ರಿಕ್ ಕಾರ್ ಪವರ್ ಸ್ಟೇಷನ್
- ಅಂಡರ್ ಗ್ರೌಂಡ್ ಎಲೆಕ್ಟ್ರಿಸಿಟಿ
- ಒಳಚರಂಡಿ ಸಂಸ್ಕರಣಾ ಘಟಕ

GALAXY LOCATION — Project Location

GALAXY DT PHOTO — Development Photos Layout Plans



Free Site Visit

ಪ್ಲಾಟ್ ಭೇಟಿಗಾಗಿ ಉಚಿತ ಕಾರ್ ವ್ಯವಸ್ಥೆ ಇರುತ್ತದೆ ಪಿಕಪ್ ಡ್ರಾಪ್ ಸೇವೆಯೊಂದಿಗೆ

www.sweethomerealtyindia.com info@sweethomerealtyindia.com

+91 99000 11883 | +91 99000 11887

RERA Registered: PRM/KA/RERA/1251/310/AG/250820/006045

prajavani.net prajavani | ಸೋಮವಾರ, ಫೆಬ್ರುವರಿ 2, 2026 | ಬೆಂಗಳೂರು | ₹ 7.00 | ಸಂಪುಟ 79 | ಸಂಚಿಕೆ 33 | ಪುಟ 18 | www.prajavani.net




ವ್ಹಾ..ದೇವ್..
ಮೊಹಾಲಿಯಲ್ಲಿ ಭಾನುವಾರ ಪಂಜಾಬ್ ಎದುರು ನಡೆದ ರಣಜಿ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ದೇವದತ್ತ ಪಡಿಕ್ಕಲ್ ಗಳಿಸಿದ ಅಜೇಯ ಶತಕದ ಬಲದಿಂದ ಕರ್ನಾಟಕ ತಂಡವು ಗೆದ್ದು, ಕ್ವಾರ್ಟರ್‌ಫೈನಲ್ ಪ್ರವೇಶಿಸಿತು

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಬಜೆಟ್ ಗಾತ್ರ ಲಕ್ಷ ಕೋಟಿಗಳಲ್ಲಿ

2026–27 ₹53.47



2025–26 ₹50.65 ₹49.65*

* ಪರಿಷ್ಕೃತ ಅಂದಾಜು

ಸತತ ಒಂಬತ್ತನೇ ಬಜೆಟ್ ಮಂಡಿಸಿದ ನಿರ್ಮಲಾ ಸೀತಾರಾಮನ್

ದೂರದತ್ತ ನೋಟ: ನಿರೀಕ್ಷೆಗಳ ಪಲ್ಲಟ

- **ರಕ್ಷಣೆಗೆ ₹7.85ಲಕ್ಷ ಕೋಟಿ**
- **ಸಾರಿಗೆ ಕ್ಷೇತ್ರಕ್ಕೆ ₹5.98 ಲಕ್ಷ ಕೋಟಿ**
- **ರೈಲ್ವೆಗೆ ₹2.77 ಲಕ್ಷ ಕೋಟಿ**



- ವಿಬಿ ಜಿ ರಾಮ್ ಜಿ ಯೋಜನೆಗೆ ₹95,692 ಕೋಟಿ
- ಆದಾಯ ತೆರಿಗೆ ವಿನಾಯಿತಿ ಮಿತಿಯಲ್ಲಿ ಯಾವುದೇ ಬದಲಾವಣೆ ಇಲ್ಲ
- ಗೃಹ ಇಲಾಖೆಗೆ ₹2.55 ಲಕ್ಷ ಕೋಟಿ
- ಕೃಷಿಗೆ ₹ 1.63 ಲಕ್ಷ ಕೋಟಿ
- ಶಿಕ್ಷಣಕ್ಕೆ ₹1.39 ಲಕ್ಷ ಕೋಟಿ

● ಹಮೀದ್ ಕೆ.

ಕೇಂದ್ರ ಬಜೆಟ್ 2026–27

ಬೆಂಗಳೂರು: ಮೂಲಸೌಕರ್ಯ ಮತ್ತು ತಯಾರಿಕೆಗೆ ಹೆಚ್ಚು ಒತ್ತು ಕೊಟ್ಟಿರುವ, ಮಧ್ಯಮ ವರ್ಗದ ನಿರೀಕ್ಷೆಗಳನ್ನು ಕಡೆಗಣಿಸಿರುವ ಬಜೆಟ್ ಅನ್ನು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಲೋಕಸಭೆಯಲ್ಲಿ ಭಾನುವಾರ ಮಂಡಿಸಿದ್ದಾರೆ. ಇದು ಅವರ ಸತತ 9ನೇ ಬಜೆಟ್. ಹತ್ತು ಹಲವು ಯೋಜನೆಗಳನ್ನು ಬಜೆಟ್‌ಗಳಲ್ಲಿ ಘೋಷಿಸಲಾಗಿದೆ. ಆದರೆ, ಹೆಚ್ಚಿನ ಯೋಜನೆಗಳಿಗೆ ನಿರ್ದಿಷ್ಟ ಮೊತ್ತವನ್ನು ನಿಗದಿಪಡಿಸಲಾಗಿಲ್ಲ ಮತ್ತು ಈ ಯೋಜನೆಗಳನ್ನು ಎಲ್ಲಿ ಜಾರಿಗೊಳಿಸಲಾಗುವುದು ಎಂಬುದನ್ನು ಹೇಳಲಾಗಿಲ್ಲ.

ಷೇರುಮಾರುಕಟ್ಟೆಯು ದೊಡ್ಡ ಮಟ್ಟದಲ್ಲಿ ಕುಸಿದಿದೆ. ಸೆನ್ಸೆಕ್ಸ್ 1,546, ನಿಫ್ಟಿ 495 ಅಂಶ ಕುಸಿದಿದೆ. ಹೂಡಿಕೆದಾರರು ₹9.40 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ. ಬಜೆಟ್‌ಗೆ ಮಾರುಕಟ್ಟೆಯ ಪ್ರತಿಕ್ರಿಯೆ ಏನು ಎಂಬುದನ್ನು ಇದರಿಂದ ಅರ್ಥ ಮಾಡಿಕೊಳ್ಳಬಹುದು.

ನರೇಂದ್ರ ಮೋದಿ ನೇತೃತ್ವದ ಎನ್‌ಡಿಎ ಸರ್ಕಾರವು 2014ರಲ್ಲಿ ಅಧಿಕಾರಕ್ಕೆ ಬಂದಾಗಿನಿಂದ ಅನುಸರಿಸಿಕೊಂಡು ಬರುತ್ತಿರುವ ಬಂಡವಾಳ ವೆಚ್ಚ ಏರಿಕೆಯನ್ನು ಈ ಬಾರಿಯೂ ಮುಂದುವರಿಸಲಾಗಿದೆ. 2014–15ನೇ ಬಜೆಟ್‌ನಲ್ಲಿ ₹2 ಲಕ್ಷ ಕೋಟಿ ಇದ್ದ ಬಂಡವಾಳ ವೆಚ್ಚದ ಅಂದಾಜನ್ನು 2026–27ನೇ ಸಾಲಿನಲ್ಲಿ ₹12.2 ಲಕ್ಷ ಕೋಟಿಗೆ ಏರಿಸಲಾಗಿದೆ. ಕಳೆದ ವರ್ಷ ಈ ಮೊತ್ತ ₹11.2 ಲಕ್ಷ ಕೋಟಿ ಇತ್ತು. ಬಂಡವಾಳ ವೆಚ್ಚದ ನಿರಂತರ ಏರಿಕೆಯು ಮೂಲಸೌಕರ್ಯ ವಲಯಕ್ಕೆ ಒಳ್ಳೆಯ ಸುದ್ದಿಯಾದರೂ ಖಾಸಗಿ ವಲಯವು ನಿರೀಕ್ಷಿತ ಪ್ರಮಾಣದಲ್ಲಿ ವೆಚ್ಚ ಮಾಡುತ್ತಿಲ್ಲ ಎಂಬ ಕಳವಳಕ್ಕೂ ಕಾರಣ ವಾಗುತ್ತದೆ.

ಬಡವರು, ಹಿಂದುಳಿದವರ ಏಳಿಗೆಗಾಗಿ ಮೂರು ಕರ್ತವ್ಯಗಳನ್ನು ನಿಗದಿಪಡಿಸಿಕೊಳ್ಳಲಾಗಿದೆ ಎಂದು ನಿರ್ಮಲಾ ಅವರು ಬಜೆಟ್ ಭಾಷಣದ ಆರಂಭದಲ್ಲಿಯೇ ಹೇಳಿದ್ದಾರೆ. ಈ ಕರ್ತವ್ಯಗಳೆಂದರೆ, ಉತ್ಪಾದಕತೆ, ಸ್ಪರ್ಧಾತ್ಮಕತೆ, ಜಾಗತಿಕ ಸ್ಥಿತ್ಯಂತರಗಳನ್ನು ತಾಳಿಕೊಳ್ಳಬಲ್ಲ ಸುಸ್ಥಿರ ಆರ್ಥಿಕ ಪ್ರಗತಿ ಎಂದು ಅವರು ಹೇಳಿದ್ದಾರೆ. ಜನರ ಸಾಮರ್ಥ್ಯ ಹೆಚ್ಚಿಸಿ ಅವರ ಆಶೋತ್ತರಗಳು ಈಡೇರುವಂತೆ ಮಾಡುವುದು ಎರಡನೇ ಕರ್ತವ್ಯ ಎಂದಿದ್ದಾರೆ. ಪ್ರತಿ ಕುಟುಂಬ, ಸಮುದಾಯ, ಪ್ರದೇಶ ಮತ್ತು ವಲಯಕ್ಕೂ ಸಂಪನ್ಮೂಲ, ಸೌಲಭ್ಯ ಮತ್ತು ಅವಕಾಶಗಳು ಲಭ್ಯವಾಗಿ ಎಲ್ಲರ ಜೊತೆಗೆ ಎಲ್ಲರ ವಿಕಾಸ ಎಂಬುದು ಮೂರನೇ ಕರ್ತವ್ಯ ಎಂದಿದ್ದಾರೆ.

ಈ ಮೂರು ಕರ್ತವ್ಯಗಳ ಈಡೇರಿಕೆಗಾಗಿ ಆರು ವಲಯಗಳನ್ನು ಅವರು ಗುರುತಿಸಿದ್ದಾರೆ. ಈ ಎಲ್ಲವುಗಳ ಮುಖ್ಯ ಉದ್ದೇಶ ತಯಾರಿಕೆ ಹೆಚ್ಚಳಕ್ಕೆ ದೊಡ್ಡ ಮಟ್ಟದ ಮಹತ್ವ ನೀಡುವುದೇ ಆಗಿದೆ. ▶7

ಅಗ್ಗ

- ಮೈಕ್ರೋವೇವ್ ಅವನ್‌ಗಳು
- ಪಾದರಕ್ಷೆ (ಚರ್ಮದ ಉತ್ಪನ್ನ)
- ಕ್ಯಾನ್ಸರ್ ಔಷಧಿಗಳು (17 ಔಷಧಿಗಳು)
- ಕ್ರೀಡಾ ಸಲಕರಣೆಗಳು
- ಏಳು ಅಪರೂಪದ ಕಾಯಿಲೆಗಳ ಔಷಧಿಗಳು
- ಸಾಗರೋತ್ಪನ್ನ ಆಹಾರ
- ಇವಿ ಬ್ಯಾಟರಿಗಳು
- ಸೌರ ಫಲಕಗಳು
- ವಿದೇಶಿ ಶಿಕ್ಷಣ
- ವಿಮಾನಗಳ ಬಿಡಿ ಭಾಗಗಳು
- ವಿದೇಶಿ ಪ್ರವಾಸ ಖರ್ಚು
- ಜೈವಿಕ ಅನಿಲ ಮಿಶ್ರಿತ ಸಿಎನ್‌ಜಿ
- ವೈಯಕ್ತಿಕ ಬಳಕೆಯ ಆಮದು ಸರಕು

ತುಟ್ಟಿ

- ಮದ್ಯ
- ಸಿಗರೇಟ್
- ಪಾನ್ ಮಸಾಲ
- ಇತರ ತಂಬಾಕು ಉತ್ಪನ್ನಗಳು
- ಷೇರು ವ್ಯವಹಾರ
- ಆದಾಯ ತೆರಿಗೆ ದಂಡ
- ಕಲ್ಲಿದ್ದಲು, ಖನಿಜಗಳು, ಕಬ್ಬಿಣದ ಅದಿರು
- ಕಾಫಿ ಹುರಿಯುವ ಮತ್ತು ವೆಂಡಿಂಗ್ ಮಷೀನ್
- ಛತ್ರಿ ಮತ್ತು ಬಿಡಿಭಾಗಗಳು
- ಕೆಲವು ರಸಗೊಬ್ಬರಗಳು

ರಾಜ್ಯದ ರೈಲ್ವೆ ಯೋಜನೆಗಳಿಗೆ ₹7,748 ಕೋಟಿ ಅನುದಾನ

ನವದೆಹಲಿ: ಕರ್ನಾಟಕದಲ್ಲಿ ಹೊಸ ರೈಲು ಮಾರ್ಗಗಳ ನಿರ್ಮಾಣ, ಜೋಡಿ ಹಳಿ ಹಾಗೂ ಗೇಜ್ ಪರಿವರ್ತನೆ ಸೇರಿದಂತೆ ವಿವಿಧ ಮೂಲಸೌಕರ್ಯ ಕಾಮಗಾರಿಗಳಿಗೆ ಕೇಂದ್ರ ಬಜೆಟ್‌ನಲ್ಲಿ ₹7,748 ಕೋಟಿ ಹಂಚಿಕೆ ಮಾಡಲಾಗಿದೆ.

‘2009-14ರ ಅವಧಿಯಲ್ಲಿ ರಾಜ್ಯದ ರೈಲ್ವೆ ಯೋಜನೆಗಳಿಗೆ ವಾರ್ಷಿಕ ₹835 ಕೋಟಿ ಅನುದಾನ ನೀಡಲಾಗುತ್ತಿತ್ತು. ಈಗ ಅನುದಾನ ಬಿಡುಗಡೆ ಪ್ರಮಾಣ ಒಂಬತ್ತು ಪಟ್ಟು ಹೆಚ್ಚಾಗಿದೆ’ ಎಂದು ರೈಲ್ವೆ ಖಾತೆ ರಾಜ್ಯ ಸಚಿವ ವಿ.ಸೋಮಣ್ಣ ತಿಳಿಸಿದರು.

ಬೆಂಗಳೂರು ಉಪನಗರ ರೈಲು ಮಾರ್ಗಕ್ಕೆ ಕಳೆದ ವರ್ಷ ₹350 ಕೋಟಿ ಹಂಚಿಕೆ ಮಾಡಲಾಗಿತ್ತು. ಈ ಸಲ ₹500 ಕೋಟಿ ಕೊಡಲಾಗಿದೆ ಎಂದು ಅವರು ತಿಳಿಸಿದರು. ▶7

ಸಾಲದ ಸ್ಥಿತಿ ಕಳವಳಕಾರಿ

ಒಟ್ಟು ಬಜೆಟ್ ಗಾತ್ರವು ₹53.47 ಲಕ್ಷ ಕೋಟಿ ಆಗಿದ್ದು, ತೆರಿಗೆ ವರಮಾನ ₹28.66 ಲಕ್ಷ ಕೋಟಿ. ತೆರಿಗೆಯೇತರ ವರಮಾನ ₹6.67 ಲಕ್ಷ ಕೋಟಿ. ಬಜೆಟ್‌ನಲ್ಲಿ ಘೋಷಿಸಿರುವ ಯೋಜನೆಗಳನ್ನು ಜಾರಿಗೆ ತರಬೇಕಿದ್ದರೆ ₹16.95 ಲಕ್ಷ ಕೋಟಿ ಸಾಲ ಮಾಡಬೇಕಾಗುತ್ತದೆ. ಆಗ ಕೇಂದ್ರದ ಸಾಲದ ಮೊತ್ತವು ₹214 ಲಕ್ಷ ಕೋಟಿಗೆ ಏರಿಕೆ ಯಾಗುತ್ತದೆ. ಸಾಲದ ಬಡ್ಡಿ ಪಾವತಿಗೆ ₹14.04 ಲಕ್ಷ ಕೋಟಿ ಅಥವಾ ಒಟ್ಟು ವೆಚ್ಚದ ಶೇ 20ರಷ್ಟನ್ನು ಮೀಸಲು ಇರಿಸಬೇಕಾಗುತ್ತದೆ.

ವಿಶೇಷ ಪುಟಗಳು : 8,9,10 ಮತ್ತು 11


ಸಂಪಾದಕೀಯ 6



140 ಕೋಟಿ ಜನರ ಪ್ರತಿಧ್ವನಿ

ಇದೊಂದು ಐತಿಹಾಸಿಕ ಬಜೆಟ್. 140 ಕೋಟಿ ಭಾರತೀಯರ ಆಕಾಂಕ್ಷೆಯನ್ನು ಪ್ರತಿಧ್ವನಿಸಿದೆ. ವಿನೂತನ ಅವಕಾಶಗಳ ಬಾಗಿಲು ತೆರೆದಿದೆ. ‘ಮೇಕ್ ಇನ್ ಇಂಡಿಯಾ’ ಮತ್ತು ‘ಆತ್ಮನಿರ್ಭರ ಭಾರತ’ ಉಪಕ್ರಮಗಳಿಗೆ ವೇಗ ನೀಡುವ ಉದ್ದೇಶ ಹೊಂದಿದೆ. ವಿಕಸಿತ ಭಾರತ–2047ರ ಕಡೆಗಿನ ಪ್ರಯಾಣಕ್ಕೆ ನೀಲನಕ್ಷೆ ರೂಪಿಸಿದೆ

ನರೇಂದ್ರ ಮೋದಿ, ಪ್ರಧಾನಿ



ಅಭಿವೃದ್ಧಿಗೆ ವೇಗ

ಬಡವರು, ಸೌಕರ್ಯವಂಚಿತರಿಗೆ ಆದ್ಯತೆ ನೀಡುವುದು ನಮ್ಮ ಸರ್ಕಾರದ ಸಂಕಲ್ಪ. ಈ ನಿಟ್ಟಿನಲ್ಲಿ ಕರ್ತವ್ಯ ಭವನದಲ್ಲಿ ಸಿದ್ಧಪಡಿಸಲಾದ ಮೊದಲ ಬಜೆಟ್‌ನಲ್ಲಿ ಅಭಿವೃದ್ಧಿಗೆ ವೇಗ, ಮಹತ್ವಾಕಾಂಕ್ಷೆಗಳ ಈಡೇರಿಕೆ ಹಾಗೂ ‘ಸಬ್ ಕಾ ಸಾಥ್ ಸಬ್ ಕಾ ವಿಕಾಸ್’ ಎಂಬ ಮೂರು ಕರ್ತವ್ಯಗಳಿಂದ ನಾವು ಸ್ಫೂರ್ತಿ ಪಡೆದಿದ್ದೇವೆ

ನಿರ್ಮಲಾ ಸೀತಾರಾಮನ್, ಹಣಕಾಸು ಸಚಿವೆ



ಮುನ್ನೋಟವಿಲ್ಲದ ನೀತಿ

‘ಸಾಧನೆಯ ಗುರಿ’(ಮಿಷನ್ ಮೋಡ್) ಈಗ ‘ಸವಾಲಿನ ದಾರಿ’ (ಚಾಲೆಂಜಿಂಗ್ ರೂಟ್) ಆಗಿದೆ. ಮೋದಿ ಅವರ ‘ಸುಧಾರಣಾ ಎಕ್ಸ್‌ಪ್ರೆಸ್’, ನಿಲ್ಲಬೇಕಾದ ‘ಸುಧಾರಣಾ ಜಂಕ್ಷನ್’ಗಳಲ್ಲೂ ನಿಲ್ಲುವುದಿಲ್ಲ. ಮುನ್ನೋಟವಿಲ್ಲದ ನೀತಿ, ಇಚ್ಛಾಶಕ್ತಿಯಿಲ್ಲದ ರಾಜಕೀಯ. ಅನ್ನದಾತರು ಆದಾಯ ಭದ್ರತೆಗಾಗಿ ಕಾಯುತ್ತಿದ್ದಾರೆ

ಮಲ್ಲಿಕಾರ್ಜುನ ಖರ್ಗೆ, ಎಐಸಿಸಿ ಅಧ್ಯಕ್ಷ



ಜನವಿರೋಧಿ, ಸುಳ್ಳಿನ ಮೂಟೆ

ದೂರದೃಷ್ಟಿಯಿಲ್ಲದ, ಕ್ರಿಯಾಶೀಲವಲ್ಲದ, ಜನವಿರೋಧಿ ಬಜೆಟ್ ಇದು. ಮಹಿಳೆಯರು ಮತ್ತು ರೈತರ ವಿರೋಧಿ. ಶಿಕ್ಷಣ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಮತ್ತು ಒಬಿಸಿ ವಿರೋಧಿಯೂ ಆಗಿದೆ. ಇದು ಅದಕ್ಷ ಆಡಳಿತದ ಸುಳ್ಳಿನ ಮೂಟೆ. ರಾಜ್ಯಕ್ಕೆ ಯಾವುದೇ ಕೊಡುಗೆ ನೀಡಿಲ್ಲ. ಅರ್ಥವ್ಯವಸ್ಥೆಯು ಹಳಿ ತಪ್ಪಲಿದೆ

ಮಮತಾ ಬ್ಯಾನರ್ಜಿ, ಪಶ್ಚಿಮ ಬಂಗಾಳದ ಮುಖ್ಯಮಂತ್ರಿ



ಬಿಕ್ಕಟ್ಟುಗಳ ಬಗ್ಗೆ ಕುರುಡು

ಯುವಜನತೆಗೆ ಉದ್ಯೋಗವಿಲ್ಲದಂತಾಗಿದೆ. ಉತ್ಪಾದನೆ ಕುಸಿದಿದೆ. ಹೂಡಿಕೆದಾರರು ಹಿಂದೇಟು ಹಾಕುತ್ತಿದ್ದಾರೆ. ಕುಟುಂಬದ ಉಳಿತಾಯ ಇಳಿಮುಖವಾಗುತ್ತಿದೆ. ರೈತರು ಸಂಕಷ್ಟದಲ್ಲಿದ್ದಾರೆ. ಭಾರತದ ಇಂಥ ನೈಜ ಬಿಕ್ಕಟ್ಟುಗಳ ಬಗ್ಗೆ ಬಜೆಟ್ ಕುರುಡಾಗಿದೆ


ರಾಹುಲ್ ಗಾಂಧಿ, ಲೋಕಸಭೆಯ ವಿರೋಧ ಪಕ್ಷದ ನಾಯಕ

16ನೇ ಹಣಕಾಸು ಆಯೋಗದ ಶಿಫಾರಸು: ಉತ್ತರದ ರಾಜ್ಯಗಳಿಗೆ ಮಹಾಪೂರ

ರಾಜ್ಯದ ತೆರಿಗೆ ಪಾಲು ಅಲ್ಪ ಹೆಚ್ಚಳ

● ಮಂಜುನಾಥ ಹೆಬ್ಬಾರ್

ಯಾವ ಆಯೋಗ, ರಾಜ್ಯಗಳಿಗೆ ಎಷ್ಟು ಪಾಲು?



ತೆರಿಗೆ ಪಾಲು ಹಂಚಿಕೆ (16ನೇ ಹಣಕಾಸು ಆಯೋಗದ ಶಿಫಾರಸಿನ ಪ್ರಕಾರ)

ಮಾನದಂಡ	ಶೇಕಡಾವಾರು
ಜನಸಂಖ್ಯೆ	17.5
ಜನಸಂಖ್ಯಾ ನಿಯಂತ್ರಣದ ನಿರ್ವಹಣೆ	10
ವಿಸ್ತೀರ್ಣ	10
ವರಮಾನ ಅಂತರ	42.5
ಅರಣ್ಯ ಪ್ರದೇಶ	10
ಜಿಡಿಪಿಗೆ ಕೊಡುಗೆ	10

ನವದೆಹಲಿ: ಹಿಂದಿನ ಹಣಕಾಸು ಆಯೋಗಗಳ ಮಾದರಿಯಲ್ಲೇ 16ನೇ ಹಣಕಾಸು ಆಯೋಗವೂ ಕೇಂದ್ರದ ತೆರಿಗೆ ಪಾಲಿನಲ್ಲಿ ಉತ್ತರದ ಹಿಂದುಳಿದ (ಬಿಮಾರು) ರಾಜ್ಯಗಳಿಗೆ ಹೆಚ್ಚಿನ ಸಂಪನ್ಮೂಲ ಹಂಚಿಕೆ ಮಾಡಿದೆ. ಬಿಜೆಪಿಯೇತರ ರಾಜ್ಯಗಳಿಗೆ ‘ತೆರಿಗೆ ಯುದ್ಧ’ಕ್ಕೆ ಮಣಿದಿರುವ ಆಯೋಗವು, ಕರ್ನಾಟಕ ಸೇರಿದಂತೆ ದಕ್ಷಿಣದ ಪ್ರಗತಿಶೀಲ ರಾಜ್ಯಗಳ ಪಾಲನ್ನು ಅಲ್ಪ ಪ್ರಮಾಣದಲ್ಲಿ ಹೆಚ್ಚಿಸಿದೆ.

ಅರವಿಂದ ಪನಗರಿಯಾ ಅವರ ಅಧ್ಯಕ್ಷತೆಯ 16ನೇ ಹಣಕಾಸು ಆಯೋಗವು 2026ರ ಏಪ್ರಿಲ್ 1ರಿಂದ ಆರಂಭವಾಗುವ ಐದು ವರ್ಷಗಳ ಅವಧಿಗೆ ಕೇಂದ್ರ ತೆರಿಗೆಗಳಲ್ಲಿ ರಾಜ್ಯಗಳ ಪಾಲನ್ನು ಶೇಕಡಾ 41ರಷ್ಟು ಉಳಿಸಿಕೊಳ್ಳಲು ಶಿಫಾರಸು ಮಾಡಿದೆ. ಆಯೋಗದ ವರದಿಯನ್ನು ಲೋಕಸಭೆಯಲ್ಲಿ ಭಾನುವಾರ ಮಂಡಿಸಲಾಯಿತು. ಆಯೋಗದ ಶಿಫಾರಸಿನ ಪ್ರಕಾರ, ಕೇಂದ್ರವು 2026-27ನೇ ಹಣಕಾಸು ವರ್ಷಕ್ಕೆ ರಾಜ್ಯಗಳಿಗೆ ₹1.4 ಲಕ್ಷ ಕೋಟಿ ಹಂಚಿಕೆ ಮಾಡಿದೆ.

ಕರ್ನಾಟಕಕ್ಕೆ ಶೇ 4.13 ಪಾಲು ಹಂಚಿಕೆ ಮಾಡಲಾಗಿದೆ. ಇದು 15ನೇ ಹಣಕಾಸು ಆಯೋಗದ (ಶೇ 3.64) ಶಿಫಾರಸಿಗಿಂತ ಸ್ವಲ್ಪ ಜಾಸ್ತಿ, 14ನೇ ಹಣಕಾಸು ಆಯೋಗದ (ಶೇ 4.71) ಶಿಫಾರಸಿಗಿಂತ ಅಲ್ಪ ಕಡಿಮೆ. ರಾಜ್ಯಕ್ಕೆ ಆಗಿರುವ ಅನ್ಯಾಯ ಸರಿಪಡಿಸಿ. ರಾಜ್ಯಕ್ಕೆ ಶೇ 4.71ಕ್ಕಿಂತ ಹೆಚ್ಚು ತೆರಿಗೆ ಪಾಲು ಸಿಗಲೇಬೇಕು ಎಂದು ಕರ್ನಾಟಕದ ಕಾಂಗ್ರೆಸ್ ಸರ್ಕಾರ ಪಟ್ಟು ಹಿಡಿದಿತ್ತು. ಪರಿಷ್ಕೃತ ಹಂಚಿಕೆ ಪ್ರಕಾರ, ರಾಜ್ಯಕ್ಕೆ ಈ ವರ್ಷ ₹63,049 ಕೋಟಿ ಬರಬಹುದು ಎಂದು ಅಂದಾಜಿಸಲಾಗಿದೆ.

ಉದಾಹರಣೆಗೆ, ರಾಜ್ಯಗಳಿಗೆ ಹಂಚಿಕೆ ಮಾಡುವ ₹100ನಲ್ಲಿ ಕರ್ನಾಟಕಕ್ಕೆ ₹4.13 ಸಿಗಲಿದೆ. ಉತ್ತರ ಪ್ರದೇಶಕ್ಕೆ ₹17.61, ಬಿಹಾರಕ್ಕೆ ₹9.94, ಮಧ್ಯ ಪ್ರದೇಶಕ್ಕೆ ₹7.34, ಪಶ್ಚಿಮ ಬಂಗಾಳಕ್ಕೆ ₹7.21, ಮಹಾರಾಷ್ಟ್ರಕ್ಕೆ ₹6.44, ರಾಜಸ್ಥಾನಕ್ಕೆ ₹5.92 ದೊರಕಲಿದೆ. ಅಂದರೆ, ಪ್ರಾಕೃತಿಕ ಹಾಗೂ ಮಾನವ ಸಂಪನ್ಮೂಲ ವಿಷಯದಲ್ಲಿ ದಕ್ಷಿಣದ ರಾಜ್ಯಗಳಿಗಿಂತ ಸಮೃದ್ಧವಾಗಿರುವ ಉತ್ತರದ ರಾಜ್ಯಗಳಿಗೆ ಮತ್ತೆ ತೆರಿಗೆ ಪಾಲಿನ ಮಹಾಪೂರ. ಹಿಂದಿ ನೆಲದ ಈ ರಾಜ್ಯಗಳು ಶಿಕ್ಷಣ, ಆರೋಗ್ಯ, ಉದ್ಯೋಗ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹಿಂದುಳಿದಿರುವುದನ್ನೇ ಮಾನದಂಡವಾಗಿಟ್ಟುಕೊಂಡು ಅಧಿಕ ಪಾಲು ಹಂಚಿಕೆ ಮಾಡಲಾಗಿದೆ.

ತೆರಿಗೆ ಹಂಚಿಕೆಯೂ ಸೇರಿದಂತೆ ಒಟ್ಟು ಸಂಪನ್ಮೂಲ ಹಂಚಿಕೆಯಲ್ಲಿ ದಕ್ಷಿಣದ ರಾಜ್ಯಗಳಿಗೆ ಕೇಂದ್ರ ಸರ್ಕಾರ ಅನ್ಯಾಯ ಮಾಡುತ್ತಿದೆ ಎಂಬ ಆರೋಪ ದಶಕಗಳಿಂದ ಇದೆ. ಈ ತಾರತಮ್ಯದ ವಿರುದ್ಧದ ದಕ್ಷಿಣದ ಬಿಜೆಪಿಯೇತರ ಸರ್ಕಾರಗಳು ಕೇಂದ್ರದ ವಿರುದ್ಧ ವರ್ಷಗಳಿಂದ ಸಂಘರ್ಷ ನಡೆಸಿದ್ದವು. ಈ ಹೋರಾಟಕ್ಕೆ ಈಗ ಸಮಾಧಾನ ಪಟ್ಟುಕೊಳ್ಳುವಂತಹ ಜಯ ಸಿಕ್ಕಿದೆ. ಬಿಮಾರು ರಾಜ್ಯಗಳಾದ ಉತ್ತರ ಪ್ರದೇಶ, ಬಿಹಾರ, ಮಧ್ಯ ಪ್ರದೇಶ, ರಾಜಸ್ಥಾನ ಮತ್ತಿತರ ರಾಜ್ಯಗಳ ಪಾಲನ್ನು ಸಣ್ಣ ಪ್ರಮಾಣದಲ್ಲಿ ಕಡಿತಗೊಳಿಸಲಾಗಿದೆ. ▶12

ರಾಜ್ಯಕ್ಕೆ ಮತ್ತೆ ಅನ್ಯಾಯ: ಸಿ.ಎಂ ಸಿದ್ದರಾಮಯ್ಯ



ತೆರಿಗೆ ಪಾಲು ಹಂಚಿಕೆಯಲ್ಲಿ ಕೇಂದ್ರವು ಅನ್ಯಾಯ ಮುಂದುವರಿಸಿದೆ. ನಾವು ಕನಿಷ್ಠ 14ನೇ ಹಣಕಾಸು ಆಯೋಗದಲ್ಲಿ ನಿಗದಿಯಾಗಿದ್ದ ಶೇ 4.71ರಷ್ಟಾದರೂ ಕೊಡಿ ಎಂದು 16ನೇ ಹಣಕಾಸು ಆಯೋಗದ ಎದುರು ವಾದ ಮಂಡಿಸಿದ್ದೆವು. ತೆರಿಗೆ ಹಂಚಿಕೆಯಲ್ಲಿ ನ್ಯಾಯಯುತ ಪಾಲಿಗಾಗಿ ಪ್ರಧಾನಿ, ಕೇಂದ್ರ ಹಣಕಾಸು ಸಚಿವರನ್ನು ಭೇಟಿಯಾಗಿ ಮನವಿ ಮಾಡಿದ್ದೆವು. ಆದರೂ, ತೆರಿಗೆಯಲ್ಲಿ ಬರೀ ಶೇ 4.13ರಷ್ಟು ಪಾಲು ಕೊಡಲಾಗಿದೆ. ನಗರ ಹಾಗೂ ಸ್ಥಳೀಯ ಸಂಸ್ಥೆಗಳಿಗೆ ಮುಂದಿನ ಐದು ವರ್ಷಗಳಿಗೆ ರಾಜ್ಯಕ್ಕೆ ಕೇವಲ ತಲಾ ₹ 18 ಸಾವಿರ ಕೋಟಿಗಳಷ್ಟು ಹಂಚಿಕೆ ಮಾಡಿದೆ. ಕರ್ನಾಟಕದಿಂದ ವರ್ಷಕ್ಕೆ ₹ 4.50 ಲಕ್ಷ ಕೋಟಿಗಳಷ್ಟು ತೆರಿಗೆ ಕೇಂದ್ರಕ್ಕೆ ಹೋಗುತ್ತದೆ. ರಾಜ್ಯ ಒಂದು ರೂಪಾಯಿ ತೆರಿಗೆ ಕಟ್ಟಿದರೆ ಬರೀ 14 ಪೈಸೆ ತೆರಿಗೆ ರೂಪದಲ್ಲಿ ಕೊಡುತ್ತಿದೆ. ಇದು ಅನ್ಯಾಯವಲ್ಲವೇ?

ಸಿದ್ದರಾಮಯ್ಯ, ಮುಖ್ಯಮಂತ್ರಿ

ಭಾರತ ವಿರುದ್ಧದ ಪಂದ್ಯ ಬಹಿಷ್ಕರಿಸಿದ ಪಾಕಿಸ್ತಾನ

ಲಾಹೋರ್ (ಪಿಟಿಐ): ಇದೇ ತಿಂಗಳು ನಡೆಯಲಿರುವ ಐಸಿಸಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯ ಲೀಗ್ ಹಂತದಲ್ಲಿ ಭಾರತ ತಂಡದ ವಿರುದ್ಧದ ಪಂದ್ಯವನ್ನು (ಫೆ.15) ಬಹಿಷ್ಕರಿಸುವುದಾಗಿ ಪಾಕಿಸ್ತಾನ ಸರ್ಕಾರ ಭಾನುವಾರ ಘೋಷಿಸಿದೆ.

ಇದೇ 7ರಂದು ಆರಂಭವಾಗುವ ಟೂರ್ನಿಯ ವೇಳಾಪಟ್ಟಿಯ ಪ್ರಕಾರ ಭಾರತ– ಪಾಕ್ ತಂಡಗಳ ನಡುವಣ ಪಂದ್ಯವು ಕೊಲಂಬೊದಲ್ಲಿ ಆಯೋಜನೆಗೊಂಡಿದೆ. ಆದರೆ ಬಾಂಗ್ಲಾದೇಶ ತಂಡವನ್ನು ವಿಶ್ವಕಪ್ ಟೂರ್ನಿಯಿಂದ ಹೊರಹಾಕಿದ್ದನ್ನು ವಿರೋಧಿಸಿ ಪಾಕಿಸ್ತಾನವು ಪ್ರತಿಭಟನೆ ವ್ಯಕ್ತಪಡಿಸಿದೆ.


ಪಾಕ್ ಸರ್ಕಾರವು ತನ್ನ ಅಧಿಕೃತ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಿರುವ ಪ್ರಕಟಣೆಯಲ್ಲಿ, ‘ಕ್ರಿಕೆಟ್ ತಂಡಕ್ಕೆ ವಿಶ್ವಕಪ್ ಟೂರ್ನಿಯಲ್ಲಿ ಆಡಲು ಅನುಮತಿ ನೀಡಲಾಗಿದೆ. ಆದರೆ ಫೆಬ್ರುವರಿ 15ರಂದು ಕೊಲಂಬೊದಲ್ಲಿ ಭಾರತದ ವಿರುದ್ಧ ಕಣಕ್ಕಿಳಿಯಬಾರದು’ ಎಂದು ಉಲ್ಲೇಖಿಸಿದೆ.

ಇದರಿಂದಾಗಿ ಭಾರತ ತಂಡಕ್ಕೆ ಪೂರ್ಣ ಅಂಕಗಳು ದೊರೆಯಲಿವೆ. ಅಲ್ಲದೇ ಪಂದ್ಯ ಬಹಿಷ್ಕರಿಸಿರುವ ಪಾಕಿಸ್ತಾನ ತಂಡಕ್ಕೆ ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ದಂಡ ವಿಧಿಸಬಹುದಾಗಿದೆ. ಪಾಕ್ ತಂಡವು ಫೆ. 7ರಂದು ನಡೆಯುವ ಮೊದಲ ಪಂದ್ಯದಲ್ಲಿ ನೆದರ್ಲೆಂಡ್ಸ್, 10ರಂದು ಅಮೆರಿಕ ಮತ್ತು 18ರಂದು ನಮೀಬಿಯಾ ವಿರುದ್ಧ ಕೊಲಂಬೊದಲ್ಲಿಯೇ ಆಡಲಿದೆ.

ವಿಶ್ವಕಪ್ ಟೂರ್ನಿಗಳಲ್ಲಿ ಭಾರತ ಮತ್ತು ಪಾಕ್ ತಂಡಗಳ ನಡುವಣ ಪಂದ್ಯವು ಯಾವಾಗಲೂ ಹೆಚ್ಚು ರೋಚಕ ಮತ್ತು ಜನರನ್ನು ಸೆಳೆಯುತ್ತದೆ. ಜಾಗತಿಕ ಮಟ್ಟದಲ್ಲಿ ಮಾಧ್ಯಮಗಳ ಮೂಲಕ ಪ್ರೇಕ್ಷಕರ ಸಂಖ್ಯೆಯೂ ಉತ್ತುಂಗಕ್ಕೇರುತ್ತದೆ. ಪ್ರಾಯೋಜಕತ್ವ ಮತ್ತು ಪ್ರಸಾರಗಳಿಂದ ಹಣದ ಹೊಳೆಯೇ ಹರಿದುಬರುತ್ತದೆ. ಇದೀಗ ಪಂದ್ಯ ನಡೆಯದಿದ್ದರೆ ಆಗುವ ಆರ್ಥಿಕ ನಷ್ಟದ ಲೆಕ್ಕಾಚಾರ ಆರಂಭವಾಗಿದೆ.

ಅಲ್ಕರಾಜ್‌ಗೆ ಕಿರೀಟ

ಎಎಫ್‌ಪಿ ಚಿತ್ರ:



ಸ್ಪೇನ್ ದೇಶದ ಕಾರ್ಲೋಸ್ ಅಲ್ಕರಾಜ್ ಅವರು ಭಾನುವಾರ ಮೆಲ್ಬರ್ನ್‌ನಲ್ಲಿ ನಡೆದ ಆಸ್ಟ್ರೇಲಿಯಾ ಓಪನ್ ಟೆನಿಸ್ ಟೂರ್ನಿಯ ಪುರುಷರ ಸಿಂಗಲ್ಸ್ ಫೈನಲ್‌ನಲ್ಲಿ ಸರ್ಬಿಯಾದ ನೊವಾಕ್ ಜೊಕೊವಿಚ್ ಅವರನ್ನು ಮಣಿಸಿ ಪ್ರಶಸ್ತಿ ಗೆದ್ದರು

ಬೆಂಗಳೂರು ಬಿಟ್ಟು ತೆರಳದಂತೆ ಐ.ಟಿ ಅಧಿಕಾರಿಗಳಿಗೆ ಸೂಚನೆ

ರಾಯ್ ಆತ್ಮಹತ್ಯೆ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ



ರಾಯ್

ತನಿಖಾ ವರದಿ ಬರುವವರೆಗೂ ಯಾವುದೇ ಮಾಹಿತಿಯನ್ನು ಬಹಿರಂಗಪಡಿಸಲು ಸಾಧ್ಯವಿಲ್ಲ. ಈಗ ಹೇಳಿಕೆ ನೀಡಿದರೆ ಊಹಾಪೋಹಕ್ಕೆ ಕಾರಣವಾಗುತ್ತದೆ

ಜಿ.ಪರಮೇಶ್ವರ, ಗೃಹ ಸಚಿವ

ಬೆಂಗಳೂರು: ರಿಯಲ್ ಎಸ್ಟೇಟ್ ಕಂಪನಿ ‘ಕಾನ್ಫಿಡೆಂಟ್ ಗ್ರೂಪ್’ನ ಮುಖ್ಯಸ್ಥ ಸಿ.ಜೆ.ರಾಯ್ ಆತ್ಮಹತ್ಯೆ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಶೇಷ ತನಿಖಾ ತಂಡ (ಎಸ್‌ಐಟಿ) ತನಿಖೆ ಚುರುಕುಗೊಳಿಸಿದೆ.

ರಾಯ್ ಆತ್ಮಹತ್ಯೆಗೆ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳ ದಾಳಿ ಕಾರಣವೇ? ವೈಯಕ್ತಿಕ ಸಮಸ್ಯೆಗಳು ಹಾಗೂ ವ್ಯಾವಹಾರಿಕ ಕಾರಣಗಳು ಇರಬಹುದೇ? ಎಂಬ ಅನುಮಾನ ಹುಟ್ಟಿಕೊಂಡಿದೆ. ಹಾಗಾಗಿ ಹಲವು ಆಯಾಮಗಳಲ್ಲಿ ತನಿಖೆ ನಡೆಸಲಾಗುತ್ತಿದೆ.

ಕೊಚ್ಚಿಯಿಂದ ಬಂದಿರುವ ಐಆರ್‌ಎಸ್ ಅಧಿಕಾರಿ ಕೃಷ್ಣಪ್ರಸಾದ್ ನೇತೃತ್ವದ ತಂಡ ಕಾನ್ಫಿಡೆಂಟ್ ಗ್ರೂಪ್‌ಗೆ ಸಂಬಂಧಿಸಿದ ಕಚೇರಿಗಳ ಮೇಲೆ ದಾಳಿ ನಡೆಸಿತ್ತು. ಈ ತಂಡಕ್ಕೆ ಬೆಂಗಳೂರು ಬಿಟ್ಟು ತೆರಳದಂತೆ ಸೂಚಿಸಿರುವ ಎಸ್‌ಐಟಿ, ಅಗತ್ಯವಿದ್ದರೆ ಹೇಳಿಕೆ ದಾಖಲಿಸಿಕೊಳ್ಳಲಾಗುವುದು ಎಂದು ತಿಳಿಸಿದೆ.

ಪಶ್ಚಿಮ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್ ವಂಶಿಕೃಷ್ಣ ಹಾಗೂ ದಕ್ಷಿಣ ವಿಭಾಗದ ಡಿಸಿಪಿ ಲೋಕೇಶ್ ಜಗಲಾಸರ ಅವರ ನೇತೃತ್ವದ ವಿಶೇಷ ತನಿಖಾ ತಂಡ ಶನಿವಾರದಿಂದಲೇ ತನಿಖೆ ಆರಂಭಿಸಿದ್ದು, ದಾಳಿಗೆ ಸಂಬಂಧಿಸಿದಂತೆ ಯಾವೆಲ್ಲ ವಿಷಯಗಳನ್ನು ಹಂಚಿಕೊಂಡಿದ್ದಾರೆ ಎಂದು ರಾಯ್ ಸಹೋದರ ಸಿ.ಜೆ. ಬಾಬು ಮತ್ತು ಪುತ್ರ ಮೋಹನ್ ಅವರ ಹೇಳಿಕೆ ಪಡೆದುಕೊಂಡಿದೆ.

ರಾಯ್ ಐಟಿ ದಾಳಿ ಬಗ್ಗೆ ಮಾಹಿತಿ ಹಂಚಿಕೊಂಡಿದ್ದರೇ? ಯಾವ ವಿಚಾರಗಳನ್ನು ಚರ್ಚಿಸಿದರು ಎಂಬುದು ಸೇರಿ ಹಲವು ಮಾಹಿತಿಗಳನ್ನು ಬಾಬು ಅವರಿಂದ ಎಸ್‌ಐಟಿ ಪಡೆದುಕೊಂಡಿದೆ. ರಾಯ್ ಅವರ ಪತ್ನಿ ಹಾಗೂ ಮಗಳನ್ನು ಸೋಮವಾರ ವಿಚಾರಣೆ ನಡೆಸಲು ಸಿದ್ಧತೆ ನಡೆಸಿದೆ ಎಂದು ಮೂಲಗಳು ತಿಳಿಸಿವೆ.

ರಾಯ್ ಆತ್ಮಹತ್ಯೆ ಮಾಡಿಕೊಂಡ ದಿನ ಕಚೇರಿಯಲ್ಲಿ ಕಾರ್ಯನಿರ್ವಹಿಸಿದ್ದ ಕಂಪನಿಯ ನಿರ್ದೇಶಕರು, ಹಣಕಾಸು ವಿಭಾಗದ ಸಿಬ್ಬಂದಿ, ಆಪ್ತರ ವಿಚಾರಣೆಯನ್ನು ನಡೆಸಲಾಯಿತು. ರಾಯ್ ಅವರು ಒತ್ತಡದಲ್ಲಿದ್ದರೇ? ಅವರ ವರ್ತನೆ ಯಾವ ರೀತಿ ಇತ್ತು? ಗುಂಡಿನ ಶಬ್ದ ಕೇಳಲಿಲ್ಲವೇ ಎಂಬ ಪ್ರಶ್ನೆಗಳನ್ನು ಕೇಳಿ, ಹೇಳಿಕೆ ದಾಖಲಿಸಿಕೊಳ್ಳಲಾಗಿದೆ ಎಂದು ಹೇಳಿವೆ.

ರಾಯ್ ಬಳಸುತ್ತಿದ್ದ ಎರಡು ಐಫೋನ್‌ಗಳನ್ನು ಜಪ್ತಿ ಮಾಡಿ, ದತ್ತಾಂಶ ಮರುಸಂಗ್ರಹಕ್ಕಾಗಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಲಾಗಿದೆ. ಆತ್ಮಹತ್ಯೆಗೂ ಮುನ್ನ ಯಾರ ಜತೆ ಮಾತನಾಡಿದ್ದಾರೆ? ಏನು ಮಾತನಾಡಿದ್ದಾರೆ? ಎಂಬ ಮಾಹಿತಿ ಕಲೆ ಹಾಕಲಾಗುತ್ತಿದೆ. ರಾಯ್ ಅವರ ದಿನಚರಿಯ ಮಾಹಿತಿಯನ್ನು ಸಂಗ್ರಹಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಅಲ್ಲದೇ ರಾಯ್ ಅವರ ಲ್ಯಾಪ್‌ಟಾಪ್ ಹಾಗೂ ಪಿಸ್ತೂಲ್ ವಶಕ್ಕೆ ಪಡೆಯಲಾಗಿದೆ. ಕಂಪನಿಯ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿಯನ್ನು ಪರಿಶೀಲಿಸಲಾಗುತ್ತಿದ್ದು, ತಾಂತ್ರಿಕ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುತ್ತಿದೆ.

ದಾಳಿ, ಶೋಧಕಾರ್ಯ ನಡೆಸುವ ತನಿಖಾ ಸಂಸ್ಥೆ, ಅಧಿಕಾರಿಗಳು ಸಾಮಾನ್ಯವಾಗಿ ಆರೋಪಿಗಳ ಬಳಿಯ ಮೊಬೈಲ್, ಪಿಸ್ತೂಲ್ ಸೇರಿ ಇತರೆ ವಸ್ತುಗಳನ್ನು ತಾತ್ಕಾಲಿಕವಾಗಿ ವಶಕ್ಕೆ ಪಡೆಯುತ್ತಾರೆ. ಆದರೆ, ಐ.ಟಿ ಅಧಿಕಾರಿಗಳು ರಾಯ್ ಬಳಿ ಪರವಾನಗಿ ಹೊಂದಿರುವ ಪಿಸ್ತೂಲ್ ಅನ್ನು ಯಾಕೆ ವಶಕ್ಕೆ ಪಡೆದಿರಲಿಲ್ಲ ಎಂಬುದು ಚರ್ಚೆಗೆ ಗ್ರಾಸವಾಗಿದೆ.

‘ನೇಚರ್ಸ್’ನಲ್ಲಿ ಅಂತ್ಯಸಂಸ್ಕಾರ

ಕಾನ್ಫಿಡೆಂಟ್ ಕ್ಯಾಸ್ಕೇಡ್‌ನ ರಾಯಲ್ ಹಾಲ್‌ನಲ್ಲಿ ಭಾನುವಾರ ಮಧ್ಯಾಹ್ನದವರೆಗೂ ರಾಯ್ ಅವರ ಮೃತದೇಹದ ಅಂತಿಮ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಈ ವೇಳೆ ಸಂಬಂಧಿಕರು, ಗಣ್ಯರು ಹಾಗೂ ರಾಜಕಾರಣಿಗಳು ಅಂತಿಮ ನಮನ ಸಲ್ಲಿಸಿದರು. ಪತ್ನಿ ಮತ್ತು ಮಕ್ಕಳು, ತಾಯಿ ಹಾಗೂ ಸಹೋದರರು ಕಣ್ಣೀರಿಟ್ಟರು. ಬಳಿಕ ನೇಚರ್ಸ್ ಲಕ್ಷುರಿ ರೆಸಾರ್ಟ್ ಆವರಣದಲ್ಲಿ ಕ್ರಿಶ್ಚಿಯನ್ ಸಂಪ್ರದಾಯದಂತೆ ರಾಯ್ ಅವರ ಅಂತ್ಯಸಂಸ್ಕಾರ ನೆರವೇರಿತು.

ಚಿನಕುರುಳಿ ಪ್ರಕಾಶ್ ಶೆಟ್ಟಿ



₹400 ಕೋಟಿ ದರೋಡೆ ಪ್ರಕರಣ: ಕಿಶೋರ್ ಶರಣು

ಪ್ರಜಾವಾಣಿ ವಾರ್ತೆ

ಬೆಳಗಾವಿ: ಜಿಲ್ಲೆಯ ಚೋರ್ಲಾ ಘಾಟ್‌ನಲ್ಲಿ ನಡೆದಿದೆ ಎನ್ನಲಾದ ₹400 ಕೋಟಿ ದರೋಡೆ ಪ್ರಕರಣ ಹಾಗೂ ಇದನ್ನು ಬಹಿರಂಗ ಮಾಡಿದ ಸಂದೀಪ ಪಾಟೀಲ ಅಪಹರಣ ಪ್ರಕರಣದ ಮುಖ್ಯ ಆರೋಪಿ ಕಿಶೋರ್ ಶನಿವಾರ ರಾತ್ರಿ ನಾಸಿಕ್ ತಾಲ್ಲೂಕಿನ ಘೋಟಿ ಪೊಲೀಸ್ ಠಾಣೆಗೆ ಶರಣಾಗಿದ್ದಾರೆ.

ಭಾನುವಾರ ಎಸ್‌ಐಟಿ ಅಧಿಕಾರಿಗಳು ಅವರನ್ನು ಬಂಧಿಸಿದ್ದು, ಫೆ.3ರವರೆಗೆ ಪೊಲೀಸ್ ವಶಕ್ಕೆ ನೀಡಲಾಗಿದೆ.

‘ಚೋರ್ಲಾ ಘಾಟ್‌ನಲ್ಲಿ ₹400 ಕೋಟಿ ಹಣವಿದ್ದ ಎರಡು ಕಂಟೇನರ್ ದರೋಡೆ ಮಾಡಲಾಗಿದೆ. ಇದನ್ನು ನಾನೇ ಮಾಡಿಸಿದ್ದೇನೆ ಎಂದು ಹಣದ ಮಾಲೀಕ ಕಿಶೋರ್ ಸಾಳವೆ ಹಾಗೂ ತಂಡದವರು ನನ್ನನ್ನು ಅಪಹರಣ ಮಾಡಿದ್ದರು’ ಎಂದು ಸಂದೀಪ ಪಾಟೀಲ ದೂರು ದಾಖಲಿಸಿದ್ದರು. ಇದುವರೆಗೆ ಹಣ ದರೋಡೆ ಅಥವಾ ವಾಹನ ದರೋಡೆ ಬಗ್ಗೆ ಯಾವುದೇ ಪ್ರಕರಣ ದಾಖಲಾಗಿಲ್ಲ.

‘ಅಪಹರಣ ಮಾಡಿದ್ದರು ಎನ್ನಲಾದ ವಾಹನ ಚಾಲಕನೂ ಸೇರಿ 7 ಮಂದಿಯನ್ನು ಇದುವರೆಗೆ ಬಂಧಿಸಲಾಗಿತ್ತು. ಕಿಶೋರ್ ತಲೆಮರೆಸಿಕೊಂಡಿದ್ದರು’ ಎಂದು ಮೂಲಗಳು ತಿಳಿಸಿವೆ.

ವೆನೆಜುವೆಲಾದಿಂದ ತೈಲ ಖರೀದಿಸಲಿದೆ ಭಾರತ: ಟ್ರಂಪ್

ನ್ಯೂಯಾರ್ಕ್ (ಪಿಟಿಐ): ಭಾರತವು ಇರಾನ್ ಬದಲಿಗೆ ವೆನೆಜುವೆಲಾದಿಂದ ಕಚ್ಚಾತೈಲವನ್ನು ಖರೀದಿ ಮಾಡಲಿದೆ ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿದರು.

ವೆನೆಜುವೆಲಾಗೆ ನೀಡಿರುವ ಸಾಲವನ್ನು ಚೀನಾ ವಾಪಸ್ ಪಡೆಯಲಿದೆಯೇ ಎಂಬ ಸುದ್ದಿಗಾರರ ಪ್ರಶ್ನೆಗೆ ಶನಿವಾರ ಉತ್ತರಿಸಿದ ಟ್ರಂಪ್, ‘ತೈಲ ಖರೀದಿಗೆ ಸಂಬಂಧಿಸಿದಂತೆ ವೆನೆಜುವೆಲಾದೊಂದಿಗೆ ಚೀನಾ ಒಪ್ಪಂದ ಮಾಡಿಕೊಳ್ಳುವುದಾದರೆ ಅದನ್ನು ನಾವು ಸ್ವಾಗತಿಸುತ್ತೇವೆ’ ಎಂದು ಹೇಳಿದರು. ▶13


ರಾಜ್ಯ ಕಂಡ ಅಪರೂಪದ ರಾಜಕಾರಣಿ,
ಅಭಿವೃದ್ಧಿಪರ ಚಿಂತನೆಯುಳ್ಳ ನೇತಾರ,
ಹಲವು ವಿನೂತನ ಯೋಜನೆ ತಂದ ದೂರದೃಷ್ಟಿಯ ಜ್ಞಾನಿ,
ಸರ್ವ ಸಮುದಾಯದ ಹಿತಚಿಂತಕರು, ದಿಟ್ಟ, ನೇರ ನುಡಿಯ
ಧೀಮಂತ ನಾಯಕರು, ಕಲ್ಪನೆಗೆ ನಿಲುಕದಷ್ಟು ಬುದ್ಧಿಸಾಮರ್ಥ್ಯದ ವಿಜ್ಞಾನಿ,
ಸರಳ-ಸಜ್ಜನಿಕೆಯ ಯುಗಪುರುಷ, ಎಲ್ಲರೊಳಗೊಂದಾಗಿ ನಡೆಯುತ್ತಿರುವ
ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರು ಹಾಗೂ
ಮಾಜಿ ಉಪಮುಖ್ಯಮಂತ್ರಿಗಳಾದ
ಡಾ|| ಸಿ.ಎನ್. ಅಶ್ವಥ್‌ನಾರಾಯಣ್
ರವರಿಗೆ
ಜನುಮದಿನದ ಶುಭಾಶಯಗಳು
2 ಫೆಬ್ರವರಿ
Happy Birthday
ಜಿ. ಮಂಜುನಾಥ್ ರಾಜು
ಬಿಬಿಎಂಪಿ ಮಾಜಿ ಸದಸ್ಯರು,
ಕಾಡುಮಲ್ಲೇಶ್ವರ ವಾರ್ಡ್
ಎನ್.ಜೈಪಾಲ್
ಬಿಬಿಎಂಪಿ ಮಾಜಿ ಸದಸ್ಯರು,
ಮಲ್ಲೇಶ್ವರಂ ವಾರ್ಡ್
ಕೇಶವ ಐತಾಳ್.ಕೆ.ಎಸ್
ಅಧ್ಯಕ್ಷರು, ಬಿಜೆಪಿ
ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರ
ಹೆಚ್.ಮಂಜುನಾಥ್
ಬಿಬಿಎಂಪಿ ಮಾಜಿ ಸದಸ್ಯರು,
ಸುಬ್ರಹ್ಮಣ್ಯನಗರ ವಾರ್ಡ್
ಎನ್.ನಾಗರಾಜ್
ಉಪಾಧ್ಯಕ್ಷರು, ಬಿಜೆಪಿ
ಸುಬ್ರಹ್ಮಣ್ಯನಗರ ವಾರ್ಡ್
ಡಾ. ಎಂ.ರಾಜೇಶ್ ಮನ್ನಾರ್ ನಾಯ್ಡು
ಸಂಚಾಲಕರು,
ವೈದ್ಯಕೀಯ ಪ್ರಕೋಷ್ಠ ಬೆಂ.ಉತ್ತರ, ಬಿಜೆಪಿ
ಶುಭಕೋರುವವರು: ಮಲ್ಲೇಶ್ವರಂ ವಿಧಾನಸಭಾ ಕ್ಷೇತ್ರದ ಬಿಜೆಪಿ ಕಾರ್ಯಕರ್ತರು,
ನಾಗರಿಕ ಬಂಧುಗಳು ಮತ್ತು ಹಿತೈಷಿಗಳು.

'ಇಬ್ಭಾಗವಾಗದೇ ಅಸ್ಮಿತೆ ಉಳಿಸಿಕೊಳ್ಳಿ'

'ಬ್ಯಾರಿ ಕೂಟ' ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಿಮ್ಮನ್ನು ಇಬ್ಭಾಗ ಮಾಡಲು ಯಾರೇ ಪ್ರಯತ್ನಿಸಿದರೂ ಅದಕ್ಕೆ ಆಸ್ಪದ ಕೊಡದೆ. ಒಗ್ಗಟ್ಟಾಗಿರ ಬೇಕು. ಎಲ್ಲೇ ಹೋದರೂ ಬ್ಯಾರಿ ಅಸ್ಮಿತೆ ಉಳಿಸಿಕೊಳ್ಳಿ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಬ್ಯಾರೀಸ್ ಸೆಂಟ್ರಲ್ ಕಮಿಟಿ ಭಾನುವಾರ ಆಯೋಜಿಸಿದ್ದ 'ಬ್ಯಾರಿ ಕೂಟ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ವ್ಯಾಪಾರ ವೃತ್ತಿಯ ಬ್ಯಾರಿಗಳ ವಾಸ ದಕ್ಷಿಣ ಕನ್ನಡವಾಗಿದ್ದರೂ ದೇಶ, ವಿದೇಶಗಳಲ್ಲಿ ಕೆಲಸ ಮಾಡುತ್ತಿದ್ದಾರೆ. ಎಲ್ಲಿಯೂ ಬ್ಯಾರಿ ಸಂಸ್ಕೃತಿ, ಅಸ್ಮಿತೆಯನ್ನು ಬಿಟ್ಟುಕೊಟ್ಟಿಲ್ಲ. ಮುಂದೆಯೂ ಬಿಡಬೇಡಿ ಎಂದು ಸಲಹೆ ನೀಡಿದರು.

'ಬೆಸ್ತರು, ಬಂಟರು, ಕೊಂಕಣಿಗಳ ಸಹಿತ ಎಲ್ಲರೊಂದಿಗೆ ಹೊಂದಿಕೊಂಡು ಅವರಂತೆಯೇ ಬದುಕುವ ಬ್ಯಾರಿಗಳಿಗೆ ಜಾತಿ, ಧರ್ಮದ ವ್ಯಾಮೋಹ ಅಷ್ಟೊಂದು ಇಲ್ಲ. ಯಾವುದೇ ಧರ್ಮವೂ ಪ್ರೀತಿಸಿ ಎಂದು ಹೇಳಿ ಕೊಡುತ್ತದೆಯೇ ಹೊರತು ದ್ವೇಷ ಮಾಡಲು ಹೇಳಿಕೊಡುವುದಿಲ್ಲ. ಧರ್ಮವನ್ನು ನಮ್ಮ ಅನುಕೂಲಕ್ಕೆ ಬೇಕಾದಂತೆ ವ್ಯಾಖ್ಯಾನ ಮಾಡುವುದು ಸರಿಯಾದ ಕ್ರಮವಲ್ಲ. ನಾವು ಮನುಷ್ಯರು ಎಂಬುದನ್ನು ಮರೆಯದೆ ಜಾತ್ಯತೀತವಾಗಿ ಬದುಕಬೇಕು' ಎಂದರು.

ಒಂದು ಕಾಲದಲ್ಲಿ ಹೆಣ್ಣು ಮಕ್ಕಳು ಅಕ್ಷರ ಸಂಸ್ಕೃತಿಯಿಂದ ವಂಚಿತರಾಗಿದ್ದರು. ಇತ್ತೀಚೆಗೆ ಬ್ಯಾರಿ ಹೆಣ್ಣುಮಕ್ಕಳಿಗೂ ಉತ್ತಮ ಶಿಕ್ಷಣ ಸಿಗುತ್ತಿದೆ. ಲಿಂಗ ತಾರತಮ್ಯ ಹೋಗ ಬೇಕಾದರೆ ಗಂಡು ಮಕ್ಕಳು ಮತ್ತು ಹೆಣ್ಣುಮಕ್ಕಳು ವಿದ್ಯಾವಂತರಾಗಬೇಕು ಎಂದು ತಿಳಿಸಿದರು.

ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಮಾತನಾಡಿ, 'ಉದ್ಯಮ, ಶಿಕ್ಷಣ ಸಹಿತ ವಿವಿಧ ಕ್ಷೇತ್ರಗಳಲ್ಲಿ ಪರಸ್ಪರ ಸಹಕಾರ ನೀಡುವ ಕೂಟವೇ ಬ್ಯಾರಿ ಕೂಟ. ಒಂದೇ ತಾಯಿಯ ಮಕ್ಕಳಂತೆ ಬ್ಯಾರಿ ಸಂಸ್ಕೃತಿಯನ್ನು ಪರಂಪರೆ, ಆಚಾರ, ವಿಚಾರವನ್ನು ತಿಳಿಸಿಕೊಡುವ ನಮ್ಮ ಸಂಸ್ಕೃತಿಯನ್ನು ಮುಂದಿನ ಪೀಳಿಗೆಗೆ ದಾಟಿಸುವ ಪ್ರಯತ್ನವಿದು' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಾಹಸಿಗಳಾದ ಬ್ಯಾರಿಗಳು ವ್ಯಾಪಾರ ಮತ್ತು ದುಡಿಮೆಯನ್ನು ನಂಬಿರುವ ಸಮುದಾಯ. ಬಡವರಿಂದ ಹಿಡಿದು ಶ್ರೀಮಂತರವರೆಗೆ ಅವರಿಗೆ ಬೇಕಾದುದನ್ನು ಒದಗಿಸುವ ಕೆಲಸವನ್ನು ಬ್ಯಾರಿಗಳು ಮಾಡುತ್ತಾರೆ. ಮೀನು ಮಾರಿ, ಪೇಪರ್, ಬಾಟಲ್ ಸಂಗ್ರಹಿಸಿ ಮನೆ ನಿರ್ವಹಣೆ ಮಾಡುತ್ತಾರೆ. ಮಕ್ಕಳಿಗೆ ವಿದ್ಯಾಭ್ಯಾಸ ಕೊಡಿಸುತ್ತಾರೆ. ಬ್ಯಾರಿಗಳು ಸ್ವಾಭಿಮಾನಿಗಳು ಎಂದು ಹೇಳಿದರು.

ಬ್ಯಾರೀಸ್ ಸೆಂಟ್ರಲ್ ಕಮಿಟಿ ಅಧ್ಯಕ್ಷ ಶಬೀರ್ ಬ್ರಿಗೇಡ್, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಇನಾಯತ್ ಅಲಿ, ಬ್ಯಾರಿ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಉಮರ್ ಯು.ಎಚ್., ಮುಖ್ಯಮಂತ್ರಿಯವರ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್ ಉಪಸ್ಥಿತರಿದ್ದರು.


'ಬ್ಯಾರಿ ಕೂಟ'ದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನೀಡಿದ ಮಕ್ಕಳನ್ನು ಸಿದ್ದರಾಮಯ್ಯ, ಯು.ಟಿ. ಖಾದರ್ ಹೂವು ನೀಡಿ ಗೌರವಿಸಿದರು

ಸತೀಶ್ ಹಂಪಿಹೊಳಿ ಫೌಂಡೇಷನ್ ನಿರಂತರ ಸಂಗೀತೋತ್ಸವಕ್ಕೆ ಮೆಚ್ಚುಗೆ

'ವಚನ, ದಾಸ ಸಾಹಿತ್ಯ ಪ್ರಸಾರ ಶ್ಲಾಘನೀಯ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಚನ ಹಾಗೂ ದಾಸ ಸಾಹಿತ್ಯ ಕರ್ನಾಟಕದ ಕೊಡುಗೆ. ಈಗಲೂ ಇವುಗಳನ್ನು ಜನರಿಗೆ ತಲುಪಿಸಲು ಕಲಾವಿದರು ನಿರಂತರ ಪ್ರಯತ್ನ ನಡೆಸುತ್ತಿರುವುದು ಶ್ಲಾಘನೀಯ' ಎಂದು ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ ಹೇಳಿದರು.

ಸತೀಶ್ ಹಂಪಿಹೊಳಿ ಮ್ಯೂಸಿಕ್ ಫೌಂಡೇಷನ್ ಜೆಎಸ್ಎಸ್ ಸಭಾಂಗಣದಲ್ಲಿ ಭಾನುವಾರ ಆಯೋಜಿಸಿದ್ದ ದಾಸ ನಿರಂತರ ಸಂಗೀತೋತ್ಸವ ಹಾಗೂ ಪಂ.ಆರ್.ವಿ.ಶೇಷಾದ್ರಿ ಗವಾಯಿ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಮಾತನಾಡಿದರು.

'12ನೇ ಶತಮಾನದಲ್ಲಿ ವಚನ ಸಾಹಿತ್ಯ ಪ್ರವರ್ಧಮಾನಕ್ಕೆ ಬಂದಿತು. 15ನೇ ಶತಮಾನದಲ್ಲಿ ದಾಸ ಸಾಹಿತ್ಯಕ್ಕೆ ಒತ್ತು ಸಿಕ್ಕಿತು. ಈ ಸಾಹಿತ್ಯದಲ್ಲಿನ ಉತ್ತಮ ವಿಚಾರಗಳು ಈಗಲೂ ಪ್ರಸ್ತುತ' ಎಂದರು.

ಕಲಾವಿದ ಶ್ರೀನಿವಾಸಪ್ರಭು ಉತ್ಸವಕ್ಕೆ ಚಾಲನೆ ನೀಡಿ, 'ಸಂಗೀತೋತ್ಸವ ಆಯೋಜನೆ ಕಷ್ಟದ ಕೆಲಸ. ಕಲಾವಿದರನ್ನು ಒಟ್ಟಿಗೆ ಸೇರಿಸಿ ಉದ್ದೇಶ ಈಡೇರುವಂತೆ ಮಾಡುವ ಕೆಲಸಕ್ಕೆ ಸಮಾಜದ ಬೆಂಬಲ ಬೇಕು' ಎಂದರು.

ಸಂಘಟಕ ಸತೀಶ್ ಹಂಪಿಹೊಳಿ, ಕವಯತ್ರಿ ರಂಜನಿ ಪ್ರಭು, ಕಥಕ್ ನೃತ್ಯಗಾರ್ತಿ ಪೂರ್ಣಾ ಆಚಾರ್ಯ, ಶೈಲೇಂದ್ರ ಶರ್ಮಾ, ಹಿಂದೂಸ್ತಾನಿ ಗಾಯಕ ಅಶ್ವಿನ್ ಬಾಳಿಗಾ ಹಾಜರಿದ್ದರು. ಕಲಾವಿದ ವಾಗೀಶ್ ಭಟ್ ಅವರು ಪಂ.ಆರ್.ವಿ. ಶೇಷಾದ್ರಿ ಗವಾಯಿ ಪ್ರಶಸ್ತಿ ಸ್ವೀಕರಿಸಿದರು.


ಹಿಂದೂಸ್ತಾನಿ ಗಾಯಕ ವಾಗೀಶ್ ಭಟ್ ಅವರಿಗೆ ಪಂ.ಆರ್.ವಿ. ಶೇಷಾದ್ರಿ ಗವಾಯಿ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಪತ್ನಿ ಸ್ವರ್ಣಲತಾ ವಿ. ಭಟ್, ಅಶ್ವಿನ್ ಬಾಳಿಗಾ, ಸತೀಶ್ ಹಂಪಿಹೊಳಿ, ಎನ್. ಸಂತೋಷ್ ಹೆಗ್ಡೆ, ಪೂರ್ಣ ಆಚಾರ್ಯ, ರಂಜನಿ ಪ್ರಭು ಮತ್ತು ಶ್ರೀನಿವಾಸ ಪ್ರಭು ಉಪಸ್ಥಿತರಿದ್ದರು. ಪ್ರಜಾವಾಣಿ ಚಿತ್ರ

ಎಸ್ಐಆರ್ ವಿರುದ್ಧ ಮಮತಾ 'ಸುಪ್ರೀಂ'ಗೆ

ನವದೆಹಲಿ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ತಮ್ಮ ರಾಜ್ಯದಲ್ಲಿ ನಡೆಯುತ್ತಿರುವ ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್ಐಆರ್) ಪ್ರಕ್ರಿಯೆಯನ್ನು ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದಾರೆ.

ಬ್ಯಾನರ್ಜಿ ಜನವರಿ 28ರಂದು ಅರ್ಜಿ ಸಲ್ಲಿಸಿದ್ದು, ಚುನಾವಣಾ ಆಯೋಗ ಮತ್ತು ಪಶ್ಚಿಮ ಬಂಗಾಳದ ಮುಖ್ಯ ಚುನಾವಣಾ ಅಧಿಕಾರಿಯನ್ನು ಪ್ರತಿವಾದಿಗಳನ್ನಾಗಿ ಮಾಡಿದ್ದಾರೆ.ಅರ್ಜಿಯನ್ನು ವಿಚಾರಣೆಗೆ ಇನ್ನಷ್ಟೇ ಪಟ್ಟಿ ಮಾಡಬೇಕಾಗಿದೆ. 'ಬಂಗಾಳದಲ್ಲಿ ನಡೆಯುತ್ತಿರುವ ಎಸ್ಐಆರ್ 'ದೋಷಪೂರಿತ'ವಾಗಿದ್ದು, ಇಡೀ ಪ್ರಕ್ರಿಯೆ ನಿಲ್ಲಿಸಬೇಕು' ಎಂದು ಮಮತಾ ಈ ಹಿಂದೆ ಮುಖ್ಯ ಚುನಾವಣಾ ಆಯುಕ್ತರಿಗೆ ಪತ್ರ ಬರೆದಿದ್ದರು.

ಹಿಂದೂ ಸಮಾಜೋತ್ಸವದ ಶೋಭಾ ಯಾತ್ರೆ

ಪೀಣ್ಯ ದಾಸರಹಳ್ಳಿ: 'ಹಿಂದೂ ಸಮಾಜದ ಏಕತೆ, ಹಿಂದೂ ಸಂಸ್ಕೃತಿಯ ರಕ್ಷಣೆ, ರಾಷ್ಟ್ರೀಯತೆಯ ಜಾಗೃತಿಗಾಗಿ ಹಿಂದೂ ಸಮಾಜೋತ್ಸವ ನಡೆಯುತ್ತಿದೆ' ಎಂದು ಶಾಸಕ ಎಸ್.ಮುನಿರಾಜು ತಿಳಿಸಿದರು.

ರುಕ್ಮಿಣಿ ನಗರದಲ್ಲಿ ಹಿಂದೂ ಸಮಾಜೋತ್ಸವದ ಶೋಭಾ ಯಾತ್ರೆಗೆ ಚಾಲನೆ ನೀಡಿ ಅವರು ಮಾತನಾಡಿದರು.

ಭಾರತಾಂಬೆಯ ಭಾವಚಿತ್ರ, ನೂರಾರು ಮಹಿಳೆಯರಿಂದ ಪೂರ್ಣ ಕುಂಭ ಕಳಶ, ಭಜನೆ, ಕಲಾತಂಡಗಳೊಂದಿಗೆ ಶೋಭಾ ಯಾತ್ರೆಯು ನಾಗಸಂದ್ರದ ಎಚ್ಎಂಟಿಯ ಬಿಡಿಎ ಮೈದಾನದವರೆಗೂ ನಡೆಯಿತು.

ದಾಸರಹಳ್ಳಿ ಸಮಾಜೋತ್ಸವ ಸಮಿತಿಯ ಅಧ್ಯಕ್ಷ ಸುಧೀರ್ ಮಾತನಾಡಿ, 'ಕೌಟುಂಬಿಕ ಮೌಲ್ಯಗಳ ಸಂರಕ್ಷಣೆ, ಸಹಬಾಳ್ವೆ, ಸ್ವದೇಶಿ ಭಾವದ ಜಾಗೃತಿ ಮತ್ತು ನಾಗರಿಕ ಶಿಷ್ಟಾಚಾರ ವಿಷಯಗಳತ್ತ ಗಮನಹರಿಸಬೇಕು' ಎಂದರು.

ನಾಗಸಂದ್ರ ಶಾಖೆಯ ಶಿವರಾಜ್ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು. ಸಮಾಜೋತ್ಸವ ಸಮಿತಿಯ ಪ್ರಾಂತ ಅಧಿಕಾರಿ ಬಾಲಕೃಷ್ಣ ಕಿಣಿ, ಅನಂತು, ಸೌಂದರ್ಯ ಭರತ್, ಸತ್ಯವೇಲು ಮತ್ತು ಕೃಷ್ಣಮೂರ್ತಿ, ಬಿಜೆಪಿ ಮುಖಂಡರಾದ ಎಂ.ಕೆ. ಜಗದೀಶ್, ಬೆಲ್ಮಾರ್ ಸುರೇಶ್, ವಿಜಯ್ ಕುಮಾರ್, ಲಾರಿ ಮುನಿರಾಜು ಹಾಜರಿದ್ದರು.


ರುಕ್ಮಿಣಿ ನಗರದಲ್ಲಿ ಹಿಂದೂ ಸಮಾಜೋತ್ಸವದ ಶೋಭಾ ಯಾತ್ರೆಗೆ ಶಾಸಕ ಎಸ್. ಮುನಿರಾಜು ಚಾಲನೆ ನೀಡಿದರು.


ನಾಗದೇವನಹಳ್ಳಿಯ ಭೂತಪ್ಪ ಸ್ವಾಮಿ ದೇವಸ್ಥಾನದ ಆವರಣದಲ್ಲಿ ನಡೆದ ಬೃಹತ್ ಹಿಂದೂ ಸಮಾಜೋತ್ಸವದಲ್ಲಿ ನಾಗದೇವನಹಳ್ಳಿ ಎನ್.ಸಿ.ಕುಮಾರ್ ಮಾತನಾಡಿದರು. ಸಹನಾ ಕುಂದರ್ ಸೂಡ, ಕೃಷ್ಣ ಯಾದವನಂದ ಸ್ವಾಮೀಜಿ, ಪಿ.ಜಿ. ಗಿರೀಶ್ ಇದ್ದಾರೆ.

'ಸಂಸ್ಕೃತಿ ಉಳಿವಿಗಾಗಿ ಹಿಂದೂಗಳೆಲ್ಲಾ ಒಂದಾಗಿ'

ರಾಜರಾಜೇಶ್ವರಿ ನಗರ: 'ಹಿಂದೂ ಧರ್ಮದ ರಕ್ಷಣೆ ಆಗಬೇಕಾದರೆ ನಮ್ಮ ಸಂಸ್ಕಾರ, ಸಂಸ್ಕೃತಿ, ಗುರು ಪರಂಪರೆ, ಹಿಂದುತ್ವವನ್ನು ಯುವ ಜನಾಂಗಕ್ಕೆ ತಿಳಿಸುವ ಕೆಲಸ ಆಗಬೇಕು' ಎಂದು ಚಿತ್ರದುರ್ಗದ ಅಖಿಲ ಭಾರತ ಕೃಷ್ಣ ಯಾದವ ಮಹಾ ಸಂಸ್ಥಾನದ ಪೀಠಾಧ್ಯಕ್ಷ ಕೃಷ್ಣ ಯಾದವಾನಂದ ಸ್ವಾಮೀಜಿ ಹೇಳಿದರು.

ನಾಗದೇವನಹಳ್ಳಿಯ ಭೂತಪ್ಪ ಸ್ವಾಮಿ ದೇವಸ್ಥಾನದ ಮೈದಾನದಲ್ಲಿ ಆಯೋಜಿಸಿದ್ದ ಬೃಹತ್ ಹಿಂದೂ ಸಮಾಜೋತ್ಸವದ ಸಾನಿಧ್ಯ ವಹಿಸಿ ಮಾತನಾಡಿದ ಅವರು, 'ಹಿಂದೂ ಸಮಾಜದ ಜನಾಂಗದವರನ್ನು ಸಹೋದರ, ಸಹೋದರಿಯರಂತೆ ಕಾಣುವ ಮೂಲಕ ಬಲಿಷ್ಠ ಹಿಂದೂ ರಾಷ್ಟ್ರ ಕಟ್ಟಬೇಕು' ಎಂದರು.

ವಕೀಲರಾದ ಸಹನಾ ಕುಂದರ್ ಸೂಡ ಮಾತನಾಡಿ, 'ಅವಿಭಕ್ತ ಕುಟುಂಬಗಳು ಕಣ್ಮರೆಯಾಗುತ್ತಿವೆ. ಹಿಂದೂಗಳಾದ ನಾವೆಲ್ಲರೂ ಜಾತಿಯನ್ನು ದೂರವಿಟ್ಟು ಬಲಿಷ್ಠ ಹಿಂದೂ ಸಂಸ್ಕೃತಿ ಉಳಿಸೋಣ' ಎಂದು ಕರೆ ನೀಡಿದರು.

ಬಿಜೆಪಿ ಮುಖಂಡ ನಾಗದೇವನಹಳ್ಳಿ ಎನ್.ಸಿ.ಕುಮಾರ್ ಮಾತನಾಡಿ, 'ಸಮಾಜದ ಏಕತೆ, ಧಾರ್ಮಿಕ ಪರಂಪರೆ, ಸಂಸ್ಕೃತಿ ಉಳಿಯಬೇಕು. ಸಮಾಜದಲ್ಲಿ ಧರ್ಮ ಉಳಿಯಲು ಹಿಂದೂಗಳು ಮೇಲು ಕೀಳು ಎಂಬ ಭಾವನೆಯನ್ನು ತೊಲಗಿಸಬೇಕು' ಎಂದರು.

ಭೂತಪ್ಪ ಸ್ವಾಮಿ ದೇವಸ್ಥಾನ ಸಮಿತಿಯ ಅಧ್ಯಕ್ಷ ಡಿಪೊ ಕೃಷ್ಣಪ್ಪ, ಸಹಕಾರ ಮಹಾಮಂಡಲ ನಿರ್ದೇಶಕ ಸಿ.ಎಂ. ಮಾರೇಗೌಡ, ಬಿಜೆಪಿ ರಾಜ್ಯ ಓಬಿಸಿ ಕಾರ್ಯಕಾರಿಣಿ ಸಮಿತಿ ಸದಸ್ಯರಾದ ಪ್ರೇಮಾ ನಾಗಯ್ಯ, ಬಿಎಚ್ಇಎಲ್ ರಂಗಪ್ಪ, ಬಿಜೆಪಿ ನಗರ ಮಂಡಲ ಅಧ್ಯಕ್ಷ ಅನಿಲ್ ಚಳಗೇರಿ ಮೊದಲಾದವರು ಹಾಜರಿದ್ದರು. ಪ್ರಸನ್ನ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿಯ ಅಧ್ಯಕ್ಷ ಪಿ.ಜಿ. ಗಿರೀಶ್ ಅಧ್ಯಕ್ಷತೆ ವಹಿಸಿದ್ದರು.

ಹವಾಮಾನ ಮುನ್ಸೂಚನೆ: ನಗರದಲ್ಲಿ ಬೆಳಗಿನ ಜಾವ ಚಳಿಯ ಅನುಭವ ಇರಲಿದೆ

ಬಜೆಟ್‌ನಲ್ಲಿ ಕರ್ನಾಟಕದ ಅಭಿವೃದ್ಧಿ ಮಾದರಿ ಅನುಸರಣೆ: ಕಾಂಗ್ರೆಸ್ ಮುಖಂಡರ ಪ್ರತಿಪಾದನೆ

‘ಕ್ವಿನ್ ಸಿಟಿ ಪಡಿಯಚ್ಚು ಕೇಂದ್ರದ ಬಜೆಟ್’

2026-27

ಕೇಂದ್ರ ಬಜೆಟ್

ಬಜೆಟ್ ಬಗ್ಗೆ ರಾಜ್ಯದ ವಿವಿಧ ರಾಜಕೀಯ ಪಕ್ಷಗಳ ಮುಖಂಡರ, ವಿವಿಧ ಕ್ಷೇತ್ರಗಳ ಪ್ರಮುಖರು, ವಿಷಯ ತಜ್ಞರ ಪ್ರತಿಕ್ರಿಯೆಗಳು ಇಲ್ಲಿವೆ. ಬಜೆಟ್‌ನಿಂದ ರಾಜ್ಯಕ್ಕೆ ಆಗಬಹುದಾದ ಲಾಭ–ನಷ್ಟಗಳು, ಬಜೆಟ್‌ನ ಅನುಷ್ಠಾನದ ಕಾರ್ಯಸಾಧ್ಯತೆಯನ್ನು ವಿಶ್ಲೇಷಿಸಲಾಗಿದೆ.

ಕರ್ನಾಟಕ ಪ್ರತಿಫಲನ


ಎಂ.ಬಿ. ಪಾಟೀಲ

ಬೆಂಗಳೂರು: ‘ಕೇಂದ್ರ ಬಜೆಟ್‌ನಲ್ಲಿ ಪ್ರಸ್ತಾಪಿಸಿರುವ ವಿಶ್ವವಿದ್ಯಾಲಯ ಟೌನ್‌ಶಿಪ್‌ಗಳ ನಿರ್ಮಾಣ ಮತ್ತು 5 ಪ್ರಾದೇಶಿಕ ವೈದ್ಯಕೀಯ aಪ್ರವಾಸೋದ್ಯಮ ಹಬ್‌ಗಳ ಅಭಿವೃದ್ಧಿ ಯೋಜನೆಗಳು ನಮ್ಮ ಕ್ವಿನ್ ಸಿಟಿ ಪರಿಕಲ್ಪನೆಯಿಂದ ಪ್ರಭಾವಿತ ಆಗಿವೆ’ ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಹೇಳಿದ್ದಾರೆ.

‘ದಾಬಸ್‌ಪೇಟೆ ಸಮೀಪ 5,000 ಎಕರೆಯಲ್ಲಿ ಕ್ವಿನ್ ಸಿಟಿ ಬರಲಿದೆ. ಜಗತ್ತಿನ ಅತ್ಯುತ್ತಮ ವಿಶ್ವವಿದ್ಯಾಲಯಗಳ ಕ್ಯಾಂಪಸ್‌ಗಳು, ಗುಣಮಟ್ಟದ ಆಸ್ಪತ್ರೆಗಳು, ಸಂಶೋಧನಾ ಸಂಸ್ಥೆಗಳು ಇರಲಿವೆ. ಇಂಥದ್ದೇ ಸೌಕರ್ಯಗಳಿರುವ ಟೌನ್‌ಶಿಪ್ ನಿರ್ಮಾಣಕ್ಕೆ ಕೇಂದ್ರವು ಮುಂದಾಗಿದೆ. ಬಯೋಫಾರ್ಮಾ ಹಬ್ ಸಹ ಕರ್ನಾಟಕ ಸರ್ಕಾರದ ಯೋಜನೆಗಳ ಪ್ರತಿಫಲನವೇ ಆಗಿದೆ. ಕೇಂದ್ರ ಸರ್ಕಾರವು ತನ್ನ ಬಜೆಟ್‌ನಲ್ಲಿ ಕರ್ನಾಟಕದ ಅಭಿವೃದ್ಧಿ ಮಾದರಿಗಳನ್ನು ಅನುಕರಿಸುತ್ತಿದೆ’ ಎಂದು ಪ್ರತಿಪಾದಿಸಿದ್ದಾರೆ.

‘ತೆರಿಗೆ ಪಾಲು, ಕೈಗಾರಿಕಾ ಬೆಳವಣಿಗೆ ಇತ್ಯಾದಿಗಳಲ್ಲಿ ಹೆಚ್ಚಿನ ಕೊಡುಗೆ ನೀಡುತ್ತಿರುವ ರಾಜ್ಯಕ್ಕೆ ಕೇಂದ್ರ ಸರ್ಕಾರವು ಹೆಚ್ಚು ಲಾಭದಾಯಕ ಯೋಜನೆಗಳನ್ನು ಕೊಡಬೇಕು ಎಂದು ಅಪೇಕ್ಷಿಸುವುದು ನಮ್ಮ ನ್ಯಾಯಬದ್ಧ ಹಕ್ಕಾಗಿದೆ. ಕೃಷ್ಣಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆ ಎಂದು ಘೋಷಿಸಬೇಕು ಮತ್ತು ಭದ್ರಾ ಮೇಲ್ದಂಡೆ ಯೋಜನೆಗೆ ಈಗಾಗಲೇ ಘೋಷಿಸಿರುವ ₹ 5,600 ಕೋಟಿ ನೆರವು ಬಿಡುಗಡೆ ಮಾಡಬೇಕೆಂಬ ನಮ್ಮ ಬೇಡಿಕೆಯ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪವೇ ಇಲ್ಲ’ ಎಂದು ಅವರು ಹೇಳಿದ್ದಾರೆ.

‘ಹಳೆ ಬಾಟಲಿ: ಹೊಸ ದ್ರಾಕ್ಷಾರಸ’


ಖಂಡ್ರೆ

‘ಕೇಂದ್ರ ಬಜೆಟ್‌ನಲ್ಲಿ ಯಾವುದೇ ಗಣನೀಯ ಸುಧಾರಣೆ ಆಗಿಲ್ಲ. ಸರ್ಕಾರಿ ವೆಚ್ಚಗಳ ಮೇಲೆ ಯಾವುದೇ ನಿಯಂತ್ರಣವೂ ಇಲ್ಲ. ಕರ್ನಾಟಕಕ್ಕಂತೂ ಹೇಳಿಕೊಳ್ಳುವಂತಹ ಪ್ರಯೋಜನ ಬಜೆಟ್‌ನಲ್ಲಿ ಆಗಿಲ್ಲ’ ಎಂದು ಅರಣ್ಯ ಸಚಿವ ಸಚಿವ ಈಶ್ವರ ಖಂಡ್ರೆ ಟೀಕಿಸಿದ್ದಾರೆ.

‘ವರ್ಷಕ್ಕೆ 2 ಕೋಟಿ ಉದ್ಯೋಗದ ಭರವಸೆ ನೀಡಿದ್ದ ಕೇಂದ್ರ ಸರ್ಕಾರ ನುಡಿದಂತೆ ನಡೆಯುವಲ್ಲಿ ಸಂಪೂರ್ಣ ವಿಫಲವಾಗಿದೆ. ಈ ಬಜೆಟ್‌ನಲ್ಲಿಯೂ ರಾಜ್ಯದಲ್ಲಿ ಯುವಜನರಿಗೆ ಉದ್ಯೋಗ ಸೃಷ್ಟಿಸುವಂತಹ ಯಾವುದೇ ಯೋಜನೆ ಕಾಣುತ್ತಿಲ್ಲ. ಹಳೆಯ ಬಾಟಲಿಯಲ್ಲಿ ಹೊಸ ದ್ರಾಕ್ಷಾರಸ ತುಂಬಿದಂತಿದೆ’ ಎಂದಿದ್ದಾರೆ. ‘ಕೇಂದ್ರ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ ಶ್ರೀಗಂಧ ಬೆಳೆಗೆ ಉತ್ತೇಜನದ ಮಾತು ಆಡಿದೆ. ಆದರೆ, ಅದು ಹೇಗೆ ಕಾರ್ಯಗತವಾಗುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ಕಡಲ ಆಮೆಗಳ ಸಂರಕ್ಷಣೆಯನ್ನು ಪ್ರವಾಸೋದ್ಯಮದಲ್ಲಿ ಸೇರಿಸಲಾಗಿದೆ. ಕರ್ನಾಟಕದ ಮಂಗಳೂರು ಮತ್ತು ಕಾರವಾರದಲ್ಲಿ ಈಗಾಗಲೇ ಈ ಯೋಜನೆಯಿದೆ’ ಎಂದೂ ಹೇಳಿದ್ದಾರೆ.


‘ದೂರದೃಷ್ಟಿ ಇಲ್ಲದ ಘೋಷಣೆಗಳ ಬಜೆಟ್’


ಸಲೀಂ ಅಹ್ಮದ್

‘ದೂರದೃಷ್ಟಿ ಇಲ್ಲದ ಘೋಷಣೆಗಳ ಬಜೆಟ್ ಇದು. ಕೇವಲ ಪದಗಳಿಂದ ತುಂಬಿದೆ. ದೇಶದ ಅಭಿವೃದ್ಧಿ ಬಗ್ಗೆ ಸ್ಪಷ್ಟ ದಿಕ್ಸೂಚಿಯಿಲ್ಲ’ ಎಂದು ವಿಧಾನ ಪರಿಷತ್‌ನ ಸರ್ಕಾರಿ ಮುಖ್ಯ ಸಚೇತಕ ಸಲೀಂ ಅಹ್ಮದ್ ಪ್ರತಿಕ್ರಿಯಿಸಿದ್ದಾರೆ.

‘ಈ ಬಜೆಟ್‌ನಲ್ಲಿ ದಕ್ಷಿಣ ಭಾರತ ಹಾಗೂ ಹೆಚ್ಚು ತೆರಿಗೆ ಪಾವತಿಸುವ ಕರ್ನಾಟಕವನ್ನು ಸಂಪೂರ್ಣ ಕಡೆಗಣಿಸಲಾಗಿದೆ. ರೈತರಿಗೆ ಮತ್ತು ಗ್ರಾಮೀಣ ಪ್ರದೇಶದ ಅಭಿವೃದ್ಧಿಗೆ ಹೆಚ್ಚಿನ ಆದ್ಯತೆ ಇಲ್ಲ. ರಾಜ್ಯದ ನೀರಾವರಿ ಯೋಜನೆ ಬಗ್ಗೆ ಪ್ರಸ್ತಾಪವಿಲ್ಲ. ಯುವಕರಿಗೆ ಉದ್ಯೋಗ ಸೃಷ್ಟಿ ಮಾಡುವ ಭರವಸೆ ಇಲ್ಲ. ಒಟ್ಟಾರೆಯಾಗಿ ದೇಶದ, ರಾಜ್ಯದ ಹಿತದೃಷ್ಟಿಯಿಂದ ಯಾವುದೇ ಮಹತ್ವವಿಲ್ಲದ ಬಜೆಟ್’ ಎಂದಿದ್ದಾರೆ.


‘ಆರ್ಥಿಕ ಶಿಸ್ತಿನ ಬಜೆಟ್’



ಭಾರತವನ್ನು ವಿಶ್ವದ ಮೂರನೇ ಅತಿದೊಡ್ಡ ಆರ್ಥಿಕ ಶಕ್ತಿಯನ್ನಾಗಿಸುವ ಬಜೆಟ್ ಇದು. ವಿಶ್ವದ ಬಹುತೇಕ ದೇಶಗಳು ಆರ್ಥಿಕ ಬಿಕ್ಕಟ್ಟಿನಲ್ಲಿ ಇರುವಂತಹ ಸಂದರ್ಭದಲ್ಲಿ, ಭಾರತವು ಆರ್ಥಿಕ ಪ್ರಗತಿಯಲ್ಲಿ ಮುಂದುವರಿಯುವಂತಹ ಅಭಿವೃದ್ಧಿ ಪರವಾದ ಬಜೆಟ್ ಅನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಂಡಿಸಿದ್ದಾರೆ. ಸರ್ವರ ಅಭಿವೃದ್ಧಿಗೆ ಒತ್ತು ನೀಡಿದ್ದಾರೆ. ಶೇ 7.4ರಷ್ಟು ಆರ್ಥಿಕ ಬೆಳವಣಿಗೆ ದರ ಕಾಯ್ದುಕೊಳ್ಳುವುದು ಮತ್ತು ವಿತ್ತೀಯ ಕೊರತೆಯನ್ನು ಶೇ4.3ಕ್ಕೆ ನಿಯಂತ್ರಿಸುವುದು ಸಾಧನೆಯೇ ಸರಿ. ಆರ್ಥಿಕ ಶಿಸ್ತನ್ನು ಕಾಯ್ದುಕೊಂಡಿರುವ ಬಜೆಟ್ ಇದು.

ಬಸವರಾಜ ಬೊಮ್ಮಾಯಿ, ಬಿಜೆಪಿ ಸಂಸದ

‘ಕರ್ನಾಟಕ ವಿರೋಧಿ ಬಜೆಟ್’


ಮಹದೇವಪ್ಪ

‘ಪ್ರತಿ ಬಾರಿಯೂ ದೊಡ್ಡ ದೊಡ್ಡ ಅಂಕಿ ಅಂಶಗಳನ್ನು ಹೊತ್ತು ತರುವ ನಿರ್ಮಲಾ ಸೀತಾರಾಮನ್ ಅವರು, ತಾವು ಮಂಡಿಸಿದ ಬಜೆಟ್ ಅನ್ನು ಸಮರ್ಪಕವಾಗಿ ಜಾರಿ ಮಾಡದೆ ಇನ್ನೊಂದು ಬಜೆಟ್ ಅನ್ನು ಮಂಡಿಸುವುದು ಅತ್ಯಂತ ಹಾಸ್ಯಾಸ್ಪದ ಸಂಗತಿ’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಹೇಳಿದ್ದಾರೆ.

‘ಬಜೆಟ್ ಶ್ರೀಮಂತರ ಅನುಕೂಲಕ್ಕಾಗಿ ಇರುವ ವ್ಯವಸ್ಥೆ ಎಂದುಕೊಂಡೇ ಕೇಂದ್ರ ಸರ್ಕಾರವು ಬಜೆಟ್ ತಯಾರಿಸುತ್ತದೆ. ಹಾಗಾಗಿ ಕಾರ್ಪೊರೇಟ್ ಉದ್ಯಮಿಗಳಿಗೆ, ಎನ್‌ಆರ್‌ಐಗಳಿಗೆ ಮತ್ತು ಶ್ರೀಮಂತರಿಗೆ ಪೂರಕವಾಗಿ ಬಜೆಟ್ ರೂಪಿಸುತ್ತಿದೆ. ಜನ ಸಾಮಾನ್ಯರ ಪರವಾಗಿ ಯಾವುದೇ ರೀತಿಯ ಯೋಜನೆಗಳನ್ನು ರೂಪಿಸದೇ ಇರುವುದು ಇವರ ಜನ ವಿರೋಧಿ ನೀತಿಗೆ ಹಿಡಿದ ಕನ್ನಡಿ’ ಎಂದಿದ್ದಾರೆ. ‘ಕರ್ನಾಟಕದಿಂದಲೇ ರಾಜ್ಯಸಭೆಗೆ ಆಯ್ಕೆಯಾಗಿ, ಸಚಿವರಾಗಿರುವ ನಿರ್ಮಲಾ ಸೀತಾರಾಮನ್ ಅವರು ಕರ್ನಾಟಕದ ಬಹು ನಿರೀಕ್ಷಿತ ಮೇಕೆದಾಟು ಮತ್ತು ಭದ್ರಾ ಮೇಲ್ದಂಡೆ ಯೋಜನೆಗಳನ್ನು ಕಡೆಗಣಿಸುವ ಮೂಲಕ ತಮ್ಮ ಕರ್ನಾಟಕ ವಿರೋಧಿ ನೀತಿ ಮುಂದುವರಿಸಿದ್ದಾರೆ’ ಎಂದೂ ಹೇಳಿದ್ದಾರೆ.

‘ಶಿಕ್ಷಣದ ಪ್ರಗತಿಗೆ ಒತ್ತು’



ಕೇಂದ್ರ ಬಜೆಟ್‌ನಲ್ಲಿ ಶಿಕ್ಷಣ ಕ್ಷೇತ್ರಕ್ಕೆ ಕೇವಲ ಅನುದಾನ ಹಂಚಿಕೆ ಮಾಡದೇ ಫಲಿತಾಂಶ ಆಧರಿತ ಚಟುವಟಿಕೆಗಳಿಗೆ ಒತ್ತು ನೀಡಿರುವುದು ಶ್ಲಾಘನೀಯ. ಮೂಲಸೌಕರ್ಯ, ಕೌಶಲ ಅಭಿವೃದ್ಧಿಗೆ ಮಹತ್ವವನ್ನು ನೀಡಲಾಗಿದೆ. ಪಿಇಎಸ್ ಸಂಸ್ಥೆಯು ಐದು ದಶಕಕ್ಕೂ ಹೆಚ್ಚು ಕಾಲದಿಂದ ಇದೇ ದಿಕ್ಕಿನಲ್ಲಿ ಕಾರ್ಯನಿರ್ವಹಿಸುತ್ತಿದೆ.

ಜವಾಹರ್ ದೊರೆಸ್ವಾಮಿ, ಪಿಇಎಸ್ ವಿಶ್ವವಿದ್ಯಾಲಯದ ಕುಲಾಧಿಪತಿ.

‘ಸಣ್ಣ ಉದ್ಯಮಕ್ಕೆ ಬಲ’



ಬಜೆಟ್ ಹಲವು ಅಂಶಗಳಿಗೆ ಒತ್ತು ನೀಡಿದೆ. ಎಐ ಸಾಧನವಾದ ಭಾರತ್ ವಿಸ್ತಾರ್ ಸಣ್ಣ ರೈತರೊಂದಿಗಿನ ಮಾಹಿತಿ ಅಂತರ ತಗ್ಗಿಸಲಿದೆ. ‘ಶೀ ಮಾರ್ಟ್ಸ್’ ಮಹಿಳಾ ಉದ್ಯಮಿಗಳಿಗೆ ತಳಮಟ್ಟದ ಆರ್ಥಿಕ ಸಬಲೀಕರಣದ ಭರವಸೆ ನೀಡಲಿದೆ. ಸ್ವಾವಲಂಬಿ ಭಾರತ ನಿಧಿಗೆ ₹ 2,000 ಕೋಟಿ ಹೆಚ್ಚುವರಿ ಅನುದಾನವು ಉದ್ಯಮಗಳಿಗೆ ಬಲ ನೀಡಬಹುದು.

ನಾರಾಯಣಿ ರಾಮಚಂದ್ರನ್, ಅರ್ಥಶಾಸ್ತ್ರ ಪ್ರಾಧ್ಯಾಪಕಿ, ಎಸ್‌ವಿಕೆಂ, ಎನ್‌ಎಂಐಎಂಎಸ್, ಬೆಂಗಳೂರು

ಕೇಂದ್ರ ಬಜೆಟ್‌ನಲ್ಲಿ ಸಹಕಾರ ಸಚಿವಾಲಯಕ್ಕೆ ಸುಮಾರು ₹1,744.74 ಕೋಟಿ ಅನುದಾನ ಹಂಚಿಕೆ ಮಾಡುವುದರ ಮೂಲಕ ಸರ್ಕಾರವು ಸಹಕಾರಿ ವಲಯಕ್ಕೆ ತನ್ನ ಬದ್ಧತೆಯನ್ನು ಪ್ರದರ್ಶಿಸಿದೆ. ದೇಶದಾದ್ಯಂತ 67,930 ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘಗಳ (ಪಿಎಸಿಎಸ್) ಗಣಕೀಕರಣ ಮಾಡಲು ಸುಮಾರು ₹364 ಕೋಟಿ, ಸಹಕಾರಿ ಶಿಕ್ಷಣಕ್ಕಾಗಿ ₹300 ಕೋಟಿ ಹಂಚಿಕೆ ಮಾಡಲಾಗಿದೆ.

ಎಂ.ಆರ್.ವೆಂಕಟೇಶ್, ನಿರ್ದೇಶಕರು, ಕರ್ನಾಟಕ ರಾಜ್ಯ ಪಟ್ಟಣ ಬ್ಯಾಂಕುಗಳ ಮಹಾಮಂಡಳ

ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ ಕೇಂದ್ರ ಬಜೆಟ್ ದೇಶದ ನೈಜ ಆರ್ಥಿಕ ಪರಿಸ್ಥಿತಿಯ ಪ್ರತಿಬಿಂಬವಾಗಿರದೇ, ಪ್ರಶ್ನಾರ್ಹ ರೀತಿಯಲ್ಲಿ ಸಂಗ್ರಹಿಸಲಾದ ನಕಲಿ ಅಂಕಿ–ಅಂಶಗಳಿಂದ ಕೂಡಿದೆ. ಇದು ಬಿಜೆಪಿ ಸರ್ಕಾರದ ‘ಅದ್ಭುತ’ ಕಾರ್ಯಕ್ಷಮತೆಯ ಬಗ್ಗೆ ಅಂದವಾಗಿ ರೂಪಿಸಿರುವ ಸ್ವಯಂ ಪ್ರಶಂಸೆಯ ದಾಖಲೆಯಾಗಿದೆ. ವಲಯವಾರು ಅನುದಾನದ ಹಂಚಿಕೆಯನ್ನು ವಿವರಿಸಿಲ್ಲ. ದೊಡ್ಡ ಉದ್ಯಮಿಗಳಿಗೆ ಮತ್ತು ತೆರಿಗೆ ಕಳ್ಳರಿಗೆ ಹೆಚ್ಚಿನ ರಿಯಾಯಿತಿ ಮತ್ತು ಸೌಲಭ್ಯಗಳನ್ನು ನೀಡುವ ಸ್ಪಷ್ಟ ಸೂಚನೆ ನೀಡಿದೆ.

ಕೆ. ಉಮಾ, ರಾಜ್ಯ ಕಾರ್ಯದರ್ಶಿ, ಎಸ್‌ಯುಸಿಐ (ಕಮ್ಯುನಿಸ್ಟ್)

ಕೃಷಿ ಮತ್ತು ಅದಕ್ಕೆ ಪೂರಕವಾದ ವಲಯಗಳ ಬಲವರ್ಧನೆಗೆ ಕೇಂದ್ರ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದೆ. ಸಣ್ಣ ಮತ್ತು ಅತಿಸಣ್ಣ ರೈತರ ಆದಾಯ ಭದ್ರತೆ, ಉತ್ಪಾದಕತೆ ಹೆಚ್ಚಳ ಮತ್ತು ಸುಸ್ಥಿರ ಗ್ರಾಮೀಣ ಜೀವನೋಪಾಯಕ್ಕೆ ಒತ್ತು ನೀಡಲಾಗಿದೆ. ಪ್ರಸ್ತುತ ಕೃಷಿ ವಲಯದಿಂದ ದೇಶದ ಜಿಡಿಪಿಗೆ ಶೇ 18ರಷ್ಟು ಕೊಡುಗೆ ನೀಡಲಾಗುತ್ತಿದೆ. ಕೇಂದ್ರ ಬಜೆಟ್‌ನಲ್ಲಿ ಕೃಷಿ ವಲಯಕ್ಕೆ ಶೇ 3ರಷ್ಟು ಅನುದಾನ ನೀಡಲಾಗಿದ್ದು, ಮುಂದಿನ ದಿನಗಳಲ್ಲಿ ಈ ವಲಯಕ್ಕೆ ಹೆಚ್ಚು ಅನುದಾನ ಒದಗಿಸಬೇಕು.

ಎಸ್.ವಿ. ಸುರೇಶ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ

ಗ್ರಾಮೀಣ ಮತ್ತು ಕರಾವಳಿ ಪ್ರದೇಶಗಳ ಆರ್ಥಿಕ ಅಭಿವೃದ್ಧಿಯನ್ನು ವೇಗಗೊಳಿಸುವ ಉದ್ದೇಶದಿಂದ ಕೇಂದ್ರ ಸರ್ಕಾರ ಮತ್ಸ್ಯೋದ್ಯಮ, ಪಶುಪಾಲನೆ ಮತ್ತು ಕೃಷಿ ಕ್ಷೇತ್ರಗಳಿಗೆ ವಿಶೇಷ ಪ್ರೋತ್ಸಾಹ ನೀಡಿದೆ. ಅಮೃತ್ ಸರೋವರಗಳ ಸಮಗ್ರ ಅಭಿವೃದ್ಧಿಗೆ ಒತ್ತು ನೀಡಿದ್ದು, ಕರಾವಳಿ ಪ್ರದೇಶಗಳಲ್ಲಿ ಮತ್ಸ್ಯ ಮೌಲ್ಯ ಸರಪಳಿಯನ್ನು ಬಲಪಡಿಸಿ, ಸ್ಟಾರ್ಟ್‌ಅಪ್‌ಗಳು, ಮಹಿಳಾ ನೇತೃತ್ವದ ಸಂಘ–ಸಂಸ್ಥೆಗಳು ಹಾಗೂ ಮತ್ಸ್ಯ ಕೃಷಿಕ ಉತ್ಪಾದಕರ ಸಂಘಗಳು (ಎಫ್‌ಪಿಒ) ಭಾಗವಹಿಸುವಂತೆ ಮಾರುಕಟ್ಟೆ ಸಂಪರ್ಕಗಳ ಸುಧಾರಣೆಗೆ ಆದ್ಯತೆ ನೀಡಿದೆ.

ಹುಸೇನಸಾಬ ನದಾಫ್, ಅರ್ಥಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ, ಕೆಎಲ್‌ಇ ಸೊಸೈಟಿಯ ಎಸ್. ನಿಜಲಿಂಗಪ್ಪ ಕಾಲೇಜು ರಾಜಾಜಿನಗರ

ಸುದ್ದಿ 2 ನಿಮಿಷ

ಯಾವ ಹೈಸ್ಪೀಡ್ ರೈಲೂ ಬರಲ್ಲ: ಡಿಕೆಶಿ ವ್ಯಂಗ್ಯ

ಕನಕಪುರ (ರಾಮನಗರ): ಕೇಂದ್ರ ಸರ್ಕಾರದ ಬಜೆಟ್‌ನಿಂದ ರಾಜ್ಯಕ್ಕೆ ಯಾವುದೇ ಅನುಕೂಲವಾಗಿಲ್ಲ. ಬೆಂಗಳೂರಿಗೆ ಯಾವ ಹೈಸ್ಪೀಡ್ ರೈಲೂ ಬರಲ್ಲ. ರಾಜ್ಯಕ್ಕೆ ಬಜೆಟ್‌ನಲ್ಲಿ ಯಾವುದೇ ಕೊಡುಗೆ ನೀಡಿಲ್ಲ ಎಂದು ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಟೀಕಿಸಿದರು.

ನಗರದಲ್ಲಿ ಸುದ್ದಿಗಾರರಿಗೆ ಭಾನುವಾರ ಪ್ರತಿಕ್ರಿಯಿಸಿದ ಅವರು, ‘ಯಾವ ಹೈಸ್ಪೀಡ್ ರೈಲು? ಯಾವ ಸ್ಪೀಡ್ ರೈಲೂ ಬರಲ್ಲ. ಆ ಯೋಜನೆಗೆ ಕೇಂದ್ರ ಮತ್ತು ರಾಜ್ಯಗಳು 50:50ರ ಅನುಪಾತದಲ್ಲಿ ಅನುದಾನ ಒದಗಿಸಲು ಸಾಧ್ಯವಿಲ್ಲ. ಬೇಕಿದ್ದರೆ ಶೇಕಡ 90ರಷ್ಟು ಕೇಂದ್ರ ಕೊಡಲಿ. ಆಗ ನಾವು ಶೇ 10ರಷ್ಟು ಕೊಡುತ್ತೇವೆ. ಬೇರೆ ರಾಜ್ಯಗಳಿಗೆ ಅವರೇ ಮಾಡಿಕೊಟ್ಟಿದ್ದಾರೆ. ನಮ್ಮ ರಾಜ್ಯಕ್ಕೂ ಶೇ 90ರಷ್ಟು ಅನುದಾನ ನೀಡಲಿ’ ಎಂದರು.

‘ಬಜೆಟ್‌ನಲ್ಲಿ ಬೆಂಗಳೂರಿಗೆ ಹೆಚ್ಚಿನ ಕೊಡುಗೆಯ ನಿರೀಕ್ಷೆ ಇತ್ತು. ಪ್ರಧಾನಿ ಮೋದಿ ಅವರೇ ನಗರವನ್ನು ‘ಗ್ಲೋಬಲ್ ಸಿಟಿ’ ಎಂದು ಹೇಳಿದ್ದರು. ಆ ಗ್ಲೋಬಲ್ ಸಿಟಿಗೆ ಏನು ಒತ್ತು ಕೊಟ್ಟಿದ್ದಾರೆ?’ ಎಂದು ಪ್ರಶ್ನಿಸಿದರು.

ಕೃಷಿ ಇಲಾಖೆಯ ‘ಅಗ್ರಿವಾಕ್’ಗೆ ಚಾಲನೆ



ಬೆಂಗಳೂರು: ಕೃಷಿ ಉತ್ಪನ್ನಗಳ ಉತ್ಪಾದನೆ ಹೆಚ್ಚಿಸುವ ಮತ್ತು ರೈತರನ್ನು ಉದ್ಯಮಿಗಳನ್ನಾಗಿ ಸಬಲೀಕರಣಗೊಳಿಸುವ ಉದ್ದೇಶದಿಂದ ಕೃಷಿ ಇಲಾಖೆಯು ಕಬ್ಬನ್ ಉದ್ಯಾನದಲ್ಲಿ ಆಯೋಜಿಸಿದ್ದ ‘ಅಗ್ರಿವಾಕ್’ನಲ್ಲಿ ಸಾವಿರಾರು ಜನರು ಭಾಗವಹಿಸಿದ್ದರು.

ಕೃಷಿ ಸಚಿವ ಎನ್. ಚಲುವರಾಯಸ್ವಾಮಿ ಅವರು ಕಬ್ಬನ್ ಉದ್ಯಾನದ ಬ್ಯಾಂಡ್‌ಸ್ಟ್ಯಾಂಡ್ ಬಳಿ ನಡಿಗೆಗೆ ಚಾಲನೆ ನೀಡಿದರು. ಕ್ವೀನ್ಸ್ ರಸ್ತೆ, ವಿಧಾನಸೌಧ, ಯುಬಿ ಸಿಟಿ ಸಿಗ್ನಲ್ ಮತ್ತು ವಿಠಲ್ ಮಲ್ಯ ರಸ್ತೆಯ ಮೂಲಕ ಕ್ರಮಿಸಿ ಬ್ಯಾಂಡ್‌ಸ್ಟ್ಯಾಂಡ್‌ನಲ್ಲಿ ನಡಿಗೆ ಮುಕ್ತಾಯವಾಯಿತು. ನಡಿಗೆಗೂ ಮೊದಲು ಜುಂಬಾ ನೃತ್ಯ ಆಯೋಜಿಸಲಾಗಿತ್ತು.

‘ಫೆ.6ರಿಂದ 8ರವರೆಗೆ ಅರಮನೆ ಮೈದಾನದ ತ್ರಿಪುರ ವಾಸಿನಿಯಲ್ಲಿ ನಡೆಯುವ ಅಂತರರಾಷ್ಟ್ರೀಯ ವ್ಯಾಪಾರ ಮೇಳದ ಪೂರ್ವಭಾವಿಯಾಗಿ ಈ ನಡಿಗೆಯನ್ನು ಹಮ್ಮಿಕೊಳ್ಳಲಾಗಿತ್ತು. ರೈತರ ಉತ್ಪನ್ನಗಳ ಮೌಲ್ಯವರ್ಧನೆ, ಸಂಸ್ಕರಣೆ, ಬ್ರ್ಯಾಂಡಿಂಗ್ ಮತ್ತು ಸುಸ್ಥಿರ ಕೃಷಿ ಪದ್ಧತಿಗಳ ಕುರಿತು ಜಾಗೃತಿ ಮೂಡಿಸುವುದು ಈ ನಡಿಗೆಯ ಉದ್ದೇಶವಾಗಿತ್ತು’ ಎಂದು ಚಲುವರಾಯಸ್ವಾಮಿ ತಿಳಿಸಿದರು.


ಎಪಿಎಸ್ ಪಬ್ಲಿಕ್ ಶಾಲೆಯಲ್ಲಿ ವಿಶಿಷ್ಟ ಅನುಭವ ಆಧಾರಿತ ಶಿಕ್ಷಣ ಕಾರ್ಯಕ್ರಮ ‘ಥಿಂಕ್ ರೂಮ್ ಡೇ’ ನಡೆಯಿತು

ಎಪಿಎಸ್‌ನಲ್ಲಿ ‘ಥಿಂಕ್ ರೂಮ್ ಡೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಚಾರ್ಯ ಪಾಠಶಾಲಾ ಎಜುಕೇಷನಲ್ ಟ್ರಸ್ಟ್ (ಎಪಿಎಸ್‌ಇಟಿ) ಅಧೀನದಲ್ಲಿರುವ ಎಪಿಎಸ್ ಪಬ್ಲಿಕ್ ಶಾಲೆಯಲ್ಲಿ ವಿಶಿಷ್ಟ ಅನುಭವ ಆಧಾರಿತ ಶಿಕ್ಷಣ ಕಾರ್ಯಕ್ರಮ ‘ಥಿಂಕ್ ರೂಮ್ ಡೇ’ ನಡೆಯಿತು.

ನರ್ಸರಿಯಿಂದ ಹಿಡಿದು 8ನೇ ತರಗತಿಯವರೆಗಿನ ವಿದ್ಯಾರ್ಥಿಗಳ ಸೃಜನಶೀಲತೆ ಮತ್ತು ನವೋದ್ಯಮದ ಕುರಿತು ಚಿಂತನೆ ನಡೆಸಲಾಯಿತು. ಕಾರ್ಯಕ್ರಮದ ಆಕರ್ಷಣೆಯಾಗಿದ್ದ ಥಿಂಕ್ ರೂಮ್‌ಗಳಲ್ಲಿ ತರಗತಿವಾರು ಪ್ರದರ್ಶನಗಳು ನಡೆದವು.

1ನೇ ತರಗತಿ ವಿದ್ಯಾರ್ಥಿಗಳು ತೆಂಗಿನಕಾಯಿ ಆಧಾರಿತ ಚಿಂತನೆ ಪ್ರದರ್ಶಿಸಿದರು. 2ನೇ ತರಗತಿ – ‘ಸ್ಮಾಲ್ ಡ್ರಾಪ್ಸ್, ಬಿಗ್ ಥಾಟ್ಸ್’, 3ನೇ ತರಗತಿ – ಆಹಾರ ಮತ್ತು ಪೌಷ್ಟಿಕತೆ, 4ನೇ ತರಗತಿ – ‘ಸುಗ್ಗಿ ಸಂಭ್ರಮ’, 5ನೇ ತರಗತಿ – ‘ಲೈಟ್: ದಿ ಇಲ್ಯೂಮಿನೇಟಿಂಗ್ ಪಾಥ್’, 6ನೇ ತರಗತಿ – ‘ಸ್ಮಾರ್ಟ್ ಸಿಟಿ: ವೇರ್ ಯಂಗ್ ಮೈಂಡ್ಸ್ ಡಿಸೈನ್ ದಿ ಫ್ಯೂಚರ್’, 7ನೇ ತರಗತಿ – ‘ಫ್ರಮ್ ಕ್ಲಾಸ್‌ರೂಮ್ ಟು ಕಫೆ ಡಿ ‘ಇಕೋಲ್’ ಹಾಗೂ 8ನೇ ತರಗತಿ ವಿದ್ಯಾರ್ಥಿಗಳು ‘ಗಾನ ಜ್ಞಾನ’ ಎಂಬ ಸಂಗೀತ ಕಾರ್ಯಕ್ರಮವನ್ನು ಪ್ರದರ್ಶಿಸಿದರು.

ಅತಿಥಿಯಾಗಿದ್ದ ಚಕ್ರವರ್ತಿ ಸೂಲಿಬೆಲೆ, ಎಪಿಎಸ್‌ಇಟಿ ಅಧ್ಯಕ್ಷ ವಿಷ್ಣು ಭರತ್, ಪ್ರಧಾನ ಕಾರ್ಯದರ್ಶಿ ಎ. ಪ್ರಕಾಶ್, ಟ್ರಸ್ಟಿಗಳು ಹಾಗೂ ಪಾಲಕರು ಉಪಸ್ಥಿತರಿದ್ದರು.


ಬುದ್ಧ ಬಸವ ಗಾಂಧಿ ಸಾಂಸ್ಕೃತಿಕ ಟ್ರಸ್ಟ್ ಹಲಸೂರಿನ ಬ್ರಹ್ಮ ಸಮಾಜ ಮಂದಿರದಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಕರ್ನಾಟಕ ಗಾಂಧಿ ಸ್ಮಾರಕ ನಿಧಿಯ ಅಧ್ಯಕ್ಷ ವೂಡೇಪಿ.ಕೃಷ್ಣ ಅವರಿಗೆ ಸೇವಾ ಗೌರವ ಪ್ರಶಸ್ತಿ ಪ್ರದಾನ ಮಾಡಲಾಯಿತು. ಟ್ರಸ್ಟ್‌ನ ಅಧ್ಯಕ್ಷ ಎಸ್. ರಾಮಲಿಂಗೇಶ್ವರ, ಸಮಾಜ ಸೇವಕರಾದ ಕೆ.ಸಿ. ಮುನಿಯಪ್ಪ, ವಿ. ಮುರಳಿ ಮೋಹನ್, ಸವಿತಾ ರಾಮು ಉಪಸ್ಥಿತರಿದ್ದರು

ದಕ್ಷಿಣಾಸ್ಯ ದರ್ಶಿನಿ ಪ್ರದರ್ಶನಕ್ಕೆ ತೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅರಮನೆ ಮೈದಾನದಲ್ಲಿ ನಾಲ್ಕು ದಿನಗಳಿಂದ ವೇದಾಂತ ಹಾಗೂ ವಿಜ್ಞಾನದ ಅನುಸಂಧಾನಕ್ಕೆ ವೇದಿಕೆ ಕಲ್ಪಿಸಿದ್ದ ದಕ್ಷಿಣಾಸ್ಯ ದರ್ಶಿನಿ ರಾಷ್ಟ್ರೀಯ ಪ್ರದರ್ಶನಕ್ಕೆ ತೆರೆಬಿದ್ದಿದೆ.

ಭಾನುವಾರ ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು, ವಿಜ್ಞಾನದ ಆಸಕ್ತರು ಪಾಲ್ಗೊಂಡು ಸ್ತೋತ್ರದೊಂದಿಗೆ ಪ್ರಯೋಗಗಳ ಮಾದರಿಗಳನ್ನು ವೀಕ್ಷಿಸಿ, ವಿವರಣೆಯನ್ನು ಆಲಿಸಿ ಕುತೂಹಲ ತಣಿಸಿಕೊಂಡರು.

ಪರಮ್ ಫೌಂಡೇಷನ್ ಹಾಗೂ ವೇದಾಂತ ಭಾರತಿ ಜಂಟಿಯಾಗಿ ಆಯೋಜಿಸಿದ್ದ ಕಾರ್ಯಕ್ರಮವು ಭಾರತೀಯ ಜ್ಞಾನ ಪರಂಪರೆ ಮತ್ತು ಅತ್ಯಾಧುನಿಕ ವಿಜ್ಞಾನ ಬೇರೆ ಬೇರೆಯಲ್ಲ ಎನ್ನುವುದನ್ನು ಸಾರಿತು.

ವಿಜ್ಞಾನಕ್ಕೆ ಸಂಬಂಧಿಸಿದ 50ಕ್ಕೂ ಹೆಚ್ಚು ಮಳಿಗೆಗಳಿದ್ದು, ಪ್ರತಿಯೊಂದು ಮಳಿಗೆಯೂ ಹೊಸ ಆವಿಷ್ಕಾರ ಮತ್ತು ಮಾಹಿತಿಯ ಕಣಜವಾಗಿತ್ತು. ಸುಮಾರು 70ಕ್ಕೂ ಹೆಚ್ಚು ಶಾಲೆಗಳ 7,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರದರ್ಶನದಲ್ಲಿ ಭಾಗವಹಿಸಿ, ವೇದಾಂತದ ಆಳವಾದ ತತ್ವಗಳಿಗೆ ವೈಜ್ಞಾನಿಕ ರೂಪ ಕಂಡುಕೊಂಡರು ಎಂದು ಸಂಘಟಕರು ತಿಳಿಸಿದರು.

ಸಮುದ್ರದಲ್ಲಿ ಮುಳುಗಿದ ದ್ವಾರಕಾ ನಗರವು ಮರುಜೀವ ಪಡೆದಂತೆ ತ್ರೀ–ಡಿ ತಂತ್ರಜ್ಞಾನದ ಮೂಲಕ ವಿನ್ಯಾಸಗೊಳಿಸಲಾದ ವಿಡಿಯೊ ಪ್ರದರ್ಶನವು ವಿಭಿನ್ನ ಅನುಭವವನ್ನುಂಟು ಮಾಡಿತು.

ಅಧ್ಯಯನ ಹೆಚ್ಚಲಿ: ಸಮಾರೋಪ ಸಮಾರಂಭದಲ್ಲಿ ಮಾತನಾಡಿದ ವಿಜ್ಞಾನಿ ಪ್ರಹ್ಲಾದ ರಾಮರಾವ್, ‘ವೇದ ಹಾಗೂ ವಿಜ್ಞಾನಕ್ಕೆ ಪರಸ್ಪರ ಸಂಬಂಧವಿದ್ದು, ಇದನ್ನು ಮರು ವ್ಯಾಖ್ಯಾನಿಸಿ ಭಾರತೀಯ ಪರಂಪರೆಯನ್ನು ಗಟ್ಟಿಗೊಳಿಸುವ ಕೆಲಸ ನಡೆದಿದೆ. ಕೇಂದ್ರ ಸರ್ಕಾರವೂ ವೈಮಾನಿಕ ಶಾಸ್ತ್ರದ ಕುರಿತು ಅಧ್ಯಯನ ನಡೆಸಲು ಅವಕಾಶ ನೀಡಿದೆ. ವೇದಾಂತ ಭಾರತಿ ಸಂಸ್ಥೆ ಮಕ್ಕಳಲ್ಲಿ ಕುತೂಹಲ ಮೂಡಿಸಿದ ಕ್ರಮ ಮೆಚ್ಚುವಂತದ್ದು’ ಎಂದು ಹೇಳಿದರು.

ಇಸ್ರೊ ಮಾಜಿ ಅಧ್ಯಕ್ಷ ಎಸ್. ಸೋಮನಾಥ್ ಮಾತನಾಡಿ, ‘ತಂತ್ರಜ್ಞಾನದ ಈ ಯುಗದಲ್ಲಿ ನಮ್ಮ ಸಂಪ್ರದಾಯ, ಧರ್ಮದ ಕುರಿತು ಮಾತನಾಡಿದರೆ ಅನಕ್ಷರಸ್ಥರಂತೆ ನೋಡುವ ಸ್ಥಿತಿ ಈಗಲೂ ಇದೆ. ನಮ್ಮಲ್ಲಿ ಪ್ರತಿಯೊಂದರ ಹಿಂದೆ ವೈಜ್ಞಾನಿಕ ಮನೋಭಾವದ ಅಡಿಪಾಯ ಗಟ್ಟಿಯಾಗಿಯೇ ಇದೆ. ಈ ಕುರಿತು ಹೆಚ್ಚೆಚ್ಚು ಕೆಲಸಗಳು ಆಗಬೇಕಿವೆ’ ಎಂದು ತಿಳಿಸಿದರು.

ಗ್ರಾಮೀಣ ಭಾಗಕ್ಕೂ ವಿಸ್ತರಣೆ: ಸಾನ್ನಿಧ್ಯ ವಹಿಸಿದ್ದ ಕೆ. ಆರ್. ನಗರದ ಯಡತೊರೆ ಯೋಗಾನಂದ ಸರಸ್ವತಿ ಮಠದ ಶಂಕರ ಭಾರತಿ ಸ್ವಾಮೀಜಿ ಮಾತನಾಡಿ, ‘ಗಣಿತ, ಖಗೋಳಶಾಸ್ತ್ರ, ಕ್ಯಾಲೆಂಡರ್‌ನಂತರ ಪ್ರಾಚೀನ ವಿಷಯವನ್ನೊಳಗೊಂಡ ಮಾಯಾ ನಾಗರಿಕತೆಯ ಜ್ಞಾನದ ಕುರಿತು ಚರ್ಚೆಗಳು ನಡೆದಿವೆ. ಈ ಕುರಿತು ಇನ್ನಷ್ಟು ಸಂಶೋಧನೆ, ಚಟುವಟಿಕೆಗಳನ್ನು ಆಯೋಜಿಸಬೇಕು ಎನ್ನುವ ಉತ್ಸಾಹವನ್ನು ದಕ್ಷಿಣಾಸ್ಯ ದರ್ಶಿನಿ ರಾಷ್ಟ್ರೀಯ ಪ್ರದರ್ಶನ ನೀಡಿದೆ. ಗ್ರಾಮೀಣ ಹಂತಕ್ಕೂ ಈ ವಿಚಾರವನ್ನು ತೆಗೆದುಕೊಂಡು ಹೋಗಿ ವಿದ್ಯಾರ್ಥಿಗಳ ಚಿಂತನೆಗೆ ಒತ್ತು ನೀಡಲಾಗುವುದು’ ಎಂದರು.


ವೇದಾಂತ ಭಾರತಿ ಆಯೋಜಿಸಿದ್ದ ದಕ್ಷಿಣಾಸ್ಯದರ್ಶಿನಿ ಸಮಾರೋಪದಲ್ಲಿ ವಿಜ್ಞಾನ ಪ್ರದರ್ಶನ ನೀಡಿದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಎಸ್. ಸೋಮನಾಥ್, ಶಂಕರಭಾರತಿ ಸ್ವಾಮಿಜಿ ಮತ್ತು ಬ್ರಹ್ಮಾನಂದ ಭಾರತಿ ಸ್ವಾಮೀಜಿ, ಪ್ರಹ್ಲಾದ್ ರಾಮರಾವ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ...

9606038256



‘ಕಸದ ರಾಶಿ ತೆರವುಗೊಳಿಸಿ’

ವಿಲ್ಸನ್ ಗಾರ್ಡನ್‌ನ 13ನೇ ಅಡ್ಡರಸ್ತೆಯ ಪಾದಚಾರಿ ಮಾರ್ಗದಲ್ಲಿ ತೆಂಗಿನ ಗರಿ ಹಾಗೂ ಚಿಪ್ಪುಗಳನ್ನು ತಂದು ಹಾಕಲಾಗಿದೆ. ಸ್ಥಳೀಯ ನಿವಾಸಿಗಳು ಇಲ್ಲಿಯೇ ಕಸ ತಂದು ಹಾಕುತ್ತಿದ್ದಾರೆ. ಇದರಿಂದ ಇಡೀ ಪ್ರದೇಶ ಗಬ್ಬೆದ್ದು ನಾರುತ್ತಿದ್ದು, ಸೊಳ್ಳೆಗಳ ಉತ್ಪತ್ತಿ ತಾಣವಾಗಿದೆ. ಇಲ್ಲಿ ಹಾಕಿರುವ ಕಸದ ರಾಶಿಯನ್ನು ವಿಲೇವಾರಿ ಮಾಡುವಂತೆ ಸಂಬಂಧಪಟ್ಟ ಪಾಲಿಕೆಯ ಸಿಬ್ಬಂದಿಗೆ ಮನವಿ ಸಲ್ಲಿಸಿದರೂ ಪ್ರಯೋಜನವಾಗಿಲ್ಲ. ಪಾದಚಾರಿ ಮಾರ್ಗದಲ್ಲಿ ಕಸದ ರಾಶಿ ಇರುವುದರಿಂದ ಸಾರ್ವಜನಿಕರು ಮುಖ್ಯ ರಸ್ತೆಯಲ್ಲಿಯೇ ಹಾದು ಹೋಗಬೇಕಾದ ಪರಿಸ್ಥಿತಿ ಎದುರಾಗಿದೆ.

ಆನಂದ ದೊಡ್ಡಮನಿ, ವಿಲ್ಸನ್ ಗಾರ್ಡನ್



‘ರಸ್ತೆ ಗುಂಡಿ ಮುಚ್ಚಿ’

ಗಾಂಧಿನಗರದ ಹಳೆ ಮೇನಕಾ ಚಿತ್ರಮಂದಿರದ ಬಳಿಯ ಕೆಂಪೇಗೌಡ ಮೂರನೇ ಅಡ್ಡರಸ್ತೆಯ ತಿರುವಿನಲ್ಲಿ ಗುಂಡಿ ಬಿದ್ದಿದ್ದು, ವಾಹನ ಸಂಚಾರಕ್ಕೆ ಸಮಸ್ಯೆ ಆಗುತ್ತಿದೆ. ಇದು ನಗರದ ಪ್ರಮುಖ ವಾಣಿಜ್ಯ ಪ್ರದೇಶಗಳಲ್ಲಿ ಒಂದಾಗಿದ್ದು, ನಿತ್ಯ ಸಾವಿರಾರು ವಾಹನಗಳು ಇದೇ ಹಾದಿಯಲ್ಲಿ ಸಂಚರಿಸುತ್ತಿವೆ. ಆದರೆ, ರಸ್ತೆಯಲ್ಲಿ ಗುಂಡಿ ಬಿದ್ದಿರುವ ಕಾರಣ ಸಂಚಾರ ದಟ್ಟಣೆ ಆಗುತ್ತಿದೆ. ಇದರ ಜೊತೆಗೆ ಅಪಘಾತಗಳು ಸಂಭವಿಸುತ್ತಿವೆ. ಪಾಲಿಕೆ ಸಿಬ್ಬಂದಿ ಕೂಡಲೇ ಇಲ್ಲಿ ಬಿದ್ದಿರುವ ಗುಂಡಿ ಮುಚ್ಚಲು ಕ್ರಮ ಕೈಗೊಳ್ಳಬೇಕು.

ಶಿವಪ್ರಸಾದ್, ಚಿಕ್ಕಪೇಟೆ

‘ತ್ಯಾಜ್ಯ ವಿಲೇವಾರಿ ಮಾಡಿ’

ಹಳೆ ಮದ್ರಾಸ್ ರಸ್ತೆಯ ಎನ್‌ಜಿಇಎಫ್ ವೃತ್ತದ ಸ್ವಲ್ಪ ಮುಂದಕ್ಕೆ ಇರುವ ಬಸ್ ತಂಗುದಾಣದ ಬಳಿ ಹಲವು ತಿಂಗಳಿಂದ ರಸ್ತೆಯಲ್ಲೇ ಕಟ್ಟಡ ತ್ಯಾಜ್ಯವನ್ನು ಹಾಕಲಾಗಿದೆ. ಇದರಿಂದ ವಾಹನಗಳ ಸಂಚಾರಕ್ಕೆ, ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಇತ್ತ ಗಮನಹರಿಸಿ ಕೂಡಲೇ ಕಟ್ಟಡ ತ್ಯಾಜ್ಯ ವಿಲೇವಾರಿಗೆ ಕ್ರಮಕೈಗೊಳ್ಳುವ ಮೂಲಕ ಸುಗಮ ಸಂಚಾರಕ್ಕೆ ಅವಕಾಶ ಕಲ್ಪಿಸಬೇಕು.

ಶಿಲ್ಪಾ ಜಿ., ಕೃಷ್ಣಯ್ಯನಪಾಳ್ಯ





‘ಮೆಟ್ಟಿಲು ಹತ್ತಲು ಕಂಬಿಗಳನ್ನು ಅಳವಡಿಸಿ’

ಬಸವನಗುಡಿ ವಿಧಾನಸಭಾ ಕ್ಷೇತ್ರದ ಹನುಮಂತನಗರದಲ್ಲಿ ಇರುವ ಸುಬ್ರಹ್ಮಣ್ಯ ಸ್ವಾಮಿ ದೇವಸ್ಥಾನದ ಆವರಣದಲ್ಲಿರುವ ಉದ್ಯಾನಕ್ಕೆ ನಿತ್ಯ ನೂರಾರು ಜನ ವಾಯು ವಿಹಾರ ಮಾಡಲು ಬರುತ್ತಾರೆ. ಈ ಉದ್ಯಾನ ಗುಡ್ಡದ ಮೇಲೆ ಇರುವುದರಿಂದ ಮೆಟ್ಟಿಲುಗಳಿವೆ. ಆದರೆ, ಈ ಮೆಟ್ಟಿಲುಗಳನ್ನು ಹತ್ತಿ ಇಳಿಯುವಾಗ ಆಧಾರವಾಗಿ ಬಳಸಲು ಯಾವುದೇ ರೀತಿಯ ಕಂಬಿಗಳನ್ನು ಅಳವಡಿಸಿಲ್ಲ. ಇದರಿಂದ ವೃದ್ಧರಿಗೆ, ಮಹಿಳೆಯರಿಗೆ ತೊಂದರೆ ಆಗುತ್ತಿದೆ. ಸಂಬಂಧಪಟ್ಟ ಪಾಲಿಕೆ ಸಿಬ್ಬಂದಿ ಇಲ್ಲಿ ಕಂಬಿಗಳನ್ನು ಅಳವಡಿಸಬೇಕು.

ಕೆ.ಎಸ್. ನಾಗರಾಜ್, ಹನುಮಂತನಗರ

ರಂಗ ಮಹೋತ್ಸವ–ಪರಿಷೆಗೆ ಚಾಲನೆ

ರಂಗ ಲೋಕ ಅನಾವರಣ • ನಾಟಕ ಪ್ರದರ್ಶನ, ರಂಗ ಗೀತೆಗಳ ಗಾಯನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಒಂದೆಡೆ ರಂಗಭೂಮಿಯ ಪ್ರಸ್ತುತ ಸ್ಥಿತಿಗತಿಯ ಬಗ್ಗೆ ಮಾತು ಮಂಥನ ನಡೆದರೆ, ಇನ್ನೊಂದೆಡೆ ವಿವಿಧ ರಂಗ ತಂಡಗಳಿಂದ ರಂಗ ಗೀತೆಗಳ ಗಾಯನ. ಮತ್ತೊಂದೆಡೆ ನಾಟಕಗಳ ಪ್ರದರ್ಶನ.

ಹೀಗೆ ರಂಗ ಲೋಕ ಒಂದೇ ಸೂರಿನಡಿ ಅನಾವರಣಗೊಂಡಿದ್ದು ಮಲ್ಲತ್ತಹಳ್ಳಿಯ ಕಲಾಗ್ರಾಮದಲ್ಲಿ. ಕರ್ನಾಟಕ ನಾಟಕ ಅಕಾಡೆಮಿ ಮತ್ತು ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆ ಜಂಟಿಯಾಗಿ 'ಪ್ರಜಾವಾಣಿ' ಮತ್ತು 'ಡೆಕ್ಕನ್ ಹೆರಾಲ್ಡ್' ಮಾಧ್ಯಮ ಸಹಯೋಗದಲ್ಲಿ ಹಮ್ಮಿಕೊಂಡಿದ್ದ ಆರು ದಿನಗಳ 'ಭಾರತ ರಂಗ ಮಹೋತ್ಸವ' ಹಾಗೂ 'ರಂಗ ಪರಿಷೆ'ಗೆ ಭಾನುವಾರ ಚಾಲನೆ ದೊರೆಯಿತು.

ಐದು ವೇದಿಕೆಗಳಲ್ಲಿ ನಾಟಕಗಳ ಪ್ರದರ್ಶನ ಹಾಗೂ ರಂಗ ಗೀತೆಗಳ ಗಾಯನದ ಜತೆಗೆ ರಂಗಭೂಮಿಗೆ ಸಂಬಂಧಿಸಿದ ಚಟುವಟಿಕೆಗಳು ನಡೆದವು. ವಿವಿಧ ರಂಗ ತಂಡಗಳಿಂದ ರಂಗ ದಿಗ್ಗಜರ ಛಾಯಾಚಿತ್ರ, ನಾಟಕಗಳ ದೃಶ್ಯಾವಳಿಯ ಪ್ರದರ್ಶನ ಗಮನ ಸೆಳೆಯಿತು. ಪುಸ್ತಕ ಮಳಿಗೆ, ಆಹಾರ ಮಳಿಗೆಗಳೂ ಪರಿಷೆಯ ಭಾಗವಾಗಿದ್ದವು.

ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಭಾರತ ರಂಗ ಮಹೋತ್ಸವವನ್ನು ಉದ್ಘಾಟಿಸಿದರು. ನಟ ಪ್ರಕಾಶ್ ರಾಜ್ ಅವರು ರಂಗ ಪರಿಷೆ ವಿಶೇಷ ಸಂಚಿಕೆ ಬಿಡುಗಡೆ ಮಾಡಿದರು. ನಟಿ ಉಮಾಶ್ರೀ ಅವರಿಗೆ ಉತ್ಸವದ ಗೌರವ ಪ್ರದಾನ ಮಾಡಲಾಯಿತು. ಜಾನಪದ ವಿದ್ವಾಂಸ ಗೊ.ರು. ಚನ್ನಬಸಪ್ಪ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ನಿರ್ದೇಶಕಿ ಕೆ.ಎಂ. ಗಾಯಿತ್ರಿ, ಬೆಂಗಳೂರು ವಿಶ್ವವಿದ್ಯಾಲಯದ ಕುಲ ಸಚಿವೆ ಕೆ.ಟಿ. ಶಾಂತಲಾ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ರಂಗ ಪರಿಷೆ ನಿರ್ದೇಶಕ ಬಿ. ಸುರೇಶ ಮೊದಲಾದವರು ಪಾಲ್ಗೊಂಡಿದ್ದರು.

> ರಂಗ ಕಲೆಯು ಭೂಮಿ ಸತ್ವದ ಹಾಗೂ ಭೂಮಿ ಸತ್ಯದ ಕಲೆಯಾಗಿದೆ. ಕನ್ನಡ ರಂಗಭೂಮಿ ಪ್ರಯೋಗಶೀಲತೆಯಿಂದ ಕೂಡಿದೆ. ಎಲ್ಲ ಮಾದರಿ ಅಳವಡಿಸಿಕೊಂಡು ಬೆಳೆದಿದೆ
> **ಬರಗೂರು ರಾಮಚಂದ್ರಪ್ಪ,** ಸಾಹಿತಿ

> ರಂಗಭೂಮಿಯ ಅಲ್ಲಲ್ಲಿ ಕಂಡ ಹಾಗೆ ಇಲ್ಲಿನ ಸತ್ವ-ತತ್ವವನ್ನು ಅಲುಗಾಡಿಸುವ ಶಕ್ತಿ ಒಳಹೊಕ್ಕಿವೆ. ಇಂತಹ ಆತಂಕಗಳ ನಡುವೆ ರಂಗಭೂಮಿಯನ್ನು ಕಟ್ಟಬೇಕಾಗಿದೆ
> **ಉಮಾಶ್ರೀ,** ನಟಿ

40 ವರ್ಷ ಪೂರೈಸಿರುವ 'ಅಂತರಂಗ' ಹವ್ಯಾಸಿ ನಾಟಕ ತಂಡ ಮತ್ತು 'ಕದಂಬ ರಂಗ ವೇದಿಕೆ' ರಂಗ ತಂಡಕ್ಕೆ ಇದೇ ವೇಳೆ ರಂಗ ಗೌರವ ನೀಡಿ ಸನ್ಮಾನಿಸಲಾಯಿತು.

ಇದಕ್ಕೂ ಮೊದಲು ರಂಗ ಪರಿಷೆಗೆ ಚಾಲನೆ ನೀಡಲಾಯಿತು. ಸಾಣೇಹಳ್ಳಿಯ ತರಳಬಾಳು ಶಾಖಾಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಅವರಿಗೆ ಉತ್ಸವ ಗೌರವ ಪ್ರದಾನ ಮಾಡಲಾಯಿತು. ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ, ರಂಗ ಪರಿಷೆ ಸಂಯೋಜಕ ಶಶಿಧರ ಭಾರಿಘಾಟ್ ಮೊದಲಾದವರು ಉಪಸ್ಥಿತರಿದ್ದರು.

'ರಂಗ ಪರಿಷೆಗೆ ಅಗತ್ಯ ನೆರವು ನೀಡುವುದಾಗಿ ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಭರವಸೆ ನೀಡಿದ್ದಾರೆ. ಆದ್ದರಿಂದ ಈ ರಂಗ ಪರಿಷೆ ಮಾಡುತ್ತಿದ್ದೇವೆ. ವಿವಿಧ ರಂಗ ತಂಡಗಳು ಬೆನ್ನೆಲುಬಾಗಿ ನಿಂತ ಪರಿಣಾಮ ಈ ಪರಿಷೆ ಸಾಧ್ಯವಾಗುತ್ತಿದೆ' ಎಂದು ಕರ್ನಾಟಕ ನಾಟಕ ಅಕಾಡೆಮಿ ಅಧ್ಯಕ್ಷ ಕೆ.ವಿ. ನಾಗರಾಜಮೂರ್ತಿ ಹೇಳಿದರು.

ಪ್ರವರ ಥಿಯೇಟರ್, ವಿಜಯನಗರ ಬಿಂಬ ಮತ್ತು ಬೆಂಗಳೂರು ವಿಶ್ವವಿದ್ಯಾಲಯದ ತಂಡಗಳು ರಂಗ ಗೀತೆಗಳನ್ನು ಪ್ರಸ್ತುತಪಡಿಸಿದವು. ಕರ್ನಾಟಕ ಸಂಗೀತ ನೃತ್ಯ ಅಕಾಡೆಮಿಯ ಪ್ರಸ್ತುತಿಯಲ್ಲಿ ನಾಟ್ಯ ಭೈರವಿ ಕಲಾ ಕುಟೀರ ತಂಡವು ಭರತನಾಟ್ಯ ಪ್ರದರ್ಶಿಸಿತು. ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ತಂಡದಿಂದ 'ಬಾಬೂಜಿ' ನಾಟಕ, ನಿರ್ದಿಗಂತ ತಂಡದಿಂದ 'ಕೊಡಲ್ಲ ಅಂದ್ರೆ ಕೊಡಲ್ಲ' ನಾಟಕಗಳು ಪ್ರದರ್ಶನಗೊಂಡವು.


ಉಮಾಶ್ರೀ, ಬರಗೂರು ರಾಮಚಂದ್ರಪ್ಪ ಮತ್ತು ಪ್ರಕಾಶ್ ರಾಜ್ ಅವರು ನಗಾರಿ ಬಾರಿಸುವ ಮೂಲಕ ಭಾರತ ರಂಗ ಮಹೋತ್ಸವ ಉದ್ಘಾಟಿಸಿದರು. ಎಲ್‌.ಎನ್‌. ಮುಕುಂದರಾಜ್, ಪುರುಷೋತ್ತಮ ಬಿಳಿಮಲೆ, ಕೆ.ವಿ. ನಾಗರಾಜಮೂರ್ತಿ, ಗೊ.ರು. ಚನ್ನಬಸಪ್ಪ, ಕೆ.ಎಂ. ಗಾಯಿತ್ರಿ ಮತ್ತು ಕೆ.ಟಿ ಶಾಂತಲಾ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ: ರಂಜು ಪಿ.

> ರಂಗ ಕಲೆಗೆ ಸಂಬಂಧಿಸಿದಂತೆ ಸರ್ಕಾರದ ಮೇಲೆ ಅವಲಂಬನೆಯಾಗದೆ, ಜನರೇ ಬೆಳೆಸುವಂತಾಗಬೇಕು. ಇದು ರಂಗ ಪರಿಷೆಯಿಂದ ಸಾಧ್ಯವಾಗಲಿದೆ
> **ಪ್ರಕಾಶ್ ರಾಜ್,** ನಟ

ರಂಗ ಶಿಕ್ಷಕರನ್ನು ನೇಮಿಸಿ: ಬಿಳಿಮಲೆ

'ಕನ್ನಡ ಭಾಷೆ ಉಳಿಸುವಲ್ಲಿ ಕನ್ನಡ ರಂಗಭೂಮಿ ದೊಡ್ಡ ಶಕ್ತಿಯಾಗಿ ಕಾರ್ಯನಿರ್ವಹಿಸಲಿದೆ. ಆದ್ದರಿಂದ ರಾಜ್ಯ ಸರ್ಕಾರವು ಆಯ್ದ ಶಾಲೆಗಳಲ್ಲಾದರೂ ರಂಗ ಶಿಕ್ಷಕರನ್ನು ನೇಮಕ ಮಾಡಬೇಕು. ನಾವೆಲ್ಲ ಒಂದು ಎಂಬ ಭಾವ ಮೂಡಲು ನಾಟಕ ಸಹಕಾರಿ. ರಂಗ ಶಿಕ್ಷಕರ ನೇಮಕದ ಬಗ್ಗೆ ಸರ್ಕಾರಕ್ಕೆ ಪತ್ರ ಬರೆಯುತ್ತೇನೆ' ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಹೇಳಿದರು.

ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, 'ರಂಗಭೂಮಿಗೆ ಹೆಚ್ಚು ಅನುದಾನ ನೀಡಿದರೆ ರಂಗ ಸಂಸ್ಕೃತಿ ಬೆಳೆಯಲು ಸಾಧ್ಯ. ಆದ್ದರಿಂದ ಸರ್ಕಾರವು ರಂಗಾಯಣಗಳು ಹಾಗೂ ರಂಗ ಚಟುವಟಿಕೆ ಕೈಗೊಂಡಿರುವ ಸಂಘ–ಸಂಸ್ಥೆಗಳಿಗೆ ಅಗತ್ಯ ಅನುದಾನ ಒದಗಿಸಬೇಕು. ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ನಾಟಕ ಸಹಕಾರಿ. ರಂಗ ಶಿಕ್ಷಕರ ನೇಮಕಾತಿಗೆ ಸರ್ಕಾರ ಆದ್ಯತೆ ನೀಡಬೇಕು. ಕನಿಷ್ಠ ನೂರು ಶಿಕ್ಷಕರನ್ನಾದರೂ ನೇಮಕ ಮಾಡಬೇಕು' ಎಂದು ಆಗ್ರಹಿಸಿದರು.


ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರು ಹೂಡಿಯಲ್ಲಿ ಆಯೋಜಿಸಿದ್ದ ಕಬಡ್ಡಿ ಪಂದ್ಯಾವಳಿಯಲ್ಲಿ ಮಹಿಳಾ ಕ್ರೀಡಾಪಟುಗಳನ್ನು ಪ್ರೋತ್ಸಾಹಿಸಿದರು. ಹೂಡಿ ಪಿಳ್ಳಪ್ಪ, ಎಲ್‌. ರಾಜೇಶ್ ಇದ್ದರು.

ಮಹದೇವಪುರ: ವಿವಿಧೆಡೆ ಸೇವಾ ಕಾರ್ಯ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಾಜಿ ಸಚಿವ ಅರವಿಂದ ಲಿಂಬಾವಳಿ ಅವರ ಹುಟ್ಟುಹಬ್ಬದ ಅಂಗವಾಗಿ ಮಹದೇವಪುರ ಕ್ಷೇತ್ರದ ಗ್ರಾಮಾಂತರ ಮತ್ತು ನಗರ ಮಂಡಲದ ವಿವಿಧೆಡೆ ಸೇವಾ ಕಾರ್ಯಕ್ರಮ ಕೈಗೊಳ್ಳಲಾಯಿತು.

ಜ್ಯೋತಿಪುರ ಗ್ರಾಮದ ಜ್ಯೋತಿರ್ಲಿಂಗೇಶ್ವರ ದೇವಸ್ಥಾನದಲ್ಲಿ ಶಾಸಕಿ ಮಂಜುಳಾ ಲಿಂಬಾವಳಿ ಅವರೊಂದಿಗೆ ಪ್ರಮುಖರು ವಿಶೇಷ ಪೂಜೆ ಸಲ್ಲಿಸಿದರು. ಹೊಸೂರು ಬಂಡೆ ಗೋ ಆಶ್ರಮದಲ್ಲಿ ಗೋ ಪೂಜೆ ನೆರವೇರಿಸಿ ರಾಸುಗಳಿಗೆ ಮೇವು ಮತ್ತು ಬೆಲ್ಲ ವಿತರಣೆ ಮಾಡಿದರು.

ಗ್ರಾಮಾಂತರ ಮಂಡಲದ ಯುವ ಮೋರ್ಚಾ ವತಿಯಿಂದ ಅಂಗವಿಕಲರಿಗೆ ಸೈಕಲ್ ವಿತರಣೆ, ರಕ್ತದಾನ ಶಿಬಿರ, ಕ್ರೀಡಾಕೂಟದಲ್ಲಿ ಪಾಲ್ಗೊಂಡವರಿಗೆ ಬಹುಮಾನ ವಿತರಣೆ ಮಾಡಿದರು.

ದೊಡ್ಡಗುಬ್ಬಿಯ ಎಐಆರ್ ವೃದ್ಧಾಶ್ರಮದಲ್ಲಿ ಹಣ್ಣು, ಬಟ್ಟೆ ವಿತರಣೆ, ಕಾಡುಬಿಸನಹಳ್ಳಿಯಲ್ಲಿ ಉಚಿತ ಆರೋಗ್ಯ ಶಿಬಿರ, ಸರ್ಕಾರಿ ಶಾಲೆ ಮಕ್ಕಳಿಗೆ ಸ್ಪೋರ್ಟ್ಸ್ ಜಾಕೆಟ್ ವಿತರಣೆ, ಅಶ್ವತ್ಥನಗರದಲ್ಲಿ 1,500 ಮಹಿಳೆಯರಿಗೆ ಸೀರೆ ವಿತರಣೆ, 2000 ಜನರಿಗೆ ಅನ್ನದಾನ ಜೊತೆಗೆ ಸ್ನೇಹಜೀವಿ ಆಶ್ರಮಕ್ಕೆ ಹೊಸ ಆಂಬುಲೆನ್ಸ್ ವಾಹನ ನೀಡಿದರು.

ಮುನ್ನೇನಕೊಳಾಲು ಮಂಜುನಾಥ್ ಬಡಾವಣೆಯಲ್ಲಿ ಆಹಾರ ದಿನಸಿ ಕಿಟ್, ಹೂಡಿ ಸ್ಪೋರ್ಟ್ಸ್ ಕ್ಲಬ್ ಹಮ್ಮಿಕೊಂಡಿದ್ದ ರಾಜ್ಯಮಟ್ಟದ ಪುರುಷ ಮತ್ತು ಮಹಿಳಾ ಕಬಡ್ಡಿ ಪಂದ್ಯಾವಳಿಯಲ್ಲಿ ವಿಜೇತ ತಂಡಗಳಿಗೆ ಬಹುಮಾನ ವಿತರಿಸಿದರು.

ಬಿಜೆಪಿ ಮಹದೇವಪುರ ನಗರ ಮಂಡಲ ಅಧ್ಯಕ್ಷ ಶ್ರೀಧರ್ ರೆಡ್ಡಿ, ಗ್ರಾಮಾಂತರ ಮಂಡಲ ಅಧ್ಯಕ್ಷ ಹೂಡಿ ಎಚ್.ಎಸ್.ಪಿಳ್ಳಪ್ಪ, ರಾಜ್ಯ ಪರಿಷತ್ ಸದಸ್ಯ ಎಲ್.ರಾಜೇಶ್, ಮುಖಂಡರಾದ ಸಿದ್ದಾಪುರ ಗಿರಿರಾಜ್ ಗೌಡ, ದೊಡ್ಡಕನ್ನಲ್ಲಿ ವಾರ್ಡ್ ಅಧ್ಯಕ್ಷ ಕೈಕೊಂಡ್ರಹಳ್ಳಿ ಪ್ರದೀಪ್ ಕುಮಾರ್, ಕಣ್ಣೂರು ಅಶೋಕ್, ಗುಟ್ಟಾ ಮಾರಪ್ಪ, ನಲ್ಲೂರಹಳ್ಳಿ ಚಂದ್ರಶೇಖರ್ ರೆಡ್ಡಿ, ಅನಂತರಾಮಯ್ಯ, ಜಯದೇವ್, ಸಿದ್ದಾಪುರ ಗಗನ್ ಗೌಡ ಇದ್ದರು.

ಬೈಕ್ ಜಪ್ತಿ: ಮೂವರು ಆರೋಪಿಗಳ ಸೆರೆ

ಬೆಂಗಳೂರು: ನಗರದ ವಿವಿಧೆಡೆ ದ್ವಿಚಕ್ರ ವಾಹನಗಳನ್ನು ಕಳವು ಮಾಡುತ್ತಿದ್ದ ಮೂವರು ಆರೋಪಿಗಳನ್ನು ಬಾಣಸವಾಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಡಿ.ಜೆ.ಹಳ್ಳಿ ನಿವಾಸಿ ಮೊಹಮದ್ ರಾಖೀಬ್, ಕೆ.ಜಿ.ಹಳ್ಳಿಯ ರಫೀಕ್ ಬಾಷ ಹಾಗೂ ಪೀಣ್ಯ ನಿವಾಸಿ ಮೊಹಮದ್ ಅಸ್ಗರ್ ಎಂಬುವರನ್ನು ಬಂಧಿಸಿ, ₹5.50 ಲಕ್ಷ ಮೌಲ್ಯದ ಹತ್ತು ದ್ವಿಚಕ್ರ ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಠಾಣಾ ವ್ಯಾಪ್ತಿಯ ಲಿಂಗರಾಜಪುರದ ಮನೆಯ ಆವರಣದಲ್ಲಿ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳವು ಮಾಡಲಾಗಿತ್ತು. ಪ್ರಕರಣ ದಾಖಲಿಸಿಕೊಂಡು, ಪೊಲೀಸರು ತನಿಖೆ ಕೈಗೊಂಡರು. ಸಿ.ಸಿ.ಟಿ.ವಿ. ಕ್ಯಾಮೆರಾಗಳ ದೃಶ್ಯಾವಳಿ ಪರಿಶೀಲನೆ ಹಾಗೂ ಬಾತ್ಮೀದಾರರ ಮಾಹಿತಿ ಆಧರಿಸಿ ಮೂವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಯಿತು. ವಾಹನಗಳನ್ನು ಕಳವು ಮಾಡಿದ್ದಾಗಿ ಆರೋಪಿಗಳು ತಪ್ಪೊಪ್ಪಿಕೊಂಡರು ಎಂದು ಪೊಲೀಸರು ತಿಳಿಸಿದರು.

ವಿವಿಧ ಕಂಪನಿಯ ಹತ್ತು ದ್ವಿಚಕ್ರ ವಾಹನಗಳನ್ನು ಶಾಂಪುರ ಎಂಬ ಸ್ಥಳದಲ್ಲಿ ವಶಕ್ಕೆ ಪಡೆದುಕೊಳ್ಳಲಾಯಿತು.

ಆರೋಪಿಗಳ ಬಂಧನದಿಂದ ಬಾಣಸವಾಡಿ ಪೊಲೀಸ್ ಠಾಣೆಯ ಎರಡು, ಡಿ.ಜೆ.ಹಳ್ಳಿ ಪೊಲೀಸ್ ಠಾಣೆ, ಗೋವಿಂದಪುರ, ರಾಜರಾಜೇಶ್ವರಿ, ಉಪ್ಪಾರಪೇಟೆ, ನೆಲಮಂಗಲ ಪೊಲೀಸ್ ಠಾಣೆಯ ತಲಾ ಒಂದು ದ್ವಿಚಕ್ರ ವಾಹನ ಕಳ್ಳತನ ಪ್ರಕರಣ ಪತ್ತೆಯಾಗಿದೆ ಎಂದು ಹೇಳಿದ್ದಾರೆ.

ಸ್ನೇಹಿತನನ್ನೇ ಅಪಹರಿಸಿ ನಿರ್ಜನ ಪ್ರದೇಶದಲ್ಲಿ ಸುಲಿಗೆ

ಬಾಲಕ ಸೇರಿ ಮೂವರ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸ್ನೇಹಿತನನ್ನೇ ಅಪಹರಿಸಿ ಸುಲಿಗೆ ಮಾಡಿದ್ದ ಪ್ರಕರಣದಲ್ಲಿ ಬಾಲಕ ಸೇರಿ ಮೂವರು ಆರೋಪಿಗಳನ್ನು ಹೆಬ್ಬಗೋಡಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಎಚ್.ಹೊಸಹಳ್ಳಿ ನಿವಾಸಿಗಳಾದ ಖಾಜ (19) ಮತ್ತು ಜಾನ್ ಪೀಟರ್ (20) ಹಾಗೂ ಬಾಲಕನನ್ನು ಬಂಧಿಸಲಾಗಿದೆ.

'ಗೂಡ್ಸ್ ವಾಹನ ಚಾಲಕ ಬಸವರಾಜ್ ಅವರನ್ನು ಆರೋಪಿಗಳು ಅಪಹರಿಸಿ, ಹಣ ಸುಲಿಗೆ ಮಾಡಿದ್ದರು. ಕ್ಯಾಬ್ ಖರೀದಿಸುವ ಸಲುವಾಗಿ ಗೂಡ್ಸ್ ವಾಹನ ಮಾರಾಟ ಮಾಡಿದ್ದರು. ಅದರಿಂದ ಬಂದ ಹಣವನ್ನು ತಮ್ಮ ಬಳಿ ಇಟ್ಟುಕೊಂಡಿದ್ದರು. ಈ ವಿಷಯ ತಿಳಿದ ಬಸವರಾಜ್ ಸ್ನೇಹಿತ ಖಾಜ ಮತ್ತೊಬ್ಬರೊಂದಿಗೆ ಸೇರಿ ಜನವರಿ 30ರಂದು ಸಂಜೆ 7 ಗಂಟೆ ಸುಮಾರಿಗೆ ಬಸವರಾಜ್ ಅವರಿಗೆ ಕರೆ ಮಾಡಿ ಮನೆಯಿಂದ ಕರೆಸಿಕೊಂಡು ಬಳಿಕ ಆಟೊದಲ್ಲಿ ನಿರ್ಜನ ಪ್ರದೇಶಕ್ಕೆ ಕರೆದೊಯ್ದರು' ಎಂದು ಪೊಲೀಸರು ತಿಳಿಸಿದರು.

ಇದಾದ ನಂತರ ಅವರನ್ನು ಥಳಿಸಿ, ₹1,500 ನಗದು ಕಸಿದುಕೊಂಡಿದ್ದರು. ಅಲ್ಲದೇ ₹50 ಸಾವಿರ ಹಣವನ್ನು ತರಿಸಿಕೊಡುವಂತೆ ಧಮ್ಕಿ ಹಾಕಿದ್ದಾರೆ. ಅಲ್ಲಿಂದ ತಪ್ಪಿಸಿಕೊಂಡು ಬಂದ ಬಸವರಾಜ್ ದೂರು ನೀಡಿದ್ದರು. ಕಾರ್ಯಾಚರಣೆ ನಡೆಸಿ ಆರೋಪಿಗಳನ್ನು ಬಂಧಿಸಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ಹೇಳಿದರು.

'ಗುಲಾಮರ ಅಪ್ಪ': ಅಡ್ಮಿನ್ ಸೆರೆ

ಕಲಬುರಗಿ: ಪರಿಶಿಷ್ಟ ಸಮುದಾಯದ ನಾಯಕರ ಬಗ್ಗೆ 'ಗುಲಾಮರ ಅಪ್ಪ' ಹೆಸರಿನ ಸಾಮಾಜಿಕ ಜಾಲತಾಣ ಖಾತೆಯಲ್ಲಿ ಅವಮಾನಿಸಿ ಬರಹ ಪ್ರಕಟಿಸುತ್ತಿದ್ದ ವ್ಯಕ್ತಿಯನ್ನು ನಗರದ ಸಬರ್ಬನ್ ಠಾಣೆ ಪೊಲೀಸರು ಬೆಂಗಳೂರಿನಲ್ಲಿ ಬಂಧಿಸಿದ್ದಾರೆ.

ಬೆಂಗಳೂರಿನ ವಿದ್ಯಾಮಾನ್ಯ ನಗರದ ನಿವಾಸಿ ಆನಂದ್ ಅಂಜನಪ್ಪ (41) ಬಂಧಿತ ಆರೋಪಿ. ಬೆಂಗಳೂರು ರೇಸ್‌ಕೋರ್ಸ್ ರಸ್ತೆಯ ಕಂಪನಿಯೊಂದರಲ್ಲಿ ಹಿರಿಯ ಐಟಿ ಎಕ್ಸಿಕ್ಯುಟಿವ್ ಆಗಿ ಕೆಲಸ ಮಾಡಿದ್ದ ಎಂದು ಮೂಲಗಳು ತಿಳಿಸಿವೆ.


ಆನಂದ್

'ಗುಲಾಮರ ಅಪ್ಪ' ಹೆಸರಲ್ಲಿ ಫೇಸ್‌ಬುಕ್ ಪೇಜ್ ತೆರೆದಿದ್ದ ಆನಂದ್ ಅಂಜನಪ್ಪ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಸಚಿವ ಪ್ರಿಯಾಂಕ್ ಖರ್ಗೆ ಸೇರಿದಂತೆ ಪರಿಶಿಷ್ಟ ಸಮುದಾಯದ ನಾಯಕರ ಬಗೆಗೆ ಅವಹೇಳಕಾರಿ ಬರಹ ಪ್ರಕಟಿಸುತ್ತಿದ್ದ. ಈ ಬಗೆಗೆ ದಲಿತ ಸೇನೆ ಜಿಲ್ಲಾಧ್ಯಕ್ಷ ಮಂಜುನಾಥ ಭಂಡಾರಿ ಸಬರ್ಬನ್ ಠಾಣೆಗೆ ದೂರು ನೀಡಿದ್ದರು.

ಯಜಮಾನಿ ಕೊಂದು ಮನೆಕೆಲಸಗಾರ ಆತ್ಮಹತ್ಯೆ

ಬೆಂಗಳೂರು: ಮೈಕೋ ಲೇಔಟ್ ಠಾಣೆ ವ್ಯಾಪ್ತಿಯ ಸಿಲ್ಕ್ ಬೋರ್ಡ್ ಸಮೀಪದ ಕೆಎಎಸ್ ಕಾಲೊನಿಯಲ್ಲಿ ಮನೆಯ ಯಜಮಾನಿಯನ್ನು ಕೊಂದು, ಬಳಿಕ ಕೆಲಸಗಾರ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ತಮಿಳುನಾಡಿನ ದೇವರಾಜ್ (50) ಆತ್ಮಹತ್ಯೆ ಮಾಡಿಕೊಂಡ ವ್ಯಕ್ತಿ. ಅದಕ್ಕೂ ಮೊದಲು ಮನೆಯೊಡತಿ 65 ವರ್ಷದ ಮಹಿಳೆಯನ್ನು ಕೊಲೆ ಮಾಡಲಾಗಿದೆ. ಭಾನುವಾರ ಮುಂಜಾನೆ 4.30ರ ಸುಮಾರಿಗೆ ಮಹಿಳೆಯ ಪತಿ ಮನೆಗೆ ಬಂದಾಗ ವಿಚಾರ ಗೊತ್ತಾಗಿದೆ ಎಂದು ಪೊಲೀಸರು ಮಾಹಿತಿ ನೀಡಿದರು.

ಮಂಗಳೂರಿನ ಮಹಿಳೆ, ಪತಿ ಹಾಗೂ 27 ವರ್ಷದ ಪುತ್ರಿಯ ಜತೆ ಕೆಎಎಸ್ ಲೇಔಟ್‌ನಲ್ಲಿ ನೆಲಸಿದ್ದಾರೆ. ಕೊಲೆಯಾದ ಮಹಿಳೆ ಪತಿ ಮತ್ತು ಪುತ್ರಿ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದು, ಪತಿ ದುಬೈಗೆ ಹೋಗಿದ್ದರು ಎಂದು ಪೊಲೀಸರು ತಿಳಿಸಿದರು.

ವಿದೇಶದಿಂದ ಭಾನುವಾರ ಮುಂಜಾನೆ 4.30ರ ಸುಮಾರಿಗೆ ಮನೆಗೆ ಬಂದಿದ್ದು, ಮೊದಲ ಮಹಡಿಯಲ್ಲಿದ್ದ ಪುತ್ರಿ ಬಾಗಿಲು ತೆರೆದು ಮತ್ತೆ ತನ್ನ ಕೋಣೆಗೆ ಹೋಗಿದ್ದಾರೆ. ಪತಿ ತಮ್ಮ ಕೋಣೆಗೆ ಹೋದಾಗ ಪತ್ನಿ ಕೊಲೆಯಾಗಿರುವುದನ್ನು ಕಂಡು ಕೂಗಿಕೊಂಡಿದ್ದಾರೆ. ಪುತ್ರಿ ಬಂದು ನೋಡಿ ಪೊಲೀಸರಿಗೆ ಮಾಹಿತಿ ನೀಡಿದ್ದಾರೆ.

ಪ್ರಾಥಮಿಕ ತನಿಖೆಯಲ್ಲಿ ಘಟನೆ ನಡೆದ ಸಮಯದಲ್ಲಿ ಮನೆಯ ಮೊದಲ ಮಹಡಿಯಲ್ಲಿ ಮಗಳು ಇದ್ದರೂ, ಕೆಳ ಮಹಡಿಯಲ್ಲಿ ನಡೆದ ಕೃತ್ಯದ ಬಗ್ಗೆ ಅರಿವಿರಲಿಲ್ಲ ಎಂಬುದು ಗೊತ್ತಾಗಿದೆ ಎಂದು ಹೇಳಿದರು.

'ಸುಮಾರು 10 ವರ್ಷಗಳಿಂದ ಕೆಎಎಸ್ ಲೇಔಟ್‌ನಲ್ಲಿ ದೇವರಾಜ್ ವಾಸವಾಗಿದ್ದು, ಸಮೀಪದ ಮನೆಗಳಲ್ಲಿ ಕೆಲಸ ಮಾಡಿಕೊಂಡಿದ್ದಾನೆ. ಕೆಲವೊಮ್ಮೆ ಆಯಾ ಮನೆಗಳಲ್ಲೇ ಮಲಗುತ್ತಿದ್ದ. ಅದೇ ರೀತಿ ಎರಡು ದಿನಗಳಿಂದ ಆರೋಪಿ, ಮಹಿಳೆಯ ಮನೆಯಲ್ಲಿ ಮಲಗುತ್ತಿದ್ದ. ಆಕೆಯ ಕತ್ತುಹಿಸುಕಿ ಕೊಲೆ ಮಾಡಿರುವುದು ಗೊತ್ತಾಗಿದೆ. ಲೈಂಗಿಕ ದೌರ್ಜನ್ಯ ನಡೆದಿದೆಯೇ ಎಂಬುದರ ಬಗ್ಗೆ ತನಿಖೆ ನಡೆಸಲಾಗುತ್ತಿದೆ. ಮೃತದೇಹಗಳನ್ನು ಮರಣೋತ್ತರ ಪರೀಕ್ಷೆಗೆ ರವಾನಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದರು.

ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದ ಬಳಿಕ ಮಾತನಾಡಿದ ಪೂರ್ವ ವಿಭಾಗದ ಹೆಚ್ಚುವರಿ ಪೊಲೀಸ್ ಕಮಿಷನರ್ ರಮೇಶ್ ಬಾನೊತ್, 'ಮನೆಯ ಯಜಮಾನಿಯನ್ನು ಕೆಲಸಗಾರನೇ ಕೊಲೆ ಮಾಡಿದ್ದಾನೆ. ಘಟನಾ ಸ್ಥಳಕ್ಕೆ ಸೋಕೊ ತಂಡ ಮತ್ತು ವಿಧಿವಿಜ್ಞಾನ ಪ್ರಯೋಗಾಲಯ ತಜ್ಞರು ಭೇಟಿ ನೀಡಿ ಪರಿಶೀಲಿಸಿದ್ದಾರೆ. ತನಿಖೆ ಮುಂದುವರಿದಿದೆ' ಎಂದರು. ಈ ಸಂಬಂಧ ಮೈಕೋ ಲೇಔಟ್ ಠಾಣೆಯಲ್ಲಿ ಕೊಲೆ ಪ್ರಕರಣ ದಾಖಲಾಗಿದೆ.

ಟಿಪ್ಪರ್‌ಗೆ ಕಾರು ಡಿಕ್ಕಿ: ಅಣ್ಣ–ತಂಗಿ ಸಾವು

ನಾಗಮಂಗಲ (ಮಂಡ್ಯ ಜಿಲ್ಲೆ): ಚಲಿಸುತ್ತಿದ್ದ ಟಿಪ್ಪರ್‌ಗೆ ಹಿಂಬದಿಯಿಂದ ಕಾರು ಡಿಕ್ಕಿಯಾದ ಪರಿಣಾಮ ಅಣ್ಣ–ತಂಗಿ ಇಬ್ಬರೂ ಸ್ಥಳದಲ್ಲೇ ಸಾವಿಗೀಡಾಗಿ, ಮೂವರು ಗಾಯಗೊಂಡಿರುವ ಘಟನೆ ತಾಲ್ಲೂಕಿನ ಬೇಗಮಂಗಲ ಅಂಚೆ ಭೂವನಹಳ್ಳಿ ನಡುವಿನ ಚಾಮರಾಜ ನಗರ– ಜೇವರ್ಗಿ ರಾಷ್ಟ್ರೀಯ ಹೆದ್ದಾರಿಯಲ್ಲಿ ಭಾನುವಾರ ಬೆಳಿಗ್ಗೆ ಸಂಭವಿಸಿದೆ.

ಬೆಂಗಳೂರಿನ ಕತ್ತರಗುಪ್ಪೆಯ ನಿವಾಸಿಗಳಾದ ರವೀಂದ್ರರಾಜ್ ಕೃಷ್ಣ ಅವರ ಮಕ್ಕಳಾದ ಮವೀನ (20) ಮತ್ತು ಶ್ಯಾಮ್ (21) ಮೃತಪಟ್ಟವರು. ಕಾರಿನಲ್ಲಿದ್ದ ಹಿತಶ್ರೀ, ಕಲಾಶ್ರೀ ಹಾಗೂ ಕಾರು ಚಾಲಕ ಚೇತನ್ ಗಾಯಗೊಂಡಿದ್ದಾರೆ.

ಸಂಪ್‌ನಲ್ಲಿ ಬಾಲಕನ ಶವ ಪತ್ತೆ

ಅಪರಾಧ ಸುದ್ದಿ

ಬೆಂಗಳೂರು: ಮೂರು ದಿನಗಳ ಹಿಂದೆ ನಾಪತ್ತೆಯಾಗಿದ್ದ 14 ವರ್ಷದ ಬಾಲಕ, ದಕ್ಷಿಣ ತಾಲ್ಲೂಕಿನ ತಾತಗುಣಿ ಸಮೀಪ ಶವವಾಗಿ ಪತ್ತೆಯಾಗಿದ್ದಾನೆ.

ಬೆಂಗಳೂರು ಜಲಮಂಡಳಿ ಪೈಪ್‌ಲೈನ್ ಅಳವಡಿಕೆಗಾಗಿ ನಿರ್ಮಿಸಿದ್ದ ತೆರೆದ ಸಂಪ್‌ನಲ್ಲಿ ಬಾಲಕನ ಮೃತದೇಹ ಪತ್ತೆಯಾಗಿದೆ. ಚಾಮರಾಜನಗರ ಜಿಲ್ಲೆಯ ರಜನಿಕಾಂತ್ ಎಂಬುವವರ ಪುತ್ರ ಪ್ರೀತಮ್ (14) ಮೃತ ಬಾಲಕ.

'ಈ ದುರ್ಘಟನೆಗೆ ಜಲಮಂಡಳಿ ನಿರ್ಲಕ್ಷ್ಯವೇ ಕಾರಣ. ಪೈಪ್‌ಲೈನ್‌ಗಾಗಿ ತೆಗೆಯಲಾಗಿದ್ದ ಸಂಪ್ ಅನ್ನು ಮುಚ್ಚಿರಲಿಲ್ಲ. ಬಾಲಕ ಓಡಾಡುವ ವೇಳೆ ಆಕಸ್ಮಿಕವಾಗಿ ಸಂಪ್‌ಗೆ ಬಿದ್ದಿರುವ ಸಾಧ್ಯತೆಯಿದೆ' ಎಂದು ಸ್ಥಳೀಯರು ಆರೋಪಿಸಿದ್ದಾರೆ.

ತಾತಗುಣಿಯ ಬಾಡಿಗೆ ಮನೆಯಲ್ಲಿ ರಜನಿಕಾಂತ್ ಕುಟುಂಬ ವಾಸವಿದೆ. ಪ್ರೀತಮ್ ಮೂರು ದಿನದ ಹಿಂದೆ ಮನೆಯಿಂದ ಹೊರಗೆ ಹೋದವನು ವಾಪಸ್ ಬಂದಿರಲಿಲ್ಲ. ಈ ಸಂಬಂಧ ಪೋಷಕರು ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಪೊಲೀಸರು ಮತ್ತು ಸ್ಥಳೀಯರು ಹುಡುಕಾಟ ನಡೆಸುತ್ತಿದ್ದ ವೇಳೆ ಭಾನುವಾರ ಜಲಮಂಡಳಿ ಕಾಮಗಾರಿ ನಡೆಯುತ್ತಿದ್ದ ಸ್ಥಳದ ತೆರೆದ ಸಂಪ್‌ನಲ್ಲಿ ಶವ ಪತ್ತೆಯಾಗಿದೆ. ಮೃತದೇಹದ ಎದುರು ಪೋಷಕರ ಆಕ್ರಂದನ ಮುಗಿಲು ಮುಟ್ಟಿತ್ತು.

ಸ್ಥಳಕ್ಕೆ ಧಾವಿಸಿದ ಕಗ್ಗಲೀಪುರ ಪೊಲೀಸರು ಮೃತದೇಹವನ್ನು ಸಂಪ್‌ನಿಂದ ಹೊರತೆಗೆದು, ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ರವಾನಿಸಿದ್ದಾರೆ. ಪ್ರಕರಣ ದಾಖಲಿಸಿಕೊಂಡು, ತನಿಖೆಗೆ ಮುಂದಾಗಿದ್ದಾರೆ.



ಆರ್‌ಡಬ್ಲ್ಯುಎ ಕ್ರಿಕೆಟ್ ಟೂರ್ನ್‌ಮೆಂಟ್‌ನಲ್ಲಿ ಭಾಗವಹಿಸುವ ತಂಡಗಳ ಜೆರ್ಸಿಯನ್ನು (ಟಿ–ಶರ್ಟ್) ಮಾಜಿ ಸಚಿವ ಅರವಿಂದ ಲಿಂಬಾವಳಿ ಬಿಡುಗಡೆ ಮಾಡಿದರು

ಆರ್‌ಡಬ್ಲ್ಯುಎ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ಮಹದೇವಪುರ ಕ್ಷೇತ್ರದ ಕಾಟಂನಲ್ಲೂರಿನಲ್ಲಿ ಗ್ರಾಮಾಂತರ ಮಂಡಲ ವತಿಯಿಂದ ನಡೆಯಲಿರುವ 'ಅರವಿಂದ ಲಿಂಬಾವಳಿ ಟಿ-10 ಆರ್‌ಡಬ್ಲ್ಯುಎ ಕ್ರಿಕೆಟ್ ಪಂದ್ಯಾವಳಿಗೆ ಮಾಜಿ ಸಚಿವ ಅರವಿಂದ ಲಿಂಬಾವಳಿ ಭಾನುವಾರ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, 'ಕ್ರೀಡೆ ನಮ್ಮ ಮಾನಸಿಕ ಆರೋಗ್ಯವನ್ನು ಸುಧಾರಣೆ ಮಾಡುವ ಮೂಲಕ ಉತ್ತಮ ಚಟುವಟಿಕೆಗಳಿಗೆ ನಾಂದಿ ಹಾಡುತ್ತದೆ' ಎಂದು ಹೇಳಿದರು.

ಇದೇ ವೇಳೆ ಅರವಿಂದ ಲಿಂಬಾವಳಿ ಅವರು, ಟಿ-10 ಆರ್‌ಡಬ್ಲ್ಯುಎ ಕ್ರಿಕೆಟ್ ಪಂದ್ಯಾವಳಿಯಲ್ಲಿ ಭಾಗವಹಿಸಲಿರುವ ತಂಡಗಳ ಜೆರ್ಸಿ(ಟಿ-ಶರ್ಟ್) ಬಿಡುಗಡೆ ಮಾಡಿದರು.

ಗ್ರಾಮಾಂತರ ಮಂಡಲ ಅಧ್ಯಕ್ಷ ಎಚ್.ಎಸ್. ಪಿಳ್ಳಪ್ಪ, ಗ್ರಾಮಾಂತರ ಮಂಡಲದ ಆರ್‌ಡಬ್ಲ್ಯುಎ ಅಧ್ಯಕ್ಷ ಮಂಜುನಾಥ ಪಾಟೀಲ್, ಕೆ.ಎಂ.ಮಂಜುನಾಥ್, ಕೆ.ವಿ. ನಾಗರಾಜ್ ಉಪಸ್ಥಿತರಿದ್ದರು.

ನಗರದಲ್ಲಿ ಇಂದು

ಭಾರತ ರಂಗ ಮಹೋತ್ಸವ ಹಾಗೂ ರಂಗ ಪರಿಷೆ: ಬೆಳಿಗ್ಗೆ 10.30ಕ್ಕೆ ರಂಗ ಸಂವಾದದ ಉದ್ಘಾಟನೆ: ಎಂ.ಎಸ್. ಜಯಕರ, ಅತಿಥಿಗಳು: ಹಂಸಿನಿ ನಾಗೇಂದ್ರ, ಎಸ್. ಶಿವಣ್ಣ, ಸ್ಥಳ: ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಜ್ಞಾನಭಾರತಿ, ಸಂಜೆ 4ಕ್ಕೆ

ರಾಷ್ಟ್ರಕವಿ ಜಿ.ಎಸ್. ಶಿವರುದ್ರಪ್ಪ ಶತಮಾನೋತ್ಸವ ಸಂಭ್ರಮ ಕವಿಗೋಷ್ಠಿಯ ಉದ್ಘಾಟನೆ: ವೆಂಕಟೇಶಯ್ಯ ನೆಲ್ಲುಕುಂಟೆ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಪ್ರಾಸ್ತಾವಿಕ ನುಡಿ: ಕೆ.ವಿ. ನಾಗರಾಜಮೂರ್ತಿ, ಉಪಸ್ಥಿತಿ: ಮಮತಾ ಅರಸೀಕೆರೆ, ರವಿಕುಮಾರ್ ಬಾಗಿ, ಮಲ್ಲಿಕಾರ್ಜುನ ಮಹಾಮನೆ, 5.30ರಿಂದ ಅತಿಥಿಗಳು: 'ಮುಖ್ಯಮಂತ್ರಿ' ಚಂದ್ರು, ಪ.ಸ. ಕುಮಾರ್, ಎಂ.ಸಿ. ರಮೇಶ್, ಮಹೇಂದ್ರ, ಉಪಸ್ಥಿತಿ: ರಾಜಣ್ಣ ಜೇವರ್ಗಿ, ಗಾಯಿತ್ರಿ ಮಹಾದೇವ, ಉತ್ಸವ ಗೌರವ ಸ್ವೀಕರಿಸುವವರು: ಗಿರಿಜಾ ಲೋಕೇಶ್, ರಂಗ ಗೌರವ ಸ್ವೀಕರಿಸುವವರು: ಪ್ರತಿಮಾ ಸಭಾ, ಕಲಾ ಜ್ಯೋತಿ, 'ನಮ್ಮೆ ಮರಂದರ್ರೈ ನಂ ಮರಕ್ಕಮಟ್ಟಂ' ನಾಟಕ ಪ್ರದರ್ಶನ: ಪ್ರಸ್ತುತಿ: ರಂಗ ಮಂದಿರ ಸಾದಿರ್ ಮೇಳಂ ಚನ್ನೈ, ರಂಗಪಠ್ಯ: ಇಳಾಂಗೋ ಅಡಿಗಳ್, ನಿರ್ದೇಶನ: ಸ್ವರ್ಣಮಲ್ಯ ಗಣೇಶ್, 'ಶಕ್ತಿಮಿತ್ರ' ಕಿರು ನಾಟಕ ಪ್ರದರ್ಶನ, ಗಮಕ–ವಾಚನ: ಸುಮೇಧ ಮತ್ತು ತಂಡ, ಸಂಜೆ 7ಕ್ಕೆ


ಗಿರಿಜಾ ಲೋಕೇಶ್

'ಮುಖ್ಯಮಂತ್ರಿ' ನಾಟಕ ಪ್ರದರ್ಶನ: ಪ್ರಸ್ತುತಿ: ಕಲಾಗಂಗೋತ್ರಿ, ರಂಗರೂಪ: ಟಿ.ಎಸ್. ಲೋಹಿತಾಶ್ವ, ನಿರ್ದೇಶನ: ಬಿ.ವಿ. ರಾಜಾರಾಂ, 7ಕ್ಕೆ 'ಸಾಲು ಮರಗಳ ತಾಯಿ ತಿಮ್ಮಕ್ಕ' ನಾಟಕ ಪ್ರದರ್ಶನ: ರಚನೆ, ನಿರ್ದೇಶನ: ಬೇಲೂರು ರಘುನಂದನ್, ಆಯೋಜನೆ: ಕರ್ನಾಟಕ ನಾಟಕ ಅಕಾಡೆಮಿ, ರಾಷ್ಟ್ರೀಯ ನಾಟಕ ಶಾಲೆ, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ

ರೈತರ ಆತ್ಮಹತ್ಯೆಗಳಿಗೆ ತಡೆ ಸಮಿತಿಯ ಸಮಾಲೋಚನಾ ಸಭೆ: ಉದ್ಘಾಟನೆ: ದೇವೇಂದರ್ ಶರ್ಮಾ, ಅಧ್ಯಕ್ಷತೆ: ಬಿ.ಆರ್. ಪಾಟೀಲ, ಅತಿಥಿಗಳು: ಎಲ್. ಹನುಮಂತಯ್ಯ, ಕೆ.ಟಿ. ಗಂಗಾಧರ್, ಸುದರ್ಶನ್ ಚನ್ನಂಗಿಹಳ್ಳಿ, ಅಶೋಕ್ ದಳವಾಯಿ, ಎ.ಬಿ. ಪಾಟೀಲ, ಬಸವರಾಜ ಹುಂಬರವಾಡಿ, ಬಿ.ಎಜ್. ಪಿಂಜಾರ್, ಸ್ಥಳ: ಕೃಷಿ ತಂತ್ರಜ್ಞರ ಸಂಸ್ಥೆ, ಕ್ವೀನ್ಸ್ ರಸ್ತೆ, ಬೆಳಿಗ್ಗೆ 11

ಪಾವಗಡ ಪ್ರಕಾಶರಾವ್ ಅವರಿಂದ ಕವಿ ಲಕ್ಷ್ಮೀಶರ 'ಜೈಮಿನಿ ಭಾರತ' ಉಪನ್ಯಾಸ ಮಾಲಿಕೆ: ಕರ್ನಾಟಕ ಶಾಸ್ತ್ರೀಯ ಸಂಗೀತ ಕಛೇರಿ: ಆರ್. ಕೆ. ಪದ್ಮನಾಭ, ಭಾಗವಹಿಸುವವರು: ಚೆಲುವರಾಜನ್, ಆಯೋಜನೆ: ಡಾ.ಪಾವಗಡ ಪ್ರಕಾಶರಾಯರ ಅಮೃತ ಮಹೋತ್ಸವ ಸಮಿತಿ, ಸ್ಥಳ: ಪತ್ತಿ ಸಭಾಂಗಣ, ಶ್ರೀರಾಮಮಂದಿರ, ಎನ್. ಆರ್. ಕಾಲೊನಿ, ಸಂಜೆ 5.45

ಏಪ್ರಿಲ್‌ನಲ್ಲಿ ಶೈಕ್ಷಣಿಕ ಮೇಳ

ಎಡ್ಯುವರ್ಸ್™
ಪ್ರೀಮಿಯರ್ ಎಜುಕೇಶನ್ ಎಕ್ಸ್‌ಪೋ

‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಇದೇ ಏಪ್ರಿಲ್‌ನಲ್ಲಿ ‘ಎಡ್ಯುವರ್ಸ್’ ಶೈಕ್ಷಣಿಕ ಮೇಳವನ್ನು ಹಮ್ಮಿಕೊಂಡಿವೆ. ಹದಿನಾಲ್ಕು ವರ್ಷಗಳಿಂದ ಈ ಮೇಳವನ್ನು ಯಶಸ್ವಿಯಾಗಿ ಆಯೋಜಿಸುತ್ತಾ ಬರಲಾಗಿದೆ.

‘ಪಿಯುಸಿ ನಂತರ ಮುಂದೇನು?’ ಎನ್ನುವ ಪ್ರಶ್ನೆಗೆ ಮೇಳದಲ್ಲಿ ಸೂಕ್ತ ಉತ್ತರ ಕಂಡುಕೊಳ್ಳಬಹುದು. ಸಿಇಟಿ ಮತ್ತು ಕಾಮೆಡ್‌–ಕೆ ಕುರಿತು ವಿಶೇಷ ಗೋಷ್ಠಿಗಳು ನಡೆಯಲಿವೆ. ಪಿಯುಸಿ ಮತ್ತು ತತ್ಸಮಾನ ವಿದ್ಯಾಭ್ಯಾಸ ಮುಗಿಸಿದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸ್‌ಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿ ಸಿಗಲಿದೆ. ಶಿಕ್ಷಣ ತಜ್ಞರು ಹಾಗೂ ಪರಿಣತರೊಂದಿಗೆ ಸಂವಾದ ಮತ್ತು ಉಪನ್ಯಾಸ ಗೋಷ್ಠಿಗಳು ಇರಲಿವೆ.

ಕರ್ನಾಟಕದಾದ್ಯಂತ ಇರುವ ಪ್ರತಿಷ್ಠಿತ ಶೈಕ್ಷಣಿಕ ಸಂಸ್ಥೆಗಳು ಈ ಮೇಳದಲ್ಲಿ ಭಾಗವಹಿಸಲಿವೆ. ಕೋರ್ಸ್‌ಗಳ ಆಯ್ಕೆ, ಉದ್ಯೋಗಾವಕಾಶ, ಕಾಲೇಜಿನಲ್ಲಿರುವ ಸೌಲಭ್ಯಗಳ ಬಗ್ಗೆ ಮಾಹಿತಿ ಸಿಗಲಿದೆ. ವಿದ್ಯಾರ್ಥಿಗಳು ಈ ಸಂಸ್ಥೆಗಳೊಂದಿಗೆ ನೇರವಾಗಿ ಸಂವಾದ ನಡೆಸುವ ಅವಕಾಶ ಇದೆ. ಮೇಳವು ಎರಡು ಬೇರೆ ಬೇರೆ ದಿನಗಳಲ್ಲಿ ಬೆಂಗಳೂರು ಮತ್ತು ಹುಬ್ಬಳ್ಳಿಯಲ್ಲಿ ನಡೆಯಲಿದೆ. ಕಾರ್ಯಕ್ರಮ ನಡೆಯಲಿರುವ ಸ್ಥಳ ಹಾಗೂ ದಿನಾಂಕವನ್ನು ಸದ್ಯದಲ್ಲಿಯೇ ತಿಳಿಸಲಾಗುತ್ತದೆ.

ಭಾಗವಹಿಸುವ ವಿದ್ಯಾರ್ಥಿಗಳಿಗೆ ಲಕ್ಕಿ ಡ್ರಾ ಇರಲಿದೆ. ಸಿಇಟಿ– ನೀಟ್ ಪರೀಕ್ಷಾರ್ಥಿಗಳಿಗೆ ಎರಡೂ ದಿನ ಅಣಕು ಪರೀಕ್ಷೆ ನಡೆಯಲಿದೆ. ಮೇಳಕ್ಕೆ ಪ್ರವೇಶ ಉಚಿತ.

ಉದ್ಯೋಗ ಕಿರಣ

ವರ್ಕ್ ಫ್ರಂ ಹೋಮ್ ಇಂಟರ್ನ್‌ಷಿಪ್

ಎಕ್ಸ್‌ಪೋರ್ಟ್ ಸೇಲ್ಸ್ ಆ್ಯಕ್ಟಿವಿಟೀಸ್: ಡೆಲಿಪ್ರೊ ಫುಡ್ ಪ್ರೈವೇಟ್ ಲಿಮಿಟೆಡ್ ಸಂಸ್ಥೆಯು ಎಕ್ಸ್‌ಪೋರ್ಟ್ ಸೇಲ್ಸ್ ಆ್ಯಕ್ಟಿವಿಟೀಸ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಇ–ಮೇಲ್ ಮಾರ್ಕೆಟಿಂಗ್, ಕೋಲ್ಡ್ ಕಾಲಿಂಗ್, ಡೇಟಾ ಎಕ್ಸ್‌ಟ್ರ್ಯಾಕ್ಷನ್, ಪರಿಣಾಮಕಾರಿ ಸಂವಹನ, ಮಾರ್ಕೆಟಿಂಗ್ ಆಟೊಮೇಷನ್, ಮಾರ್ಕೆಟಿಂಗ್ ಕ್ಯಾಂಪೇನ್, ಎಂಎಸ್ ಎಕ್ಸೆಲ್ ಮತ್ತು ಸಮಯ ನಿರ್ವಹಣೆಯ ಬಗ್ಗೆ ತಿಳಿದವರು ಫೆ. 27ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹ 6,000. ಸಂಪರ್ಕ: https://tinyurl.com/5evdpkbj.

ಇ– ಕಾಮರ್ಸ್: ಸ್ಪೆಕ್ಟ್ರಂ ವೆಲ್‌ನೆಸ್ ಸಂಸ್ಥೆಯು ಇ–ಕಾಮರ್ಸ್ ಇಂಟರ್ನಿಗಳನ್ನು ನೇಮಿಸಿಕೊಳ್ಳಲಿದೆ. ಎಐ ಇಮೇಜ್ ಜನರೇಷನ್, ಸೋಷಿಯಲ್ ಮೀಡಿಯಾ ಮಾರ್ಕೆಟಿಂಗ್, ಯುಐ ಮತ್ತು ಯುಎಕ್ಸ್ ಡಿಸೈನ್, ಅಟೆನ್ಷನ್ ಟು ಡೀಟೇಲ್ ಬಗ್ಗೆ ಅರಿತಿರುವವರು ಮತ್ತು ಪರಿಣಾಮಕಾರಿ ಸಂವಹನ ಸಾಮರ್ಥ್ಯ ಉಳ್ಳವರು ಫೆ. 20ರ ಒಳಗೆ ಅರ್ಜಿ ಸಲ್ಲಿಸಬೇಕು. ಸ್ಟೈಪೆಂಡ್– ತಿಂಗಳಿಗೆ ₹4,000–₹7,000. ಸಂಪರ್ಕ: https://tinyurl.com/3vk4e93c.

ಬೆಂಗಳೂರು ಕೇಂದ್ರಿತ

ಈಕ್ವಿಟಿ ಅನಲಿಸ್ಟ್: ಮನಿ ಸ್ಟೋರೀಸ್ ಫಿನ್‌ಸರ್ವ್ ಸಂಸ್ಥೆಯು ಈಕ್ವಿಟಿ ಅನಲಿಸ್ಟ್ ಇಂಟರ್ನಿಗಳನ್ನು ಆಹ್ವಾನಿಸಿದೆ. ಎಂಎಸ್ ಎಕ್ಸೆಲ್ ಬಗ್ಗೆ ಅರಿತಿರುವವರು ಫೆ. 26ರ ಒಳಗೆ ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ತಿಂಗಳಿಗೆ ₹4,000–₹7,000. ಸಂಪರ್ಕ: https://shorturl.at/n3J3V.

ಆಪರೇಷನ್ಸ್ ಸಪೋರ್ಟ್: ಕ್ಯಾಪಿಟ– ಕ್ಯಾಪ್‌ಟೇಬಲ್ & ಇಎಸ್‌ಒಪಿ ಮ್ಯಾನೇಜ್‌ಮೆಂಟ್ ಪ್ಲ್ಯಾಟ್‌ಫಾರ್ಮ್ (Qapita - CapTable & ESOP Management Platform) ಸಂಸ್ಥೆಯು ಆಪರೇಷನ್ಸ್ ಸಪೋರ್ಟ್ ಇಂಟರ್ನಿಗಳನ್ನು ನೇಮಕ ಮಾಡಿಕೊಳ್ಳಲಿದೆ. ಕ್ಲೈಂಟ್ ರಿಲೇಷನ್‌ಷಿಪ್ ಮ್ಯಾನೇಜ್‌ಮೆಂಟ್ ಮತ್ತು ಕೆವೈಸಿ ಬಗ್ಗೆ ಜ್ಞಾನ ಹೊಂದಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬಹುದು. ಸ್ಟೈಪೆಂಡ್– ₹15,000–₹20,000. ಸಂಪರ್ಕ: https://shorturl.at/4wNxF.

ಟೀಚ್ ಫಾರ್ ಇಂಡಿಯಾ ಫೆಲೋಷಿಪ್

ಯುವ ಪದವೀಧರರಿಗೆ ಪೂರ್ಣ ಸಮಯದ ಶಿಕ್ಷಕರಾಗಿ ಸೇವೆ ಸಲ್ಲಿಸುವ ಅವಕಾಶವನ್ನು ಈ ಫೆಲೋಷಿಪ್ ನೀಡುತ್ತದೆ.

ಅರ್ಹತೆ: 2026ರ ಜೂನ್/ಜುಲೈ ಒಳಗೆ ಪದವಿ ಪೂರ್ಣಗೊಳಿಸುವ ಭಾರತೀಯ ನಾಗರಿಕರು ಅಥವಾ ಭಾರತದ ಸಾಗರೋತ್ತರ ನಾಗರಿಕರು (OCI) ಅರ್ಜಿ ಸಲ್ಲಿಸಬಹುದು.

ಆರ್ಥಿಕ ನೆರವು: ₹25,344 ಮಾಸಿಕ ಸ್ಟೈಪೆಂಡ್

ಮಾಹಿತಿಗೆ: Short Url: www.b4s.in/praja/TFIF6



ಭವಿಷ್ಯದ ಉದ್ಯಮಿಗೆ ಬಗೆಬಗೆ ಕೋರ್ಸ್

• ಗುರುರಾಜ್ ಎಸ್. ದಾವಣಗೆರೆ

ವೇಗವಾಗಿ ಬದಲಾಗುತ್ತಿರುವ ಆರ್ಥಿಕ ಪರಿಸರದಲ್ಲಿ ಉದ್ಯೋಗ ಗಳಿಸಲು, ಯಶಸ್ಸು ಸಾಧಿಸಲು ಪಿಯುಸಿ ನಂತರ ಯಾವೆಲ್ಲ ಕೋರ್ಸ್‌ಗಳ ಅಧ್ಯಯನ ಮಾಡಬಹುದು ಎಂದು ಮಾರುಕಟ್ಟೆ ತಜ್ಞರನ್ನು ಪ್ರಶ್ನಿಸಿದರೆ, ಅವರು ‘ಉದ್ಯಮಶೀಲತೆ’ ಮತ್ತು ‘ನವೋದ್ಯಮ’ ಎಂಬ ಪ್ರಮುಖ ಕೋರ್ಸ್‌ಗಳನ್ನು ಸೂಚಿಸುತ್ತಾರೆ. ದೇಶದ ಆರ್ಥಿಕ ದೃಢತೆ ಹೆಚ್ಚುವುದು ದೊಡ್ಡ ದೊಡ್ಡ ಉದ್ಯಮಗಳಿಂದ ಮಾತ್ರ ಎಂಬ ಮಾತಿಗೀಗ ಅಷ್ಟು ಜಾಗವಿಲ್ಲ. ಬದಲಿಗೆ, ಸಣ್ಣ ಬಂಡವಾಳದ ಅನೇಕ ನವೋದ್ಯಮಗಳು, ಸಣ್ಣ ಹಾಗೂ ಮಧ್ಯಮ ಗಾತ್ರದ ಉದ್ಯಮಗಳು ಯಶಸ್ಸಿನ ಹಲವು ಉದಾಹರಣೆಗಳನ್ನು ನಮ್ಮ ಮುಂದೆ ಇರಿಸಿವೆ.

ಯಾವುದೇ ಉದ್ಯಮ ಅಥವಾ ನವೋದ್ಯಮ ಸ್ಥಾಪಿಸಲು ಸರಿಯಾದ ತಿಳಿವಳಿಕೆ ಮತ್ತು ಕೌಶಲ ಎರಡೂ ಬೇಕು. ಅದಕ್ಕಾಗಿ, ವಿದ್ಯಾರ್ಥಿಯಾಗಿರುವಾಗಲೇ ಉದ್ಯಮಶೀಲತೆಯನ್ನು ಮೈಗೂಡಿಸಿಕೊಳ್ಳಬೇಕು. ಪಿಯುಸಿ ನಂತರ ಜನಪ್ರಿಯವಾಗಿರುವ ಬಿಬಿಎಂ, ಬಿಕಾಂ, ಬಿಸಿಎಗಳ ಬದಲಿಗೆ, ಸ್ವಂತ ಉದ್ದಿಮೆ ಸ್ಥಾಪಿಸಲು ಬೇಕಾದ ಕೌಶಲಗಳನ್ನು ಕಲಿಯಲು ಈ ಕೆಳಗಿನ ಕೆಲವು ವಿನೂತನ ಕೋರ್ಸ್‌ಗಳು ಲಭ್ಯವಿವೆ.

ಇವೆಲ್ಲವೂ ವೃತ್ತಿಪರ ಪದವಿ ಅಧ್ಯಯನ ಮಾರ್ಗಗಳಾಗಿದ್ದು, ಸ್ವತಃ ಉದ್ಯೋಗ ಮಾಡುತ್ತ ಇತರರಿಗೂ ಉದ್ಯೋಗ ಕಲ್ಪಿಸುವ ಅವಕಾಶ ಇರುತ್ತದೆ. ನಿಮ್ಮ ಆಸಕ್ತಿಗೆ ಅನುಗುಣವಾಗಿ ಈ ಕೆಳಗಿನ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳಬಹುದು.

1. ಬಿಬಿಎ ಇನ್ ಆಂತ್ರಪ್ರನರ್‌ಷಿಪ್: ಇದು ಯುವ ಉದ್ಯಮಿಗಳಿಗೆ ಅತ್ಯಂತ ಜನಪ್ರಿಯ ಕೋರ್ಸ್ ಎನಿಸಿದೆ. ಸಾಮಾನ್ಯ ಬಿಬಿಎಗಿಂತ ಭಿನ್ನವಾಗಿ, ಪ್ರತಿ ವಿಷಯವನ್ನೂ ಇಲ್ಲಿ ಒಬ್ಬ ಉದ್ದಿಮೆಯ ಮಾಲೀಕನ ದೃಷ್ಟಿಕೋನದಿಂದ ಕಲಿಸಲಾಗುತ್ತದೆ.

ಪ್ರಮುಖ ಕಾಲೇಜುಗಳು: ಎನ್‌ಎಂಐಎಂಎಸ್ (ಮುಂಬೈ), ಕ್ರೈಸ್ಟ್ ಯೂನಿವರ್ಸಿಟಿ (ಬೆಂಗಳೂರು), ಫ್ಲೇಮ್ ಯೂನಿವರ್ಸಿಟಿ (ಪುಣೆ).

ಕಲಿಕೆಯ ವಿಷಯಗಳು: ಹೊಸ ಉದ್ದಿಮೆಯ ಹಣಕಾಸು ನಿರ್ವಹಣೆ, ಮಾರುಕಟ್ಟೆ ಸಂಶೋಧನೆ ಮತ್ತು ಕಡಿಮೆ ವೆಚ್ಚದ ಮಾರ್ಕೆಟಿಂಗ್ ಮೂಲಕ ವೇಗದ ಬೆಳವಣಿಗೆಯ ತಂತ್ರಗಳು (ಗ್ರೋತ್ ಹ್ಯಾಕಿಂಗ್).

2. ಇಂಟಗ್ರೇಟೆಡ್ ಐಪಿಎಂ (ಇಂಟಗ್ರೇಟೆಡ್ ಪ್ರೋಗ್ರ್ಯಾಂ ಇನ್ ಮ್ಯಾನೇಜ್‌ಮೆಂಟ್– ಬಿಬಿಎ + ಎಂಬಿಎ): ಇಂದೋರ್, ರೋಹ್ಟಕ್ ಮತ್ತು ರಾಂಚಿಯ ಐಐಎಂಗಳು 12ನೇ ತರಗತಿಯ ನಂತರ ನೇರವಾಗಿ 5 ವರ್ಷಗಳ ಮ್ಯಾನೇಜ್‌ಮೆಂಟ್ ಕೋರ್ಸ್ ನೀಡುತ್ತವೆ. ಇದು ವಿದ್ಯಾರ್ಥಿಗಳಲ್ಲಿ ನಾಯಕತ್ವದ ಗುಣ ಮತ್ತು ಜಾಗತಿಕ ಮಟ್ಟದ ಉದ್ಯಮದ ಜ್ಞಾನವನ್ನು ಬೆಳೆಸುತ್ತದೆ.

3. ಬಿ.ಡೆಸ್ ಇನ್ ಸ್ಟ್ರಾಟೆಜಿಕ್ ಡಿಸೈನ್ ಮ್ಯಾನೇಜ್‌ಮೆಂಟ್: ಆ್ಯಪಲ್ ಅಥವಾ ಏರ್‌ಬಿಎನ್‌ಬಿಯಂತಹ ಉತ್ಪನ್ನ ಆಧಾರಿತ ಕಂಪನಿಗಳನ್ನು ಕಟ್ಟಲು ಬಯಸುವವರಿಗೆ ಇದು ಸೂಕ್ತ. ಇಲ್ಲಿ ಐದು ಹಂತಗಳ ‘ಡಿಸೈನ್ ಥಿಂಕಿಂಗ್’ ಮೂಲಕ ಸಮಸ್ಯೆಗಳಿಗೆ ಪರಿಹಾರ ಕಂಡುಹಿಡಿಯುವುದನ್ನು ಕಲಿಸಲಾಗುತ್ತದೆ.

4. ಡಿಪ್ಲೊಮಾ ಮತ್ತು ಅಲ್ಪಾವಧಿಯ ಕೋರ್ಸ್‌ಗಳು: ನೀವು ಬಿ.ಟೆಕ್ ಅಥವಾ ಬಿ.ಎ ಅಂತಹ ಬೇರೆ ಪದವಿ ಅಧ್ಯಯನ ಮಾಡುತ್ತಿದ್ದರೆ, ಅದರ ಜೊತೆಗೆ ಈ ಕೆಳಗಿನ ಕೋರ್ಸ್‌ಗಳನ್ನೂ ಮಾಡಬಹುದು.

ಡಿಪ್ಲೊಮಾ ಇನ್ ಆಂತ್ರಪ್ರನರ್‌ಷಿಪ್: ಇಂದಿರಾ ಗಾಂಧಿ ರಾಷ್ಟ್ರೀಯ ಮುಕ್ತ ವಿಶ್ವವಿದ್ಯಾಲಯ (ಇಗ್ನೊ- IGNOU) ಅಥವಾ ಎನ್‌ಎಂಐಎಂಎಸ್ ಮೂಲಕ 1 ವರ್ಷದ ಕೋರ್ಸ್ ಸೇರಬಹುದು.

ಆನ್‌ಲೈನ್ ಸರ್ಟಿಫಿಕೇಶನ್: ಕೋರ್ಸೆರಾ (Coursera) ಮೂಲಕ ವಾರ್ಟನ್ (Wharton) ಅಥವಾ ಅಪ್‌ಗ್ರಾಡ್ (UpGrad) ಸ್ಟಾರ್ಟ್‌ಅಪ್ ಪ್ರೋಗ್ರ್ಯಾಂಗಳಿಗೆ ದಾಖಲಾಗಬಹುದು.

***

ಹೆಚ್ಚಿನ ಉನ್ನತ ಸಂಸ್ಥೆಗಳು ಪ್ರವೇಶ ಪರೀಕ್ಷೆ ಮತ್ತು ವೈಯಕ್ತಿಕ ಸಂದರ್ಶನದ ಮೂಲಕ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುತ್ತವೆ.

ಉದ್ಯಮಶೀಲತೆ ಬಗೆಗಿನ ಕೋರ್ಸ್ ಕಲಿಯುವಾಗ ಕಾಲೇಜಿನ ತರಗತಿಗಿಂತ ಅಲ್ಲಿನ ‘ಟೆಕ್ನಾಲಜಿ ಬಿಸಿನೆಸ್ ಇನ್‌ಕ್ಯುಬೇಟರ್’ (ಟಿಬಿಐ) ಬಹಳ ಮುಖ್ಯ. ಇದು ಪ್ರತಿಷ್ಠಿತ ಕಾಲೇಜುಗಳ ಕ್ಯಾಂಪಸ್‌ನಲ್ಲಿಯೇ ಇರುತ್ತದೆ. ಪಠ್ಯಕ್ರಮದ ವಿಷಯಗಳನ್ನು ಪ್ರಾಯೋಗಿಕವಾಗಿ ಕಲಿಸುವ ತಾಣವಿದು. ಈ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಕಾಲೇಜಿನವರು ಕಿರು ಸಂದರ್ಶನವೊಂದನ್ನು ನಡೆಸುತ್ತಾರೆ. ಸಂದರ್ಶನದಲ್ಲಿ 12ನೇ ತರಗತಿಯ ಅಂಕಗಳಿಗಿಂತ ನಿಮ್ಮ ‘ಹಂಬಲ’ ಮತ್ತು ‘ಸೃಜನಶೀಲತೆ’ಗೆ ಹೆಚ್ಚು ಬೆಲೆ ಇರುತ್ತದೆ. ನೀವು ಶಾಲಾ ದಿನಗಳಲ್ಲಿ ಏನಾದರೂ ಸಣ್ಣ ವ್ಯಾಪಾರ ಮಾಡಿದ್ದರೆ ಅಥವಾ ಯೂಟ್ಯೂಬ್ ಚಾನೆಲ್ ನಡೆಸುತ್ತಿದ್ದರೆ ಅದನ್ನು ತಪ್ಪದೇ ಉಲ್ಲೇಖಿಸಿ; ಖಂಡಿತ ಆಯ್ಕೆಯಾಗುತ್ತೀರಿ.

ಪಠ್ಯಕ್ರಮದ ಪ್ರಮುಖ ಅಂಶಗಳೇನು?

ಆಧುನಿಕ ಉದ್ಯಮಶೀಲತೆ ಕೋರ್ಸ್‌ಗಳು ಈ ಕೆಳಗಿನ ನಾಲ್ಕು ಪ್ರಮುಖ ವಿಷಯಗಳ ಮೇಲೆ ಗಮನ ಕೇಂದ್ರೀಕರಿಸುತ್ತವೆ.

ಲೀನ್ ಸ್ಟಾರ್ಟ್‌ಅಪ್ ಮೆಥಡಾಲಜಿ: ಹಳೆಯ ಕಾಲದ 50 ಪುಟಗಳ ಬಿಸಿನೆಸ್ ಪ್ಲ್ಯಾನ್ ಬರೆಯುವ ಬದಲು, ಕೇವಲ ಒಂದು ಪುಟದ ‘ಬಿಸಿನೆಸ್ ಮಾಡೆಲ್ ಕ್ಯಾನ್ವಾಸ್’ ಬಳಸಿ ಉದ್ದಿಮೆಯನ್ನು ವೇಗವಾಗಿ ಮತ್ತು ಕಡಿಮೆ ಖರ್ಚಿನಲ್ಲಿ ಆರಂಭಿಸುವುದನ್ನು ಕಲಿಸಲಾಗುತ್ತದೆ.

ಸ್ಟಾರ್ಟ್‌ಅಪ್ ಫೈನಾನ್ಸ್ ಮತ್ತು ಈಕ್ವಿಟಿ: ಹೂಡಿಕೆದಾರರಿಂದ ಹಣ ಪಡೆಯುವುದು ಹೇಗೆ, ಕಂಪನಿಯ ಮಾಲೀಕತ್ವದ ಹಂಚಿಕೆ (ಈಕ್ವಿಟಿ) ಹೇಗೆ ನಡೆಯುತ್ತದೆ ಮತ್ತು ‘ಲೆಕ್ಕಾಚಾರ’ ಮಾಡುವುದು ಹೇಗೆ ಎಂಬುದನ್ನು ಇಲ್ಲಿ ವಿವರಿಸಲಾಗುತ್ತದೆ.

ಗ್ರೋತ್ ಹ್ಯಾಕಿಂಗ್ ಮತ್ತು ಡಿಜಿಟಲ್ ಮಾರ್ಕೆಟಿಂಗ್: ಸಾಮಾಜಿಕ ಜಾಲತಾಣಗಳು ಮತ್ತು ಡೇಟಾ ಅನಲಿಟಿಕ್ಸ್ ಬಳಸಿಕೊಂಡು ಕಡಿಮೆ ಬಜೆಟ್‌ನಲ್ಲಿ ಲಕ್ಷಾಂತರ ಗ್ರಾಹಕರನ್ನು ತಲುಪುವುದು ಹೇಗೆ ಎಂಬ ತಂತ್ರಗಳನ್ನು ಕಲಿಸಲಾಗುತ್ತದೆ.

ಬೌದ್ಧಿಕ ಆಸ್ತಿ ಹಕ್ಕು (ಇಂಟಲೆಕ್ಚುಯಲ್ ಪ್ರಾಪರ್ಟಿ- ಐಪಿ): ನಿಮ್ಮ ಐಡಿಯಾಗಳು ಮತ್ತು ಆವಿಷ್ಕಾರಗಳನ್ನು ರಕ್ಷಿಸಲು ಪೇಟೆಂಟ್ ಹಾಗೂ ಟ್ರೇಡ್‌ಮಾರ್ಕ್ ಕಾನೂನುಗಳ ಬಗ್ಗೆ ಜ್ಞಾನ ನೀಡುವುದು ಇದರ ಉದ್ದೇಶವಾಗಿರುತ್ತದೆ.

ಇವುಗಳ ಬಗ್ಗೆ ಗಮನವಿರಲಿ

ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುವ ಮುನ್ನ ಇವುಗಳನ್ನು ಗಮನಿಸಿ.

1. ಬೀಜಧನ (ಸೀಡ್ ಫಂಡಿಂಗ್): ನಿಮ್ಮ ಐಡಿಯಾವನ್ನು ಪ್ರಾಯೋಗಿಕವಾಗಿ ಜಾರಿಗೆ ತರಲು ಕಾಲೇಜು ಹಣಕಾಸಿನ ನೆರವು ನೀಡುತ್ತದೆಯೇ?

2. ಮಾರ್ಗದರ್ಶನ: ಈಗಾಗಲೇ ಯಶಸ್ವಿ ಕಂಪನಿಗಳನ್ನು ಕಟ್ಟಿದ ಉದ್ಯಮಿಗಳು ಅಲ್ಲಿ ಮಾರ್ಗದರ್ಶಕರಾಗಿದ್ದಾರೆಯೇ?

3. ನೆಟ್‌ವರ್ಕಿಂಗ್: ಹೂಡಿಕೆದಾರರನ್ನು ಭೇಟಿ ಮಾಡಲು ಕಾಲೇಜು ವೇದಿಕೆ ಒದಗಿಸುತ್ತದೆಯೇ?

ಬೇಡದ ಆಲೋಚನೆಯೇ? ಬರೆದಿಡಿ



ಸಮಾಧಾನ

ಡಾ. ಡಿ.ಎಂ. ಹೆಗಡೆ, ಆಪ್ತಸಮಾಲೋಚಕ

• **ನನಗೆ 25 ವರ್ಷ, ಬಿ.ಎ. ಮುಗಿಸಿ ಸ್ಪರ್ಧಾತ್ಮಕ ಪರೀಕ್ಷೆಗೆ ತಯಾರಿ ನಡೆಸುತ್ತಿದ್ದೇನೆ. ತಂದೆ ನನ್ನ ಓದಿನ ಮೇಲೆ ಅಪಾರವಾದ ನಂಬಿಕೆ ಇಟ್ಟುಕೊಂಡಿದ್ದಾರೆ. ಓದುವ ಹಂಬಲವಿದೆ. ಆದರೆ ಓದಿನ ಕಡೆ ಗಮನ ಕೊಡಲಾಗುತ್ತಿಲ್ಲ. ಇತ್ತೀಚೆಗೆ ಆತಂಕ, ಭಯ ಹೆಚ್ಚಾಗಿದೆ, ಕೀಳರಿಮೆಯಾಗುತ್ತಿದೆ. ಯಾವ ರೀತಿ ಬದುಕನ್ನು ಹಿಡಿತಕ್ಕೆ ತಂದುಕೊಳ್ಳಲಿ?**

ಚೇತನ ನಾರಾಯಣ, ಬೆಳಗಾವಿ

ಓದುವಾಗ ಯಾವ ಆಲೋಚನೆಗಳು ಬರುತ್ತವೆ ಎನ್ನುವುದನ್ನು ಗಮನಿಸಿ. ಕಣ್ಣುಮುಚ್ಚಿ ಕೆಲವು ನಿಮಿಷ ಅವೇ ಆಲೋಚನೆಗಳ ಜತೆ ಸಾಗಿ. ಕೆಲವೇ ನಿಮಿಷಗಳಲ್ಲಿ ಅವುಗಳ ತಾಕಲಾಟ ನಿಯಂತ್ರಣಕ್ಕೆ ಬರುತ್ತದೆ. ಪುನಃ ಓದಲು ಪ್ರಾರಂಭಿಸಿ. ನಿಮಗೆ ಬೇಡದ ಆಲೋಚನೆಗಳು ಬಂದಾಗ ಅವುಗಳನ್ನೆಲ್ಲ ಒಂದು ಡೈರಿಯಲ್ಲಿ ಬರೆದಿಡಿ.

ಕಾಮಪ್ರಚೋದಕ ವಿಡಿಯೊ ನೋಡುವುದಿದ್ದರೆ ಕಡಿಮೆ ಮಾಡಿ. ಸೋಷಿಯಲ್ ಮೀಡಿಯಾ ಅಕೌಂಟ್‌ಗಳನ್ನು ಡಿಲೀಟ್ ಮಾಡಿ. ಸಾಕಷ್ಟು ಬ್ಯಾಂಕ್ ಬ್ಯಾಲೆನ್ಸ್ ಆದ ಮೇಲೆ ಇಂಥ ಅಕೌಂಟ್‌ಗಳನ್ನು ಇಟ್ಟುಕೊಳ್ಳಬಹುದು. ದಿನಕ್ಕೆ ಎರಡು ಸಲ ತಣ್ಣೀರಿನ ಸ್ನಾನ ಮಾಡಿ. ಸ್ವಿಮಿಂಗ್ ಮಾಡಿ.

ಪ್ರತಿರಾತ್ರಿ ಮಲಗುವ ಹಾಗೂ ಬೆಳಿಗ್ಗೆ ಏಳುವ ಸಮಯವನ್ನು ಶಿಸ್ತಿನಿಂದ ಪಾಲಿಸಿ. ಹಿತಮಿತವಾದ ಸಮತೋಲಿತ ಆಹಾರವನ್ನು ಸೇವಿಸಿ. ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ಕನಿಷ್ಠ ಅರ್ಧಗಂಟೆ ವಾಕಿಂಗ್ ಹಾಗೂ ಅರ್ಧ ಗಂಟೆ ವ್ಯಾಯಾಮ ಮಾಡಿ. ದಿನಕ್ಕೆರಡು ಸಲ ಕನಿಷ್ಠ ಹತ್ತು ನಿಮಿಷಗಳಂತೆ ಧ್ಯಾನ ಮಾಡುವುದನ್ನು ಪ್ರಾರಂಭಿಸಿ. ಧ್ಯಾನದಿಂದ ಮನಸ್ಸು ಸಮಾಧಾನಗೊಳ್ಳುತ್ತದೆ. ತಂದೆಯ ನಂಬಿಕೆ ನಿಮಗೆ ಹೊರೆಯಾಗುವ ಬದಲು, ಅದು ನಿಮ್ಮ ‘ಶಕ್ತಿ’ಯಾಗಲಿ. ಹಾಗೆಯೇ ಮೊದಲು ನಿಮ್ಮ ಮೇಲೆ ನಂಬಿಕೆಯನ್ನು ಬೆಳೆಸಿಕೊಳ್ಳಿ. ನಿಮ್ಮ ಸಹಜ ಆಸೆ ಹಾಗೂ ಸಾಮರ್ಥ್ಯಕ್ಕಿಂತಲೂ ಹೆಚ್ಚಿನದಾದ ಗುರಿಯನ್ನು ಇಟ್ಟುಕೊಳ್ಳಬೇಡಿ.

ಪ್ರತಿರಾತ್ರಿ ಮಲಗುವ ಮೊದಲು ಕಣ್ಮುಚ್ಚಿ ಕುಳಿತುಕೊಳ್ಳಿ. ಆರೇಳು ಸಲ ದೀರ್ಘವಾಗಿ ಉಸಿರಾಡಿ. ನಂತರ ನೀವು ಸರ್ಕಾರಿ ಅಧಿಕಾರಿಯಾದಂತೆ, ಆಫೀಸಿನಲ್ಲಿ ನೀವು ನಿಮ್ಮ ಕೆಲಸವನ್ನು ಮಾಡುತ್ತಿರುವಂತೆ, ನಿಮ್ಮ ಆಫೀಸಿನವರು ನಿಮ್ಮನ್ನು ಗೌರವಿಸಿದಂತೆ ಪದೇ ಪದೇ ಅಂದುಕೊಳ್ಳಿ. ಓದುವಾಗ ಹೆಚ್ಚಿನದನ್ನು ಘಟನೆಗಳಾಗಿಯೂ ಚಿತ್ರಗಳಾಗಿಯೂ ನಾಟಕೀಯ ಸನ್ನಿವೇಶಗಳಾಗಿಯೂ ಅರ್ಥಮಾಡಿಕೊಳ್ಳಿ. ಅವು ಸುಲಭವಾಗಿ ನೆನಪಿನಲ್ಲಿ ಇರುತ್ತವೆ. ನಿಮ್ಮನ್ನು ಬೇರೆಯವರೊಂದಿಗೆ ಹೋಲಿಸಿಕೊಳ್ಳುವುದು ತಪ್ಪು. ಪ್ರತಿಯೊಬ್ಬರಿಗೂ ಅವರದ್ದೇ ಆದ ಸಾಮರ್ಥ್ಯ ಇರುತ್ತದೆ. ಚಿರತೆಯ ಓಡುವ ಸಾಮರ್ಥ್ಯವನ್ನು ಆನೆಯ ಶಕ್ತಿಯ ಜೊತೆಗೆ ಹೋಲಿಸಿ, ಯಾರು ಹೆಚ್ಚು ಶಕ್ತಿವಂತರು ಎಂದು ಹೇಳುವುದು ಸಾಧ್ಯವಿಲ್ಲ. ಹಾಗೆಯೇ ನಿಮ್ಮ ವ್ಯಕ್ತಿತ್ವದ ವಿಶೇಷತೆಯನ್ನು ಸಲ್ಮಾನ್ ಖಾನ್ ವ್ಯಕ್ತಿತ್ವದ ಜೊತೆಗೆ ಹೋಲಿಸುವುದು ತಪ್ಪು. ಜಾಕಿಚಾನ್ ಎಂದಾಗ ನಿಮಗೆ ಅಮಿತಾಭ್ ಬಚ್ಚನ್ ನೆನಪಾಗಲು ಸಾಧ್ಯವಿಲ್ಲ!

ಬದುಕಿನ ಬಗ್ಗೆ ಅಪಾರವಾದ ನಿರೀಕ್ಷೆಗಳನ್ನು ಇಟ್ಟುಕೊಳ್ಳಬೇಡಿ. ಬದುಕು ಬಂದಂತೆ ಸ್ವೀಕರಿಸಿ. ಒಮ್ಮೆ ನಪಾಸಾದರೆ ಕುಗ್ಗಬೇಡಿ. ಮತ್ತೆ ಪಾಸಾಗುವತ್ತ ಪ್ರಯತ್ನಿಸಿ. ವಿಫಲವಾದ ಪ್ರೀತಿಯ ಬಗ್ಗೆ ಆಲೋಚಿಸಬೇಡಿ. ಮುಂದೆ ಸಿಗಲಿರುವ ಚೆಂದನೆಯ ಪ್ರೀತಿಯ ಬಗ್ಗೆ ಉತ್ಸುಕರಾಗಿ. ಅದನ್ನು ಸ್ವೀಕರಿಸುವುದಕ್ಕಾಗಿ ನಿಮ್ಮ ವ್ಯಕ್ತಿತ್ವವನ್ನು ಹುರಿಗೊಳಿಸಿಕೊಳ್ಳಿ. ಜೀವನದಲ್ಲಿ ಒಂದೊಂದೇ ಮೆಟ್ಟಿಲೇರಿ ಹೋಗಬೇಕು. ಅದು ಬದುಕಿನ ರೀತಿ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ — ಸಮಾಜವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೆಗಳು

ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಉತ್ತರಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಪೂರ್ಣ ಉತ್ತರವನ್ನು ಬರೆಯಿರಿ

1) ಭಾರತದಲ್ಲಿ ಅರಣ್ಯ ಹೊಂದಿರುವ ಪ್ರದೇಶದಲ್ಲಿ ಕರ್ನಾಟಕದ ಸ್ಥಾನ ಯಾವುದು?
ಎ) 23 ಬಿ) 13
ಸಿ) 26 ಡಿ) 17
ಉತ್ತರ:– (ಬಿ) 13

2) ಸ್ವಸಹಾಯ ಸಮೂಹಗಳ ರಚನೆಯ ಉದ್ದೇಶ..........
ಎ) ನಗರಾಭಿವೃದ್ಧಿ ಬಿ) ಮಹಿಳಾ ಸಬಲೀಕರಣ
ಸಿ) ಕೈಗಾರಿಕೀರಣ ಡಿ) ವಿದೇಶಿ ವ್ಯಾಪಾರಕ್ಕೆ ಉತ್ತೇಜನ
ಉತ್ತರ:– (ಬಿ) ಮಹಿಳಾ ಸಬಲೀಕರಣ

3). ....ಅವರು ಭಾರತ ರಾಷ್ಟ್ರೀಯ ಕಾಂಗ್ರೆಸ್ ಅಧಿವೇಶನದ ಮೊಟ್ಟಮೊದಲ ಮಹಿಳಾ ಅಧ್ಯಕ್ಷೆ ಆಗಿದ್ದರು.
ಎ) ಸರೋಜಿನಿ ನಾಯ್ಡು ಬಿ) ವಿಜಯಲಕ್ಷ್ಮಿ ಪಂಡಿತ್
ಸಿ) ಲಕ್ಷ್ಮಿ ಸೆಹಗಲ್ ಡಿ) ಅನಿಬೆಸೆಂಟ್
ಉತ್ತರ:– (ಡಿ) ಅನಿಬೆಸೆಂಟ್

4) ಭಾರತದಲ್ಲಿಯೇ ಅತ್ಯಂತ ಎತ್ತರವಾದ ವಿವಿಧೋದ್ದೇಶ ನದಿ ಕಣಿವೆ ಯೋಜನೆ
ಎ) ಭಾಕ್ರಾ–ನಂಗಲ್ ಯೋಜನೆ ಬಿ) ಕೋಸಿ ಯೋಜನೆ
ಸಿ) ದಾಮೋದರ ನದಿಕಣಿವೆ ಯೋಜನೆ
ಡಿ) ತುಂಗಭದ್ರಾ ಯೋಜನೆ
ಉತ್ತರ:– ಭಾಕ್ರಾನಂಗಲ್ ಯೋಜನೆ

5) ಭಾರತದಿಂದ ಅಭ್ರಕದ ರಫ್ತು ಪ್ರಮಾಣ ಕಡಿಮೆಯಾಗುತ್ತಿರಲು ಕಾರಣ................
ಎ) ಅಭ್ರಕ ನಿಕ್ಷೇಪಗಳು ಖಾಲಿಯಾಗುತ್ತಿವೆ
ಬಿ) ಚೀನಾ ಅತ್ಯಂತ ಹೆಚ್ಚು ಅಭ್ರಕ ತಯಾರಿಸುತ್ತಿದೆ.
ಸಿ) ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ
ಡಿ) ಅಭ್ರಕದ ಬೆಲೆ ದುಬಾರಿಯಾಗುತ್ತಿದೆ
ಉತ್ತರ:– (ಸಿ) ಅಭ್ರಕದ ಬದಲಿ ವಸ್ತುಗಳು ದೊರೆಯುತ್ತಿವೆ

6) ಪ್ರಾಥಮಿಕ ಶಿಕ್ಷಣದ ಅಭಿವೃದ್ಧಿಗಾಗಿ ಎಲ್ಲ ಪ್ರಾಥಮಿಕ ಶಾಲೆಗಳಲ್ಲಿಯೂ ಶಿಕ್ಷಣ ಶುಲ್ಕವನ್ನು ರದ್ದು ಮಾಡಲಾಯಿತು. ಹೆಣ್ಣುಮಕ್ಕಳ ವಿದ್ಯಾಭ್ಯಾಸದ ಏಳಿಗೆಗೆ ನೆರವು ಸಿಕ್ತು. ಮೈಸೂರು ವಿಶ್ವವಿದ್ಯಾನಿಲಯವು ಸ್ಥಾಪಿಸಲಾಯಿತು,. ವಿದೇಶ ವಿದ್ಯಾಭ್ಯಾಸಕ್ಕೆ ಹೋಗುವವರಿಗೆ ವಿದ್ಯಾರ್ಥಿ ವೇತನ ನೀಡುವ ಪದ್ಧತಿಯನ್ನು ಜಾರಿಗೆ ತರಲಾಯಿತು. ಬೆಂಗಳೂರಿನಲ್ಲಿ ಭಾರತೀಯ ವಿಜ್ಞಾನ ಸಂಸ್ಥೆಯನ್ನು ಟಾಟಾರವರ ಬೆಂಬಲದಿಂದ ಸ್ಥಾಪಿಸಲಾಯಿತು.
ಮೇಲಿನ ಟಿಪ್ಪಣಿ ಯಾರಿಗೆ ಸರಿಹೊಂದುತ್ತದೆ?
ಎ) ನಾಲ್ವಡಿ ಕೃಷ್ಣರಾಜ ಒಡೆಯರು
ಬಿ) ಜಯಚಾಮರಾಜ ಒಡೆಯರ್
ಸಿ) ರಾಜ ಒಡೆಯರ್ ಡಿ) ಮೇಲಿನ ಯಾರೂ ಅಲ್ಲ
ಉತ್ತರ:– (ಎ) ನಾಲ್ವಡಿ ಕೃಷ್ಣರಾಜ ಒಡೆಯರು

7) ಗಿರೀಶನು ಖರೀದಿಯಲ್ಲಿ ತನಗಾದ ಅನ್ಯಾಯದ ವಿರುದ್ಧ ರಾಜ್ಯ ಗ್ರಾಹಕ ಆಯೋಗಕ್ಕೆ ದೂರು ಸಲ್ಲಿಸಿರುವನು, ಅವನಿಗಾದ ಅನ್ಯಾಯದ ಮೌಲ್ಯವು............
ಎ) ಒಂದು ಕೋಟಿ ರೂಪಾಯಿಗಳಿಗಿಂತ ಹೆಚ್ಚು
ಬಿ) ಇಪತ್ತು ಲಕ್ಷದಿಂದ ಒಂದುಕೋಟಿ ರೂಪಾಯಿಗಳು
ಸಿ) ಹತ್ತು ಲಕ್ಷ ರೂಪಾಯಿಗಳಿಗಿಂತ ಕಡಿಮೆ
ಡಿ) ಹತ್ತು ಲಕ್ಷದಿಂದ ಇಪ್ಪತ್ತು ಲಕ್ಷ ರೂಪಾಯಿಗಳು
ಉತ್ತರ:– (ಬಿ) ಇಪತ್ತು ಲಕ್ಷದಿಂದ ಒಂದು ಕೋಟಿ ರೂಪಾಯಿಗಳು

8) ಭಾರತದಲ್ಲಿ ಮೊದಲ ವೈಸರಾಯ್ ಆಗಿ ನೇಮಕವಾದವರು ಯಾರು?
ಎ) ಲಾರ್ಡ್ ಕ್ಯಾನಿಂಗ್ ಬಿ) ಲಾರ್ಡ್ ಮಿಂಟೊ
ಸಿ) ಲಾರ್ಡ್ ವಾರನ್ ಹೇಸ್ಟಿಂಗ್
ಡಿ) ಲಾರ್ಡ್ ಮೆಟ್ಕಾಫ್
ಉತ್ತರ:–(ಎ) ಲಾರ್ಡ್ ಕ್ಯಾನಿಂಗ್

9) ಭಾರತದಲ್ಲಿ ಮೊಟ್ಟಮೊದಲು ಆಧುನಿಕ ಯೋಜನೆಯ ಬಗ್ಗೆ ಚಿಂತಿಸಿ ಅದರ ಬಗ್ಗೆ ಪುಸ್ತಕವೊಂದನ್ನು ಬರೆದವರು ಯಾರು?
ಎ) ಡಾ॥ ಎಂ. ಎಸ್. ಸ್ವಾಮಿನಾಥನ್
ಬಿ) ಜವಾಹರ್ ಲಾಲ್ ನೆಹರು
ಸಿ) ಇಂದಿರಾ ಗಾಂಧಿ
ಡಿ) ಸರ್ ಎಂ. ವಿಶ್ವೇಶ್ವರಯ್ಯನವರು.
ಉತ್ತರ:– (ಡಿ) ಸರ್ ಎಂ. ವಿಶ್ವೇಶ್ವರಯ್ಯನವರು

10) ಭಾರತದಲ್ಲಿ ಸ್ಥಾಪಿತವಾದ ಮೊದಲ ರಾಷ್ಟ್ರೀಯ ಉದ್ಯಾನವನ ಯಾವುದು?
ಎ) ಕಾಜಿರಂಗ ನ್ಯಾಷನಲ್ ಪಾರ್ಕ್–ಅಸ್ಸಾಂ.
ಬಿ) ಹಜಾರಿಭಾಗ ನ್ಯಾಷನಲ್ ಪಾರ್ಕ್– ಬಿಹಾರ.
ಸಿ) ಗಿರ್ ನ್ಯಾಷನಲ್ ಪಾರ್ಕ್– ಗುಜರಾತ.
ಡಿ) ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನ– ಉತ್ತರಾಂಚಲ
ಉತ್ತರ:–(ಡಿ) ಜಿಮ್ ಕಾರ್ಬೆಟ್ ರಾಷ್ಟ್ರೀಯ ಉದ್ಯಾನ– ಉತ್ತರಾಂಚಲ

11) ಮಕ್ಕಳ ಸಹಾಯವಾಣಿ ಸಂಖ್ಯೆ ಯಾವುದು?
ಎ) 1089 ಬಿ) 1098
ಸಿ) 101 ಡಿ) 108
ಉತ್ತರ:–(ಬಿ) 1098

12) ಹೊಂದಿಸಿ ಬರೆಯಿರಿ:–

ಪಟ್ಟಿ–1	ಪಟ್ಟಿ–2
(1). ನೀಲಿ ಕ್ರಾಂತಿ	ಎ) ಮೀನುಗಳ ಉತ್ಪಾದನೆ
(2). ಹಳದಿ ಕ್ರಾಂತಿ	ಬಿ) ಎಣ್ಣೆ ಬೀಜಗಳ ಉತ್ಪಾದನೆ
(3) ಬಿಳಿ ಕ್ರಾಂತಿ	ಸಿ) ಹಾಲು ಉತ್ಪಾದನೆ
(4). ಬೆಳ್ಳಿ ಕ್ರಾಂತಿ	ಡಿ) ಮಾಂಸದ ಉತ್ಪಾದನೆ
(5). ಬಂಗಾರ ಕ್ರಾಂತಿ	ಇ) ಹಣ್ಣು/ಹೂಗಳ ಉತ್ಪಾದನೆ
(6). ಕೆಂಪು ಕ್ರಾಂತಿ	ಎಫ್) ಮೊಟ್ಟೆಗಳ ಉತ್ಪಾದನೆ

ಉತ್ತರ:– 1–ಎ 2–ಬಿ 3–ಸಿ 4–ಎಫ್ 5–ಇ 6–ಡಿ

ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ

13) ದಸ್ತಕ್ ಅನ್ನು ದುರುಪಯೋಗಪಡಿಸಿಕೊಂಡ ಪರಿಣಾಮ ಯಾವ ಯುದ್ಧಗಳು ನಡೆದವು?
ಉತ್ತರ:– ಪ್ಲಾಸಿ ಮತ್ತು ಬಕ್ಸಾರ್ ಕದನಗಳು

14) ಭಾರತದಲ್ಲಿ ಮಹಲ್ವಾರಿ ಪದ್ಧತಿ ಪ್ರಯೋಗಿಸಿದವರು ಯಾರು?
ಉತ್ತರ:– ಆರ್.ಎಂ. ಬರ್ಡ್ ಮತ್ತು ಜೇಮ್ಸ್ ಥಾಮ್ಸನ್

15) ಮೈಸೂರಿಗೆ ಬಂದಿದ್ದ ವಿವೇಕಾನಂದರಿಗೆ ಆಶ್ರಯ ನೀಡಿ ಅವರು ಚಿಕಾಗೋ ಸರ್ವಧರ್ಮ ಸಮ್ಮೇಳನಕ್ಕೆ ಹೋಗಲು ಸಹಾಯ ಮಾಡಿದವರು ಯಾರು?
ಉತ್ತರ:– ಚಾಮರಾಜೇಂದ್ರ ಒಡೆಯರ್

16) ಕರಿಮೆಣಸಿನ ಆಸೆಯಿಂದ ವಿದೇಶಿಯರು ನಡೆಸಿದ್ದ ನಿರಂತರ ಆಕ್ರಮಣವನ್ನು ಮತ್ತು ಸಾಮ್ರಾಜ್ಯದಾಹವನ್ನು ಮೆಟ್ಟಿನಿಂತ ವೈನಾಡ್ ಅರಸ ಯಾರು?
ಉತ್ತರ:– ಮಾರ್ತಾಂಡ ವರ್ಮ

17) ಎರಡನೆಯ ಕಾರ್ನಾಟಿಕ್ ಯುದ್ಧವು ಯಾವ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು?
ಉತ್ತರ:– ಎರಡನೆಯ ಕಾರ್ನಾಟಿಕ್ ಯುದ್ಧವು ‘ಪಾಂಡಿಚೇರಿ ಒಪ್ಪಂದ'ದೊಂದಿಗೆ ಮುಕ್ತಾಯವಾಯಿತು.

18) 1724ರಲ್ಲಿ ಹೈದರಾಬಾದ್ ಸಂಸ್ಥಾನವನ್ನು ಸ್ಥಾಪಿಸಿದನು ಯಾರು?
ಉತ್ತರ:– ‘ಅಸಫ್ ಜಾ’

(ಮುಂದುವರಿಯುವುದು)

ಪಿಯುಸಿ ಪರೀಕ್ಷೆ ದಿಕ್ಸೂಚಿ — PHYSICS

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

REVISION: MODEL QUESTIONS

30. Derive lens maker's formula for convex lens placed in an optical medium
Ans:- This is for the better understanding:

Lens Maker's Formula:

The formula giving relation between the focal length (f) of the lens, refractive index of the material of the lens (n) and the radii of curvature of its surface (R&R) is known as Lens maker's formula.

The manufacturers of the lenses use this relation to design the lens of a given focal length and hence it is called so.

Assumptions made to derive Lens maker's formula:


i] The lens is thin and all the distances are measured from the optical centre of the lens.
ii] The aperture of the lens is small.
iii] The object is a point object and lies on the principal axis.
iv] The angle made by incident ray and refracted ray with the principal axis are small.

Sign Conventions:

i] All the distances are measured from the optical centre of the lens.
ii] Distances measured in the direction opposite to the direction of propagation of incident light are taken as negative.

Lens Maker's Formula for convex lens placed in an optical medium -


Consider a lens made of a material of absolute refractive index n_2. This lens is placed in a medium of absolute refractive index n_1 ($n_1 < n_2$). The lens is bounded by two spherical refracting surfaces XP_1Y and XP_2Y. C_1 and C_2 be their centres of curvature and R_1 and R_2 be their radii of curvature respectively. C is the optical centre of the lens as shown in the figure below -



Step- 1: Refraction at Surface XP_1Y: Let O be a point object lying in the rarer medium on the principal axis of the refracting surface XP_1Y. The incident ray OA after refraction at A bends towards the normal AC_1 and meets the principal axis at I_1 if the second surface XP_2Y were not present. So I_1 is the real image of the object O.


Since object lies in the rarer medium, so we have

$$-\frac{n_2}{u}+\frac{n_1}{v_1}=\frac{n_2-n_1}{R_1}$$



Step- 2: Refraction at Surface XP_2Y: In fact, the ray AB refracted by the first surface XP_1Y is refracted at B by the second surface XP_2Y and it finally meets the principal axis at I. The point I acts as a virtual object placed in the denser medium for the spherical surface XP_2Y. Now it is the situation, when object is placed in the denser medium and image is formed in the rarer medium.

$$\therefore\ -\frac{n_2}{v_1}+\frac{n_1}{v}=\frac{n_2-n_2}{R_2}$$



$$\therefore -\frac{n_2}{v_1}+\frac{n_1}{v}=\frac{n_1-n_2}{R_2}$$

$$\Rightarrow -\frac{n_2}{v_1}+\frac{n_1}{v}=-\frac{(n_2-n_1)}{R_2}\Rightarrow -\frac{n_1}{u}+\frac{n_1}{v}=(n_2-n_1)\left(\frac{1}{R_1}-\frac{1}{R_2}\right)$$

$$\Rightarrow -\frac{1}{u}+\frac{1}{v}=\left(\frac{n_2}{n_1}-1\right)\left(\frac{1}{R_1}-\frac{1}{R_2}\right)$$

But $\frac{n_2}{n_1}$ = n, relative refractive index of the lens w.r.t. the rarer medium.

$$\therefore -\frac{1}{u}+\frac{1}{v}=(n-1)\left(\frac{1}{R_1}-\frac{1}{R_2}\right) \text{.........(i)}$$

If objects is at infinity, the image is formed at the principal focus of the lens i.e., if u = ∞, v = f.
Hence eqn. (vii) becomes

$$-\frac{1}{\infty}+\frac{1}{f}=(n-1)\left(\frac{1}{R_1}-\frac{1}{R_2}\right)$$

$$\text{(or) } \frac{1}{f}=(n-1)\left(\frac{1}{R_1}-\frac{1}{R_2}\right) \qquad \left(\because \frac{1}{\infty}=0\right) \text{........(ii)}$$

Eqn.(ii) represents Lens maker's formula.

ಚಿಟಿಕೆ ಸುದ್ದಿ

ಮೂರು ಮಕ್ಕಳನ್ನು ಕೊಂದ ತಾಯಿ

ಬಾದಾಮಿ (ಬಾಗಲಕೋಟೆ ಜಿಲ್ಲೆ): ಸಮೀಪದ ಹಿರೇಮುಚ್ಚಳಗುಡ್ಡ ಗ್ರಾಮದಲ್ಲಿ ತಾಯಿಯೊಬ್ಬರು ಭಾನುವಾರ ಮೂರು ಮಕ್ಕಳಿಗೆ ನೇಣು ಹಾಕಿ ತಾನೂ ವಿಷ ಸೇವಿಸಿ ಆತ್ಮಹತ್ಯೆಗೆ ಯತ್ನಿಸಿದ ಘಟನೆ ನಡೆದಿದೆ.

ರೂಪಾ ಹನುಮಂತ ಗೌಡರ (28) ಎಂಬ ಮಹಿಳೆ ತನ್ನ ಮಕ್ಕಳಾದ ಸಮೃದ್ಧಿ ಹನುಮಂತಪ್ಪ ಗೌಡರ (5), ಪ್ರೀತಂ ಹನುಮಂತಪ್ಪ ಗೌಡರ (4), ಸುಕ್ಷಿತ ಹನುಮಂತಪ್ಪ ಗೌಡರ (2) ಇವರಿಗೆ ಮನೆಯಲ್ಲಿಯೇ ನೇಣು ಹಾಕಿ ಸಾಯಿಸಿದ್ದಾಳೆ.

'ತಾಯಿಯ ಜೀವಕ್ಕೆ ಅಪಾಯವಿಲ್ಲ, ಬಾಗಲಕೋಟೆ ಖಾಸಗಿ ಆಸ್ಪತ್ರೆಗೆ ಸೇರಿಸಲಾಗಿದೆ. ಅತ್ತೆ ಸೊಸೆ ನಡುವೆ ನಡೆದ ಜಗಳವೇ ಘಟನೆಗೆ ಕಾರಣ ಎನ್ನಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಒಪಿಎಸ್: ಸಮಾವೇಶ ಶೀಘ್ರ'

ಗದಗ: 'ಹಳೇ ಪಿಂಚಣಿ ಯೋಜನೆ (ಒಪಿಎಸ್) ಮರುಜಾರಿಗೆ ಆಗ್ರಹಿಸಿ ಬೃಹತ್ ಸಮಾವೇಶ ನಡೆಸಲು ನೌಕರರೊಂದಿಗೆ ಚರ್ಚಿಸಿ, ನಿರ್ಧರಿಸಲಾಗುವುದು' ಎಂದು ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಸಿ.ಎಸ್.ಷಡಾಕ್ಷರಿ ಹೇಳಿದರು.

ನಗರದಲ್ಲಿ ಭಾನುವಾರ ನಡೆದ ರಾಜ್ಯ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿದ ಅವರು, 'ರಾಜ್ಯದಲ್ಲಿ 2.93 ಲಕ್ಷ ಮಂದಿ ಎನ್‌ಪಿಎಸ್ ನೌಕರರು ಇದ್ದಾರೆ. ಒಪಿಎಸ್‌ಗಾಗಿ ಸರ್ಕಾರ ಶೇ 10 ಮೊತ್ತ ನೀಡಿದರೆ ವರ್ಷಕ್ಕೆ ₹3 ಸಾವಿರ ಕೋಟಿ ಹೊರೆ ಆಗುತ್ತದೆ. ಆದರೆ, ರಾಜ್ಯದಲ್ಲಿ 2.73 ಲಕ್ಷ ಸರ್ಕಾರಿ ಹುದ್ದೆಗಳು ಖಾಲಿ ಇದ್ದು, ಅದರಿಂದ ಸುಮಾರು ₹2,500 ಕೋಟಿ ಉಳಿತಾಯ ಆಗುತ್ತಿದೆ. ಎನ್‌ಪಿಎಸ್ ಕಮಿಟಿ ಅಧ್ಯಕ್ಷರಾದ ಉಮಾ ಮಹಾದೇವನ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಈ ಬಗ್ಗೆ ತಿಳಿಸಿಕೊಡಲಾಗಿದೆ' ಎಂದರು. 'ಒಪಿಎಸ್ ಜಾರಿಗೆ ಆಗ್ರಹಿಸಿ ಎನ್‌ಪಿಎಸ್ ನೌಕರರು ಪ್ರತಿಭಟನೆ ಆಯೋಜನೆಗೆ ಒತ್ತಡ ಹೇರುತ್ತಿರುವ ವಿಷಯವನ್ನು ಸಿಎಂ ಗಮನಕ್ಕೂ ತರಲಾಗಿದೆ' ಎಂದರು.

ಉಕ್ಕಲಿಯಲ್ಲಿ ಲಘು ಭೂಕಂಪನ

ವಿಜಯಪುರ: ಬಸವನ ಬಾಗೇವಾಡಿ ತಾಲ್ಲೂಕಿನ ಉಕ್ಕಲಿ ಗ್ರಾಮ ವ್ಯಾಪ್ತಿಯಲ್ಲಿ ಭಾನುವಾರ ಮಧ್ಯಾಹ್ನ 3.58ಕ್ಕೆ ಲಘು ಭೂಕಂಪನವಾಗಿದೆ. ರಿಕ್ಟರ್ ಮಾಪಕದಲ್ಲಿ 2.8 ತೀವ್ರತೆ ದಾಖಲಾಗಿದೆ ಎಂದು ಕರ್ನಾಟಕ ರಾಜ್ಯ ನೈಸರ್ಗಿಕ ವಿಕೋಪ ನಿರ್ವಹಣ ಕೇಂದ್ರ (ಕೆಎಸ್‌ಎನ್‌ಡಿಎಂಸಿ) ತಿಳಿಸಿದೆ.

'ಭೂಕಂಪನದಿಂದ ಭಯಭೀತರಾಗಿ ಮನೆಯಿಂದ ಹೊರಗೆ ಓಡಿ ಬಂದೆವು. ಭೂಮಿ ಒಳಗಿನಿಂದ ಕಂಪನ ಮತ್ತು ತೀವ್ರವಾದ ಶಬ್ದ ಹೊಮ್ಮಿತು' ಎಂದು ಗ್ರಾಮಸ್ಥರು ತಿಳಿಸಿದ್ದಾರೆ.

ನಾಗಮಣಿ ರಾವ್‌ಗೆ 'ಬಿ.ಎಂ.ಶ್ರೀ. ಪ್ರತಿಷ್ಠಾನ ಪ್ರಶಸ್ತಿ'



ಬೆಂಗಳೂರು: ಬಿ.ಎಂ.ಶ್ರೀ ಪ್ರತಿಷ್ಠಾನ ನೀಡುವ 2026ನೇ ಸಾಲಿನ 'ವಿ. ನಾಗರಾಜರಾವ್ ಸಮೂಹ ಮಾಧ್ಯಮ ಪ್ರಶಸ್ತಿ'ಗೆ ಪತ್ರಕರ್ತೆ ನಾಗಮಣಿ ಎಸ್. ರಾವ್ ಅವರು ಆಯ್ಕೆಯಾಗಿದ್ದಾರೆ. 'ಪ್ರಜಾವಾಣಿ'ಯ ಭಾನುವಾರದ ಸಂಚಿಕೆಯಲ್ಲಿ ಪ್ರಕಟವಾದ ಈ ಸುದ್ದಿಯಲ್ಲಿ ಅವರ ಬದಲು ಬೇರೆಯವರ ಭಾವಚಿತ್ರ ತಪ್ಪಾಗಿ ಪ್ರಕಟವಾಗಿತ್ತು.

'ಎಸ್‌ಟಿಗೆ ಕುರುಬರು: ಶಿಫಾರಸು'

ಸಿದ್ದರಾಮನಂದಪುರಿ ಸ್ವಾಮೀಜಿ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಸಿಎಂ

ಪ್ರಜಾವಾಣಿ ವಾರ್ತೆ

ರಾಯಚೂರು: 'ಕುರುಬ ಸಮಾಜವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸುವಂತೆ ಈಗಾಗಲೇ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಕೇಂದ್ರ ಕೆಲವು ಮಾಹಿತಿ ಕೇಳಿತ್ತು. ಪುನಃ ಸ್ಪಷ್ಟೀಕರಣ ಸಹಿತ ಮತ್ತೆ ಕೇಂದ್ರಕ್ಕೆ ಶಿಫಾರಸು ಮಾಡಿ ಕಳಿಸಲಾಗಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ದೇವದುರ್ಗ ತಾಲ್ಲೂಕಿನ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ತಿಂಥಣಿ ಬ್ರಿಜ್ ಶಾಖಾ ಮಠದಲ್ಲಿ ಭಾನುವಾರ ಸಿದ್ದರಾಮನಂದಪುರಿ ಸ್ವಾಮೀಜಿ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

> ನಾನು ಅಧಿಕಾರದ ಹಿಂದೆ ಬಿದ್ದವನಲ್ಲ. ಹೋರಾಟ ಮಾಡಿಕೊಂಡು ಬಂದವನು. ನನ್ನ ಶಕ್ತಿ ಇರುವ ತನಕ ರಾಜಕೀಯ ಮಾಡುತ್ತೇನೆ. ಧ್ವನಿಯಿಲ್ಲದವರಿಗೆ ಧ್ವನಿಯಾಗುವ ಕೆಲಸ ಮಾಡುತ್ತೇನೆ
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

'ಬೀದರ್, ಕಲಬುರಗಿ, ಯಾದಗಿರಿ ಜಿಲ್ಲೆಗಳ ಗೊಂಡ ಕುರುಬ ಸಮುದಾಯವನ್ನು ಉಲ್ಲೇಖಿಸಿ ಕಳುಹಿಸಿದ್ದೆ. ರಾಜ್ಯ ಸರ್ಕಾರದ ಕೈಯಲ್ಲಿದ್ದರೆ ಆಗಲೇ ಎಸ್‌ಟಿಗೆ ಸೇರಿಸಿ ಬಿಡುತ್ತಿದ್ದೆ' ಎಂದು ತಿಳಿಸಿದರು.

'ಜಾತಿ ಗಣತಿ ವರದಿ ಶಿಫಾರಸು ಮಾಡಿಕೊಟ್ಟ ಒಂದು ತಿಂಗಳಲ್ಲೇ ಬಿಡುಗಡೆ ಮಾಡಲಾಗುವುದು. ಸರ್ಕಾರಕ್ಕೆ ವರದಿ ಸಲ್ಲಿಕೆಯಾದ ನಂತರ ಚರ್ಚೆ ಮಾಡಿ ಅಂಗೀಕಾರ ಮಾಡಲಾಗುವುದು. ಜಾತಿ ಗಣತಿ ಬಿಡುಗಡೆಗೆ ಗರಿಷ್ಠ ಅಂದರೆ ಎರಡು ತಿಂಗಳಾಗಬಹುದು ಅಷ್ಟೇ' ಎಂದರು.



ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಕಾಗಿನೆಲೆ ಮಹಾಸಂಸ್ಥಾನ ಕನಕ ಗುರುಪೀಠದ ತಿಂಥಣಿ ಬ್ರಿಜ್ ಶಾಖಾ ಮಠದಲ್ಲಿ ಭಾನುವಾರ ಶ್ರೀ ಸಿದ್ದರಾಮನಂದಪುರಿ ಸ್ವಾಮೀಜಿ ಪುಣ್ಯಾರಾಧನೆ ಕಾರ್ಯಕ್ರಮದಲ್ಲಿ ಶ್ರೀಗಳ ಸಮಾಧಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಪುಷ್ಪನಮನ ಸಲ್ಲಿಸಿದರು

'ವಿಕಸಿತ ಭಾರತ ಮಾತಿಗೆ ಸೀಮಿತ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಇಡೀ ಬಜೆಟ್ ತುಂಬ ವಿಕಸಿತ ಭಾರತದ ಬಗೆಗೆ ಪ್ರಸ್ತಾಪವಿದೆ. ಅದು ಬರೀ ಮಾತಿನಲ್ಲಿದೆ. ಅದನ್ನು ಕೃತಿಗೆ ಇಳಿಸುವ ಯಾವುದೇ ಯೋಜನೆಗಳಿಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಭಾನುವಾರ ಟೀಕಿಸಿದರು.

ಕೇಂದ್ರ ಬಜೆಟ್ ಕುರಿತು ಕಲಬುರಗಿ ವಿಮಾನ ನಿಲ್ದಾಣದಲ್ಲಿ ಸುದ್ದಿಗೋಷ್ಠಿಯಲ್ಲಿ ಭಾನುವಾರ ಪ್ರತಿಕ್ರಿಯಿಸಿದ ಅವರು, 'ಬೆಂಗಳೂರು–ಮುಂಬೈ, ಬೆಂಗಳೂರು–ಪುಣೆ, ಬೆಂಗಳೂರು–ಮಂಗಳೂರು ಹೈಸ್ಪೀಡ್ ರೈಲು ಕೇಳಿದ್ದೆವು. ಬೆಂಗಳೂರು–ಚೆನ್ನೈ ಬದಲು ಬೆಂಗಳೂರು–ಮಂಗಳೂರು–ಮುಂಬೈ ಹೈಸ್ಪೀಡ್ ರೈಲು ಮಾರ್ಗ ಮಾಡಿದ್ದರೆ ರಾಜ್ಯಕ್ಕೆ ಹೆಚ್ಚು ಅನುಕೂಲವಾಗುತ್ತಿತ್ತು' ಎಂದರು.

'ಕಲ್ಯಾಣ ಕರ್ನಾಟಕಕ್ಕೆ 371 (ಜೆ) ಅಡಿ ₹5 ಸಾವಿರ ಕೋಟಿ ಮ್ಯಾಚಿಂಗ್ ಗ್ರ್ಯಾಂಟ್, ರಾಯಚೂರಿಗೆ ಏಮ್ಸ್, ಕಬ್ಬು, ತೊಗರಿ, ಬೇಳೆಕಾಳುಗಳಿಗೆ ಆರ್ಥಿಕ ನೆರವು ಕೇಳಿದ್ದೆವು. ಅದಕ್ಕೂ ಏನೂ ಕೊಟ್ಟಿಲ್ಲ. ಕೃಷ್ಣಾ ನದಿ ನೀರು ಹಂಚಿಕೆ ಬಗೆಗೆ ಗೆಜೆಟ್ ಅಧಿಸೂಚನೆ ಹೊರಡಿಸಿಲ್ಲ. ಮೇಕೆದಾಟು ಯೋಜನೆಗೆ ಅನುಮತಿ ಕೊಟ್ಟಿಲ್ಲ. ಮಹದಾಯಿ ಯೋಜನೆಗೆ ಪರಿಸರ ಸಚಿವಾಲಯದ ಅನುಮತಿ ಕೊಟ್ಟಿಲ್ಲ' ಎಂದು ತಿಳಿಸಿದರು.

'ಇದು ದೂರದೃಷ್ಟಿ ಇಲ್ಲದ, ನಿರಾಶಾದಾಯಕ ಬಜೆಟ್. ಕೇಂದ್ರ ಸರ್ಕಾರವು ಬಜೆಟ್‌ನಲ್ಲಿ ರಾಜ್ಯಕ್ಕೆ ಬರೀ ಚೊಂಬು ಕೊಟ್ಟಿದೆ. ಕೇವಲ ಕರ್ನಾಟಕವಲ್ಲ, ಇಡೀ ದಕ್ಷಿಣ ಭಾರತಕ್ಕೇ ಏನೂ ಕೊಟ್ಟಿಲ್ಲ' ಎಂದು ಅವರು ಹೇಳಿದರು.

'ಭದ್ರಾ ಮೇಲ್ದಂಡೆ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆಗಳನ್ನು ರಾಷ್ಟ್ರೀಯ ಯೋಜನೆಗಳಾಗಿ ಘೋಷಿಸುವಂತೆ ನಾವು ಕೇಳಿದ್ದೆವು. ಅದರ, ಬಗೆಗೆ ಒಂದೂ ಪದವಿಲ್ಲ. 2023–24ರಲ್ಲಿ ಬಜೆಟ್‌ನಲ್ಲಿ ನಿರ್ಮಲಾ ಸೀತಾರಾಮನ್, ಭದ್ರಾ ಮೇಲ್ದಂಡೆ ಯೋಜನೆಗೆ ₹ 5,300 ಕೋಟಿ ಘೋಷಿಸಿದ್ದರು. ಈವರೆಗೆ ಒಂದೂ ರೂಪಾಯಿ ಕೊಟ್ಟಿಲ್ಲ' ಎಂದರು.

'ಗೋವಿಂದರಾವ್ ಸಮಿತಿ ಶಿಫಾರಸು ಶೀಘ್ರ ಅಳವಡಿಕೆ'

ಪ್ರಜಾವಾಣಿ ವಾರ್ತೆ

ಕಲಬುರಗಿ: 'ರಾಜ್ಯದಲ್ಲಿ ಅಸಮತೋಲನ ನಿವಾರಣೆಗೆ ಪರಿಹಾರ ಕಂಡುಕೊಳ್ಳಲು ಆರ್ಥಿಕ ತಜ್ಞ ಪ್ರೊ.ಎಂ.ಗೋವಿಂದರಾವ್ ಅಧ್ಯಕ್ಷತೆಯ ಸಮಿತಿ ಮಾಡಿರುವ ಶಿಫಾರಸುಗಳನ್ನು ಮುಂಬರುವ ಬಜೆಟ್‌ನಲ್ಲಿ ಅಳವಡಿಸಿಕೊಳ್ಳಲಾಗುವುದು. ಅದಕ್ಕೆ ಅಗತ್ಯ ಬಜೆಟ್ ನಿಗದಿಗೊಳಿಸಲಾಗುವುದು' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಕಲಬುರಗಿ ವಿಮಾನ ನಿಲ್ದಾಣದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕಲ್ಯಾಣ ಕರ್ನಾಟಕದ ಅಭಿವೃದ್ಧಿಗೆ ಕಾಂಗ್ರೆಸ್ ಈಗಾಗಲೇ 371(ಜೆ) ಕಾಯ್ದೆ ಜಾರಿಗೊಳಿಸಿದೆ. ಅದರಿಂದ 10 ಸಾವಿರ ವೈದ್ಯಕೀಯ, 30 ಸಾವಿರ ಎಂಜಿನಿಯರಿಂಗ್ ಸೀಟು ಸಿಕ್ಕಿವೆ. ಈ ತನಕ ₹19 ಸಾವಿರ ಕೋಟಿ ಅನುದಾನ ಕೊಟ್ಟಿದ್ದೇವೆ. ಇದೆಲ್ಲವೂ ಕಾಂಗ್ರೆಸ್ ಪಕ್ಷದ ಸರ್ಕಾರವೇ ಮಾಡಿದೆ. ಕೇಂದ್ರ ಸರ್ಕಾರ ಒಂದು ರೂಪಾಯಿಯನ್ನೂ ಕೊಟ್ಟಿಲ್ಲ. ಕೆಕೆಆರ್‌ಡಿಬಿಗೆ ಕೇಳಿದ ಮ್ಯಾಚಿಂಗ್ ಗ್ರ್ಯಾಂಟ್ ಬಗೆಗೆ ಒಂದೂ ಪದ ಮಾತನಾಡಿಲ್ಲ' ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಕೇಂದ್ರ ಬಜೆಟ್‌ನಲ್ಲಿ ಕರ್ನಾಟಕಕ್ಕೆ ಸಿಕ್ಕ ಯೋಜನೆಗಳ ಪಾಲು ನ್ಯಾಯಯುತವೇ?
● ಹೌದು ● ಇಲ್ಲ
ಪ್ರತಿಕ್ರಿಯಿಸಲು ಕೋಡ್ ಸ್ಕ್ಯಾನ್ ಮಾಡಿ

ಸಂಭ್ರಮದ ರೇಣುಕಾ ಎಲ್ಲಮ್ಮ ಜಾತ್ರೆ

ಪ್ರಜಾವಾಣಿ ವಾರ್ತೆ

ಮದ್ದೂರು (ಮಂಡ್ಯ ಜಿಲ್ಲೆ): ಪಟ್ಟಣದ ಹೊಳೆಬೀದಿಯಲ್ಲಿರುವ 'ಚಿಕ್ಕ ಸವದತ್ತಿ' ಎಂದೇ ಹೆಸರಾಗಿರುವ ರೇಣುಕಾ ಎಲ್ಲಮ್ಮ ದೇವಿಯವರ 54ನೇ ವರ್ಷದ ಜಾತ್ರಾ ಮಹೋತ್ಸವವು ಭಾನುವಾರ ಅಪಾರ ಭಕ್ತ ಸಾಗರದ ನಡುವೆ ಸಡಗರ–ಸಂಭ್ರಮ ಮತ್ತು ವಿಜೃಂಭಣೆಯಿಂದ ನಡೆಯಿತು.

ಮಹೋತ್ಸವದ ಅಂಗವಾಗಿ ಮುಂಜಾನೆಯಿಂದಲೇ ಪೂಜಾ ಕಾರ್ಯಕ್ರಮಗಳು ನಡೆದವು. ದೇವಿಯ ವಿಗ್ರಹವನ್ನು ವಿಶೇಷ ಹೂವುಗಳಿಂದ ಅಲಂಕರಿಸಲಾಗಿತ್ತು. ಹೊಳೆಬೀದಿ, ಪೇಟೆಬೀದಿಯಲ್ಲಿ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು.

ಬೆಳಿಗ್ಗೆ 9ಕ್ಕೆ ದೇವಸ್ಥಾನದ ಆವರಣದಲ್ಲಿ 27ನೇ ವರ್ಷದ ಚಂಡಿಕಾಯಾಗ ನಡೆಯಿತು. ಮಧ್ಯಾಹ್ನ 12ಕ್ಕೆ ಪೂರ್ಣಹುತಿ ನೆರವೇರಿತು. ನಂತರ ಮಹಾಮಂಗಳಾರತಿ, ತೀರ್ಥ ಪ್ರಸಾದ ವಿನಿಯೋಗ ಹಾಗೂ ಮಹಿಳೆಯರಿಂದ ತಂಬಿಟ್ಟಿನ ಆರತಿ ಕಾರ್ಯಕ್ರಮಗಳು ನಡೆದವು. ಮಧ್ಯಾಹ್ನ 1ರಿಂದ ಸಂಜೆ 4ರವರೆಗೆ ಅನ್ನಸಂತರ್ಪಣೆ ಜರುಗಿತು.

ಇದರೊಂದಿಗೆ 2.30ರಿಂದ ಸಂಜೆ 5.30ರವರೆಗೆ ನಿಂಬೆಹಣ್ಣಿನ ದೀಪದ ಆರತಿ ಮತ್ತು ಉಯ್ಯಾಲೋತ್ಸವವನ್ನು ದೇವಸ್ಥಾನದ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿತ್ತು. ಪಟ್ಟಣ ಹಾಗೂ ರಾಜ್ಯದ ಹಲವು ಕಡೆಗಳಿಂದ ಆಗಮಿಸಿದ್ದ ಸಾವಿರಾರು ಭಕ್ತರು ದೇವಿಯ ದರ್ಶನ ಪಡೆದು ಪುನೀತ ಭಾವ ತಳೆದರು. ಅನ್ನಸಂತರ್ಪಣೆಯಲ್ಲೂ ಅವರು ಪಾಲ್ಗೊಂಡಿದ್ದರು.

ದೇವಸ್ಥಾನದ ಟ್ರಸ್ಟ್ ಕಾರ್ಯದರ್ಶಿ ಹಾಗೂ ಧರ್ಮದರ್ಶಿ ಶ್ರೀನಿವಾಸ್, ಪದಾಧಿಕಾರಿಗಳಾದ ಕಿರಣ್, ಸಂತೋಷ್, ದೇವರಾಜ್ ಪೂಜಾ ಕಾರ್ಯಕ್ರಮಗಳ ನೇತೃತ್ವ ವಹಿಸಿದ್ದರು.

ರಾತ್ರಿ ನಡೆದ ಮುತ್ತಿನ ಪಲ್ಲಕ್ಕಿ ಉತ್ಸವ ಭಕ್ತರ ಕಣ್ಮನ ಸೆಳೆಯಿತು.



ರೇಣುಕಾ ಎಲ್ಲಮ್ಮ ದೇವಿಯ ಅಲಂಕೃತ ವಿಗ್ರಹ

ದೇಶದ ವಿವಿಧೆಡೆಯಿಂದ ಹರಿದುಬಂದ ಭಕ್ತಸಾಗರ, ಧಾರ್ಮಿಕ ಆಚರಣೆ

ಯಲ್ಲಮ್ಮನ ಸನ್ನಿಧಿಯಲ್ಲಿ ಹುಣ್ಣಿಮೆ ಸಂಭ್ರಮ

ಪ್ರಜಾವಾಣಿ ವಾರ್ತೆ

ಉಗರಗೋಳ (ಬೆಳಗಾವಿ ಜಿಲ್ಲೆ): ಸಮೀಪದ ಯಲ್ಲಮ್ಮನಗುಡ್ಡದಲ್ಲಿ ಭಾನುವಾರ ಭಾರತ ಹುಣ್ಣಿಮೆ ಜಾತ್ರೆ ಸಂಭ್ರಮ ಮನೆಮಾಡಿತು. ದೇಶದ ವಿವಿಧ ರಾಜ್ಯಗಳಿಂದ ಬಂದಿದ್ದ ಅಪಾರ ಸಂಖ್ಯೆಯ ಭಕ್ತರು ಶ್ರದ್ಧೆಯಿಂದ ಯಲ್ಲಮ್ಮ ದೇವಿಗೆ ಪೂಜೆ ಸಲ್ಲಿಸಿದರು.

ಜಾತ್ರೆಗೂ ಎರಡು ದಿನ ಮುಂಚೆಯಿಂದಲೇ ಗುಡ್ಡಕ್ಕೆ ಭಕ್ತರು ಹರಿದು ಬರಲಾಂಭಿಸಿದ್ದರು. ಶನಿವಾರ ರಾತ್ರಿ ಹೊತ್ತಿಗೆ ಇಡೀ ಗುಡ್ಡದ ಪರಿಸರ ಭಕ್ತರಿಂದ ಕಿಕ್ಕಿರಿದು ತುಂಬಿತ್ತು. 'ಉಧೋ ಉಧೋ ಯಲ್ಲಮ್ಮ ನಿನ್ನಾಲ್ಕ ಉಧೋ...' ಎಂಬ ಜೈಕಾರ ಇಡೀ ಗುಡ್ಡದಲ್ಲಿ ಪ್ರತಿಧ್ವನಿಸಿತು. ಭಾನುವಾರ ಮಧ್ಯರಾತ್ರಿಯಿಂದಲೇ ದೇವಿ ದರ್ಶನಕ್ಕಾಗಿ ಭಕ್ತರಿಗೆ ಅವಕಾಶ ಮಾಡಿಕೊಡಲಾಯಿತು.

ರಸ್ತೆಬದಿ ಒಲೆ ಹೂಡಿದ ಭಕ್ತರು, ವಿವಿಧ ಖಾದ್ಯ ಸಿದ್ಧಪಡಿಸಿ ದೇವಿಗೆ ಪರಡಿ ತುಂಬಿದರು. ಜೋಗತಿಯರ ಚೌಡಕಿ ನಿನಾದ ಕಣ್ಮನಸೆಳೆಯಿತು. ವಿವಿಧ ಕಡೆಗಳಿಂದ ಬಂದಿದ್ದ ಕಲಾತಂಡಗಳು ಕಲಾ ಪ್ರಕಾರಗಳನ್ನು ಪ್ರದರ್ಶಿಸಿದರು.

ಯಲ್ಲಮ್ಮ ದೇವಿ ದೇವಸ್ಥಾನ ಬಳಿಯ ಎಣ್ಣೆ ಹೊಂಡದಲ್ಲಿ ಪುರುಷರು ಹಾಗೂ ಮಹಿಳೆಯರ ಸ್ನಾನಕ್ಕಾಗಿ ಪ್ರತ್ಯೇಕ ವ್ಯವಸ್ಥೆ ಮಾಡಲಾಗಿತ್ತು. ಸ್ನಾನಗೃಹಗಳಲ್ಲಿ ಬಿಸಿನೀರಿನ ವ್ಯವಸ್ಥೆ ಇತ್ತು.

ಪೊಲೀಸ್ ಬಿಗಿ ಭದ್ರತೆ ಕೈಗೊಳ್ಳಲಾಗಿದ್ದು, ಗುಡ್ಡಕ್ಕೆ ಸಂಪರ್ಕ ಕಲ್ಪಿಸುವ ಮಾರ್ಗಗಳು ಜನರಿಂದ ಗಿಜಿಗುಡುತ್ತಿದ್ದವು. ಜಾತ್ರೆಯ ಪ್ರತಿ ಚಟುವಟಿಕೆ ಮೇಲೆ ನಿಗಾ ವಹಿಸಲು ಡ್ರೋನ್ ಕ್ಯಾಮೆರಾ ಬಳಸಲಾಗಿದೆ. ಯಲ್ಲಮ್ಮನಗುಡ್ಡದಿಂದ ಸವದತ್ತಿ, ಜೋಗುಳಬಾವಿ ಮಾರ್ಗದಲ್ಲಿ ಏಕಮುಖ ಸಂಚಾರಕ್ಕೆ ವ್ಯವಸ್ಥೆ ಮಾಡಲಾಗಿದೆ.



ಸವದತ್ತಿಯ ಯಲ್ಲಮ್ಮನ ಗುಡ್ಡದಲ್ಲಿ ಭಾನುವಾರ ಭಾರತ ಹುಣ್ಣಿಮೆ ಜಾತ್ರೆಯ ಅಂಗವಾಗಿ ಸೇರಿದ ಅಪಾರ ಸಂಖ್ಯೆಯ ಭಕ್ತರು, ಜೋಗುಳಬಾವಿ ನೀರಲ್ಲಿ ಮಿಂದೆದ್ದರು –ಚಿತ್ರ: ಭರತ್ ಕಂದಕೂರ

'ಸಿ.ಜೆ.ರಾಯ್ ಆತ್ಮಹತ್ಯೆ; ಸತ್ಯ ಮುಚ್ಚಿಹಾಕಲು ಎಸ್‌ಐಟಿ ರಚನೆ'

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: 'ಉದ್ಯಮಿ, ಕಾನ್ಫಿಡೆಂಟ್ ಗ್ರೂಪ್‌ನ ಮುಖ್ಯಸ್ಥ ಸಿ.ಜೆ.ರಾಯ್ ಆತ್ಮಹತ್ಯೆ ಪ್ರಕರಣವನ್ನು ಮುಚ್ಚಿಹಾಕಲು ಎಸ್‌ಐಟಿ ರಚಿಸಲಾಗಿದೆ. ಎಸ್‌ಐಟಿ ಎಂದರೆ ಸ್ಪೆಷಲ್ ಇನ್ವೆಸ್ಟಿಗೇಷನ್ ಟೀಮ್ ಅಲ್ಲ. ಅದು ಸಿದ್ದರಾಮಯ್ಯ ಇನ್ವೆಸ್ಟಿಗೇಷನ್ ಟೀಮ್' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ವ್ಯಂಗ್ಯವಾಡಿದರು.

'ರಾಯ್ ಆತ್ಮಹತ್ಯೆ ಬಗ್ಗೆ ಅವರ ಕುಟುಂಬದವರೇ ದೂರು ಕೊಟ್ಟಿಲ್ಲ. ಆದರೆ ರಾಜ್ಯ ಸರ್ಕಾರ, ರಾಯ್ ಅವರ ಆಪ್ತ ಎಂದು ಹೇಳಲಾದ ಜಾನ್ ಎಂಬುವವರ ದೂರಿನ ಆಧಾರದ ಮೇಲೆ ತನಿಖೆಗೆ ಎಸ್‌ಐಟಿ ರಚಿಸಿದೆ. ಆ ಮೂಲಕ ಸತ್ಯ ಮುಚ್ಚಿಹಾಕಲು ಮುಂದಾಗಿದೆ' ಎಂದು ಭಾನುವಾರ ಸುದ್ದಿಗಾರರ ಎದುರು ದೂರಿದರು.

'ಆರ್‌ಸಿಬಿ ತಂಡದ ವಿಜಯೋತ್ಸವದ ವೇಳೆ ನಡೆದ ಕಾಲ್ತುಳಿತ ಪ್ರಕರಣದ ತನಿಖೆಗೆ ಎಸ್‌ಐಟಿ ರಚಿಸಿ ರಾಜ್ಯ ಸರ್ಕಾರ ತನ್ನ ತಪ್ಪು ಮುಚ್ಚಿಹಾಕುವ ಪ್ರಯತ್ನ ನಡೆಸಿತ್ತು. ರಾಯ್ ಪ್ರಕರಣದಲ್ಲೂ ಅದೇ ಕೆಲಸಕ್ಕೆ ಮುಂದಾಗಿರಬಹುದೆಂಬ ಅನುಮಾನ ಕಾಡುತ್ತಿದೆ' ಎಂದರು.



ಬಿ.ವೈ. ವಿಜಯೇಂದ್ರ

ಡಿಸಿಸಿ ಬ್ಯಾಂಕ್: ಸಿ.ಟಿ.ರವಿ ಅಧ್ಯಕ್ಷ

ಚಿಕ್ಕಮಗಳೂರು: ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಅವರು ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್(ಡಿಸಿಸಿ) ಅಧ್ಯಕ್ಷರಾಗಿ ಅವಿರೋಧವಾಗಿ ಭಾನುವಾರ ಆಯ್ಕೆಯಾದರು.

13 ನಿರ್ದೇಶಕರಿರುವ ಡಿಸಿಸಿ ಬ್ಯಾಂಕ್‌ನಲ್ಲಿ ಬಹುತೇಕರು ಬಿಜೆಪಿ ಮತ್ತು ಜೆಡಿಎಸ್ ಬೆಂಬಲಿತ ನಿರ್ದೇಶಕರಿದ್ದರು. ಜೆಡಿಎಸ್ ವಿಧಾನ ಪರಿಷತ್ ಸದಸ್ಯ ಎಸ್.ಎಲ್. ಭೋಜೇಗೌಡ, ಬಿಜೆಪಿಯ ಮಾಜಿ ಶಾಸಕರಾದ ಡಿ.ಎಸ್. ಸುರೇಶ್, ಬೆಳ್ಳಿ ಪ್ರಕಾಶ್ ಕೂಡ ನಿರ್ದೇಶಕರಾಗಿದ್ದರು.



ಸಿ.ಟಿ ರವಿ



ದಿನೇಶ್

ಶನಿವಾರ ರಾತ್ರಿ ನಡೆದ ಮೈತ್ರಿಕೂಟದ ಪ್ರಮುಖರ ಸಭೆಯಲ್ಲಿ ಸಿ.ಟಿ. ರವಿ ಅವರನ್ನೇ ಅಧ್ಯಕ್ಷರನ್ನಾಗಿ ಮಾಡಲು ನಿರ್ಧರಿಸಲಾಗಿತ್ತು. ಉಪಾಧ್ಯಕ್ಷರಾಗಿ ಎಚ್.ಕೆ. ದಿನೇಶ್ ಹೊಸೂರು ಅವರನ್ನು ಆಯ್ಕೆ ಮಾಡಲಾಯಿತು.

ಬಾಲಕಿ ಮೇಲೆ ಅತ್ಯಾಚಾರ: ವೃದ್ಧ ಬಂಧನ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ಎಪ್ಪತ್ತೈದು ವರ್ಷದ ವೃದ್ಧನೊಬ್ಬ ಎಂಟು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ಎಸಗಿದ್ದು, ಅಶೋಕನಗರ ಪೊಲೀಸ್ ಠಾಣೆಯಲ್ಲಿ ಪೋಕ್ಸೊ ಪ್ರಕರಣ ದಾಖಲಾಗಿದೆ.

ಆರೋಪಿ ಈಶ್ವರಪ್ಪನನ್ನು ಬಂಧಿಸಲಾಗಿದೆ. ಜ. 30ರಂದು ಮಧ್ಯಾಹ್ನ ಬಾಲಕಿಗೆ ಚಾಕೊಲೇಟ್ ನೀಡುವುದಾಗಿ ಹೇಳಿ, ತನ್ನ ಅಂಗಡಿಗೆ ಕರೆದೊಯ್ದು ಅತ್ಯಾಚಾರ ಎಸಗಿದ್ದಾನೆ ಎಂದು ಪಾಲಕರು ದೂರು ನೀಡಿದ್ದರು.

ಅಭಿಮತ ವಿಭಾಗ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ



ಸುಭಾಷಿತ

ಜೀವನದಲ್ಲಿ ಪ್ರಾಮಾಣಿಕತೆಗಿಂತ ಐಶ್ವರ್ಯ ದೊಡ್ಡದಲ್ಲ.

–ಜಾನ್ ರಸ್ಕಿನ್

ಸಂಪಾದಕೀಯ

ಬಜೆಟ್: ಹೊಸ ಕನಸುಗಳ ಕೊರತೆ ರಾಜ್ಯಗಳ ಆರ್ಥಿಕ ಹಿತಾಸಕ್ತಿಗೆ ಧಕ್ಕೆ

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಮಂಡಿಸಿರುವ 2026–27ನೇ ಸಾಲಿನ ಬಜೆಟ್ ವರ್ತಮಾನದ ಆರ್ಥಿಕ ಸವಾಲುಗಳಿಗೆ ದಿಟ್ಟ ಹಾಗೂ ಸೃಜನಶೀಲ ಯೋಜನೆಗಳಿಲ್ಲದ, ಹೊಸ ಕನಸುಗಳನ್ನು ಕಟ್ಟಿಕೊಡದ ಮುಂಗಡಪತ್ರವಾಗಿದೆ. ಆರ್ಥಿಕ ಬೆಳವಣಿಗೆಯನ್ನು ವೇಗಗೊಳಿಸುವುದು, ಉದ್ಯಮಗಳನ್ನು ಬಲಪಡಿಸುವುದು ಮತ್ತು ಸರ್ಕಾರಿ ಬಂಡವಾಳ ಹೂಡಿಕೆಯನ್ನು ಮುಂದುವರಿಸುವುದು ಬಜೆಟ್‌ನ ಧ್ಯೇಯಗಳಾಗಿದ್ದರೂ, ಅದರ ಒಟ್ಟಾರೆ ಚಿತ್ರಣವು ರಕ್ಷಣಾತ್ಮಕ ಮತ್ತು ಸಾಂಪ್ರದಾಯಿಕವಾಗಿದೆ. ದಕ್ಷಿಣ ಭಾರತದ ರಾಜ್ಯಗಳ ಬಗ್ಗೆ ಕೇಂದ್ರ ಸರ್ಕಾರ ಮಲತಾಯಿ ಧೋರಣೆ ಅನುಸರಿಸುತ್ತಿದೆ ಎನ್ನುವ ಅಸಮಾಧಾನವನ್ನು ಹೋಗಲಾಡಿಸುವ ಪ್ರಯತ್ನಗಳೂ ಬಜೆಟ್‌ನಲ್ಲಿಲ್ಲ. ಯಾವುದೇ ಸ್ಪಷ್ಟ ತೆರಿಗೆ ಸಡಿಲಿಕೆ ಇಲ್ಲದ ಕಾರಣದಿಂದಾಗಿ ಮಧ್ಯಮ ವರ್ಗದ ಪಾಲಿಗೆ ಬಜೆಟ್‌ನಲ್ಲಿ ಆಶಾದಾಯಕ ಸಂಗತಿಗಳಿಲ್ಲ. ಆದಾಯ ತೆರಿಗೆಯಲ್ಲಿ ಯಾವುದೇ ಬದಲಾವಣೆ ಇಲ್ಲದಿರುವುದರಿಂದ, ಜನರ ಖರೀದಿ ಸಾಮರ್ಥ್ಯ ಹೆಚ್ಚಾಗುವ ಸಾಧ್ಯತೆ ಇಲ್ಲ. ಯುವಜನರ ನಿರುದ್ಯೋಗ ಸಮಸ್ಯೆ, ರೈತರ ಸಂಕಷ್ಟಗಳ ಬಗ್ಗೆಯೂ ಕೇಂದ್ರ ಸರ್ಕಾರ ಹೆಚ್ಚಿನ ತಲೆ ಕೆಡಿಸಿಕೊಂಡಂತಿಲ್ಲ. ಈ ಕಾರಣದಿಂದಾಗಿಯೇ ಈ ಬಜೆಟ್ ಅನ್ನು ವಿರೋಧ ಪಕ್ಷಗಳು 'ನೈಜ ಸಮಸ್ಯೆಗಳಿಗೆ ಕುರುಡಾಗಿದೆ' ಎಂದು ಟೀಕಿಸಿವೆ.



ಬಜೆಟ್‌ನಲ್ಲಿ ಕೆಲವು ಗಮನಾರ್ಹ ಸಂಗತಿಗಳೂ ಇವೆ. 2030–31ರ ವೇಳೆಗೆ ದೇಶದ ಸಾಲದ ಪ್ರಮಾಣವನ್ನು ಒಟ್ಟು ಜಿಡಿಪಿಯ ಶೇ 50ರಷ್ಟಕ್ಕಿಳಿಸುವ ಗುರಿ ಹೊಂದಲಾಗಿದೆ. ಜಾಗತಿಕ ಬಿಕ್ಕಟ್ಟಿನ ನಡುವೆಯೂ ವಿತ್ತೀಯ ಕೊರತೆಯನ್ನು ತಗ್ಗಿಸುವ ಭರವಸೆ ನೀಡಿದೆ. 2025-26ನೇ ಆರ್ಥಿಕ ವರ್ಷದಲ್ಲಿ ಬಂಡವಾಳ ವೆಚ್ಚವು ಜಿಡಿಪಿಯ ಶೇ 2.8ರಷ್ಟಿತ್ತು. 2026–27ನೇ ಆರ್ಥಿಕ ವರ್ಷದಲ್ಲಿ ಶೇ 3.1ಕ್ಕೆ ಹೆಚ್ಚಿಸಿರುವುದು ಸಕಾರಾತ್ಮಕ ಅಂಶ. ಬಜೆಟ್ ಅಭಿವೃದ್ಧಿ ಪರವಾಗಿದೆ ಎಂದು ನಿರ್ಮಲಾ ಅವರು ಪ್ರತಿಪಾದಿಸಿದರೂ ಷೇರುಪೇಟೆ ನಿರಾಶಾದಾಯಕವಾಗಿ ಪ್ರತಿಕ್ರಿಯಿಸಿದೆ. ಶೇ 2ರಷ್ಟು ಕುಸಿತ ಕಂಡಿದೆ. ಮೂಲಸೌಕರ್ಯ, ರೈಲ್ವೆ, ರಸ್ತೆಗಳು ಮತ್ತು ರಕ್ಷಣಾ ಕ್ಷೇತ್ರಕ್ಕೆ ಹೆಚ್ಚು ಒತ್ತು ನೀಡಿದೆ. ಸೆಮಿಕಂಡಕ್ಟರ್‌ಗಳು, ಎಲೆಕ್ಟ್ರಾನಿಕ್, ವಿರಳ ಖನಿಜಗಳು, ಮತ್ತು ಬಯೋಫಾರ್ಮಾ ಕ್ಷೇತ್ರಗಳಲ್ಲಿ ಉತ್ಪಾದನಾ ಸಾಮರ್ಥ್ಯ ಹೆಚ್ಚಿಸುವ ಯೋಜನೆಗಳು ದೀರ್ಘಕಾಲೀನ ದೃಷ್ಟಿಕೋನವನ್ನು ಹೊಂದಿರುವಂತೆ ಕಾಣಿಸುತ್ತವೆ. ಇದರಿಂದ ಭವಿಷ್ಯದಲ್ಲಿ ಉದ್ಯೋಗ ಮತ್ತು ರಫ್ತು ಸಾಮರ್ಥ್ಯ ಹೆಚ್ಚಬಹುದು. ವಿತ್ತೀಯ ಕೊರತೆಯನ್ನು ಶೇ 4.3ಕ್ಕೆ ಇಳಿಸುವ ಗುರಿ, ಸಾಲ ಮತ್ತು ಜಿಡಿಪಿ ನಡುವಿನ ಅನುಪಾತವನ್ನು ಕಡಿಮೆ ಮಾಡುವ ಚಿಂತನೆಗಳು ಸ್ವಾಗತಾರ್ಹ. ಆದರೆ, ಈ ಪ್ರಯತ್ನಗಳು ಆರ್ಥಿಕ ಬೆಳವಣಿಗೆಗೆ ತಡೆಯಾಗದಂತೆ ನೋಡಿಕೊಳ್ಳಬೇಕಾದ ಸವಾಲು ಸರ್ಕಾರದ ಮುಂದಿದೆ. ಸ್ಥಿರತೆ ಮತ್ತು ದೀರ್ಘಾವಧಿ ಸುಧಾರಣೆಗಳಿಗೆ ಬಜೆಟ್‌ನಲ್ಲಿ ಒತ್ತು ನೀಡಲಾಗಿದೆ; 'ವಿಕಸಿತ ಭಾರತ' ಪರಿಕಲ್ಪನೆಗೆ ಪೂರಕವಾಗಿದೆ ಎಂದು ಬಜೆಟ್ ಅನ್ನು ಬಿಂಬಿಸಲಾಗುತ್ತಿದೆ. ಆದರೆ, ಮಂದಗತಿಯ ಆರ್ಥಿಕತೆ, ಜಾಗತಿಕ ಅನಿಶ್ಚಿತತೆ ಮತ್ತು ಜನರ ತಕ್ಷಣದ ಅಗತ್ಯಗಳಿಗೆ ಸ್ಪಂದಿಸುವಲ್ಲಿ ಬಜೆಟ್ ಯಶಸ್ವಿಯಾಗಿದೆ ಎಂದು ಹೇಳಿಕೊಳ್ಳುವಂತಿಲ್ಲ.

ವರ್ತಮಾನದ ಆರ್ಥಿಕ ಸವಾಲುಗಳು ಹಾಗೂ ಅನಿಶ್ಚಿತ ಪರಿಸ್ಥಿತಿ ನಿಭಾಯಿಸಲು ಅಗತ್ಯವಾದ ಸ್ಪಂದನಗಳನ್ನು ಬಜೆಟ್ ಹೊಂದಿಲ್ಲ, ರಾಜ್ಯಗಳ ಆರ್ಥಿಕ ಸ್ವಾಯತ್ತತೆಯನ್ನು ಹೆಚ್ಚಿಸುವುದಕ್ಕೂ ಬಜೆಟ್ ಆಸಕ್ತಿ ವಹಿಸಿಲ್ಲ.

ರಾಜ್ಯಗಳ ಆರ್ಥಿಕ ಸ್ವಾಯತ್ತತೆಯ ಹಿತಾಸಕ್ತಿ ದೃಷ್ಟಿಯಿಂದಲೂ ಬಜೆಟ್‌ನಲ್ಲಿ ಆಶಾದಾಯಕ ಸಂಗತಿಗಳಿಲ್ಲ. ಸಂಗ್ರಹಗೊಳ್ಳುವ ತೆರಿಗೆಯಲ್ಲಿ ಹೆಚ್ಚಿನ ಪಾಲನ್ನು ಕೇಂದ್ರ ಸರ್ಕಾರವೇ ಉಳಿಸಿಕೊಳ್ಳುವ ಮನೋಭಾವ ಈ ಬಾರಿಯೂ ಮುಂದುವರಿದಿದೆ. ಜಿಎಸ್‌ಟಿ ಜಾರಿಯಿಂದ ರಾಜ್ಯಗಳ ಆದಾಯದಲ್ಲಿನ ಸಂಭಾವ್ಯ ನಷ್ಟ ತಪ್ಪಿಸಲು ಕೇಂದ್ರ ಸರ್ಕಾರ ಪಡೆಯುತ್ತಿದ್ದ ವಿಶೇಷ ಪರಿಹಾರ ಯೋಜನೆಯು 2022ರಲ್ಲಿ ಕೊನೆಗೊಂಡಿದೆ. ಇದರಿಂದ ರಾಜ್ಯಗಳ ಮೇಲೆ ಉಂಟಾಗುತ್ತಿರುವ ಆರ್ಥಿಕ ಒತ್ತಡವನ್ನು ಪರಿಹರಿಸುವ ಕ್ರಮಗಳನ್ನು ಬಜೆಟ್ ಸೂಚಿಸಿಲ್ಲ. ಕೇಂದ್ರ ಸರ್ಕಾರದ ಯೋಜನೆಗಳಿಗೆ ಶೇ 40 ಅಥವಾ ಇನ್ನೂ ಹೆಚ್ಚು ಮೊತ್ತವನ್ನು ರಾಜ್ಯಗಳೇ ಭರಿಸಬೇಕಾಗಿರುವುದು ರಾಜ್ಯಗಳ ಖರ್ಚು ಮಾಡುವ ಸಾಮರ್ಥ್ಯದ ಮೇಲೆ ಗಂಭೀರ ಪರಿಣಾಮ ಬೀರಲಿದೆ. ರಾಜ್ಯ ಮಟ್ಟದ ಕಾರ್ಯಕ್ರಮಗಳು ಹಾಗೂ ಮೂಲ ಸೌಕರ್ಯಗಳಿಗೆ ಸಂಬಂಧಿಸಿದಂತೆ ಅನುದಾನ ತೋರಿಸಿದ್ದರೂ, ರಾಜ್ಯದ ಜನಜೀವನದ ಮೇಲೆ ನೇರವಾಗಿ ಪರಿಣಾಮ ಬೀರುವ ಯೋಜನೆಗಳನ್ನು ಬಜೆಟ್ ಹೊಂದಿಲ್ಲ. ಇದಕ್ಕೆ ಪ್ರತಿಯಾಗಿ, ಸದ್ಯದಲ್ಲೇ ವಿಧಾನಸಭಾ ಚುನಾವಣೆಗಳು ನಡೆಯಲಿರುವ ರಾಜ್ಯಗಳ ಬಗ್ಗೆ ಕೇಂದ್ರ 'ವಿಶೇಷ ಕಾಳಜಿ' ವ್ಯಕ್ತಪಡಿಸಿರುವುದರಿಂದ ಬಜೆಟ್ ಚುನಾವಣಾ ರಾಜಕೀಯದ ಆಯಾಮವನ್ನೂ ಪಡೆದುಕೊಂಡಿದೆ. ಪ್ರಸಕ್ತ ಬಜೆಟ್ ಮೂಲಕ, ಮೊರಾರ್ಜಿ ದೇಸಾಯಿ ಅವರ ನಂತರ ಹೆಚ್ಚು ಬಾರಿ ಬಜೆಟ್ (9 ಸಲ) ಮಂಡಿಸಿದ ಖ್ಯಾತಿಗೆ ನಿರ್ಮಲಾ ಸೀತಾರಾಮನ್ ಅವರು ಪಾತ್ರರಾಗಿದ್ದಾರೆ. ಆದರೆ, ಸಂಖ್ಯಾ ದಾಖಲೆಯ ಸಂಭ್ರಮವನ್ನು ಜನರ ಜೀವನ ಸುಧಾರಣೆಯ ಭಾಗವಾಗಿಸುವ ಸವಾಲನ್ನು ಅವರು ಸ್ವೀಕರಿಸಿಲ್ಲ.

ಚಾಟಿ

ಆದಾಯ ತೆರಿಗೆ ಬರೆ



ಸಂಬಳದಾರರನ್ನು ಆದಾಯ ತೆರಿಗೆ ಮೂಲಕ ಹಿಂಡುವ ಸರ್ಕಾರಗಳು, ತೆರಿಗೆ ಕಳ್ಳರನ್ನು ಹತ್ತಿರಕ್ಕೆ ಬಿಟ್ಟುಕೊಂಡು, ಪಕ್ಕದಲ್ಲೇ ಕೂರಿಸಿಕೊಳ್ಳುತ್ತವೆ. ಇದು ದಶಕಗಳಿಂದ, ನಡೆದು ಬಂದಿರುವ ಕರ್ಮಕಾಂಡ.

ರಮೇಶ್ ಗುರುರಾಜರಾವ್, 'ಫೇಸ್‌ಬುಕ್'ನಿಂದ

ಕಿಡಿನುಡಿ



ಜವಳಿ ಉದ್ಯಮಕ್ಕೆ ಪುನಶ್ಚೇತನ, ಬಂಡವಾಳ ಹೂಡಿಕೆಗೆ ಉದ್ಯಮಿಗಳ ಆಕರ್ಷಣೆ ಹಾಗೂ ಸಿದ್ಧಉಡುಪು ರಫ್ತಿನ ಬಗ್ಗೆ ಎಷ್ಟರಮಟ್ಟಿಗೆ ಆದ್ಯತೆ ನೀಡಬಹುದು ಎಂಬ ಸ್ಪಷ್ಟ ಚಿತ್ರಣವೇ ಕೇಂದ್ರ ಬಜೆಟ್‌ನಲ್ಲಿ ಇಲ್ಲ.

ಶಿವಾನಂದ ಪಾಟೀಲ, ಜವಳಿ, ಸಕ್ಕರೆ, ಕೃಷಿ ಮಾರುಕಟ್ಟೆ ಸಚಿವ

25 ವರ್ಷಗಳ ಹಿಂದೆ

ಶುಕ್ರವಾರ, 2-2-2001

- **ಅನುಮತಿ ಇಲ್ಲದೆ ಸಿನಿಮಾ ನಟನೆ: ಬಿ.ಸಿ. ಪಾಟೀಲ್ ಅಮಾನತು**

ಬೆಂಗಳೂರು, ಫೆ. 1– ಅನಧಿಕೃತವಾಗಿ ಗೈರುಹಾಜರಾಗಿ ಸಿನಿಮಾದಲ್ಲಿ ನಟನೆ ಮಾಡಿದ ಆರೋಪದ ಮೇಲೆ ಇನ್‌ಸ್ಪೆಕ್ಟರ್ ಬಿ.ಸಿ. ಪಾಟೀಲ್ ಅವರನ್ನು ಸೇವೆಯಿಂದ ಅಮಾನತುಗೊಳಿಸಲಾಗಿದೆ.

ಸರ್ಕಾರಿ ನೌಕರರು ಅನುಮತಿ ಇಲ್ಲದೇ ಸಿನಿಮಾಗಳಲ್ಲಿ ನಟನೆ ಮಾಡುವುದನ್ನು 2 ತಿಂಗಳ ಹಿಂದೆ ಮುಖ್ಯ ಕಾರ್ಯದರ್ಶಿ ಅವರು ನಿಷೇಧಿಸಿದ್ದರು.

ಪ್ರಸ್ತುತ ಕರಾವಳಿ ಕಾವಲು ಪಡೆಯಲ್ಲಿ ಕೆಲಸದಲ್ಲಿರುವ ಬಿ.ಸಿ. ಪಾಟೀಲ್ ಇಲಾಖೆಯ ಪೂರ್ವಾನುಮತಿ ಇಲ್ಲದೆ ಸಿನಿಮಾಗಳಲ್ಲಿ ನಟನೆ ಮಾಡಿದ್ದಲ್ಲದೆ ಅನಧಿಕೃತವಾಗಿ ಗೈರುಹಾಜರಾಗಿದ್ದರು. ಈ ಬಗ್ಗೆ ಪ್ರಾಥಮಿಕ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಪೊಲೀಸ್ ಮಹಾ ನಿರ್ದೇಶಕ ಆದೇಶಿಸಿದ್ದರು.

- **ವೈದ್ಯ ವಿದ್ಯಾರ್ಥಿಗಳಿಗೆ ಗ್ರಾಮೀಣ ಪ್ರದೇಶದಲ್ಲಿ ಸೇವೆ ಕಡ್ಡಾಯ**

ಬೆಂಗಳೂರು, ಫೆ. 1– ಸ್ನಾತಕೋತ್ತರ ತರಗತಿಗಳಿಗೆ ಪ್ರವೇಶ ಪಡೆಯುವುದಕ್ಕೆ ಮುಂಚೆ ವೈದ್ಯಕೀಯ ವಿದ್ಯಾರ್ಥಿಗಳು ಕಡ್ಡಾಯವಾಗಿ ಒಂದು ವರ್ಷ ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಿರಬೇಕು ಎಂಬ ನಿಯಮವನ್ನು ಜಾರಿಗೊಳಿಸಲು ಇಂದು ನಡೆದ ಸಚಿವ ಸಂಪುಟದ ಸಭೆಯಲ್ಲಿ ತೀರ್ಮಾನಿಸಲಾಯಿತು ಎಂದು ವಾರ್ತಾ ಸಚಿವ ಪ್ರೊ. ಬಿ.ಕೆ. ಚಂದ್ರಶೇಖರ್ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

75 ವರ್ಷಗಳ ಹಿಂದೆ

ಶುಕ್ರವಾರ, 2-2-1951

- **ಕಾಂಗ್ರೆಸ್ ಕೇಂದ್ರ ಚುನಾವಣಾ ಸಮಿತಿ ಆಯ್ಕೆ**

ಅಹಮದಾಬಾದ್, ಫೆ. 1– ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಇಂದು ಪ್ರಧಾನಿ ಪಂಡಿತ ನೆಹರೂರವರ 'ಸಂಘಟನಾ ನಿರ್ಣಯ', ಚಂದಾ ಸದಸ್ಯತ್ವವನ್ನು ಪುನಃ ಜಾರಿಗೆ ತರುವ ಅಂಗರಚನೆಯ ಕರಡು, ಹಾಗೂ ವನಸ್ಪತಿಯನ್ನು ನಿಷೇಧಿಸಬೇಕೆನ್ನುವ ಅನಧಿಕೃತ ನಿರ್ಣಯ ಇವೆಲ್ಲವನ್ನೂ ಅಂಗೀಕರಿಸಿ ಅನಿರ್ದಿಷ್ಟಕಾಲದವರೆಗೆ ಮುಂದುವರಿಯಿತು.

ಸಿಂಹಳದಲ್ಲಿರುವ ಭಾರತೀಯರ ಬಗ್ಗೆ ನಿರ್ಣಯವೊಂದರ ಮೇಲೆ ಮಾತನಾಡುತ್ತಾ, ಭಾರತೀಯರ ಪ್ರಶ್ನೆಯನ್ನು ಸ್ನೇಹ ಮಾರ್ಗದಿಂದ ಪರಿಹರಿಸಬೇಕೆಂದು ನೆಹರೂ ತಿಳಿಸಿದರು.

ಫಿನ್ಲೆಂಡ್: ದಾರಿ ಮತ್ತು ಮಾದರಿ



ವಿಶ್ಲೇಷಣೆ

ನಿರಂಜನಾರಾಧ್ಯ ವಿ.ಪಿ.

ಶಿಕ್ಷಣ ಸುಧಾರಣೆ ಕುರಿತಂತೆ ಭಾರತದಲ್ಲಿ ಆರಂಭದಿಂದಲೂ ಇರುವ ಮೂಲಭೂತ ಪ್ರಶ್ನೆ: ಶಿಕ್ಷಣದಲ್ಲಿನ ಅಸಮಾನತೆ, ತಾರತಮ್ಯ ಹಾಗೂ ಸೃಜನಶೀಲತೆಯಿಲ್ಲದ ಕಂಠಪಾಠ ವಿಧಾನವನ್ನು ಕಿತ್ತೆಸೆದು, ಎಲ್ಲ ಮಕ್ಕಳಿಗೆ ಸಮಾನತೆಯ ನೆಲೆಯಲ್ಲಿ ಗುಣಾತ್ಮಕ ಶಿಕ್ಷಣ ಒದಗಿಸುವುದು ಹೇಗೆ?

ಜಗತ್ತಿನ ಹಲವು ದೇಶಗಳು, ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿಯ ದೃಷ್ಟಿಯಿಂದ ಶಾಲಾ ಶಿಕ್ಷಣ ವ್ಯವಸ್ಥೆಯನ್ನು ಅತ್ಯುತ್ತಮವಾಗಿ ರೂಪಿಸಿಕೊಂಡಿವೆ. ಅಂತಹ ದೇಶಗಳ ಮೊದಲ ಸಾಲಿನಲ್ಲಿರುವುದು ಉತ್ತರ ಯೂರೋಪಿನ ಪುಟ್ಟ ದೇಶ ಫಿನ್ಲೆಂಡ್.

ಫಿನ್ಲೆಂಡ್‌ನ ಶಿಕ್ಷಣ ವ್ಯವಸ್ಥೆ ಏಕೆ ಯಶಸ್ವಿಯಾಗಿದೆ ಮತ್ತು ಫಿನ್ನಿಷ್ ಶಾಲೆಗಳನ್ನು ಒಳಗೊಳ್ಳುವಿಕೆ ಹಾಗೂ ಗುಣಮಟ್ಟದ ಉತ್ಕೃಷ್ಟತೆಗೆ ಬಹುತೇಕ ರಾಷ್ಟ್ರಗಳು ಜಾಗತಿಕ ಮಾನದಂಡವನ್ನಾಗಿ ನೋಡುವುದರ ಹಿಂದಿನ ಸತ್ಯವೇನೆಂಬುದನ್ನು ಭಾರತದ ಸಂದರ್ಭದಲ್ಲಿ ಒರೆಹಚ್ಚಿ ನೋಡಬೇಕಾಗಿದೆ.

ಫಿನ್ಲೆಂಡ್‌ನಲ್ಲಿ ಶಿಕ್ಷಣವು ಬರೀ ಸೇವೆಯಲ್ಲ, ಅದು ಮೂಲಭೂತ ಹಕ್ಕು ಹಾಗೂ ರಾಷ್ಟ್ರೀಯ ಅನನ್ಯತೆ. ಈ ನಂಬಿಕೆ ಎಷ್ಟು ಆಳವಾಗಿದೆ ಎಂದರೆ, ಸರ್ಕಾರದ ಉನ್ನತಮಟ್ಟದಿಂದ ಸಣ್ಣ ಹಳ್ಳಿಯವರೆಗೆ, ಈ ಬದ್ಧತೆಯನ್ನು ಗೌರವಿಸುವ ಹಾಗೂ ಪ್ರಾಮಾಣಿಕವಾಗಿ ಜಾರಿಗೊಳಿಸುವ ತಿಳಿವಳಿಕೆ ಆಳವಾಗಿ ಹಬ್ಬಿದೆ ಹಾಗೂ ಸಾಂಸ್ಥೀಕರಣಗೊಂಡಿದೆ. ಈ ನಂಬಿಕೆ ಖಾಲಿ ಘೋಷಣೆಯಲ್ಲ. ಬದಲಿಗೆ, ಪ್ರತೀ ಹಂತದಲ್ಲಿ ಶಿಕ್ಷಣ ವ್ಯವಸ್ಥೆಯನ್ನು ಅಚ್ಚುಕಟ್ಟಾಗಿ ವಿನ್ಯಾಸಗೊಳಿಸಲಾಗಿದೆ ಮತ್ತು ಅದಕ್ಕಾಗಿ ರಾಷ್ಟ್ರೀಯ ನಿವ್ವಳ ಉತ್ಪನ್ನದಲ್ಲಿ ಸುಮಾರು ಶೇ 6ರಷ್ಟು ಹಣ ಹೂಡಲಾಗಿದೆ. ಉತ್ತಮ ಗುಣಮಟ್ಟದ ಶಿಕ್ಷಣ ಒದಗಿಸಬೇಕೆಂಬ ರಾಜಕೀಯ ಇಚ್ಛಾಶಕ್ತಿ ವಾಸ್ತವಿಕ ಸತ್ಯದಲ್ಲಿ, ಸ್ವರೂಪ ಮತ್ತು ಫಲಿತಾಂಶಗಳಲ್ಲಿ ಪ್ರತಿಫಲಿಸುತ್ತದೆ. ಕುಟುಂಬದ ಆದಾಯ ಅಥವಾ ಸಾಮಾಜಿಕ ಸ್ಥಾನಮಾನವನ್ನು ಲೆಕ್ಕಿಸದೆ ಉಚಿತ ಗುಣಾತ್ಮಕ ಶಿಕ್ಷಣ ಒದಗಿಸುವ ಸಾರ್ವಜನಿಕ ಶಾಲೆಗಳು ಎಲ್ಲಾ ವರ್ಗಕ್ಕೂ ಮುಕ್ತವಾಗಿವೆ. ಎಲೈಟ್ ಮತ್ತು ಸಾಮಾನ್ಯ ಶಾಲೆಗಳ ನಡುವೆ ವ್ಯತ್ಯಾಸ, ತಾರತಮ್ಯವಿಲ್ಲ.

ಫಿನ್ನಿಷ್ ವಿದ್ಯಾರ್ಥಿಗಳಲ್ಲಿ ಬಹುಪಾಲು ಮಕ್ಕಳು ಸಾರ್ವಜನಿಕ ಶಾಲೆಗಳಿಗೆ ಹೋಗುತ್ತಾರೆ. ಮಗು ಎಲ್ಲಿಂದ ಬಂದರೂ ಕಲಿಯಲು, ಬೆಳೆಯಲು ಮತ್ತು ಯಶಸ್ವಿಯಾಗಲು ಒಂದೇ ಬಗೆಯ ಅವಕಾಶಕ್ಕೆ ಅರ್ಹವಾಗಿದೆ.

ಭಾರತದಲ್ಲಿ 14 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಉಚಿತ ಹಾಗೂ ಕಡ್ಡಾಯ ಶಿಕ್ಷಣ ಒಂದು ಕಾಲಮಿತಿ ಕಾರ್ಯಕ್ರಮವಾಗಿತ್ತೇ ಹೊರತು, ಮೂಲಭೂತ ಹಕ್ಕಾಗಿರಲಿಲ್ಲ. 2002ರಲ್ಲಿ 86ನೇ ಸಂವಿಧಾನ ತಿದ್ದುಪಡಿಯ ಮೂಲಕ ಶಿಕ್ಷಣವನ್ನು ಸಂವಿಧಾನದಲ್ಲಿ ಮೂಲಭೂತ ಹಕ್ಕನ್ನಾಗಿ ಸೇರಿಸುವಾಗ, ಹುಟ್ಟಿನಿಂದ 14 ವರ್ಷದವರೆಗಿದ್ದ ವ್ಯಾಪ್ತಿಯನ್ನು 6ರಿಂದ 14 ವರ್ಷಕ್ಕೆ ಸೀಮಿತಗೊಳಿಸುವ ಮೂಲಕ, ಸಂವಿಧಾನದ ಮೂಲ ಆಶಯವನ್ನೇ ತಿಳಿಗೊಳಿಸಲಾಯಿತು. ನಂತರ, ಈ ಮೂಲಭೂತ ಹಕ್ಕನ್ನು ಜಾರಿಗೊಳಿಸಲು 2009ರ ಆಗಸ್ಟ್‌ನಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣಕ್ಕಾಗಿ ಮಕ್ಕಳ ಹಕ್ಕು ಕಾಯ್ದೆಯನ್ನು (ಶಿಕ್ಷಣ ಹಕ್ಕು ಕಾಯ್ದೆ) ರೂಪಿಸಿ, 2010ರ ಏಪ್ರಿಲ್‌ನಲ್ಲಿ ಜಾರಿ ಮಾಡಲಾಯಿತು. ಆದರೆ, ಅದು ದೇಶದ ಆದ್ಯತೆಯಾಗಲೇ ಇಲ್ಲ.

ಅಂದಿನಿಂದ ಇಂದಿನವರೆಗೆ ಶಾಸಕಾಂಗ ಮತ್ತು ಕಾರ್ಯಾಂಗವು ಸಂವಿಧಾನದ ಈ ಮೂಲಭೂತ ಹಕ್ಕನ್ನು ಬದ್ಧತೆಯಿಂದ ಜಾರಿಗೊಳಿಸುವ ಪ್ರಾಮಾಣಿಕತೆ ತೋರಿಸಿಲ್ಲ. ಫಿನ್ಲೆಂಡ್‌ನಂತಹ ದೇಶಕ್ಕೆ ಅದು ರಾಷ್ಟ್ರೀಯ ಆದ್ಯತೆಯಾದರೆ, ಭಾರತಕ್ಕೆ ಅದು ಬೇಡವಾದ ಖರ್ಚಿನ ಹೊರೆ. ಕಾಯ್ದೆ ರೂಪುಗೊಂಡು 16 ವರ್ಷಗಳಾದರೂ, ನಮ್ಮ ಜನಪ್ರತಿನಿಧಿಗಳಿಗಾಗಲಿ, ಕಾರ್ಯಾಂಗದಲ್ಲಿನ ಅಧಿಕಾರಿ ವರ್ಗವಾಗಲಿ ಅಥವಾ ಗಾಂಧೀಜಿಯ ಸರ್ವೋದಯ ಕಲ್ಪನೆಯ ಮೂಲಕ ಗ್ರಾಮ ಸ್ವರಾಜ್ಯವನ್ನು ಸ್ಥಾಪಿಸಿಬೇಕಾದ ನಮ್ಮ ಸ್ಥಳೀಯ ಸರ್ಕಾರಗಳೆಂದೇ ಗುರುತಿಸಲಾಗುವ ಪಂಚಾಯಿತಿ ವ್ಯವಸ್ಥೆಗಾಗಲಿ ಇದರ ಬಗ್ಗೆ ಕಾಳಜಿಯಿಲ್ಲ. ಸ್ವಲ್ಪಮಟ್ಟಿಗೆ ಆಮ್ ಆದ್ಮಿ ಪಕ್ಷ ಹಾಗೂ ಕೇರಳದ ಎಡಪಕ್ಷ ಹೊರತುಪಡಿಸಿದರೆ, ಶಿಕ್ಷಣದ ಮೂಲಭೂತ ಹಕ್ಕನ್ನು ನಿರ್ಲಕ್ಷಿಸುವಲ್ಲಿ ಉಳಿದೆಲ್ಲ ರಾಜಕೀಯ ಪಕ್ಷಗಳು ಒಂದೇ ಆಗಿವೆ. ಮಾನವ ಹಕ್ಕು ಆಧಾರಿತ ನೆಲೆಯ ಕಾನೂನುಗಳನ್ನು ನಿರ್ಲಕ್ಷಿಸುವುದು ಅಥವಾ ತಿರುಚಿ ತಿಳಿಗೊಳಿಸುವುದು ಇಂದು ಹೊಸ ಬಗೆಯ ರಾಜಕೀಯವಾಗಿದೆ.

ಫಿನ್ಲೆಂಡ್ ದೇಶದ ಶಿಕ್ಷಣ ವ್ಯವಸ್ಥೆ ಸಮಾನತೆಯ ತಾತ್ತ್ವಿಕತೆಯನ್ನು ಒಳಗೊಂಡಿದೆ. ಸಮಾನತೆ–ಸೌಹಾರ್ದದ ಬಗ್ಗೆ ಭಾವುಕವಾಗಿ ಮಾತನಾಡುವ ನಮ್ಮ ಶಿಕ್ಷಣ ವ್ಯವಸ್ಥೆಯ ಪ್ರಾಥಮಿಕ ಸ್ವರೂಪವೇ ಅಸಮಾನತೆಯ ನೆಲಗಟ್ಟಿನದು. ಸುಧಾರಣೆಗಳು ಭಿನ್ನವಾದಾಗಷ್ಟೇ ಶಿಕ್ಷಣ ವ್ಯವಸ್ಥೆ ಮಾನವೀಯವಾಗುತ್ತದೆ, ಮಕ್ಕಳ ಮನೋವಿಕಾಸ ಸಾಧ್ಯವಾಗುತ್ತದೆ.


ರಾಷ್ಟ್ರೀಯ ಬದ್ಧತೆಯ ಶಾಲಾ ಶಿಕ್ಷಣವು ಫಿನ್ಲೆಂಡ್‌ನಲ್ಲಿ ಸ್ಪರ್ಧೆ ಆಗಿರದೆ ಸಾಮೂಹಿಕ ಧ್ಯೇಯವಾಗಿದೆ. ಸರ್ಕಾರ, ಶಿಕ್ಷಕರು, ಪೋಷಕರು, ಸಮಾಜ ಮತ್ತು ಇಡೀ ದೇಶ ಒಟ್ಟಾರೆಯಾಗಿ ಅತ್ಯುತ್ತಮ ಶಿಕ್ಷಣದ ಮೂಲಕ ಪ್ರತಿ ಮಗುವಿನ ಪೂರ್ಣ ಸಾಮರ್ಥ್ಯವನ್ನು ಪೋಷಿಸುವಲ್ಲಿ ನಂಬಿಕೆ ಇಟ್ಟಿದ್ದಾರೆ. ವ್ಯವಸ್ಥೆಯ ಒಳಗೊಳ್ಳುವಿಕೆಯ ತತ್ತ್ವವು ಆಯ್ಕೆಯಲ್ಲ, ಸಮಾನ ಅವಕಾಶ. ಮಗು ಫಿನ್ಲೆಂಡ್‌ನಲ್ಲಿನ ಲ್ಯಾಪ್‌ಲ್ಯಾಂಡ್‌ನ ಸಣ್ಣ ಸರೋವರದ ಹಳ್ಳಿಯಲ್ಲಿರಲಿ ಅಥವಾ ಪ್ರತಿಷ್ಠಿತ ಹೆಲ್ಸಿಂಕಿ ನಗರದ ನೆರೆಹೊರೆಯಲ್ಲಿರಲಿ, ಅರ್ಹ ಶಿಕ್ಷಕರು, ಸ್ವಚ್ಛ ಸೌಲಭ್ಯಗಳು, ಬೆಚ್ಚಗಿನ ಊಟ ಮತ್ತು ಕಲಿಕೆಗೆ ಪೂರಕವಾದ ಎಲ್ಲಾ ಸೌಲಭ್ಯಗಳನ್ನು ಹೊಂದಿರುವ ಸುಸಜ್ಜಿತ ಶಾಲೆಗೆ ಹಾಜರಾಗುತ್ತದೆ. ಅಮೆರಿಕದಂತೆ ಉತ್ತಮ ಶಾಲೆ ಹುಡುಕಲು ವಾಸ್ತವ್ಯ ಬದಲಿಸಬೇಕಾದ ಬಗ್ಗೆ ಚಿಂತಿಸಬೇಕಾಗಿಲ್ಲ. ದೇಶದ ಪ್ರತಿಯೊಂದು ಶಾಲೆಯೂ ಉತ್ತಮ ಶಾಲೆಯಾಗಿದೆ. ಈ ಬಗೆಯ ಸಮಾನತೆ ಮತ್ತು ಸ್ಥಿರತೆ ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಲ್ಲಿ ಬಲವಾದ ನಂಬಿಕೆಯನ್ನು ಹುಟ್ಟುಹಾಕಿದೆ.

ಭಾರತದಲ್ಲಿ ವರ್ಗಾಧಾರಿತ ಶಿಕ್ಷಣ ವ್ಯವಸ್ಥೆಯಿದೆ. ಬೆರಳೆಣಿಕೆಯ ಶ್ರೀಮಂತ ಉದ್ಯಮಿ ಹಾಗೂ ವ್ಯಾಪಾರಸ್ಥ ವರ್ಗಕ್ಕೆ ಸಕಲ ಸೌಲಭ್ಯಗಳಿರುವ ಅಂತರರಾಷ್ಟ್ರೀಯ ಬ್ಯಾಕಲೌರಿಯೇಟ್ ಶಾಲೆಗಳಿವೆ. ಮೇಲ್ವರ್ಗದ ಶ್ರೀಮಂತರಿಗೆ ಆಕ್ಸ್‌ಫರ್ಡ್–ಕೇಂಬ್ರಿಡ್ಜ್‌ನ ಇಂಟರ್‌ನ್ಯಾಷನಲ್ ಜನರಲ್ ಸರ್ಟಿಫಿಕೇಟ್ ಆಫ್ ಸೆಕೆಂಡರಿ ಎಜುಕೇಷನ್ ಶಾಲೆಗಳಿವೆ. ರಾಜಕಾರಣಿಗಳು, ಜನಪ್ರತಿನಿಧಿಗಳು, ಮೇಲ್ಮಧ್ಯಮ ವರ್ಗ, ಕೇಂದ್ರ ಸರ್ಕಾರ ಹಾಗೂ ರಾಜ್ಯ ಸರ್ಕಾರದ ಉನ್ನತ ಅಧಿಕಾರಿಗಳು, ನ್ಯಾಯಾಂಗದ ಪ್ರಮುಖ ವರ್ಗಕ್ಕೆ ಪ್ರತಿಷ್ಠಿತ ಸಿಬಿಎಸ್‌ಇ ಮತ್ತು ಐಸಿಎಸ್‌ಇ ಶಾಲೆಗಳು ಹಾಗೂ ಕೆಳ ಮಧ್ಯಮ ವರ್ಗ ಮತ್ತು ಸಣ್ಣಪುಟ್ಟ ವ್ಯಾಪಾರಿ ವರ್ಗಕ್ಕೆ ಚೋಟಾಮೋಟಾ ಲೋ ಬಜೆಟ್ ಖಾಸಗಿ ಶಾಲೆಗಳಿವೆ. ಬಹುಸಂಖ್ಯಾತ ಬಡ ಮಧ್ಯಮ, ಹಿಂದುಳಿದ, ದಲಿತ ಹಾಗೂ ಮುಸ್ಲಿಂ ಅಲ್ಪಸಂಖ್ಯಾತ ವರ್ಗಕ್ಕೆ ಕನಿಷ್ಠ ಸೌಲಭ್ಯಗಳ ಸರ್ಕಾರಿ ಶಾಲೆಗಳು! ಶಿಕ್ಷಣದಲ್ಲಿ ಅಸಮಾನತೆ, ತಾರತಮ್ಯ ಹಾಗೂ ಶ್ರೇಣೀಕೃತ ವ್ಯವಸ್ಥೆ ಸಾಂಸ್ಥೀಕರಣಗೊಂಡಿದೆ. ಸಂವಿಧಾನ, ಶಿಕ್ಷಣ ಆಯೋಗಗಳು, ರಾಷ್ಟ್ರೀಯ ಶಿಕ್ಷಣ ನೀತಿಗಳು (2020 ಅನ್ನು ಹೊರತುಪಡಿಸಿ) ಮತ್ತು ಎಲ್ಲಕ್ಕಿಂತ ಮುಖ್ಯವಾಗಿ, ಎಲ್ಲಾ ಮಕ್ಕಳಿಗೆ ಸಮಾನ ಗುಣಮಟ್ಟ ಒದಗಿಸಬಹುದಾದ ಸಮಾನ ಶಾಲಾ ಶಿಕ್ಷಣ ವ್ಯವಸ್ಥೆಯ ಪರವಾಗಿ ಜನಾಶಯ ಇದ್ದರೂ, ಪ್ರಭುತ್ವಕ್ಕೆ ಅದು ಆಶಯವೂ ಅಲ್ಲ, ಆದ್ಯತೆಯೂ ಅಲ್ಲ.

ಕಲಿಕಾ ವ್ಯವಸ್ಥೆಯ ಬಗ್ಗೆ ಹೇಳುವುದಾದರೆ, ಫಿನ್ನಿಷ್ ವಿದ್ಯಾರ್ಥಿಗಳು ಶಾಲೆಯಲ್ಲಿ ಅತ್ಯಂತ ಕಡಿಮೆ ಸಮಯ ಕಳೆಯುತ್ತಾರೆ, ಶಿಕ್ಷಕರಿಂದ ಕಡಿಮೆ ಹೋಂವರ್ಕ್ ಪಡೆಯುತ್ತಾರೆ ಮತ್ತು ವಿರಳವಾಗಿ ಬೋರ್ಡ್ ಪರೀಕ್ಷೆಗಳನ್ನು ಬರೆಯುತ್ತಾರೆ. ಹೀಗಿದ್ದರೂ, ಆ ಮಕ್ಕಳು ಕಲಿಕೆಯ ಫಲಿತಾಂಶಗಳಲ್ಲಿ ಅನೇಕ ಜಾಗತಿಕ ಗೆಳೆಯರನ್ನು ಮೀರಿಸುತ್ತಾರೆ. ಈ ಯಶಸ್ಸಿನ ಹಿಂದೆ ಒಂದು ಪ್ರಬಲ ಸಂದೇಶವಿದೆ. ವಿಶ್ವದರ್ಜೆಯ ಶಿಕ್ಷಣದ ಅಡಿಪಾಯವು ಹೆಚ್ಚಿನ ಬೋರ್ಡ್ ಪರೀಕ್ಷೆಗಳು ಅಥವಾ ದೀರ್ಘಕಾಲದ ಶಾಲಾ ದಿನಗಳು ಅಥವಾ ಮಕ್ಕಳಿಗೆ ಗೂನು ಬೆನ್ನಾಗುವಷ್ಟು ಶಿಕ್ಷಣದ ಹೊರೆ ಅಥವಾ ಮನೆ ಕೆಲಸದಲ್ಲಿ ಇರುವುದಿಲ್ಲ. ಬದಲಿಗೆ, ಮಕ್ಕಳ ಮೇಲಿನ ನಂಬಿಕೆ, ಆತ್ಮವಿಶ್ವಾಸ, ಕಲಿಕಾ ಸ್ವಾತಂತ್ರ್ಯ, ಕಲಿಯುವ ಕ್ರಮ, ಕಲಿಸುವವರ ಸಾಮರ್ಥ್ಯ, ಉತ್ತಮ ಕಲಿಕಾ ವಾತಾವರಣ, ಎಲ್ಲಕ್ಕಿಂತ ಮಿಗಿಲಾಗಿ ಮಕ್ಕಳ ಯೋಗಕ್ಷೇಮದಲ್ಲಿದೆ. ಅಭಿವೃದ್ಧಿ ಹೊಂದಿದ ಜಗತ್ತಿನಲ್ಲಿ, ಫಿನ್ಲೆಂಡ್ ಅತ್ಯಂತ ಕಡಿಮೆ ಶಾಲಾ ದಿನಗಳು ಮತ್ತು ಕಡಿಮೆ ಪ್ರಮಾಣದ ಹೋಂವರ್ಕ್ ಹೊಂದಿದ್ದರೂ, ಅಲ್ಲಿನ ವಿದ್ಯಾರ್ಥಿಗಳು ಶೈಕ್ಷಣಿಕ ಕಾರ್ಯಕ್ಷಮತೆ, ವಿಮರ್ಶಾತ್ಮಕ ಚಿಂತನೆ, ಸೃಜನಶೀಲತೆ ಮತ್ತು ಜೀವನತೃಪ್ತಿಯಲ್ಲಿ ನಿರಂತರವಾಗಿ ಉನ್ನತ ಸ್ಥಾನ ಹೊಂದಿದ್ದಾರೆ; ಶಾಲೆಗೆ ಹೋಗುವುದನ್ನು ಆನಂದಿಸುತ್ತಾರೆ.

ಭಾರತದಲ್ಲಿ ಬೆನ್ನು ಬಾಗಿ ಮುರಿಯುವಷ್ಟು ಪುಸ್ತಕದ ಹೊರೆಯಿಂದಾಗಿ, ಶಾಲೆ ಮುಟ್ಟುವ ವೇಳೆಗೆ ಮಕ್ಕಳು ಅರ್ಧ ದಣಿದಿರುತ್ತಾರೆ. ತರಗತಿಯಲ್ಲಿ ಕುಳಿತು, ಶಿಕ್ಷಕರು ಹೇಳಿದ್ದನ್ನು ಪುನರಾವರ್ತಿಸುವ ಮೂಲಕ, ಬರೀ ಪರೀಕ್ಷೆಗಾಗಿ ಉರು ಹೊಡೆಯುವ ಪದ್ಧತಿ ನಮ್ಮ ಪ್ರಧಾನ ಕಲಿಕಾ ವಿಧಾನ. ಆಳವಾದ ತಿಳಿವಳಿಕೆಗಿಂತ ಮಾಹಿತಿ ನೆನಪಿಡುವ ಮೂಲಕ ಪರೀಕ್ಷೆಗಳಿಗೆ ತ್ವರಿತವಾಗಿ ಸಿದ್ಧವಾಗುವುದೇ ಶಿಕ್ಷಣದ ಮೂಲ ಉದ್ದೇಶ. ಶಾಲೆ ಸಂತಸದ ಕಲಿಕಾ ತಾಣವಾಗುವ ಬದಲು, ಅತಿಯಾದ ಶಿಸ್ತು–ಶಿಕ್ಷೆಯ ಮೂಲಕ, ಭಯ–ಆತಂಕದ ನಡುವೆ ಮಾಹಿತಿಯನ್ನು ಒದಗಿಸುವ ಮಾಹಿತಿ ಕೇಂದ್ರವಾಗಿದೆ.

ಶಾಲಾ ಶಿಕ್ಷಣದ ಗುರಿ ಸೃಜನಶೀಲತೆ, ವಿಮೋಚನೆ ಹಾಗೂ ಉತ್ತಮ ಪೌರತ್ವ. ಆದರೆ, ನಮ್ಮ ಆಧುನಿಕ ಶಿಕ್ಷಣ ಮಕ್ಕಳಿಗೆ ತೀವ್ರ ಶೈಕ್ಷಣಿಕ ಹೊರೆ, ಒತ್ತಡ ಹಾಗೂ ಹಾನಿಕಾರಕ ಶಿಸ್ತಿನ ಮೂಲಕ ಮಕ್ಕಳಿಗೆ ಚಿತ್ರಹಿಂಸೆ ನೀಡುವ ಕಾರಾಗೃಹಗಳಂತಾಗಿವೆ. ಇದು ಶಿಕ್ಷಣದ ಆಶಯವೂ ಅಲ್ಲ, ಆದ್ಯತೆಯೂ ಅಲ್ಲ. ನಮ್ಮ ಹೊಸ ಸುಧಾರಣೆಗಳು ಭಿನ್ನವಾದಾಗ ಮಕ್ಕಳು ಶಾಲೆಯನ್ನು ಪ್ರೀತಿಸುತ್ತಾರೆ, ಆನಂದಿಸುತ್ತಾರೆ.



ವಾಚಕರ ವಾಣಿ

ರಕ್ಷಕರೇ ಭಕ್ಷಕರಾದರೆ ಜನರ ರಕ್ಷಣೆ ಹೇಗೆ?

ರಾಜ್ಯದ ರಕ್ಷಣೆಯ ಹೊಣೆ ಹೊತ್ತ ಪೊಲೀಸ್ ಅಧಿಕಾರಿಗಳು ಲಂಚ ಪಡೆಯುವಾಗ ಲೋಕಾಯುಕ್ತ ಅಧಿಕಾರಿಗಳ ಬಲೆಗೆ ಬೀಳುತ್ತಿದ್ದಾರೆ. ಈ ಬೆಳವಣಿಗೆ ನೋಡಿದರೆ ಜನಸಾಮಾನ್ಯರು ಯಾರನ್ನು ರಕ್ಷಣೆ ನೀಡುವಂತೆ ಕೇಳುವುದು? ಪೊಲೀಸ್ ಇಲಾಖೆಯಲ್ಲಿ ಬೇಲಿಯೇ ಎದ್ದು ಹೊಲ ಮೇಯುವಂತಹ ಸ್ಥಿತಿ ಸೃಷ್ಟಿಯಾಗಿದೆ. ಜನಸಾಮಾನ್ಯರ ಬಗ್ಗೆ ಜನಪ್ರತಿನಿಧಿಗಳಿಗಾಗಲೀ ಸರ್ಕಾರಿ ಅಧಿಕಾರಿಗಳಿಗಾಗಲೀ ಕಿಂಚಿತ್ತು ಮಾನವೀಯತೆ ಇಲ್ಲ. ಲಂಚ ಪಡೆಯುವುದಕ್ಕಾಗಿಯೇ ಇಡೀ ಸೇವಾವಧಿಯನ್ನು ಮೀಸಲಿಟ್ಟಂತೆ ಕಾಣುತ್ತದೆ. ಲೋಕಾಯುಕ್ತ ಅಧಿಕಾರಿಗಳು ಲಂಚಕೋರರನ್ನು ಸೆರೆ ಹಿಡಿದರೆ ಸಾಲದು; ಸಕಾಲದಲ್ಲಿ ಅವರಿಗೆ ಶಿಕ್ಷೆ ಕೊಡಿಸುವ ಬಗ್ಗೆಯೂ ಜಾಗ್ರತೆವಹಿಸಬೇಕಿದೆ.

ಶ್ರುತಿ ಎ.ಸಿ. ರಾಂಪುರ, ಚನ್ನಪಟ್ಟಣ

ದೈಹಿಕ ಶಿಕ್ಷಣದ ಬಗ್ಗೆ ಸರ್ಕಾರದ ತಾತ್ಸಾರ

ಮಕ್ಕಳಿಗೆ ಯೋಗ, ಆರೋಗ್ಯ, ವ್ಯಾಯಾಮ, ಆಟ, ರಾಷ್ಟ್ರೀಯ ಮೌಲ್ಯ ಶಿಕ್ಷಣವನ್ನು ಇತರೆ ವಿಷಯಗಳಂತೆ ಬೋಧಿಸಲು ಸರ್ಕಾರವು 2008ರಲ್ಲಿ ದೈಹಿಕ ಶಿಕ್ಷಣ ಪಠ್ಯಪುಸ್ತಕವನ್ನು ರಚಿಸಿದೆ. ಮಕ್ಕಳು ಅದರ ಲಾಭವನ್ನೂ ಪಡೆಯುತ್ತಿದ್ದಾರೆ. ಹೀಗಿದ್ದರೂ, ಪ್ರತ್ಯೇಕವಾಗಿ ಯೋಗ ಶಿಕ್ಷಕರನ್ನು ನೇಮಿಸಲು ಆದೇಶ ಹೊರಡಿಸಿರುವುದು ಎಷ್ಟರಮಟ್ಟಿಗೆ ಸರಿ? ಮಹಾರಾಷ್ಟ್ರ, ತಮಿಳುನಾಡು, ಗೋವಾ ಸೇರಿ ಇತರ ರಾಜ್ಯಗಳು ದೈಹಿಕ ಶಿಕ್ಷಣ ಶಿಕ್ಷಕರನ್ನು ಇತರೆ ಶಿಕ್ಷಕರಂತೆ ಪರಿಗಣಿಸಿ ಕೆಲಸ ಮಾಡಲು ಉತ್ಸಾಹ ತುಂಬುತ್ತಿವೆ. ಕರ್ನಾಟಕದಲ್ಲಿ ಮಾತ್ರ ದೈಹಿಕ ಶಿಕ್ಷಣದ ಬೇಡಿಕೆಗಳನ್ನು ಗಂಭೀರವಾಗಿ ಪರಿಗಣಿಸುತ್ತಿಲ್ಲ.

ಜಿ. ಪಳನಿಸ್ವಾಮಿ ಜಾಗೇರಿ, ಕೊಳ್ಳೇಗಾಲ

ಸ್ಥೂಲಕಾಯ: ಚಿಣ್ಣರ ಭವಿಷ್ಯಕ್ಕೆ ಕುತ್ತು

ಕೇಂದ್ರದ ಆರ್ಥಿಕ ಸಮೀಕ್ಷೆಯು ಉಪ್ಪು, ಸಕ್ಕರೆ, ಕೊಬ್ಬಿನಾಂಶ ಹೆಚ್ಚಿರುವ ಹಾಗೂ ಸಂಸ್ಕರಿಸಿದ ಆಹಾರ ಪದಾರ್ಥಗಳ ಬಳಕೆಯಿಂದ ಜನರು, ಅದರಲ್ಲೂ ಮಕ್ಕಳು ಎದುರಿಸುತ್ತಿರುವ ಆರೋಗ್ಯ ಸಮಸ್ಯೆಗಳ ಬಗ್ಗೆ ಆತಂಕಕಾರಿ ವಿಚಾರವನ್ನು ಬಹಿರಂಗಗೊಳಿಸಿದೆ. ಈಗಾಗಲೇ, ಸಂಸ್ಕರಿಸಿದ ಪದಾರ್ಥಗಳು ಮಕ್ಕಳ ದಿನನಿತ್ಯದ ಆಹಾರದ ಭಾಗವಾಗಿವೆ. ಅವರನ್ನು ಅವುಗಳ ಸೇವನೆಯಿಂದ ಹೊರತರುವುದು ಸವಾಲೇ ಸರಿ. ರಕ್ತದೊತ್ತಡ, ಮಧುಮೇಹದಂತಹ ಜೀವನಶೈಲಿ ಸಂಬಂಧಿ ರೋಗಗಳಿಗೆ ಮಕ್ಕಳು ಬಲಿಯಾಗುತ್ತಿರುವುದು ಆರೋಗ್ಯ ಕ್ಷೇತ್ರಕ್ಕೆ ದೊಡ್ಡ ಸವಾಲು. ಈ ಬಗ್ಗೆ ಎಚ್ಚೆತ್ತುಕೊಳ್ಳದಿದ್ದರೆ ಮುಂದಿನ ಪೀಳಿಗೆಯು ಹಲವು ಗಂಭೀರ ಕಾಯಿಲೆಗಳಿಗೆ ತುತ್ತಾಗಿ, ಅವರ ಭವಿಷ್ಯ ಅಂಧಕಾರಕ್ಕೆ ಜಾರಲಿದೆ.

ಆನಂದ ಎನ್.ಎಲ್., ಅಜ್ಜಂಪುರ

ರಂಗ ಪರಿಷೆಯಲ್ಲಿ ಮಕ್ಕಳ ಬಗ್ಗೆ ಉಪೇಕ್ಷೆ

ಫೆ. 1ರಿಂದ 6ರ ವರೆಗೆ ಬೆಂಗಳೂರಿನ ಕಲಾಗ್ರಾಮದಲ್ಲಿ ರಾಷ್ಟ್ರೀಯ ರಂಗೋತ್ಸವ ಏರ್ಪಡಿಸಲಾಗಿದೆ. ಕೇಂದ್ರ ಸಂಸ್ಕೃತಿ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ರಾಷ್ಟ್ರೀಯ ನಾಟಕ ಶಾಲೆ, ಕರ್ನಾಟಕ ನಾಟಕ ಅಕಾಡೆಮಿಯಿಂದ ನಡೆಯುತ್ತಿರುವ ಈ ರಂಗ ಪರಿಷೆಯಲ್ಲಿ ಬಹುಭಾಷಾ ನಾಟಕಗಳು, ಬೀದಿನಾಟಕಗಳಿವೆ. ರಂಗಭೂಮಿ ಕುರಿತು ಚಿತ್ರ ಪ್ರದರ್ಶನ, ವಿಚಾರ ಗೋಷ್ಠಿ, ಹಿರಿಯ ರಂಗಕರ್ಮಿಗಳಿಗೆ ರಂಗ ಗೌರವ ಎಲ್ಲವೂ ಇದೆ. ಆದರೆ, ಮಕ್ಕಳ ರಂಗಭೂಮಿ ಕುರಿತು ಗೋಷ್ಠಿಗಳೇ ಇಲ್ಲ; ಮಕ್ಕಳ ನಾಟಕಗಳೂ ಇಲ್ಲ. ಇಂತಹ ಮಹತ್ವದ ವಿಚಾರ ಅನುಭವಿ ಆಯೋಜಕರ ಗಮನಕ್ಕೆ ಬರಲಿಲ್ಲವೇಕೆ? 62 ಮಂದಿಯ ಕವಿಗೋಷ್ಠಿಯನ್ನೂ ಏರ್ಪಡಿಸಲಾಗಿದೆ. ರಂಗಭೂಮಿಗೆ ನೇರ ಸಂಬಂಧವಿಲ್ಲದ ಕವಿಗೋಷ್ಠಿ ಏರ್ಪಡಿಸುವ ಬದಲು, ಮಕ್ಕಳ ರಂಗಭೂಮಿ ಕುರಿತು ಚರ್ಚೆ, ನಾಟಕಗಳ ಪ್ರದರ್ಶನವನ್ನು ಏರ್ಪಡಿಸಬಹುದಿತ್ತಲ್ಲವೆ?

ಗಿರಿಧರ ಕಾರ್ಕಳ, ಬೆಂಗಳೂರು

ವಯೋಮಿತಿ ಸಡಿಲಿಕೆ ಪರಿಷ್ಕರಣೆ ಅಗತ್ಯ

ಸರ್ಕಾರಿ ಹುದ್ದೆಗಳಿಗೆ ನೇರ ನೇಮಕಾತಿಗೆ ಸಂಬಂಧಿಸಿದಂತೆ ಗರಿಷ್ಠ ವಯೋಮಿತಿಯನ್ನು ಒಂದು ಬಾರಿಗೆ ಐದು ವರ್ಷ ವಿಸ್ತರಿಸಿರುವುದು ಸ್ವಾಗತಾರ್ಹ. ಈ ಆದೇಶವು 2026ರ ಜನವರಿ 29ರಿಂದ ಅನುಮೋದನೆ ಆಗಿ 2027ರ ಡಿಸೆಂಬರ್ 31ರ ವರೆಗೆ ಜಾರಿಯಲ್ಲಿ ಇರಲಿದೆ. ಇದು ಸಾವಿರಾರು ಉದ್ಯೋಗಾಕಾಂಕ್ಷಿಗಳಿಗೆ ಸಂತಸ ತಂದಿದೆ. ಆದರೆ, ಜನವರಿ 1ರಿಂದ 28ರ ವರೆಗೆ ಜನಿಸಿದವರ ಪಾಲಿಗೆ ಮರಣಶಾಸನವಾಗಿದೆ. ನಾಲ್ಕೈದು ವರ್ಷಗಳಿಂದ ಹೊಸದಾಗಿ ನೇಮಕಾತಿಯೇ ನಡೆದಿಲ್ಲ. ಹಾಗಾಗಿ, ವಯೋಮಿತಿ ವಿಸ್ತರಣೆ ಆದೇಶದಿಂದ ಈ ಅವಧಿಯಲ್ಲಿ ಜನಿಸಿದವರಿಗೆ ಅನ್ಯಾಯವಾಗಲಿದೆ. ಜನವರಿ 1ರಿಂದ ಅನ್ವಯಿಸುವಂತೆ ಆದೇಶ ಪರಿಷ್ಕರಿಸಿ ಹೊರಡಿಸಿದರೆ ಅನುಕೂಲವಾಗಲಿದೆ.

ಗಣೇಶ್, ಬೆಂಗಳೂರು

ಪುಸ್ತಕ ಸಂಸ್ಕೃತಿ ಕಡೆಗಣಿಸಿದ್ದು ಸರಿಯೆ?

ಈ ಹಿಂದೆ ಸರ್ಕಾರ ಆಯಾ ವರ್ಷ ಪ್ರಕಟಗೊಂಡಿರುವ ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡು 300 ಪ್ರತಿಗಳನ್ನು ಸಗಟು ಖರೀದಿಸಿ ರಾಜ್ಯದ ಗ್ರಂಥಾಲಯಗಳಿಗೆ ಸರಬರಾಜು ಮಾಡುತ್ತಿತ್ತು. ಈ ವ್ಯವಸ್ಥೆ ಕ್ರಮಬದ್ಧವಾಗಿ ನಡೆಯುತ್ತಿತ್ತು. ಇದರಿಂದ ಓದುಗ ಸಮುದಾಯ ಮತ್ತು ಲೇಖಕರಿಗೆ ಪ್ರಯೋಜನವಾಗುತ್ತಿತ್ತು. ಹೊಸ ಸರ್ಕಾರ ಬಂದ ಮೇಲೆ 2023ನೇ ಸಾಲಿನಲ್ಲಿ ಪ್ರಕಟಗೊಂಡ ಪುಸ್ತಕಗಳನ್ನೇನೊ ಆಯ್ಕೆ ಮಾಡಿತು. ಆದರೆ, ಪುಸ್ತಕ ಖರೀದಿ ಮಾಡಲಿಲ್ಲ. ನಂತರ ಪುಸ್ತಕ ಆಯ್ಕೆ ವ್ಯವಸ್ಥೆಯೇ ಸ್ಥಗಿತಗೊಂಡು ಬಿಟ್ಟಿದೆ. ಇದೆಂತಹ ಧೋರಣೆ? ಈ ವರ್ಷ ಪ್ರಕಾಶಕರು ಮತ್ತು ಲೇಖಕರ ಒತ್ತಡ, ಒತ್ತಾಯಕ್ಕೆ ಪ್ರತಿಕ್ರಿಯೆಯಾಗಿ ಪುಸ್ತಕ ಖರೀದಿಗೆ ಸೂಕ್ತ ಅನುದಾನ ಒದಗಿಸಲಾಗುವುದೆಂದು ಸರ್ಕಾರ ಹೇಳಿಕೊಂಡು ಬಂದಿದೆ. ಆದರೂ, ಇಲ್ಲಿಯವರೆಗೆ ಯಾವುದೇ ಕ್ರಮಕೈಗೊಂಡಿಲ್ಲ. ಇಂತಹ ಅವಜ್ಞೆ ಏಕೆ?

ಹರೀಶ್ ಕುಮಾರ್ ಕುಡ್ತಡ್ಕ, ಮಂಗಳೂರು

ಚುರುಮುರಿ

ಬಜೆಟ್ ಕನಸು



• ಸುಮಂಗಲಾ

ಬೆಕ್ಕಣ್ಣ ವಾರದಿಂದ ನಿರ್ಮಲಕ್ಕನ ಬಜೆಟ್ ಮಂಡನೆಗೆ ಕಾಯುತ್ತಿತ್ತು.

'ಯಾವ ಬಜೆಟ್ ಬಂದರೂ ಶ್ರೀಸಾಮಾನ್ಯರ ಬದುಕಿನಲ್ಲಿ ಏನಂಥ ವ್ಯತ್ಯಾಸ ಆಗಲ್ಲ ಬಿಡು' ಎಂದು ನಾನು ಹೇಳಿದರೆ, 'ಜಿಡಿಪಿ ಎಷ್ಟ್ ಹೆಚ್ಚಾಗೈತೆ ನೋಡು' ಎಂದು ಗುರುಗುಟ್ಟಿತು.

'ಆಕಿ 9ನೇ ಸಲ ಬಜೆಟ್ ಮಂಡನೆ ಮಾಡಾತಾಳೆ ಅನ್ನೂದೆ ಐತಿಹಾಸಿಕ ಮಹತ್ವದ್ದು, ತಿಳಕೋ!' ಎಂದು ನನ್ನ ಮುಖಕ್ಕೆ ತಿವಿದು ಬೆಳಗ್ಗೆಯೇ ಟಿ.ವಿ ಮುಂದೆ ವಿರಾಜಮಾನವಾಗಿತ್ತು.

ನಿರ್ಮಲಕ್ಕ ಕೆನ್ನೇರಳೆ ಬಣ್ಣದ ಸೀರೆಯುಟ್ಟಿದ್ದು ನೋಡಿ, ತಾನೂ ಅಂಥದ್ದೇ ಬಣ್ಣದ ಅಂಗಿ ಹಾಕಿಕೊಂಡು ಕೂತಿತು.

'ಫಸ್ಟಿಗೇ ಆಕಿ ಕರ್ತವ್ಯ ಮಂತ್ರದ ಬಗ್ಗೆ ಹೇಳ್ಯಾಳೆ. ಬಜೆಟ್‌ನಾಗೆ ರಾಜ್ಯಕ್ಕೆ ಕೇಂದ್ರ ಏನು ಕೊಡತದೋ ಬಿಡತದೋ, ಆದರೆ ರಾಜ್ಯಗಳು ತಮ್ಮ ಕರ್ತವ್ಯಪಾಲನೆ ಮಾಡಬಕು' ಎಂದು ಗುಣಗಾನ ಮಾಡಿತು.

'ಈ ಸಲ ಏನೇನು ಅಗ್ಗ ಆಗತೈತಿ, ವೈಯಕ್ತಿಕ ತೆರಿಗೆವಳಗೆ ಏನು ಕಡಿಮೆ ಮಾಡತಾರೆ, ನೋಡೂಣು ಇರು' ಎಂದೆ ನಾನು ಆಸೆಯಿಂದ.

'ಏಳು ಹೈಸ್ಪೀಡ್ ರೈಲು ಬಿಡತಾರಂತೆ... ಅದ್ರಾಗೆ ಎರಡು ಬೆಂಗಳೂರಿಂದ ಹೊರಡತಾವೆ' ಎಂದು ಬೆಕ್ಕಣ್ಣ ಖುಷಿಯಿಂದ ಕುಣಿಯಿತು.

'ವಂದೇ ಭಾರತ್ ರೈಲನ್ನೇ ಶ್ರೀಸಾಮಾನ್ಯರು ಹತ್ತಾಕೆ ಆಗಂಗಿಲ್ಲ. ಇನ್ನು ಹೈಸ್ಪೀಡ್ ರೈಲಿನ ಟಿಕೀಟು ತೆಗೆಯೂ ಮಾತೆಲ್ಲಿ? ತೆರಿಗೆಯಲ್ಲಿ ಬದಲಾವಣೆ ಇಲ್ಲ ಅಂದರೆ ಮಧ್ಯಮವರ್ಗಕ್ಕೆ ಸಿಹಿಯಿಲ್ಲ. ಕೆಲವು ಔಷಧಗಳು ಅಗ್ಗವಾಗಿದ್ದನ್ನು ಬಿಟ್ಟರೆ, ಶ್ರೀಸಾಮಾನ್ಯರಿಗೂ ಸಿಹಿ ಅನ್ನುವಂಥದ್ದು ಏನೂ ಇಲ್ಲ' ಎಂದೆ ನಾನು ನಿರಾಸೆಯಿಂದ.

'ಶ್ರೀಸಾಮಾನ್ಯರ ಬದುಕಿಗೆ ಅಗತ್ಯವಾಗಿದ್ದನ್ನು ಮಾಡುವ ಕರ್ತವ್ಯ ರಾಜ್ಯಗಳದ್ದು' ಎಂದು ಬೆಕ್ಕಣ್ಣ ವಾದಿಸಿತು.

'ಹಂಗಾರೆ ರಾಜ್ಯಗಳಿಗೆ ಅವರ ತೆರಿಗೆ ಪಾಲನ್ನೂ ನ್ಯಾಯಯುತವಾಗಿ ಕೊಡಬೇಕು' ಎಂದು ನಾನು ವಾದಿಸಿದೆ.

'ಹೋಗಲಿಬಿಡು, ನನಗೆ ನಿನಗೆ ಜಗಳ ಯಾಕೆ? ಈಗ ವಿದೇಶ ಪ್ರವಾಸ ಪ್ಯಾಕೇಜ್ ಅಗ್ಗವಂತೆ... ನಾವಿಬ್ಬರೂ ವಿದೇಶ ಪ್ರವಾಸಕ್ಕೆ ಹೋಗೂಣೇನು?' ಎಂದು ಮೆತ್ತಗೆ ಉಲಿಯಿತು.

ಸಂಗತ


ಹಕ್ಕಿನಿಂದ ಹಂಗಿನ ಅರಮನೆಯ ಕಡೆಗೆ

ಗಾಂಧೀಜಿ ಹೆಸರಿನ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯ ಸ್ಥಾನದಲ್ಲಿ ಜಾರಿಗೆ ಬಂದಿರುವ ಹೊಸ ಯೋಜನೆ ಒಕ್ಕೂಟ ವ್ಯವಸ್ಥೆಗೆ ವಿರುದ್ಧವಾದುದು.

• ಟಿ.ಆರ್. ಚಂದ್ರಶೇಖರ

2005–06ರಲ್ಲಿ ಆರಂಭವಾದ ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಅಧಿಸೂಚನೆ (ಮನರೇಗಾ) ಮೂಲಕ ಗ್ರಾಮೀಣ ಕೂಲಿಕಾರರಿಗೆ 'ಉದ್ಯೋಗದ ಹಕ್ಕು' ನೀಡಲಾಗಿತ್ತು. ಆರಂಭದಲ್ಲಿ ಅತ್ಯಂತ ಹಿಂದುಳಿದ 200 ಜಿಲ್ಲೆಗಳಲ್ಲಿ ಜಾರಿಯಾದ ಯೋಜನೆಯನ್ನು 2008–09ರಲ್ಲಿ ದೇಶದಾದ್ಯಂತ ವಿಸ್ತರಿಸಲಾಯಿತು. ಅದು ಬೇಡಿಕೆ ಪ್ರಣೀತ ಹಕ್ಕಿನ ಪರಿಭಾಷೆಯ ಕಾರ್ಯಕ್ರಮವಾಗಿತ್ತು. ಗ್ರಾಮೀಣ ಕೂಲಿಕಾರರು ಉದ್ಯೋಗವನ್ನು ಕೇಳಿದಾಗ ಸ್ಥಳೀಯ ಸರ್ಕಾರಗಳು ಮನರೇಗಾದಡಿ ಉದ್ಯೋಗ ನೀಡಬೇಕಾಗಿತ್ತು. ಇಲ್ಲದಿದ್ದರೆ ನಿರುದ್ಯೋಗ ಭತ್ಯೆ ನೀಡಬೇಕಾಗಿತ್ತು. ಇದೀಗ ಮನರೇಗಾಕ್ಕೆ ಬದಲಾಗಿ ಕೇಂದ್ರ ಸರ್ಕಾರ ವಿಕಸಿತ ಭಾರತ–ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ (ಗ್ರಾಮೀಣ) ಹೆಸರಿನ ಕಾರ್ಯಕ್ರಮವನ್ನು ರೂಪಿಸಿದೆ.

ಹಕ್ಕುಗಳು ನಮ್ಮ ಭಾರತೀಯ ಪರಂಪರೆಯ ಭಾಗವಲ್ಲ ಎನ್ನುವ ಕೇಂದ್ರ ಸರ್ಕಾರವು, ಹಕ್ಕಿನ ಮನರೇಗಾವನ್ನು ರದ್ದುಪಡಿಸಿ, ಪೂರೈಕೆ ಪ್ರಣೀತ ಸೇವಾ ಪ್ರಧಾನ 'ವಿಬಿ–ಜಿ ರಾಮ್ ಜಿ' ಕಾರ್ಯಕ್ರಮ ರೂಪಿಸಿದೆ. ಪ್ರಧಾನಮಂತ್ರಿ ಅವರು 2022ರಲ್ಲಿ 'ಆಜಾದೀ ಸೇ ಅಮೃತ ಮಹೋತ್ಸವ್' ಕಾರ್ಯಕ್ರಮ ಉದ್ಘಾಟಿಸುತ್ತಾ, ಹಕ್ಕುಗಳ ಬಗ್ಗೆ ಹೋರಾಡುವುದು ಸಮಯದ ಪೋಲು ಮತ್ತು ಸ್ವಾತಂತ್ರ್ಯಾನಂತರ 75 ವರ್ಷಗಳ ಕಾಲ ಸೇವೆಯನ್ನು ನಿರ್ಲಕ್ಷಿಸಿ ಹಕ್ಕುಗಳ ಬಗ್ಗೆ ಗಮನ ನೀಡುತ್ತಾ ಬಂದಿದ್ದರಿಂದ ನಮ್ಮ ಸಮಾಜವು ದುರ್ಬಲವಾಗುಳಿದಿದೆ ಎಂದಿದ್ದರು. ಅವರ ಟೀಕೆಯು ನೇರವಾಗಿ ಹಕ್ಕುಗಳ ಪ್ರಣಾಳಿಕೆಯಾಗಿರುವ ಅಂಬೇಡ್ಕರ್ ಪ್ರಣೀತ ಸಂವಿಧಾನವನ್ನು ಗುರಿಯಾಗಿಸಿಕೊಂಡಿದೆ.



ಹಕ್ಕುಗಳಿಗಿಂತ ಇಂದಿನ ಕೇಂದ್ರ ಸರ್ಕಾರಕ್ಕೆ ಸೇವೆ–ಕರ್ತವ್ಯದ ಬಗ್ಗೆ ಹೆಚ್ಚಿನ ವಿಶ್ವಾಸವಿದೆ. ಈ ಸಿದ್ಧಾಂತದ ದೂರಗಾಮಿ ಪರಿಣಾಮವು ಅಪಾಯಕಾರಿ. ಹಕ್ಕುಗಳಿಗಿಂತ ಸೇವೆ–ಕರ್ತವ್ಯ ಮುಖ್ಯ ಎನ್ನುವ ಚಿಂತನೆಯು ನಮ್ಮ ಪ್ರಾಚೀನ ಸಮಾಜದಲ್ಲಿ ಸೇವೆಯನ್ನು ಒಂದು ವರ್ಗಕ್ಕೆ ವಿಧಿಸಲಾಗಿದ್ದ ವ್ಯವಸ್ಥೆಯ ಪುನರುತ್ಥಾನದ ಕ್ರಿಯಾಯೋಜನೆಯಂತೆ ಕಾಣುತ್ತಿದೆ.

ಮನರೇಗಾ ಸ್ಥಳದಲ್ಲಿ ಜಾರಿಗೊಳಿಸಲು ರೂಪಿಸಿರುವ ವಿಬಿ–ಜಿ ರಾಮ್ ಜಿ ಯೋಜನೆಯು ಮೂಲಸೌಕರ್ಯ ನಿರ್ಮಾಣಕ್ಕೆ ಆದ್ಯತೆ ನೀಡುವ ಕಾರ್ಯ ಯೋಜನೆ. ಈ ಯೋಜನೆಯ ನಿರ್ವಹಣೆಗೆ ರಾಷ್ಟ್ರೀಯ ನಿರ್ವಹಣಾ ಸಮಿತಿಯನ್ನು ಅಧಿಸೂಚನೆಯ ಸೆಕ್ಷನ್ 14ರ ಪ್ರಕಾರ ಕೇಂದ್ರ ಸರ್ಕಾರವು ರಚಿಸುತ್ತದೆ. ಇದು ಮನರೇಗಾಕ್ಕಿಂತ ಭಿನ್ನವಾಗಿ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ನೀಡುತ್ತದೆ. ಹೀಗೆ ಇದು ಮೇಲಿನಿಂದ ಹೇರಲಾಗುವ ಕಾರ್ಯಕ್ರಮವಾಗುತ್ತದೆಯೇ ವಿನಾ ಕೆಳಗಿನಿಂದ ರೂಪುಗೊಳ್ಳುವ ಕಾರ್ಯಕ್ರಮವಲ್ಲ. ಇಲ್ಲಿ 'ಸ್ಥಳೀಯತೆ'ಗೆ ಹೆಚ್ಚಿನ ಅವಕಾಶವಿಲ್ಲ. ಗ್ರಾಮೀಣ ಉದ್ಯೋಗ ಕಾರ್ಯಕ್ರಮಕ್ಕೆ ರಾಜ್ಯವಾರು ವಾರ್ಷಿಕ ಅನುದಾನವನ್ನು ಕೇಂದ್ರವೇ ತನ್ನ ಬಜೆಟ್‌ನಲ್ಲಿ ನಿರ್ಧರಿಸುತ್ತದೆ. ಮನರೇಗಾದಲ್ಲಿ ಪ್ರತಿ ಗ್ರಾಮೀಣ ಕುಟುಂಬಕ್ಕೆ 100 ದಿನಗಳ ಉದ್ಯೋಗ ನೀಡಲಾಗುತ್ತಿತ್ತು. ಈಗ ಇದನ್ನು 125 ದಿನಗಳಿಗೆ ಹೆಚ್ಚಿಸಲಾಗಿದೆ. ಇದೇನೋ ಸ್ವಾಗತಾರ್ಹ. ಆದರೆ, ಕೃಷಿ ಹಂಗಾಮಿನಲ್ಲಿ 60 ದಿನಗಳು ಯೋಜನೆಯನ್ನು ಸ್ಥಗಿತಗೊಳಿಸಲಾಗುತ್ತದೆ. ಇಲ್ಲಿನ ಪ್ರಶ್ನೆ ಎಂದರೆ, ಗ್ರಾಮೀಣ ಭೂರಹಿತ ಕೂಲಿಕಾರರಿಗೆ 'ಕೃಷಿ ಹಂಗಾಮು' ಎನ್ನುವುದು ಎಲ್ಲಿರುತ್ತದೆ? ಅವರು ವರ್ಷದ 365 ದಿನವೂ ಕೂಲಿಗೆ ದುಡಿಯಬೇಕಾಗಿರುತ್ತದೆ.

ಮನರೇಗಾ ಕಾರ್ಯಕ್ರಮದಲ್ಲಿ ವೆಚ್ಚವನ್ನು ಪೂರ್ಣವಾಗಿ ಕೇಂದ್ರ ಭರಿಸುತ್ತಿತ್ತು. ಈಗ ಕೇಂದ್ರದ ಪಾಲು ಶೇ 60ಕ್ಕಿಳಿದರೆ, ರಾಜ್ಯದ ಹೊರೆ ಶೇ 40ರಷ್ಟು ಹೆಚ್ಚಾಗುತ್ತದೆ. ಹೊಸ ಕಾರ್ಯಕ್ರಮವು 'ಬಜೆಟ್ ಕ್ಯಾಪ್' ಕಾರ್ಯಕ್ರಮವಾಗಿರುವುದರಿಂದ ಉದ್ಯೋಗಕ್ಕೆ ಹೆಚ್ಚಿನ ಬೇಡಿಕೆ ಬಂದರೆ, ಅದರ ವೆಚ್ಚವನ್ನು ರಾಜ್ಯಗಳೇ ಭರಿಸಬೇಕು. ಹೀಗೆ ಬದಲಾದ ಉದ್ಯೋಗ ಖಾತರಿ ಯೋಜನೆಯು ನಿರ್ವಹಣೆಯ ಸೂತ್ರ ಕೇಂದ್ರ ಸರ್ಕಾರಕ್ಕಿದ್ದರೆ ಅದರ ಬಾಬ್ತು, ಹೆಚ್ಚಿನ ವೆಚ್ಚದ ಭಾರವನ್ನು ರಾಜ್ಯಗಳು ಹೊರಬೇಕಾಗುತ್ತದೆ. ರಾಜ್ಯಗಳು ಹಕ್ಕುಗಳಿಲ್ಲದೆ ಬರೀ ಕೇಂದ್ರದ ಸೇವೆಯನ್ನು ಮಾಡುವ ಘಟಕಗಳಾಗಿ ಬಿಡುತ್ತವೆ.


ವಿಬಿ–ಜಿ ರಾಮ್ ಜಿ ಕಾರ್ಯಯೋಜನೆಯು ಸಂಪೂರ್ಣವಾಗಿ ಕೇಂದ್ರ ನಿಯಂತ್ರಿತ ಕಾರ್ಯಕ್ರಮವಾಗಿದೆ. ಇದನ್ನು ಅತಿಯಾದ ತಂತ್ರಜ್ಞಾನ ಅವಲಂಬಿತ ಯೋಜನೆಯನ್ನಾಗಿ ಮಾಡಲಾಗಿದೆ; ಆಧಾರ್ ಮತ್ತು ಜಾಬ್‌ಕಾರ್ಡ್‌ಗಳ ನಡುವಿನ ವ್ಯತ್ಯಯಗಳು ಅನೇಕ ಸಂದರ್ಭದಲ್ಲಿ ದುಡಿಮೆಗಾರರನ್ನು ಹೊರದೂಡುವ ಸ್ಥಿತಿಗೆ ಅವಕಾಶ ಕಲ್ಪಿಸಬಹುದು. ಯಾವುದನ್ನು ಗ್ರಾಮೀಣ ಭಾರತಕ್ಕೆ ಸಂಬಂಧಿಸಿದಂತೆ 'ಡಿಜಿಟಲ್ ಡಿವೈಡ್' ಎನ್ನುತ್ತೇವೆಯೋ ಅದನ್ನು ಇದು ಉಲ್ಬಣಗೊಳಿಸುತ್ತದೆ. ಇದು ದುಡಿಮೆಗಾರರನ್ನು ಹಂಗಿನ ನೆಲೆಗೆ ದೂಡುವ ಕಾರ್ಯಕ್ರಮವಾಗಿದೆ. ಏಕೆಂದರೆ, ಗ್ರಾಮೀಣ ದುಡಿಮೆಗಾರರು ಉದ್ಯೋಗದ ಬೇಡಿಕೆಯನ್ನಿಟ್ಟು ಅದನ್ನು ಪಡೆದುಕೊಳ್ಳುವ ಕಾರ್ಯಕ್ರಮ ಇದಲ್ಲ. ಸರ್ಕಾರವು ಕೃಪೆ ಮಾಡಿದ ಉದ್ಯೋಗವನ್ನು ಸ್ವೀಕರಿಸಬೇಕಾದ ಒಂದು ಸ್ಥಿತಿಯನ್ನು ಇದು ಒಳಗೊಂಡಿದೆ.

ಮನರೇಗಾ ಯೋಜನೆಯನ್ನು ಪ್ರಧಾನಿ ನರೇಂದ್ರ ಮೋದಿ ವಿರೋಧಿಸುತ್ತಲೇ ಬಂದಿದ್ದಾರೆ. ಅದನ್ನು ಯುಪಿಎ ಸರ್ಕಾರದ ವೈಫಲ್ಯದ ಜೀವಂತ ಸ್ಮಾರಕ ಎಂದು 2015ರಲ್ಲಿ ಸಂಸತ್ತಿನಲ್ಲಿ ಟೀಕಿಸಿದ್ದರು. ಯೋಜನೆಯ ಹೆಸರಿನಲ್ಲಿದ್ದ ಮಹಾತ್ಮ ಗಾಂಧೀಜಿ ಬಗ್ಗೆ ಪ್ರಸ್ತುತ ಸರ್ಕಾರಕ್ಕೆ ಭಿನ್ನಮತವಿದೆ. ಗಾಂಧೀಜಿಯ ರಾಮರಾಜ್ಯಕ್ಕೂ (ಹೇ ರಾಮ್) ಮತ್ತು ಇಂದಿನ ಸರ್ಕಾರದ ರಾಮರಾಜ್ಯಕ್ಕೂ (ಜೈ ಶ್ರೀರಾಮ್) ಬಹಳ ವ್ಯತ್ಯಾಸವಿದೆ. ಗ್ರಾಮೀಣ ಬಡ ಕೂಲಿಕಾರರಿಗೆ ಒಂದು ಮುಕ್ತವಾದ ಬೇಡಿಕೆ ಆಧಾರದ ಹಕ್ಕು ಆಗಿರುವ ಮನರೇಗಾ ಕಾರ್ಯಯೋಜನೆಯನ್ನು ಕೊಲ್ಲಲಾಗಿದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಕೇಂದ್ರ ಬಜೆಟ್ – 2026-27

ಬಜೆಟ್‌ನೋಟ
(ಲಕ್ಷ ಕೋಟಿ ₹ಗಳಲ್ಲಿ)




₹53.47 ಲಕ್ಷ ಕೋಟಿ ಗಾತ್ರದ ಬಜೆಟ್‌ನಲ್ಲಿ ತೆರಿಗೆ ವರಮಾನ ₹28.67 ಲಕ್ಷ ಕೋಟಿಯಾಗಿದ್ದು, ₹16.96 ಲಕ್ಷ ಕೋಟಿಯನ್ನು ಸಾಲದ ರೂಪದಲ್ಲಿ ಸಂಗ್ರಹಿಸುವ ಪ್ರಸ್ತಾವವನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಮಾಡಿದ್ದಾರೆ. ತೆರಿಗೆಯೇತರ ವರಮಾನ ₹6.66 ಲಕ್ಷ ಕೋಟಿ ಸಂಗ್ರಹಿಸುವ ಗುರಿ ಹೊಂದಲಾಗಿದೆ.

ಜಿಎಸ್‌ಟಿ, ಆದಾಯ ತೆರಿಗೆ, ಕಾರ್ಪೊರೇಟ್ ತೆರಿಗೆ, ಕಸ್ಟಮ್ಸ್ ಸೇರಿದಂತೆ ವಿವಿಧ ತೆರಿಗೆಗಳ ಮೂಲಕ ಒಟ್ಟು ₹44.04 ಲಕ್ಷ ಕೋಟಿ ಸಂಗ್ರಹವಾಗಲಿದ್ದು, ಇದರಲ್ಲಿ ₹15.26 ಲಕ್ಷ ಕೋಟಿ ರಾಜ್ಯಗಳ ಪಾಲು.



ಕೇಂದ್ರ ಸರ್ಕಾರ ಮಾಡಲಿರುವ ವೆಚ್ಚದಲ್ಲಿ ವರ್ಗಾವಣೆ, ಸಂಸ್ಥೆಗಳ ಹಾಗೂ ಇತರ ಉದ್ದೇಶಗಳಿಗೆ ₹30.26 ಲಕ್ಷ ಕೋಟಿ ವೆಚ್ಚ ಮಾಡಲಿದ್ದು, ವಿವಿಧ ಯೋಜನೆಗಳಿಗೆ ₹23.31 ಲಕ್ಷ ಕೋಟಿ ವ್ಯಯಿಸಲಿದೆ. ಯೋಜನೆಗಳಿಗೆ ಮಾಡಲಿರುವ ವೆಚ್ಚದಲ್ಲಿ ಕೇಂದ್ರ ವಲಯದ ಯೋಜನೆಗಳಿಗೆ ₹17.72 ಲಕ್ಷ ಕೋಟಿ ಮತ್ತು ಕೇಂದ್ರ ಪ್ರಾಯೋಜಿತ ಯೋಜನೆಗಳಿಗೆ ₹5.59 ಲಕ್ಷ ಕೋಟಿ ನಿಗದಿ ಪಡಿಸಲಾಗಿದೆ.

ಸಬ್ಸಿಡಿ ಯೋಜನೆಗಳಿಗೆ ₹4.55 ಲಕ್ಷ ಕೋಟಿ ಮೀಸಲಿಡಲಾಗಿದೆ. ಆಹಾರ ಸಬ್ಸಿಡಿಗೆ ₹2.28 ಲಕ್ಷ ಕೋಟಿ, ರಸಗೊಬ್ಬರಕ್ಕೆ ₹1.71 ಲಕ್ಷ ಕೋಟಿ, ಪೆಟ್ರೋಲಿಯಂ ಸಬ್ಸಿಡಿಗೆ ₹12 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ.



ದೂರದತ್ತ ನೋಟ: ನಿರೀಕ್ಷೆಗಳ ಪಲ್ಲಟ

ಒಂದನೇ ಪುಟದಿಂದ...

ಏಳು ಪ್ರಮುಖ ಕ್ಷೇತ್ರಗಳ ತಯಾರಿಕೆ ಏರಿಕೆ, ಪರಂಪರಾಗತ ಕೈಗಾರಿಕಾ ಪಾರ್ಕ್‌ಗಳ ಪುನಶ್ಚೇತನ, 'ಚಾಂಪಿಯನ್ ಎಂಎಸ್‌ಎಂಇ'ಗಳನ್ನು ರೂಪಿಸುವುದು, ಮೂಲಸೌಕರ್ಯಕ್ಕೆ ಬಲವಾದ ಒತ್ತು, ದೀರ್ಘಾವಧಿ ಇಂಧನ ಸುರಕ್ಷತೆ ಮತ್ತು ಸುಸ್ಥಿರತೆ ಮತ್ತು ನಗರ ಆರ್ಥಿಕ ವಲಯಗಳ ಅಭಿವೃದ್ಧಿಯನ್ನು ನಿರ್ಮಲಾ ಅವರು ಪ್ರಸ್ತಾಪಿಸಿದ್ದಾರೆ. ಕೃತಕ ಬುದ್ಧಿಮತ್ತೆ ಕ್ಷೇತ್ರಕ್ಕೂ ಉತ್ತೇಜನ ಕೊಡುವ ಭರವಸೆಯನ್ನು ನಿರ್ಮಲಾ ನೀಡಿದ್ದಾರೆ.

ಜಾಗತಿಕ ಅಸ್ಥಿರ ಸ್ಥಿತಿ ಮುಂದುವರಿದಿರುವ ಈ ಸಂದರ್ಭದಲ್ಲಿ ಅದನ್ನು ಎದುರಿಸಲು ಬೇಕಾದ ಕೆಲವು ಕ್ರಮಗಳು ಇವೆ. ವಿರಳ ಲೋಹಗಳ ಮೇಲೆ ಚೀನಾ ಮತ್ತು ಅಮೆರಿಕದ ಏಕಸ್ವಾಮ್ಯವನ್ನು ಮುರಿಯುವುದಕ್ಕಾಗಿ ವಿರಳ ಲೋಹ ಕಾರಿಡಾರ್ ಸ್ಥಾಪಿಸಲಾಗುವುದು ಎಂದು ಹೇಳಿದ್ದಾರೆ. ಆದರೆ ಇದಕ್ಕೆ ಎಷ್ಟು ಹಣ ವೆಚ್ಚ ಮಾಡಲಾಗುವುದು ಎಂದು ವಿವರಿಸಿಲ್ಲ.

ಏಳು ಹೈಸ್ಪೀಡ್ ರೈಲು ಕಾರಿಡಾರ್‌ಗಳು ಮತ್ತು ದೇಶದ ಪೂರ್ವ, ಪಶ್ಚಿಮ ಭಾಗವನ್ನು ಸಂಪರ್ಕಿಸುವ ಸರಕು ಸಾಗಣೆ ಕಾರಿಡಾರ್ ಮತ್ತು 20 ಜಲ ಮಾರ್ಗಗಳ ಅಭಿವೃದ್ಧಿ ಯೋಜನೆಗಳಲ್ಲಿ ಮೂಲಸೌಕರ್ಯಕ್ಕೆ ನೀಡಿದ ಒತ್ತು ಪ್ರತಿಫಲಿತವಾಗಿದೆ.

ರಕ್ಷಣಾ ವಲಯಕ್ಕೆ ಹೆಚ್ಚಿನ ಆದ್ಯತೆ ಎಂದಿನಂತೆ ಸಿಕ್ಕಿದೆ. ಆದರೆ, ಈ ಬಾರಿ, ಪ್ರತಿಕೂಲವಾಗಿರುವ ನೆರೆಹೊರೆ ಮತ್ತು 'ಆಪರೇಷನ್ ಸಿಂಧೂರ' ನಂತರದ ಪರಿಣಾಮಗಳ ಕಾರಣಕ್ಕೆ ರಕ್ಷಣಾ ವಲಯಕ್ಕೆ ₹7.85 ಲಕ್ಷ ಕೋಟಿ ನೀಡಲಾಗಿದೆ. ಹಿಂದಿನ ಬಜೆಟ್‌ಗೆ ಹೋಲಿಸಿದರೆ ಇದು ಶೇ 15.19ರಷ್ಟು ಹೆಚ್ಚು.



ಬಜೆಟ್ ಪ್ರತಿಯೊಂದಿಗೆ ನಿರ್ಮಲಾ ಸೀತಾರಾಮನ್ – ಪಿಟಿಐ ಚಿತ್ರ

ಕೃಷಿ ಕ್ಷೇತ್ರಕ್ಕೆ ₹1.63 ಲಕ್ಷ ಕೋಟಿ ಮೀಸಲು ಇರಿಸಲಾಗಿದೆ. ತೆಂಗಿನಕಾಯಿ, ಕೋಕೊ, ಗೋಡಂಬಿ ಮತ್ತು ಶ್ರೀಗಂಧದಂತಹ ಬೆಳೆಗಳನ್ನು ಹೆಚ್ಚಿಸಲು ರೈತರಿಗೆ ಉತ್ತೇಜನ ನೀಡಲಾಗುವುದು ಎಂದು ಹೇಳಲಾಗಿದೆ. ಈ ಯಾವ ಬೆಳೆಗಳೂ ಈಗ ರೈತರಿಗೆ ಆಕರ್ಷಕವಾಗಿ ಉಳಿದಿಲ್ಲ ಎಂಬುದು ನಿರ್ಮಲಾ ಅವರ ಗಮನಕ್ಕೆ ಬಂದಂತಿಲ್ಲ.

ಗಾಂಧಿ ಹೆಸರು: ವಿಕಸಿತ ಭಾರತ ಉದ್ಯೋಗ ಖಾತರಿ ಮತ್ತು ಆಜೀವಿಕಾ ಯೋಜನೆಗೆ (ಗ್ರಾಮೀಣ) (ವಿಬಿ–ಜಿ ರಾಮ್ ಜಿ) ₹1.26 ಲಕ್ಷ ಕೋಟಿ ಮೀಸಲಿಡಲಾಗಿದೆ. ಆದರೆ, ಬಜೆಟ್ ಭಾಷಣದಲ್ಲಿ ವಿಬಿ–ಜಿ ರಾಮ್ ಜಿ ಕುರಿತು ಉಲ್ಲೇಖವೇ ಇರಲಿಲ್ಲ. ಇದರಲ್ಲಿ ಮಹಾತ್ಮ ಗಾಂಧಿ ಉದ್ಯೋಗ ಖಾತರಿ ಯೋಜನೆಯ (ಮನರೇಗಾ) ಬಾಕಿ ತೀರಿಸಲು ₹30 ಸಾವಿರ ಕೋಟಿ ವ್ಯಯ ಆಗಲಿದೆ. ಯುಪಿಎ ಸರ್ಕಾರದ ಅವಧಿಯಲ್ಲಿ ಜಾರಿಗೆ ಬಂದ ನರೇಗಾ ಯೋಜನೆಯನ್ನು ಬದಲಾಯಿಸಿ ವಿಬಿ–ಜಿ–ರಾಮ್ ಜಿ ಯೋಜನೆಯನ್ನು ಸರ್ಕಾರ ಜಾರಿಗೆ ತಂದಿದೆ. ಇದಕ್ಕೆ ಕಾಂಗ್ರೆಸ್ ಪಕ್ಷವು ವ್ಯಾಪಕ ಆಕ್ಷೇಪ ವ್ಯಕ್ತಪಡಿಸಿತ್ತು. ಅದಕ್ಕೆ ಉತ್ತರ ಎಂಬಂತೆ, ಖಾದಿ, ಕೈಮಗ್ಗ ಮತ್ತು ಕರಕುಶಲ ವಸ್ತು ತಯಾರಿಕೆಗೆ ಉತ್ತೇಜನ ನೀಡುವುದಕ್ಕಾಗಿ 'ಮಹಾತ್ಮ ಗ್ರಾಮ ಸ್ವರಾಜ್ ಯೋಜನೆ'ಯನ್ನು ಜಾರಿಗೆ ತರುವುದಾಗಿ ಹೇಳಲಾಗಿದೆ.

ಈ ವರ್ಷ ಚುನಾವಣೆ ನಡೆಯಲಿರುವ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ ಮುಂತಾದ ರಾಜ್ಯಗಳಿಗೆ ಜನಪ್ರಿಯ ಮತ್ತು ಭಾರಿ ಯೋಜನೆಗಳನ್ನು ಘೋಷಿಸಿಲ್ಲ. ಆದರೆ, ಚುನಾವಣೆ ನಡೆಯಲಿರುವ ರಾಜ್ಯಗಳಿಗೆ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವ ಕೆಲ ದಿನಗಳ ಮುನ್ನ ಪ್ರಧಾನಿ ಮೋದಿ ಅವರೇ ಯೋಜನೆಗಳನ್ನು ಘೋಷಿಸುವ ಪರಿಪಾಟವನ್ನು ಬಿಜೆಪಿ ಅನುಸರಿಸಿಕೊಂಡು ಬಂದಿದೆ.

ಈಶಾನ್ಯ ರಾಜ್ಯಗಳಲ್ಲಿ ಬೌದ್ಧ ಪ್ರವಾಸ ಪಥವೊಂದನ್ನು ಅಭಿವೃದ್ಧಿಪಡಿಸುವುದಾಗಿಯೂ ಬಜೆಟ್‌ನಲ್ಲಿ ಹೇಳಲಾಗಿದೆ.

ತೆರಿಗೆ ಸುಧಾರಣೆ ಇಲ್ಲ: ತೆರಿಗೆ ಕ್ಷೇತ್ರದಲ್ಲಿ ವಿಶೇಷವಾದ ಸುಧಾರಣೆಗಳನ್ನೇನೂ ಪ್ರಕಟಿಸಲಾಗಿಲ್ಲ. ಆದಾಯ ತೆರಿಗೆ ವಿನಾಯಿತಿ ಮಿತಿಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಹೊಸ ಆದಾಯ ತೆರಿಗೆ ಕಾಯ್ದೆ 2025 ಈ ವರ್ಷದ ಏಪ್ರಿಲ್‌ನಿಂದ ಜಾರಿಗೆ ಬರಲಿದೆ ಎಂದು ಘೋಷಿಸಲಾಗಿದೆ.

ರಾಜ್ಯದ ರೈಲ್ವೆ ಯೋಜನೆಗಳಿಗೆ ₹7,748 ಕೋಟಿ

ಒಂದನೇ ಪುಟದಿಂದ...

ಮೂಲಸೌಕರ್ಯ ವ್ಯವಸ್ಥೆ ಬಲಪಡಿಸಲು ಬೆಂಗಳೂರು–ಚೆನ್ನೈ, ಬೆಂಗಳೂರು–ಹೈದರಾಬಾದ್ ಸೇರಿದಂತೆ ಏಳು ಹೈಸ್ಪೀಡ್ ರೈಲು ಕಾರಿಡಾರ್‌ಗಳನ್ನು ಸ್ಥಾಪಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಹೈಸ್ಪೀಡ್ ಕಾರಿಡಾರ್ ಆರಂಭವಾದ ಬಳಿಕ ಬೆಂಗಳೂರು–ಚೆನ್ನೈ ನಡುವಿನ ಪ್ರಯಾಣದ ಅವಧಿ 1 ಗಂಟೆ 13 ನಿಮಿಷ, ಬೆಂಗಳೂರು–ಹೈದರಾಬಾದ್ ನಡುವಿನ ಪ್ರಯಾಣದ ಅವಧಿ 2 ಗಂಟೆಗೆ ಇಳಿಯಲಿದೆ. ಏಳು ಕಾರಿಡಾರ್‌ಗಳ ನಿರ್ಮಾಣಕ್ಕೆ ₹16 ಲಕ್ಷ ಕೋಟಿ ಆಗಲಿದೆ.

ನಗರಗಳ ಬೆಳವಣಿಗೆಯನ್ನು ಇನ್ನಷ್ಟು ಬಲಪಡಿಸುವ ಪ್ರಯತ್ನದ ಭಾಗವಾಗಿ, ಬೆಂಗಳೂರು, ಸೂರತ್ ಮತ್ತು ವಾರಾಣಸಿ ಸೇರಿದಂತೆ ಏಳು ಕಡೆಗಳಲ್ಲಿ ನಗರ ಆರ್ಥಿಕ ಪ್ರದೇಶಗಳನ್ನು (ಸಿಇಆರ್) ಸ್ಥಾಪಿಸಲಾಗುತ್ತದೆ. ಐದು ವರ್ಷಗಳಲ್ಲಿ ಪ್ರತಿ ಪ್ರದೇಶಕ್ಕೆ ₹5,000 ಕೋಟಿ ಹಂಚಿಕೆ ಮಾಡಲಾಗುತ್ತದೆ.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

ಭಾರಿ ಮಳೆಯಿಂದಾಗಿ ರನ್‌ವೇ ಕಾಣದಿದ್ದರೂ, ವಿಮಾನವನ್ನು ಇಳಿಸಲು ಪೈಲಟ್ ಮುಂದಾಗುತ್ತಿರುವ, ವಿಮಾನದ ಕಾಕ್‌ಪಿಟ್‌ನ ಒಳಗೆ ಚಿತ್ರೀಕರಿಸಿರುವ ವಿಡಿಯೊ ತುಣುಕನ್ನು ಇನ್‌ಸ್ಟಾಗ್ರಾಂ ಬಳಕೆದಾರರೊಬ್ಬರು ಪೋಸ್ಟ್ ಮಾಡಿದ್ದಾರೆ. ಇದು ಇತ್ತೀಚೆಗೆ ವಿಮಾನ ಅಪಘಾತದಲ್ಲಿ ನಿಧನರಾದ ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಅವರಿದ್ದ ವಿಮಾನದ ದೃಶ್ಯ ಎಂದು ಪೋಸ್ಟ್‌ನಲ್ಲಿ ಪ್ರತಿಪಾದಿಸಲಾಗಿದೆ. ಆದರೆ, ಇದು ಸುಳ್ಳು.



ವಿಡಿಯೊ ತುಣುಕಿನ ಕೀ ಫ್ರೇಮ್ ಒಂದನ್ನು ಗೂಗಲ್ ಲೆನ್ಸ್‌ನಲ್ಲಿ ಹಾಕಿ ಹುಡುಕಿದಾಗ ಹಲವರು ಇದೇ ವಿಡಿಯೊವನ್ನು ಹಂಚಿರುವುದು ಕಂಡುಬಂತು. ಮತ್ತಷ್ಟು ಹುಡುಕಾಟ ನಡೆಸಿದಾಗ ಅಮೆರಿಕದ ಮಾಧ್ಯಮ ವೆಬ್‌ಸೈಟ್ ಸಿಎನ್‌ಇಟಿನಲ್ಲಿ ಪ್ರಕಟವಾದ ವರದಿಯೊಂದು ಸಿಕ್ಕಿತು. ಅದರಲ್ಲಿದ್ದ ಫೋಟೊ ಈಗ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ಮಾಡಲಾಗಿರುವ ವಿಡಿಯೊದಿಂದ ಪ್ರತ್ಯೇಕಿಸಲಾದ ಕೀ ಫ್ರೇಮ್ ಅನ್ನು ಹೋಲುತ್ತಿತ್ತು. ಆ ವರದಿಯಲ್ಲಿ ಘಟನೆಯು 2013ರಲ್ಲಿ ನಡೆದಿದೆ ಎಂದು ಉಲ್ಲೇಖಿಸಲಾಗಿದೆ. ಸಿಎನ್‌ಇಟಿಯ ಯೂಟ್ಯೂಬ್ ಚಾನೆಲ್‌ನಲ್ಲಿ ಕೂಡ ಇದೇ ವಿಡಿಯೊ ಅಪ್‌ಲೋಡ್ ಮಾಡಲಾಗಿದೆ. ಹಳೆಯ ವಿಡಿಯೊವನ್ನು ಅಜಿತ್ ಪವಾರ್ ಅವರಿಗೆ ಸಂಬಂಧಿಸಿದ ವಿಡಿಯೊ ಎಂದು ತಪ್ಪಾಗಿ ಬಿಂಬಿಸಲಾಗುತ್ತಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಪದಬಂಧ 6303

ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಬಂಜರು ಭೂಮಿಯಲ್ಲಿದ್ದಾಗ ತೋರಿದ ಒಣ ಆಡಂಬರ (2)
3.ಅವನು ಸರ ತರಲು ತೋರಿದ ಅರ್ಜೆಂಟು! (4)
6.ವನದೊಳಗೆ ದೊರೆತಿರುವ ಬಟ್ಟೆ (3)
8.ತಬಲ ಬಾರಿಸಲು ಶಕ್ತಿಯಿಲ್ಲದವನು ತಿರುಗಿದ್ದಾನಲ್ಲಾ! (4)
9.ಯಾವುದೇ ವಿಷಯದ ಕ್ರಮಬದ್ಧವಾದ ನಿರೂಪಣೆ (3)
10.ಕಡ ತೆಗೆದುಕೊಂಡು ನೋಡಿರುವ ಸಮುದ್ರ (3)
11.ರಾಜ ಮಂತ್ರಿಗಳಿರುವ ಒಳಾಂಗಣದ ಆಟ (4)
13.ಪ್ರಾಯಕ್ಕೆ ಬರುತ್ತಿರುವ ಹಸು (3)
15.ಈತ ವಿಷಯಾಸಕ್ತನಲ್ಲ! (4)
16.ಎದೆಯನ್ನು ಹೊಟ್ಟೆಯಿಂದ ಬೇರ್ಪಡಿಸುವ ಸೂಕ್ಷ್ಮವಾದ ಅಂಗ (2)

ಮೇಲಿಂದ ಕೆಳಕ್ಕೆ
2.ಈತ ದುಡ್ಡಿಲ್ಲದವ (3)
3.ತುಂಬ ಹದಗೆಟ್ಟ ಸ್ಥಿತಿ (3)
4.ಇದೇ ಎಲ್ಲವೂ! (3)
5.ಕೊನೆಗೆ ವಾಲುತ್ತಾ ನೀಡಿದ ಮನವಿ (4)
7.ಸರ ಧರಿಸಿದವನ ಪಾಳಿ (3)
9.ವರ ಪಡೆದುಕೊಂಡಿರುವ ಬೇಡ (4)
10.ಕಣದೊಳಗೆ ಮಾಡಿಕೊಂಡಿರುವ ಮದುವೆ (3)
12.ಒಂದು ಬಗೆಯ ಗೆಜ್ಜೆ (3)
13.ಸೊಳ್ಳೆ ಇಲ್ಲಿಯೇ ಹಾರುತ್ತಿದೆಯಲ್ಲಾ! (3)
14.ಕಕ್ಕಾವಿಕ್ಕಿಯಾಗಿ ನೋಡುತ್ತಿರುವ ಪೆದ್ದ (3)



6302ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಜವಾಬ್ದಾರಿ 5.ಜಟಿಲ
6.ಪುರೋಹಿತ 7.ರುಜಿನ
9.ಗಿಡುಗ 10.ದಪ್ತರ
11.ಕೆಡುಕ 13.ಕಡವರ
15.ಕಮ್ಮಾರ 16.ನವಿರೆಳೆ

ಮೇಲಿಂದ ಕೆಳಕ್ಕೆ:
1.ಮಜಕೂರು 2.ಜಲ
3.ರಿಪು 4.ಅಂತರಂಗ
8.ನಕಾರ 9.ಗಿಲಿಕೆ
10.ದಸಕತ್ತು 12.ಕಸರತ್ತು
14.ರನ 15.ಕಳೆ

ಸುಡೊಕು 6687

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

	7	9			3		8	
	4			8		2	5	9
8	1		2	6		7		
	8					1		5
	9	2	8	1	5		6	
5						8		
9		7	5					
	5			7	2		4	
4	3		6		1			2

6686 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಜ್ಞಾನ ಮಾರ್ಗ



ನುಡಿ ಬೆಳಗು
ದಾದಾಪೀರ್ ನವಿಲೇಹಾಳ್

ಬಹಳ ದಿನಗಳಿಂದ ಗುರುಗಳನ್ನು ಕೇಳಬೇಕೋ, ಬೇಡವೋ ಎಂಬ ಅಳುಕಿನಿಂದಿದ್ದ ಶಿಷ್ಯನೊಬ್ಬ ಕೊನೆಗೂ ಧೈರ್ಯ ಮಾಡಿ ಮೂರು ಪ್ರಶ್ನೆಗಳನ್ನು ಕೇಳಿಯೇ ಬಿಟ್ಟ. ಒಂದು: ನಿಮಗಿರುವ ಕೆಟ್ಟ ಅಭ್ಯಾಸ ಯಾವುದು? ಎರಡು: ನೀವು ಮನುಷ್ಯ ದೇಹದ ಯಾವ ಅಂಗವನ್ನು ಇಷ್ಟಪಡುತ್ತೀರಿ? ಮೂರು: ನಿಜವಾದ ಜ್ಞಾನಿ ಯಾರು? ಗುರುಗಳು ಕ್ರಮವಾಗಿ ಊಟ, ಕಿವಿ ಮತ್ತು ನಾನು ಎಂದು ಉತ್ತರಿಸಿದರು.

ಅವರು ಹೇಳಿದ್ದಿಷ್ಟು: 'ಭೂಮಿಯಲ್ಲಿನ ಪ್ರತಿಯೊಂದು ಜೀವವೂ ನಿದ್ರಾಹಾರ ಮೈಥುನಗಳಿಲ್ಲದೇ ಬದುಕುವುದಿಲ್ಲ. ಅದರಲ್ಲೂ ಆಹಾರಕ್ಕಾಗಿಯೇ ಎಲ್ಲರ ನಡುವೆ ಪೈಪೋಟಿಯಿದೆ. ಮನುಷ್ಯ ಕುಲದ ಎಲ್ಲ ಬಗೆಯ ಅಸಮಾನತೆಗೆ ಅದು ಮುಖ್ಯ ಕಾರಣ. ಒಮ್ಮೆ ಯೋಚಿಸಿ ನೋಡು, ಅನ್ನದ ಅವಶ್ಯಕತೆಯೊಂದು ಇಲ್ಲದಿದ್ದರೆ ಈ ಧರಣಿ ಅದೆಷ್ಟು ಶಾಂತವಾಗಿರುತ್ತಿತ್ತು! ಸದಾ ತಳಮಳಿಸುತ್ತಿರುವ ಈ ಭುವಿಯ ಅಶಾಂತಿಗೆ ನಾನೂ ಕಾರಣನಾಗಿರುವೆನಲ್ಲಾ ಅನ್ನುವ ನಿರಪರಾಧಿ ಯಾತನೆ ನನ್ನನ್ನು ಕಾಡುತ್ತಿದೆ. ನಾನು ತಿನ್ನುವ ಅನ್ನದ ಪ್ರತಿ ಅಗುಳು ಯಾರೋ ದುಡಿದದ್ದು, ಯಾರೋ ಯೋಗ್ಯರಿಗೆ ಸಲ್ಲಬೇಕಾದದ್ದು ಅಂತ ಅನಿಸಿ ಸಂಕಟವಾಗುತ್ತದೆ. ಸಂಕಟ ಹುಟ್ಟಿಸುವ ಎಲ್ಲ ಅಭ್ಯಾಸಗಳೂ ಕೆಟ್ಟವೇ ತಾನೇ?'

'ಮಾತು ಸೋತ ನೆಲದಲ್ಲಿ ಬದುಕಿದ್ದೇನೆ ಅಂತ ಅನಿಸಿದ ದಿನದಿಂದ ನನಗೆ ಕಿವಿಗಳೆಂದರೆ ಇಷ್ಟ. ನಾಲಗೆಯ ಸ್ವಾತಂತ್ರ್ಯವನ್ನು ಮಾತ್ರ ನೆಚ್ಚಿಕೊಂಡ ಜನ ಮತ್ತು ದೇಶ ನಂಬಿಕೆಗೆ ಯೋಗ್ಯವಲ್ಲ. 'ಇಂದಲ್ಲಾ ನಾಳೆ ರಾಜಕುಮಾರನೊಬ್ಬ ಕುದುರೆಯೇರಿ ಬಿರುಗಾಳಿಯಂತೆ ಬರುತ್ತಾನೆ. ನಮ್ಮೆಲ್ಲರ ನೋವು ನಿವಾರಣೆಯ ಮಾಯಕಾರ ಅವನು' ಎಂದು ಇಂತಹ ದೇಶದ ಜನರು ಕಾದು ಕುಳಿತಿರುತ್ತಾರೆ. ಅವತಾರಗಳು ಬಂದವು, ಹೋದವು. ಮಹಾತ್ಮರೂ ಬಂದರು, ಹೋದರು. ಸತ್ಯದ ಹಾದಿಯಲ್ಲಿ ಸುಳ್ಳುಗಳನ್ನು ಸುರಿಯಲಾಗುತ್ತಿದೆ. ದನಿಯಿಲ್ಲದವರ ಚರಿತ್ರೆಗೆ ಮಾತು ಬಂದ ಕೂಡಲೇ ಮಾತು ದನಿ ಕಳೆದುಕೊಳ್ಳುವ ವಿಪರ್ಯಾಸವಿದೆಯಲ್ಲಾ, ಅದು ನನ್ನ ಕಿವಿಗಳ ಸಾಮರ್ಥ್ಯವನ್ನು ನೆನಪಿಸಿತು. ಆಲಿಸುವುದು ನನ್ನ ಮನೋಬಲವನ್ನು ಇಮ್ಮಡಿಗೊಳಿಸುತ್ತದೆ. ನಮ್ಮನ್ನು ಆಳುವವರಿಗೂ ಹೀಗೇ ಆಗಿದ್ದಿದ್ದರೆ ಎಷ್ಟು ಸೊಗಸಾಗಿರುತ್ತಿತ್ತು ಅನಿಸುತ್ತದೆ'.

ಗುರುಗಳ ಮುಖದಲ್ಲಿ ಮುಗುಳುನಗೆ ಅರಳಿದಂತಾಗಿ ಶಿಷ್ಯನನ್ನು ತಲುಪುತ್ತಿರುವ ಸುಖ ಅನುಭವಿಸುತ್ತಿದ್ದಂತೆ ಕಂಡರು. 'ಇಂತಹ ಸಾವಿರಾರು ಶಿಷ್ಯರು ನನ್ನನ್ನು ಒಂದರ್ಧ ಶತಮಾನದಿಂದ ಗುರುಗಳು ಎಂದು ಸಂಬೋಧಿಸುತ್ತಿದ್ದಾರೆ. ಹಾಗೆ ಕರೆಸಿಕೊಂಡ ದಿನದಿಂದ ಈವರೆಗೆ ನಾನು ಆ ಪದವಿಗೆ ಯೋಗ್ಯನೇ ಅಂತ ಪ್ರಶ್ನಿಸಿಕೊಳ್ಳುತ್ತಾ ಉತ್ತರ ಕಂಡುಕೊಳ್ಳಲು ಹೆಣಗಾಡಿದ್ದೇನೆ. ಯಾರೂ ಕೇಳದ ಪ್ರಶ್ನೆಯನ್ನು ಈ ಹುಡುಗ ಕೇಳಿಬಿಟ್ಟ. ಅಷ್ಟು ಮಾತ್ರವಲ್ಲ ಇತರರು ನಾಚಿಕೊಂಡು ಅಣಕಿಸುವಂತಹ ಉತ್ತರವನ್ನು ನಾನು ಆತ್ಮವಿಶ್ವಾಸದಿಂದಲೇ ಕೊಟ್ಟುಬಿಟ್ಟೆ. ಹೌದು, ನಾನು ಜ್ಞಾನಿ. ಕೇವಲ ಸಾಮಾನ್ಯ ಜ್ಞಾನವೇ ಬುದ್ಧಿಮತ್ತೆಯ ಗುಣಮಟ್ಟವನ್ನು ಅಳೆಯುವ ಮಾನದಂಡವಾಗಿರುವ ವರ್ತಮಾನದಲ್ಲಿ ಇತ್ತ ಲೌಕಿಕವಲ್ಲದ, ಅತ್ತ ಅಲೌಕಿಕವೂ ಅಲ್ಲದ ಉತ್ತರವೊಂದರಿಂದ ನಾನು ಹೊಸದೇನನ್ನು ಹೇಳಹೊರಟಿದ್ದೇನೆ? ನೈಜ ಜ್ಞಾನವು ವಿನಯಮಾರ್ಗದ ಪಥಿಕನನ್ನು ಹಿಂಬಾಲಿಸುತ್ತದೆ. ಎಲ್ಲ ಬಗೆಯ ಜ್ಞಾನ ಶಿಸ್ತು ಮತ್ತು ಕೌಶಲಗಳ ಮಹತ್ವವನ್ನು ಗುರುತಿಸಿ ಗೌರವಿಸುವುದು ಜ್ಞಾನಿಯ ಗುಣ. ಪ್ರಾಣಿಯ ಚರ್ಮವನ್ನು ಹದಗೊಳಿಸಿ ತನಗೆ ಬೇಕಾದ ಆಕಾರಕ್ಕೆ ಹೊಂದಿಸಿಕೊಂಡು ಬಳಸಿದವನು ಈ ನೆಲದ ಮೊದಲ ಕಲಾವಿದ ಮತ್ತು ವಿಜ್ಞಾನಿ. ಗೊತ್ತಿಲ್ಲದ್ದನ್ನು ಬಹಿರಂಗವಾಗಿ ಒಪ್ಪಿಕೊಳ್ಳುತ್ತ ಕಲಿಯುತ್ತಾ ಇರುವವನು ಜ್ಞಾನಿ'.

ಹಣತೆ ಹಿಡಿದು ನಡೆಯುತ್ತಿದ್ದ ತರುಣಿಯನ್ನು ತಡೆದು 'ಎಲ್ಲಿಂದ ಬಂತು ಈ ಬೆಳಕು?' ಎಂದು ಕೇಳಿದೆ. ಆಕೆ ಫಕ್ಕನೆ ದೀಪವನ್ನು ನಂದಿಸಿ 'ಎಲ್ಲಿ ಹೋಯಿತು ಈ ಬೆಳಕು?' ಅಂದಳು. ಆ ಬೆಳಕು ಎಲ್ಲಿ ಎಂದು ಯೋಚಿಸುತ್ತಾ ಶಿಷ್ಯ ತಾನೇ ಗುರುವಾದ. ಆಗಲೂ ಗುರುಗಳು ಸುಮ್ಮನಿದ್ದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

02 ಫೆಬ್ರುವರಿ 2026 ಸೋಮವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಮಾಘ ಕೃಷ್ಣಪ್ರತಿಪದ್ ಗಂ.25-53 ನಕ್ಷತ್ರ: ಆಶ್ಲೇಷ ಗಂ. 22-48 ಯೋಗ: ಆಯುಷ್ಮಾನ್ ಗಂ. 7-21 ನಂತರ ಸೌಭಾಗ್ಯ ಗಂ.28-46 ಕರಣ: ಬಾಲವ ಗಂ. 14-42ಮಕರ ಮಾಸದ 19 ನೇ ದಿನ. ಮಳೆ ನಕ್ಷತ್ರ : ಶ್ರವಣ 3 ನೇ ಪಾದ. ರಾಹುಕಾಲ : ಬೆಳಿಗ್ಗೆ 07-30 - 09-00 ಸೂರ್ಯೋದಯ : 07-01 ಸೂರ್ಯಾಸ್ತ : 06-28, ಮುಸ್ಲಿಂ ದಿನಾಂಕ : 13 ಶಬನ್ ,ಅದೃಷ್ಟ ಸಂಖ್ಯೆ : 8, 9

ಮೇಷ: ವೃತ್ತಿರಂಗದಲ್ಲಿ ಅನ್ಯರ ಮಾತಿಗೆ ಕಿವಿಗೊಡದೆ ನಿಮ್ಮಿಚ್ಛೆಯಂತೆ ನಡೆಯಿರಿ. ದೂರದ ಪ್ರಯಾಣ, ಹವಾಮಾನ ಬದಲಾವಣೆಯಿಂದ ಅನಾರೋಗ್ಯ ಉಂಟಾಗಬಹುದು. ಜಾಗ್ರತೆ ವಹಿಸಿ.

ವೃಷಭ: ನೆಂಟರಿಷ್ಟರ ಸಲಹೆ ಸೂಚನೆಗಳನ್ನು ಪಾಲಿಸಿ. ದೈವಬಲ ಒದಗಿ ಬಂದು ಅಭಿವೃದ್ಧಿಗೊಳ್ಳುವಿರಿ. ಮಾನಸಿಕ ಒತ್ತಡ ಕಡಿಮೆಯಾಗಲು ಜನರ ಜತೆ ಬೆರೆಯಿರಿ.

ಮಿಥುನ: ರೇಷ್ಮೆ ಬೆಳೆಗಾರರಿಗೆ ಆದಾಯದಿಂದ ಸಂತಸ. ಸಾಕುಪ್ರಾಣಿಗಳ ಜತೆ ಸಮಯ ಕಳೆಯುವಿರಿ. ಸಮಯಕ್ಕೆ ಸರಿಯಾಗಿ ವರ್ತಿಸಿ, ಬುದ್ಧಿವಂತಿಕೆಯನ್ನು ತೋರುವಿರಿ.

ಕರ್ಕಾಟಕ: ಅತಿಯಾದ ಆತ್ಮವಿಶ್ವಾಸದಿಂದ ತಪ್ಪು ನಿರ್ಧಾರಗಳನ್ನು ಕೈಗೊಳ್ಳುವಿರಿ. ಮನೆಯಲ್ಲಿ ಇರುವವರೆಲ್ಲರನ್ನು ಕೇಳದೆ ಯಾವುದೇ ನಿರ್ಧಾರ ತೆಗೆದುಕೊಳ್ಳಬೇಡಿ.

ಸಿಂಹ: ನಿರ್ಧಾರಗಳನ್ನು ಎಲ್ಲರ ಮುಂದೆ ತಿಳಿಸುವ ಮುನ್ನ ಸಂಪೂರ್ಣವಾಗಿ ಯೋಚನೆ ಮಾಡಿ. ಪತ್ನಿಯ ಅವಶ್ಯಕತೆಗಳನ್ನು ಪೂರೈಸುವಲ್ಲಿ ಜಿಪುಣತನ ತೋರದಿರಿ. ಕೌಟುಂಬಿಕ ವಿವಾದಗಳು ಇತ್ಯರ್ಥಗೊಳ್ಳಲಿವೆ.

ಕನ್ಯಾ: ಸಂಸ್ಥೆಯ ಹೊಸ ಆರ್ಥಿಕ ನೀತಿಯಿಂದ ಹಣಕಾಸಿನ ವಿಷಯದಲ್ಲಿ ಲಾಭ ಇರಲಿದೆ. ತರಕಾರಿ ಬೆಳೆಗಾರರಿಗೆ ಮುಂಜಾಗ್ರತಾ ಕ್ರಮಗಳು ಇಲ್ಲದಿದ್ದಲ್ಲಿ ಅಧಿಕ ಹಾನಿ ಸಂಭವಿಸಬಹುದು.

ತುಲಾ: ಮಗಳ ಮಾತಿನಂತೆ ನಿತ್ಯ ಕೆಲಸದಲ್ಲಿ ಮಾಡಿಕೊಂಡ ಬದಲಾವಣೆಯಿಂದ ಆರೋಗ್ಯ ಸರಿಯಾಗುತ್ತದೆ. ಅಕ್ಕಪಕ್ಕದವರ ಕಷ್ಟ ಸುಖವನ್ನು ವಿಚಾರಿಸುವುದರಿಂದ ಪ್ರಯೋಜನ ದೊರೆಯುವುದು.

ವೃಶ್ಚಿಕ: ಸಣ್ಣ ವಯಸ್ಸಿನ ಮಕ್ಕಳ ಆಟೋಟಗಳನ್ನು ನೋಡಿ ಕಳೆದು ಹೋದ ದಿನಗಳನ್ನು ನೆನಪಿಸಿಕೊಳ್ಳುವಿರಿ. ನಿಮ್ಮ ಯೋಚನೆಯಷ್ಟು ಖರ್ಚು ಸಂಭವಿಸದ ಕಾರಣ ಹಣದ ಕೊರತೆ ಕಂಡು ಬರುವುದಿಲ್ಲ.

ಧನು: ಅನಗತ್ಯ ವಸ್ತುಗಳ ಮೇಲಿನ ದೊಡ್ಡ ಮೊತ್ತದ ಖರ್ಚಿನಿಂದ ಎಲ್ಲರ ಕೋಪಕ್ಕೆ ಗುರಿಯಾಗುವಿರಿ. ಉದ್ಯೋಗದಲ್ಲಿ ಒತ್ತಡ ಹೆಚ್ಚಿರುವ ಕಾರಣ ಮಾನಸಿಕವಾಗಿ ಈಗಲೇ ತಯಾರಾಗಿರುವುದು ಸೂಕ್ತ.

ಮಕರ: ಕೋಪವನ್ನು ಹೊಂದಿದ ಸಮಯದಲ್ಲಿ ಇತರರೊಂದಿಗೆ ಮಾತನಾಡುವುದಾಗಲಿ ಅಥವಾ ಕೆಲಸ ಮಾಡುವುದನ್ನು ಮಾಡಬೇಡಿ. ದುಡುಕಿನ ಮಾತುಗಳು ಇತರರ ಮನಸ್ಸನ್ನು ನೋಯಿಸದಿರಲಿ.

ಕುಂಭ: ಅನಗತ್ಯ ಖರ್ಚು-ವೆಚ್ಚಗಳಿಗೆ ಕಡಿವಾಣ ಹಾಕುವುದರಿಂದ ಆರ್ಥಿಕ ಸಂಕಷ್ಟ ಅರ್ಧದಷ್ಟು ಕಳೆಯುವುದು. ಯುವ ಬರಹಗಾರರಿಗೆ ಹುರುಪು ಹೆಚ್ಚಿಸುವಂಥ ಜನರು ಸುತ್ತಲೂ ಸಿಗುತ್ತಾರೆ.

ಮೀನ: ಹೊಸಾ ವಿವಾಹ ಪ್ರಸ್ತಾಪಗಳು ಆಕರ್ಷಕವಾಗಿ ಕಂಡರೂ ಪರಾಮರ್ಶಿಸದೇ ಒಪ್ಪಿಕೊಳ್ಳಬೇಡಿ. ತಪ್ಪಿದ್ದಲ್ಲಿ ಅದನ್ನು ಒಪ್ಪಿಕೊಳ್ಳುವ ಮನೋಭಾವನ್ನು ಬೆಳೆಸಿಕೊಳ್ಳಿ. ಷೇರು ಖರೀದಿಸುವಾಗ ಎಚ್ಚರವಹಿಸಿ.

ಗುಂಡಣ್ಣ



ಕೇಂದ್ರ ಬಜೆಟ್ - 2026-27

ಕೃಷಿ ಕ್ಷೇತ್ರದಲ್ಲಿ ಕೃತಕ ಬುದ್ಧಿಮತ್ತೆ ಅಳವಡಿಕೆಗೆ ಕ್ರಮ



ರೈತರ ಆದಾಯ ಹೆಚ್ಚಿಸಲು ಕಸರತ್ತು

ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಕ್ರಮ, ತೆಂಗು ಬೆಳೆಗೆ ಉತ್ತೇಜನ

ಪ್ರಮುಖ ಅಂಶಗಳು

- 2030ರ ವೇಳೆಗೆ ಗೋಡಂಬಿ, ಕೋಕೊ ಜಾಗತಿಕ ಪ್ರೀಮಿಯಂ ಬ್ರ್ಯಾಂಡ್‌ಗಳನ್ನಾಗಿ ರೂಪಿಸಲು ಕ್ರಮ
- ಕೃಷಿಕರಿಗೆ ಬಹುಭಾಷಾ ಎ.ಐ ನೆರವು

ಪ್ರಜಾವಾಣಿ ವಾರ್ತೆ

ನವದೆಹಲಿ: ಸಾಂಪ್ರದಾಯಿಕ ಬೆಳೆಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಿ, ಕೃಷಿ ಉತ್ಪನ್ನಗಳ ಮೌಲ್ಯವರ್ಧನೆಗೆ ಉತ್ತೇಜನ ನೀಡುವ ಯೋಜನೆಗಳ ಮೂಲಕ ಅನ್ನದಾತರ ಆದಾಯ ಹೆಚ್ಚಿಸುವ ಆಶಯವನ್ನು ಈ ಬಾರಿಯ ಬಜೆಟ್ ಒಳಗೊಂಡಿದೆ.

ಕೃಷಿ ಕ್ಷೇತ್ರದಲ್ಲಿ ಬಹು ಆಯಾಮದ ಯೋಜನೆಗಳನ್ನು ಅನುಷ್ಠಾನಗೊಳಿಸುವ ಮೂಲಕ ಗ್ರಾಮೀಣ ಪ್ರದೇಶದಲ್ಲಿ ಉದ್ಯೋಗ ಸೃಷ್ಟಿಸುವ ಉದ್ದೇಶ ಹೊಂದಲಾಗಿದೆ. ಅನ್ನದಾತರ ನಿರೀಕ್ಷೆಗಳ ಭಾರ ಕಡಿಮೆಗೊಳಿಸುವ ಪ್ರಯತ್ನ ಕೈಗೊಂಡಿದ್ದರೂ ಕೃಷಿ ವಲಯ ನಿರಂತರವಾಗಿ ಎದುರಿಸುತ್ತಿರುವ ಸಮಸ್ಯೆಗಳಿಗೆ ಶಾಶ್ವತ ಪರಿಹಾರದ ಮಾರ್ಗ ತೋರಿಸಿಲ್ಲ ಎನ್ನುವುದು ತಜ್ಞರ ವಿಶ್ಲೇಷಣೆ.

ಕೃಷಿ ಮತ್ತು ಸಂಬಂಧಿತ ವಲಯಕ್ಕೆ ಈ ಬಾರಿ ₹1.62 ಲಕ್ಷ ಕೋಟಿ ಅನುದಾನ ನಿಗದಿಪಡಿಸಲಾಗಿದೆ. ಇದು ಕಳೆದ ವರ್ಷಕ್ಕಿಂತ ಶೇ 7.12ರಷ್ಟು ಹೆಚ್ಚು. 2025–26ರಲ್ಲಿ ₹1.51 ಲಕ್ಷ ಕೋಟಿ ನಿಗದಿಪಡಿಸಲಾಗಿತ್ತು.

ಶ್ರೀಗಂಧ ಮತ್ತು ತೆಂಗು ಬೆಳೆಗೆ ಉತ್ತೇಜನ, ಕೃತಕ ಬುದ್ಧಿಮತ್ತೆ ಬಳಕೆಗೆ ಆದ್ಯತೆ ನೀಡುವುದನ್ನು ಸಹ ಪ್ರಸ್ತಾಪಿಸಲಾಗಿದೆ. ಜತೆಗೆ, ಕೃಷಿಕರನ್ನು ಉದ್ಯಮಶೀಲರನ್ನಾಗಿ ಪರಿವರ್ತಿಸುವ ಅಂಶಗಳನ್ನು ಉಲ್ಲೇಖಿಸಲಾಗಿದೆ. ಸಣ್ಣ ಮತ್ತು ಅತಿ ಸಣ್ಣ ರೈತರನ್ನು ಗಮನದಲ್ಲಿರಿಸಿಕೊಂಡು ಈ ಅಂಶಗಳನ್ನು ಪ್ರಸ್ತಾಪಿಸಲಾಗಿದೆ.

ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಉತ್ತಮ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಪಶು ಸಂಗೋಪನಾ ವಲಯದಲ್ಲಿ ಉದ್ಯಮಶೀಲತೆ ಅಭಿವೃದ್ಧಿಗೆ ಬೆಂಬಲ ನೀಡುವುದಾಗಿ ಘೋಷಿಸಲಾಗಿದೆ.

ಸಾಲ ಆಧಾರಿತ ಸಬ್ಸಿಡಿ ಯೋಜನೆ, ಜಾನುವಾರುಗಳ ಸಾಕಾಣಿಕೆಗೆ ಆಧುನಿಕತೆಯ ಸ್ಪರ್ಶ, ಜಾನುವಾರುಗಳು, ಡೇರಿ ಮತ್ತು ಪೌಲ್ಟ್ರಿ ವಲಯವನ್ನು ಗಮನದಲ್ಲಿರಿಸಿಕೊಂಡು ಸರಪಳಿಯ ರೀತಿಯ ವ್ಯವಸ್ಥೆಯನ್ನು ರೂಪಿಸುವುದು ಹಾಗೂ ಜಾನುವಾರು ಕೃಷಿಕರ ಉತ್ಪಾದಕರ ಸಂಘಟನೆಗಳನ್ನು ಆರಂಭಿಸುವ ಮೂಲಕ ಈ ವಲಯಕ್ಕೆ ಹೊಸ ಸ್ಪರ್ಶ ನೀಡುವುದನ್ನು ಉಲ್ಲೇಖಿಸಲಾಗಿದೆ.

ಅತಿ ಹೆಚ್ಚು ಬೆಲೆ ದೊರೆಯುವ ತೆಂಗು, ಶ್ರೀಗಂಧ, ಕೋಕೊ ಮತ್ತು ಗೋಡಂಬಿಗೆ ಉತ್ತೇಜನ ಮತ್ತು ಈಶಾನ್ಯ ರಾಜ್ಯಗಳಲ್ಲಿ 'ಅಗರ್' ಮರಗಳು, ಬಾದಾಮಿ, ವಾಲ್ನಟ್ಸ್‌ಗಳಿಗೂ ಬೆಂಬಲ ನೀಡುವುದಾಗಿ ತಿಳಿಸಲಾಗಿದೆ.

ಭಾರತ ಜಗತ್ತಿನಲ್ಲೇ ಅತಿ ಹೆಚ್ಚು ತೆಂಗು ಬೆಳೆಯುವ ರಾಷ್ಟ್ರ. ಒಂದು ಕೋಟಿ ರೈತರು ಸೇರಿದಂತೆ ಸುಮಾರು ಮೂರು ಕೋಟಿ ಮಂದಿ ತೆಂಗು ಬೆಳೆ ಮೇಲೆ ಅವಲಂಬಿತರಾಗಿದ್ದಾರೆ. ತೆಂಗು ಉತ್ಪಾದನೆ ಹೆಚ್ಚಿಸುವ ಉದ್ದೇಶದಿಂದ 'ತೆಂಗು ಉತ್ತೇಜನ ಯೋಜನೆ'ಯನ್ನು ಘೋಷಿಸಲಾಗಿದೆ. ಅತಿ ಹೆಚ್ಚು ತೆಂಗು ಬೆಳೆಯುವ ರಾಜ್ಯಗಳಲ್ಲಿ ಹಳೆಯ ತೆಂಗಿನ ಗಿಡಗಳನ್ನು ಬದಲು ಹೊಸ ಸಸಿಗಳು ಅಥವಾ ಉತ್ತಮ ತಳಿಗಳನ್ನು ನೆಡುವುದು ಈ ಯೋಜನೆಯ ಉದ್ದೇಶವಾಗಿದೆ. ಈ ಮೂಲಕ ಉತ್ಪಾದನೆ ಹೆಚ್ಚಿಸುವುದು ಮತ್ತು ಮೌಲ್ಯವರ್ಧನೆ ಹೆಚ್ಚಿಸುವ ಉದ್ದೇಶವನ್ನು ಹೊಂದಲಾಗಿದೆ.

ಗೋಡಂಬಿ ಮತ್ತು ಕೋಕೊ ಉತ್ಪಾದನೆ ಮತ್ತು ಸಂಸ್ಕರಣೆಯಲ್ಲಿ ಸ್ವಾವಲಂಬನೆ ಸಾಧಿಸಿ ರಫ್ತಿಗೆ ಉತ್ತೇಜನ ನೀಡಲಾಗುವುದು. ಈ ಮೂಲಕ 2030ರ ವೇಳೆಗೆ ಈ ಉತ್ಪನ್ನಗಳನ್ನು ಜಾಗತಿಕ ಪ್ರೀಮಿಯಂ ಬ್ರ್ಯಾಂಡ್‌ಗಳನ್ನಾಗಿ ರೂಪಿಸುವ ಉದ್ದೇಶ ಹೊಂದಲಾಗಿದೆ.

ವಾಲ್ನಟ್ಸ್, ಬಾದಾಮಿ ಬೆಳೆಯಲು ಪ್ರತ್ಯೇಕವಾದ ವಿಶೇಷ ಯೋಜನೆಗಳನ್ನು ಕೈಗೊಂಡು ರೈತರ ಆದಾಯ ಹೆಚ್ಚಿಸಲಾಗುವುದು. ಈ ಯೋಜನೆಯಲ್ಲಿ ಯುವಕರಿಗೆ ಆದ್ಯತೆ ನೀಡಲಾಗುವುದು ಎಂದು ಘೋಷಿಸಲಾಗಿದೆ.

ಕೃಷಿಯಲ್ಲಿ ಎಐ: ಕೃಷಿ ಕ್ಷೇತ್ರದಲ್ಲಿ ಆಧುನಿಕ ತಂತ್ರಜ್ಞಾನವನ್ನು ಮತ್ತಷ್ಟು ಹೆಚ್ಚಿಸಲು ಕೃತಕ ಬುದ್ಧಿಮತ್ತೆ (ಎಐ) ಬಳಸಿಕೊಳ್ಳುವ ಕ್ರಮಗಳನ್ನು ಘೋಷಿಸಲಾಗಿದೆ.

ಕೃಷಿಕರಿಗೆ ಸಹಾಯ ಮತ್ತು ಸಲಹೆಗಾಗಿ 'ಭಾರತ್ ವಿಸ್ತಾರ್' (ವರ್ಚ್ಯುವಲ್ ಇಂಟಿಗ್ರೇಟೆಡ್ ಸಿಸ್ಟಮ್ ಟು ಆಕ್ಸೆಸ್ ಅಗ್ರಿಕಲ್ಚರಲ್ ರಿಸೋರ್ಸಸ್) ಎಂಬ ಬಹುಭಾಷಾ ಎಐ ಸಾಧನ ಪರಿಚಯಿಸುವುದಾಗಿ ತಿಳಿಸಲಾಗಿದೆ.

ರೈತರು ಉತ್ತಮ ನಿರ್ಧಾರ ಕೈಗೊಳ್ಳಲು ಮತ್ತು ಸಲಹೆಗಳನ್ನು ಪಡೆಯಲು ಇದರಿಂದ ಅನುಕೂಲವಾಗಲಿದೆ. ಕೃಷಿ-ಸ್ಟ್ಯಾಕ್ ಪೋರ್ಟಲ್ ಮತ್ತು ಐಸಿಎಆರ್ ಅನುಮೋದಿತ ಕೃಷಿ ಪದ್ಧತಿಗಳನ್ನು ಎಐ ವ್ಯವಸ್ಥೆಗಳೊಂದಿಗೆ ಸಂಯೋಜಿಸಲಾಗುವುದು. ಇದರಿಂದ, ರೈತರಿಗೆ ಒಂದೇ ಕಡೆ ವಿಶ್ವಾಸಾರ್ಹ, ವೈಜ್ಞಾನಿಕ ಸಲಹೆ ದೊರೆಯಲಿದೆ.

ಶ್ರೀಗಂಧ ಕೃಷಿಗೆ ಉತ್ತೇಜನ

ಶ್ರೀಗಂಧ, ಭಾರತದ ಸಾಮಾಜಿಕ ಮತ್ತು ಸಾಂಸ್ಕೃತಿಕ ಪರಂಪರೆ ಜತೆ ಮೇಳೈಸಿದೆ. ದೇಶದ ಶ್ರೀಗಂಧ ಪರಂಪರೆ ವೈಭವವನ್ನು ಮುಂದುವರಿಸುವ ನಿಟ್ಟಿನಲ್ಲಿ ಶ್ರೀಗಂಧ ಬೆಳೆಯಲು ಮತ್ತು ಕಟಾವು ನಂತರ ಪ್ರಕ್ರಿಯೆಗಳಿಗೆ ನೆರವು ನೀಡಲಾಗುವುದು. ರಾಜ್ಯ ಸರ್ಕಾರಗಳ ಸಹಭಾಗಿತ್ವದಲ್ಲಿ ಈ ಯೋಜನೆಯನ್ನು ಕೈಗೊಳ್ಳಲಾಗುವುದು ಎಂದು ಬಜೆಟ್‌ನಲ್ಲಿ ಉಲ್ಲೇಖಿಸಲಾಗಿದೆ.

ಬ್ಯಾಟರಿಗೆ ಸುಂಕ ವಿನಾಯಿತಿ



ನವದೆಹಲಿ (ಪಿಟಿಐ): ಪಳೆಯುಳಿಕೆ ಅಲ್ಲದ ಇಂಧನ ಉತ್ಪಾದನೆಯನ್ನು ಪ್ರೋತ್ಸಾಹಿಸಲು ಅಣುಶಕ್ತಿ ಕ್ಷೇತ್ರ ಹಾಗೂ ಬ್ಯಾಟರಿ ಶಕ್ತಿ ಸಂಗ್ರಹಣೆ ಕ್ಷೇತ್ರದಲ್ಲಿ ಹೂಡಿಕೆ ಹೆಚ್ಚಿಸಲು ಕೇಂದ್ರ ಸರ್ಕಾರವು ಮೂಲ ಕಸ್ಟಮ್ ಸುಂಕದಲ್ಲಿ ವಿನಾಯಿತಿ ನೀಡಿದೆ.

'ಬ್ಯಾಟರಿಗಳಿಗಾಗಿ ಲಿಥಿಯಂ–ಅಯಾನ್ ಕೋಶಗಳನ್ನು ತಯಾರಿಸಲು ಬಳಸುವ ಸರಕುಗಳಿಗೆ ನೀಡುವ ಮೂಲ ಕಸ್ಟಮ್ಸ್ ಸುಂಕ ವಿನಾಯಿತಿಯನ್ನು ಬ್ಯಾಟರಿ ಸಂಗ್ರಹಣ ವ್ಯವಸ್ಥೆಗೂ ವಿಸ್ತರಿಸುವ ಪ್ರಸ್ತಾವವನ್ನು ಮುಂದಿಡುತ್ತಿದ್ದೇನೆ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಪ್ರಕಟಿಸಿದರು.

ಇದರಿಂದ ಬ್ಯಾಟರಿ ಶಕ್ತಿ ಸಂಗ್ರಹ ವ್ಯವಸ್ಥೆಗೆ ಬಳಸುವ ಲಿಥಿಯಂ–ಅಯಾನ್ ಕೋಶಗಳ ಬಂಡವಾಳ ಸರಕುಗಳ ಮೇಲಿನ ಆಮದು ಸುಂಕ ಶೂನ್ಯ ಇರಲಿದೆ.

ಬ್ಯಾಟರಿ ದೇಶಿಯ ಉತ್ಪಾದನೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ವಿದ್ಯುತ್ ವಾಹನಗಳ ಬ್ಯಾಟರಿ ತಯಾರಿಕೆಗೆ 35ಕ್ಕೂ ಹೆಚ್ಚು ಬಂಡವಾಳ ಸರಕುಗಳ ಮೇಲೆ ಹಾಗೂ ಮೊಬೈಲ್ ಬ್ಯಾಟರಿ ತಯಾರಿಕೆಗೆ ಬಳಸುವ 28ಕ್ಕೂ ಅಧಿಕ ವಸ್ತುಗಳ ಮೇಲೆ ತೆರಿಗೆ ವಿನಾಯಿತಿ ನೀಡಲಾಗಿದೆ.

ಅದೇ ರೀತಿ, ಸೌರ ಫಲಕಗಳ ತಯಾರಿಕೆಗೆ ಬಳಸುವ 'ಸೋಡಿಯಂ ಅಂಟಿಮೊನೆಟ್' ಮೇಲಿನ ಆಮದು ಕಸ್ಟಮ್ ಸುಂಕ ವಿನಾಯಿತಿ ನೀಡುವ ಪ್ರಸ್ತಾವ ಮಂಡಿಸಲಾಗಿದೆ.

ಪ್ರಸಕ್ತ, ಸೋಡಿಯಂ ಅಂಟಿಮೊನೆಟ್ ಮೇಲೆ ಕಸ್ಟಂ ಸುಂಕ ಶೇಕಡ 7.5ರಷ್ಟಿದೆ.

₹10 ಲಕ್ಷ ಮಿತಿ ಹಿಂತೆಗೆತ

ನವದೆಹಲಿ: ಇ–ವಾಣಿಜ್ಯ ವ್ಯವಹಾರಗಳ ಮೂಲಕ ನವೋದ್ಯಮಗಳು ಜಾಗತಿಕ ಮಾರುಕಟ್ಟೆಗಳನ್ನು ಪ್ರವೇಶಿಸಲು ಅನುವು ಮಾಡಿಕೊಡುವ ನಿಟ್ಟಿನಲ್ಲಿ ಕೊರಿಯರ್ ರಫ್ತಿನ ಪ್ರತಿ ಘಟಕದ ಮೇಲಿನ ₹10 ಲಕ್ಷ ಮಿತಿಯನ್ನು ಸಂಪೂರ್ಣ ತೆಗೆದುಹಾಕುವುದಾಗಿ ಘೋಷಿಸಲಾಗಿದೆ.

ಜತೆಗೆ ಹಿಂದಿರುಗಿಸಿದ, ತಿರಸ್ಕರಿಸಿದ ಸರಕುಗಳ ಘಟಕಗಳನ್ನು ಗುರುತಿಸಿ, ನಿರ್ವಹಿಸಲು ತಂತ್ರಜ್ಞಾನ ಸುಧಾರಣೆಗೆ ಒತ್ತು ನೀಡುವುದಾಗಿಯೂ ಆಯವ್ಯಯದಲ್ಲಿ ಘೋಷಿಸಲಾಗಿದೆ.

ಕೌಶಲ ತರಬೇತಿಗೆ ₹1,000 ಕೋಟಿ

ನವದೆಹಲಿ (ಪಿಟಿಐ): ವಿಕಸಿತ ಭಾರತ ಗುರಿಸಾಧಿಸಲು ದೇಶದ ಯುವಜನತೆಗೆ ಕೌಶಲ ಪೂರ್ಣ ವೃತ್ತಿಮಾರ್ಗಗಳನ್ನು ರೂಪಿಸಲು ವಿವಿಧ ಕಾರ್ಯಕ್ರಮಗಳನ್ನು ಕೇಂದ್ರ ಸರ್ಕಾರ ಘೋಷಿಸಿದೆ.

ಕೌಶಲಪೂರ್ಣ ಆರೋಗ್ಯ ವೃತ್ತಿಪರತೆಯಲ್ಲಿ ಭಾರತವನ್ನು ಜಾಗತಿಕ ಕೇಂದ್ರವನ್ನಾಗಿಸುವ ನಿಟ್ಟಿನಲ್ಲಿ 1 ಲಕ್ಷ ಮಂದಿ ಆರೋಗ್ಯ ವೃತ್ತಿಪರರಿಗೆ (ಎಎಚ್‌ಪಿಎಸ್) ಐದು ವರ್ಷಗಳ ತರಬೇತಿ ಒದಗಿಸುವ ಯೋಜನೆಯನ್ನು ಪ್ರಸ್ತಾಪಿಸಿದೆ.

ಈ ಉದ್ದೇಶಕ್ಕಾಗಿ ಇದೇ ಮೊದಲ ಬಾರಿಗೆ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಆಯವ್ಯಯದಲ್ಲಿ ₹1,000 ಕೋಟಿ ಅನುದಾನ ಘೋಷಿಸಲಾಗಿದೆ. ಜತೆಗೆ ದೇಶದಲ್ಲಿ ವೃದ್ಧರ ಸಂಖ್ಯೆ ಹೆಚ್ಚುತ್ತಿರುವ ಕಾರಣ ವೃದ್ಧರ ಆರೈಕೆಗೆಂದೇ ವಿಶೇಷ ಕಾರ್ಯಕ್ರಮದ ಅಡಿಯಲ್ಲಿ 1.5 ಲಕ್ಷ ಮಂದಿಗೆ ತರಬೇತಿ ಒದಗಿಸಲಾಗುತ್ತದೆ ಎಂದೂ ತಿಳಿಸಿದೆ.

ಫಸಲು ಭೀಮಾ: ಅನುದಾನ ಕಡಿತ

ಆರ್ಥಿಕ ವರ್ಷ	ಅನುದಾನ
2024-25	₹14,473 ಕೋಟಿ
2025-26	₹12,267 ಕೋಟಿ
2026-27	₹12,200 ಕೋಟಿ

ವಿಬಿ– ಜಿ ರಾಮ್ ಜಿಗೆ ₹95 ಸಾವಿರ ಕೋಟಿ, ನರೇಗಾಕ್ಕೆ ₹30 ಸಾವಿರ ಕೋಟಿ

ನವದೆಹಲಿ (ಪಿಟಿಐ): ಹೊಸದಾಗಿ ಜಾರಿಗೆ ತಂದಿರುವ 'ವಿಕಸಿತ ಭಾರತ – ಉದ್ಯೋಗ ಖಾತರಿ ಮತ್ತು ಜೀವನೋಪಾಯ ಮಿಷನ್ ಗ್ರಾಮೀಣ' (ವಿಬಿ– ಜಿ ರಾಮ್ ಜಿ) ಕಾಯ್ದೆಗೆ ಈ ಸಾಲಿನ ಬಜೆಟ್‌ನಲ್ಲಿ ₹95,692.31 ಕೋಟಿ ಅನುದಾನ ನೀಡಲಾಗಿದೆ. ಈಗಾಗಲೇ ಜಾರಿಯಲ್ಲಿರುವ 'ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆ'ಗೂ (ಮನರೇಗಾ) ₹30 ಸಾವಿರ ಕೋಟಿ ನೀಡಲಾಗಿದೆ.

ವಿಬಿ– ಜಿ ರಾಮ್ ಜಿ ಅಡಿಯಲ್ಲಿ ವರ್ಷಕ್ಕೆ 125 ದಿನಗಳ ಕಾಲ ಉದ್ಯೋಗ ನೀಡುವ ಖಾತರಿ ಒದಗಿಸಲಾಗಿದೆ. ಆ ಮೂಲಕ ಎರಡು ದಶಕಗಳ ಹಿಂದೆ (2005) ಯುಪಿಎ ಸರ್ಕಾರವು ಜಾರಿಗೆ ತಂದಿದ್ದ ಮನರೇಗಾವನ್ನು ಬದಲಾಯಿಸಲಿದೆ.

'ವಿಬಿ– ಜಿ ರಾಮ್ ಜಿ ಜಾರಿಯಾಗುವವರೆಗೂ ಮ–ನರೇಗಾ ಮುಂದುವರಿಯಲಿದೆ. ಮ–ನರೇಗಾದಡಿ ಈಗಾಗಲೇ ಕೈಗೆತ್ತಿಕೊಂಡಿರುವ ಕೆಲಸಗಳನ್ನು ಪೂರ್ಣಗೊಳಿಸಲಾಗುವುದು' ಎಂದು ಕೇಂದ್ರ ಗ್ರಾಮೀಣಾಭಿವೃದ್ಧಿ ಸಚಿವಾಲಯವು ತಿಳಿಸಿದೆ.

ಬಜೆಟ್ ದಾಖಲೆಗಳ ಪ್ರಕಾರ, ಗ್ರಾಮೀಣಾಭಿವೃದ್ಧಿ ಸಚಿವಾಲಯಕ್ಕೆ ₹1 ಲಕ್ಷ 94 ಸಾವಿರ ಕೋಟಿ (₹1,94,368,81 ಕೋಟಿ) ಅನುದಾನ ಘೋಷಿಸಲಾಗಿದೆ. ಕಳೆದ ವರ್ಷಕ್ಕೆ ಹೋಲಿಸಿದರೆ, ಅನುದಾನ ಸ್ವಲ್ಪ ಹೆಚ್ಚಾಗಿದೆ. ಹಿಂದಿನ ವರ್ಷದಂತೆ ಪರಿಷ್ಕೃತ ಅಂದಾಜಿನ ಪ್ರಕಾರ, ₹1ಲಕ್ಷ 86 ಸಾವಿರ ಕೋಟಿ (₹1,86,995.61) ಅನುದಾನ ನೀಡಲಾಗಿತ್ತು.

ಭೂ ಸಂಪನ್ಮೂಲ ಇಲಾಖೆಗೆ 2026–27ರಲ್ಲಿ ₹2,654.33 ಕೋಟಿ ಅನುದಾನ ನೀಡಲಾಗಿದೆ. ಕಳೆದ ವರ್ಷ ₹2,651 ಕೋಟಿ ಅನುದಾನ ನಿಗದಿಯಾಗಿತ್ತು. ಪರಿಷ್ಕೃತ ಅಂದಾಜಿನ ಪ್ರಕಾರ, 1,757.4 ಕೋಟಿ ಅನುದಾನ ನೀಡಲಾಗಿತ್ತು.

ಮನರೇಗಾಕ್ಕೆ 2025–26ರಲ್ಲಿ ಪರಿಷ್ಕೃತ ಅಂದಾಜಿನಂತೆ ₹88 ಸಾವಿರ ಕೋಟಿ ಅನುದಾನ ನೀಡಲಾಗಿತ್ತು. ಆರಂಭದಲ್ಲಿ ₹86 ಸಾವಿರ ಕೋಟಿ ಅನುದಾನವು ಬಳಕೆಯಾಗಿದೆ.

ಪ್ರಧಾನಮಂತ್ರಿ ಗ್ರಾಮ ಸಡಕ್ ಯೋಜನೆ (ಪಿಎಂಜಿಎಸ್‌ವೈ)ಗೆ 2026–27ರಲ್ಲಿ ₹19 ಸಾವಿರ ಕೋಟಿ ಅನುದಾನ ನೀಡಲಾಗಿದೆ. ಕಳೆದ ವರ್ಷ ಇಷ್ಟೇ ಅನುದಾನ ನೀಡಲಾಗಿತ್ತು. ಕಳೆದ ವರ್ಷ ಆರ್ಥಿಕ ವರ್ಷದಲ್ಲಿ ಪರಿಷ್ಕೃತ ಅಂದಾಜಿನಂತೆ ₹11 ಸಾವಿರ ಕೋಟಿ ವ್ಯಯಿಸಲಾಗಿತ್ತು.

ದೀನದಯಾಳ್ ಅಂತ್ಯೋದಯ ಯೋಜನೆ–ಗ್ರಾಮೀಣ ಜೀವನೋಪಾಯ ಮಿಷನ್ ಯೋಜನೆಗೆ ಈ ಸಾಲಿನಲ್ಲಿ ₹19,200 ಕೋಟಿ ಅನುದಾನ ನೀಡಲಾಗಿದೆ. ಕಳೆದ ವರ್ಷ ₹19,005 ಕೋಟಿ ಅನುದಾನ ನೀಡಿದ್ದು, ಪರಿಷ್ಕೃತ ಅಂದಾಜಿನಂತೆ ₹16 ಸಾವಿರ ಕೋಟಿ ವ್ಯಯಿಸಲಾಗಿತ್ತು.

ಈ ವರ್ಷ ಪ್ರಧಾನಮಂತ್ರಿ ಆವಾಸ್ ಯೋಜನೆ–ಗ್ರಾಮೀಣ (ಪಿಎಂಎವೈ–ಜಿ)ಗೆ ₹54,916.70 ಅನುದಾನ ಮೀಸಲಿಡಲಾಗಿದೆ. ಕಳೆದ ಸಾಲಿನಲ್ಲಿ ₹54,832 ಕೋಟಿ ಅನುದಾನ ನೀಡಲಾಗಿತ್ತು. ಪರಿಷ್ಕೃತ ಅಂದಾಜಿನಂತೆ ₹32,500.01 ಕೋಟಿ ವ್ಯಯಿಸಲಾಗಿತ್ತು.




ನರೇಗಾ

ಯುಪಿಎ ನೀಡಿದ್ದೇ ಹೆಚ್ಚು

ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ 2005ರಲ್ಲಿ ನರೇಗಾ ಯೋಜನೆಯನ್ನು ಜಾರಿಗೆ ತಂದಿತ್ತು. 2006–07ರಿಂದ ಈ ಯೋಜನೆಗಾಗಿ ಹಣ ನಿಗದಿ ಮಾಡಲು ಆರಂಭಿಸಿತ್ತು. 2014ರಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಈ ಯೋಜನೆಯನ್ನು ಹಾಗೇ ಉಳಿಸಿಕೊಂಡಿತ್ತು. 'ಯುಪಿಎಗೆ ಹೋಲಿಸಿದರೆ, ನರೇಗಾಗೆ ನಾವೇ ಹೆಚ್ಚು ಅನುದಾನ ನೀಡಿದ್ದು' ಎಂದು ಕೇಂದ್ರ ಸರ್ಕಾರ ಹಲವು ಬಾರಿ ಹೇಳಿದೆ. ಆದರೆ, ಹೆಚ್ಚುತ್ತಾ ಸಾಗಿದ ಬಜೆಟ್ ಗಾತ್ರಕ್ಕೆ ಹೋಲಿಸಿಕೊಂಡರೆ, ಯುಪಿಎ ಸರ್ಕಾರವೇ ನರೇಗಾಗೆ ಹೆಚ್ಚು ಅನುದಾನ ನೀಡಿದೆ







"ನರೇಗಾ ಅಡಿಯಲ್ಲಿ ₹88 ಸಾವಿರ ಕೋಟಿ ಖರ್ಚು ಮಾಡಿ ಕೇಂದ್ರ ಸರ್ಕಾರವು ಈಗಲೇ 50 ದಿನಗಳ ಕೆಲಸವನ್ನು ನೀಡುತ್ತಿದೆ. ಹೊಸ ಯೋಜನೆಯ ಪ್ರಕಾರ 125 ಕೆಲಸ ದಿನಗಳನ್ನು ನೀಡುವುದಾಗಿ ಕೇಂದ್ರ ಹೇಳಿದೆ. ಹೊಸ ಯೋಜನೆಗಾಗಿ ₹95 ಸಾವಿರ ಕೋಟಿ ಖರ್ಚು ಮಾಡಿ 125 ಕೆಲಸ ದಿನಗಳನ್ನು ನೀಡುವ ಭರವಸೆಯನ್ನು ಕೇಂದ್ರವು ಹೇಗೆ ಈಡೇರಿಸುತ್ತದೆ?

ಪಿ. ಚಿದಂಬರಂ, ಕಾಂಗ್ರೆಸ್ ನಾಯಕ



"ಈಗ ಯಾವುದೋ ಯೋಜನೆಗೆ ಮಹಾತ್ಮ ಗಾಂಧಿ ಹೆಸರಿಟ್ಟಿದ್ದಾರೆ. ಮನರೇಗಾ ಹೆಸರು ಬದಲಾವಣೆ ಹಿಂಪಡೆದು ಹಿಂದೆ ಇದ್ದಿದ್ದನ್ನೇ ಮುಂದುವರಿಸಲಿ. ವಿಬಿ ಜಿ ರಾಮ್ ಜಿ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಅನುದಾನದ ಅನುಪಾತ 60:40 ಯಾವುದೇ ಕಾರಣಕ್ಕೂ ನಡೆಯಲ್ಲ. ಮನರೇಗಾಗೂ ಎಐ ಬಳಕೆ ಮಾಡಿ ಕೂಲಿ ತೀರ್ಮಾನ ಮಾಡುವುದಾಗಿ ಹೇಳಿದ್ದರು. ವ್ಯವಸಾಯದ ಕಾಲದಲ್ಲಿ ಕೂಲಿ ಕೊಡಲಿಲ್ಲ. ಎಐನಿಂದ ಕೃಷಿಗೆ ಪ್ರಯೋಜನವಿಲ್ಲ. ರೇಷ್ಮೆಗೆ ಉತ್ತೇಜನ ಕೊಡಬೇಕು. ಸಕ್ಕರೆ ಬೆಲೆ ಏರಿಸದಿದ್ದರೆ ಸಹಕಾರ ಕ್ಷೇತ್ರಗಳು ಮುಚ್ಚುವ ಹಂತಕ್ಕೆ ಬರುತ್ತವೆ

ಡಿ.ಕೆ. ಶಿವಕುಮಾರ್, ಉಪಮುಖ್ಯಮಂತ್ರಿ




"ಬೆಲೆ ಏರಿಕೆಯನ್ನು ತಹಬಂದಿಗೆ ತರುವ, ರೂಪಾಯಿಯ ಅಪಮೌಲ್ಯ ತಡೆಗಟ್ಟುವ, ಉದ್ಯೋಗ ಸೃಷ್ಟಿಯ ಯಾವ ಮುನ್ನೋಟಗಳೂ ಇಲ್ಲದ ಬಜೆಟ್. ಜನರ ಸಂಬಳ ಏರಿಕೆಯಾಗದ, ಅವಕಾಶಗಳು ಕಡಿಮೆಯಾಗುತ್ತಿರುವ ಈ ಹೊತ್ತಿನಲ್ಲೂ ಆದಾಯ ಹೆಚ್ಚಿಸುವ ಯಾವ ಕ್ರಮವನ್ನು ಬಜೆಟ್ ಒಳಗೊಂಡಿಲ್ಲ. ಮಧ್ಯಮ ವರ್ಗ, ರೈತರು ಮತ್ತು ಸಣ್ಣ–ಮಧ್ಯಮ ಕೈಗಾರಿಕೆಗಳಿಗೆ ಯಾವುದೇ ಪರಿಹಾರಗಳಿಲ್ಲ. ಆಕರ್ಷಕ ಘೋಷಣೆಗಳ ವೇಷದಲ್ಲಿ ಈ ಎಲ್ಲವನ್ನೂ ಕಡೆಗಣಿಸಿರುವ ಬಜೆಟ್ ಇದು

ಪ್ರಿಯಾಂಕ್ ಖರ್ಗೆ
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ



"ಇದು ಜನಹಿತದ ಬಜೆಟ್. ಕೈಗಾರಿಕೆ, ಮಹಿಳಾ ಶಿಕ್ಷಣಕ್ಕೆ ಒತ್ತು ನೀಡಲಾಗಿದೆ. ಪ್ರತಿ ಜಿಲ್ಲೆಯಲ್ಲಿ ವಿದ್ಯಾರ್ಥಿನಿಯರ ವಿದ್ಯಾರ್ಥಿ ನಿಲಯ ನಿರ್ಮಿಸಲು ಕೇಂದ್ರ ಸರ್ಕಾರವೇ ಮುಂದೆ ಬಂದಿರುವುದು ಇದೇ ಮೊದಲು. ಈ ಬಜೆಟ್‌ನಿಂದ ರಾಜ್ಯಕ್ಕೆ ಸಾಕಷ್ಟು ಅನುಕೂಲಗಳಿವೆ. ಶ್ರೀಗಂಧ, ತೆಂಗಿನ ಬೆಳೆ ಉತ್ತೇಜನಕ್ಕೆ ಹಾಗೂ ಮೌಲ್ಯವರ್ಧನೆಗೆ ಹೊಸ ಕ್ರಮಗಳನ್ನು ಘೋಷಿಸಲಾಗಿದೆ. ಪ್ರವಾಸಿ ಮಾರ್ಗದರ್ಶಕರಿಗೆ ತರಬೇತಿ ನೀಡುವ ಯೋಜನೆಯಿಂದಲೂ ಕರ್ನಾಟಕಕ್ಕೆ ಲಾಭವಾಗಲಿದೆ

ಆರ್.ಅಶೋಕ
ವಿಧಾನಸಭೆ ವಿರೋಧ ಪಕ್ಷದ ನಾಯಕ




"ಪ್ರಧಾನಿ ನರೇಂದ್ರ ಮೋದಿ ಅವರು 2047ರ ವೇಳೆಗೆ ಭಾರತವನ್ನು ವಿಕಸಿತಗೊಳಿಸುವ ಕನಸು ಕಂಡಿದ್ದಾರೆ. ಇದಕ್ಕೆ ಪೂರಕವಾಗಿ ಕೇಂದ್ರ ಬಜೆಟ್ ರೂಪುಗೊಂಡಿದೆ. ಸಬ್ ಕಾ ಸಾತ್, ಸಬ್ ಕಾ ವಿಕಾಸ್ ಜೊತೆಗೆ ದೇಶದ ಮಹಿಳೆಯರ ಶ್ರೇಯೋಭಿವೃದ್ಧಿಗೆ ಒತ್ತು ನೀಡುವ ಅಂಶಗಳನ್ನು ಬಜೆಟ್ ಒಳಗೊಂಡಿದೆ. ಕೈಗಾರಿಕೆ, ಪ್ರವಾಸೋದ್ಯಮ, ಐಟಿ–ಬಿಟಿ ಕ್ಷೇತ್ರದ ಅಭಿವೃದ್ಧಿ, ರೈತರ ಆದಾಯ ದ್ವಿಗುಣ ಮಾಡುವ ಆಶಯ ಹೊಂದಿದೆ. ಯಾವುದೇ ಹೊಸ ತೆರಿಗೆ ಹೇರದ ಸರ್ವಸ್ಪರ್ಶಿ, ಸರ್ವವ್ಯಾಪಿ ಬಜೆಟ್ ಇದಾಗಿದೆ

ಬಿ.ವೈ.ವಿಜಯೇಂದ್ರ, ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ



"ವಿಕಸಿತ ಭಾರತ ಸಾಕಾರಕ್ಕೆ ಬಜೆಟ್ ಪೂರಕವಾಗಿದೆ. ಹೈಸ್ಪೀಡ್ ರೈಲು ಕಾರಿಡಾರ್ ಯೋಜನೆ ರಾಜ್ಯಕ್ಕೆ ವರದಾನವಾಗಲಿದೆ. 16ನೇ ಹಣಕಾಸು ಆಯೋಗ ಕರ್ನಾಟಕಕ್ಕೆ ಶೇ 4.13ರಷ್ಟು ತೆರಿಗೆ ಪಾಲು ಹಂಚಿಕೆಗೆ ಶಿಫಾರಸು ಮಾಡಿದೆ. 15ನೇ ಹಣಕಾಸು ಆಯೋಗವು ಶೇ 3.64 ಹಂಚಿಕೆ ಮಾಡಿತ್ತು. ಹೊಸದಾಗಿ ಹಂಚಿಕೆ ಆಗಿರುವುದರ ಮೂಲಕ ರಾಜ್ಯಕ್ಕೆ 2026–27ನೇ ಸಾಲಿನಲ್ಲಿ ₹63,049 ಕೋಟಿ ತೆರಿಗೆ ಪಾಲು ದೊರೆಯಲಿದೆ. ಇನ್ನು ಮುಂದೆ ರಾಜ್ಯ ಕಾಂಗ್ರೆಸ್ ಸರಕಾರವು ರಾಜಕೀಯವಾಗಿ ಕೇಂದ್ರವನ್ನು ಟೀಕೆ ಮಾಡುವುದನ್ನು ಬಿಡಬೇಕು

ಎಚ್.ಡಿ. ಕುಮಾರಸ್ವಾಮಿ
ಕೇಂದ್ರದ ಬೃಹತ್ ಕೈಗಾರಿಕೆ ಮತ್ತು ಉಕ್ಕು ಖಾತೆ ಸಚಿವ



ಪಶುವೈದ್ಯಕೀಯ ವೃತ್ತಿಪರರ ಸಂಖ್ಯೆ ಹೆಚ್ಚಳಕ್ಕೆ ಕ್ರಮ

ನವದೆಹಲಿ (ಪಿಟಿಐ): ಹೈನುಗಾರಿಕೆ, ಮೀನುಗಾರಿಕೆ, ಹಣ್ಣು, ತರಕಾರಿ ಬೆಳೆಗಳನ್ನು ಒಳಗೊಂಡ ಗರಿಷ್ಠ ಮೌಲ್ಯದ ಕೃಷಿ ವಲಯಕ್ಕೆ ಹೆಚ್ಚಿನ ಕೊಡುಗೆ ನೀಡಲಾಗಿದೆ. ಪಶುವೈದ್ಯಕೀಯ ವೃತ್ತಿಪರರು, ಆಸ್ಪತ್ರೆಗಳ ಲಭ್ಯತೆಯನ್ನು ಹೆಚ್ಚಿಸಲು ವಿಶೇಷ ಯೋಜನೆಯನ್ನು ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಕೃಷಿ ಆದಾಯದಲ್ಲಿ ಪಶು ಸಂಗೋಪನಾ ವಲಯದಿಂದ ಶೇ 16ರಷ್ಟು ದೊರೆಯುತ್ತದೆ. ಹೀಗಾಗಿ, ಈ ವಲಯಕ್ಕೆ ಆದ್ಯತೆ ನೀಡುವ ನಿಟ್ಟಿನಲ್ಲಿ ಮತ್ತೆ 20 ಸಾವಿರಕ್ಕೂ ಹೆಚ್ಚು ಪಶುವೈದ್ಯಕೀಯ ವೃತ್ತಿಪರರು ಲಭ್ಯವಾಗುವಂತೆ ಕ್ರಮಕೈಗೊಳ್ಳುವ ಯೋಜನೆ ರೂಪಿಸಲಾಗಿದೆ.

ಈ ಯೋಜನೆ ಅಡಿ ಪಶುವೈದ್ಯಕೀಯ ಮತ್ತು ಪ್ಯಾರಾ ಪಶುವೈದ್ಯಕೀಯ ಕಾಲೇಜುಗಳು, ಆಸ್ಪತ್ರೆಗಳು, ಡಯಗ್ನಾಸ್ಟಿಕ್ ಪ್ರಯೋಗಾಲಯಗಳನ್ನು ಸ್ಥಾಪಿಸುವ ಉದ್ದೇಶ ಹೊಂದಲಾಗಿದೆ.

ಮೀನುಗಾರಿಕೆ: ವಿಶೇಷ ಆರ್ಥಿಕ ವಲಯ (ಎಸ್‌ಇಜೆಡ್) ಮತ್ತು ಆಳ ಸಮುದ್ರಗಳಲ್ಲಿ ಹಿಡಿಯುವ ಮೀನುಗಳ ಮೇಲೆ ಯಾವುದೇ ಸುಂಕವನ್ನು ವಿಧಿಸಲಾಗುವುದಿಲ್ಲ. ಇದರೊಂದಿಗೆ, ವಿಶೇಷವಾಗಿ ಕರಾವಳಿಯ ರೈತರನ್ನು ಗಮನದಲ್ಲಿಟ್ಟುಕೊಂಡು ಸಬ್ಸಿಡಿ ಆಧಾರಿತ ಸಾಲ ಯೋಜನೆಗಳನ್ನೂ ಪ್ರಕಟಿಸಲಾಗಿದೆ. 500 ಜಲಾಶಯ ಮತ್ತು ಅಮೃತ ಸರೋವರಗಳ ಸಮಗ್ರ ಅಭಿವೃದ್ಧಿಗೆ ಗಮನ ನೀಡಲಾಗಿದೆ.

ಬೆಳವಣಿಗೆಗೆ ಹೇಗೆ ನೆರವಾಗಲಿದೆ ಮುಂಗಡಪತ್ರ?



ವಿಶ್ಲೇಷಣೆ

ಶಂತನ್ ಚಂದ್ರಶೇಖರ್

ಬೆಳವಣಿಗೆಯ ವಿಚಾರದಲ್ಲಿ ಸರ್ಕಾರದ ಆಲೋಚನೆ ಏನು ಎಂಬ ಬಗ್ಗೆ ಬಜೆಟ್ ಹೆಚ್ಚಿನ ಅನುಮಾನಗಳನ್ನು ಉಳಿಸಿಲ್ಲ. ದೇಶದ ಬೆಳವಣಿಗೆಗೆ ಸರ್ಕಾರ ಮಾಡುವ ಬಂಡವಾಳ ವೆಚ್ಚವು ಊರುಗೋಲಾಗಿ ನಿಲ್ಲುವುದು ಮುಂದುವರಿಯಲಿದೆ. ಇದೇ ವೇಳೆ ಹಣಕಾಸಿನ ಶಿಸ್ತನ್ನು ಕೂಡ ಕೈಬಿಡುವುದಿಲ್ಲ ಎಂದು ಬಜೆಟ್ ಹೇಳಿದೆ. ದೇಶದ ಜಿಡಿಪಿಯ ಗಾತ್ರದ ಶೇ 3.1ರಷ್ಟನ್ನು, ಅಂದರೆ ₹12.22 ಲಕ್ಷ ಕೋಟಿಯನ್ನು, ಬಂಡವಾಳ ವೆಚ್ಚಗಳಿಗಾಗಿ ಮೀಸಲು ಇಡಲಾಗಿದೆ. ಈ ಮೂಲಕ ಮೂಲಸೌಕರ್ಯ ವಲಯವು ಸರ್ಕಾರದ ಪ್ರಾಥಮಿಕ ಸನ್ನೆಗೋಲಾಗಿ ಇರಲಿದೆ.

ಕೇಂದ್ರ ಸರ್ಕಾರದ ವಿತ್ತೀಯ ಕೊರತೆ ಪ್ರಮಾಣವನ್ನು ಜಿಡಿಪಿಯ ಶೇ 4.3ಕ್ಕೆ ತಗ್ಗಿಸುವ ಗುರಿಯನ್ನು ನಿಗದಿ ಮಾಡಲಾಗಿದೆ. ಅಂದರೆ, ಬೆಳವಣಿಗೆಗೆ ಉತ್ತೇಜನ ಹಾಗೂ ಹಣಕಾಸಿನ ಶಿಸ್ತು ಪರಸ್ಪರ ಸ್ಪರ್ಧೆಗೆ ಬಿದ್ದ ಅಂಶಗಳಲ್ಲ. ಇದು ಮಹತ್ವದ ಸಂಗತಿ. ಬಾಹ್ಯ ಬೇಡಿಕೆ ಕಡಿಮೆ ಇರುವ ಹಾಗೂ ಬಂಡವಾಳದ ಹರಿವು ಅಸ್ಥಿರವಾಗಿರುವ ಜಾಗತಿಕ ಸಂದರ್ಭದಲ್ಲಿ, ಖಾಸಗಿ ವಲಯದ ಹೂಡಿಕೆಯು ಸ್ಥಿರವಾಗಿಲ್ಲದಿದ್ದಾಗ ಸರ್ಕಾರದ ಕಡೆಯಿಂದ ಆಗುವ ಬಂಡವಾಳ ವೆಚ್ಚವು ನೆರವಿಗೆ ಬರಬೇಕು ಎಂಬ ಆರ್ಥಿಕ ಮಾದರಿಯನ್ನು ಬಜೆಟ್ ನೆಚ್ಚಿಕೊಂಡಿದೆ. ಇಲ್ಲಿರುವ ಪ್ರಶ್ನೆ ಸರ್ಕಾರ ಮಾಡುತ್ತಿರುವ ವೆಚ್ಚಗಳು ಸಾಕಾಗುವ ಮಟ್ಟದಲ್ಲಿಯೇ ಎಂಬುದಲ್ಲ; ಬದಲಿಗೆ, ಉತ್ಪಾದಕತೆಯಲ್ಲಿ ಆಗಿರುವ ಬೆಳವಣಿಗೆಯನ್ನು ಸರ್ಕಾರದ ವೆಚ್ಚಗಳು ಉಳಿಸಿಕೊಳ್ಳಬಲ್ಲವೇ ಎಂಬುದು.

ಸಾರಿಗೆ ಮತ್ತು ಸಂಪರ್ಕ ವಲಯಕ್ಕೆ ಹೆಚ್ಚಿನ ವೆಚ್ಚ ನಿಗದಿ ಮಾಡಲಾಗಿದೆ. ಹೆಚ್ಚುವರಿ ಬಂಡವಾಳ ವೆಚ್ಚದಲ್ಲಿ ರಸ್ತೆ, ಹೆದ್ದಾರಿಗಳು, ರೈಲ್ವೆ, ದೂರಸಂಪರ್ಕ ವಲಯಕ್ಕೆ ಜಾಸ್ತಿ ಆದ್ಯತೆ ದೊರೆತಿದೆ. ರೈಲ್ವೆ ವಲಯಕ್ಕೆ ಹೆಚ್ಚಿನ ಬಂಡವಾಳ ನಿಗದಿ ಮಾಡಿ, ಅದು ದೇಶದ ಪಾಲಿಗೆ ದೀರ್ಘಾವಧಿ ಆಸ್ತಿ ಎಂಬುದನ್ನು ಮತ್ತೆ ಸ್ಪಷ್ಟಪಡಿಸಲಾಗಿದೆ. ದೂರಸಂಪರ್ಕ ವಲಯದಲ್ಲಿ ಹೆಚ್ಚಿನ ಹೂಡಿಕೆಯ ಘೋಷಣೆ ಮೂಲಕ, ಡಿಜಿಟಲ್ ಸಂಪರ್ಕ ಸೌಲಭ್ಯವು ಇಡೀ ಅರ್ಥವ್ಯವಸ್ಥೆಯ ಪಾಲಿನ ಸಂಪನ್ಮೂಲ ಎಂಬುದನ್ನು ಹೇಳಲಾಗಿದೆ.

ರಾಜ್ಯ ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ₹26.21 ಲಕ್ಷ ಕೋಟಿ ವರ್ಗಾವಣೆ ಮಾಡಲಾಗುತ್ತದೆ. ವರ್ಗಾವಣೆ ಮೊತ್ತವು ಹೆಚ್ಚಳವಾಗಿದೆ. ರಾಜ್ಯಗಳ ಬಂಡವಾಳ ವೆಚ್ಚಗಳಿಗೆ ನೀಡುವ ವಿಶೇಷ ನೆರವಿನ ಮೊತ್ತವು ₹2 ಲಕ್ಷ ಕೋಟಿಗೆ ಏರಿದೆ. ಕಾರ್ಯಕ್ರಮ ಅನುಷ್ಠಾನ ಸಾಮರ್ಥ್ಯವು ಈಗ ಹೆಚ್ಚು ಮುಖ್ಯ ಎಂಬ ಸಂದೇಶವನ್ನು ಇದು ನೀಡುತ್ತಿದೆ. ಬಂಡವಾಳ ವೆಚ್ಚವನ್ನು ರಾಜ್ಯಗಳ ಮೂಲಕ ಮಾಡಿಸುವುದರಿಂದ ಅನುಷ್ಠಾನದಲ್ಲಿನ ಸವಾಲುಗಳನ್ನು ನಿವಾರಿಸಲು ಹೆಚ್ಚು ಸಂಪನ್ಮೂಲ ಲಭ್ಯವಾದಂತೆ, ಕೊನೆಯ ಹಂತದ ಅನುಷ್ಠಾನಕ್ಕೆ ಸುಧಾರಣೆ ತಂದಂತೆ ಆಗುತ್ತದೆ.

ಅರ್ಥ ವ್ಯವಸ್ಥೆಯ ದೃಷ್ಟಿಯಿಂದ ಈ ನಡೆಯು ಹಲವು ಉದ್ದೇಶಗಳನ್ನು ಈಡೇರಿಸುತ್ತದೆ. ಮೂಲ ಸೌಕರ್ಯದ ಮೇಲಿನ ಸರ್ಕಾರದ ಹೂಡಿಕೆಯು ಖಾಸಗಿ ಹೂಡಿಕೆ ಬರುವುದಕ್ಕೆ ಉತ್ತೇಜನದಂತೆ ಆಗುತ್ತದೆ, ಪೂರೈಕೆ ವ್ಯವಸ್ಥೆಯಲ್ಲಿನ ಅಡ್ಡಿಗಳನ್ನು ನಿವಾರಿಸುತ್ತದೆ, ಹಣದುಬ್ಬರವನ್ನು ಹೆಚ್ಚು ಮಾಡದೆಯೇ ಬೆಳವಣಿಗೆಗೆ ನೆರವಾಗುತ್ತದೆ.

ತಯಾರಿಕೆಗೆ ನೆರವು ಮಿತಿಯಲ್ಲಿದೆ. ಕೈಗಾರಿಕೆಗಳನ್ನು ನಿರ್ವಹಿಸುವ ಇಲಾಖೆಗಳಿಗೆ ಹಂಚಿಕೆ ಜಾಸ್ತಿ ಆಗಿದ್ದರೂ, ತಯಾರಿಕಾ ವಲಯದ ಆಸ್ತಿಗಳ ಮೇಲಿನ ಹೂಡಿಕೆಯಲ್ಲಿ ಏರಿಕೆ ಆಗಿಲ್ಲ. ಅದರ ಬದಲಿಗೆ, ರಫ್ತು ಉತ್ತೇಜನಕ್ಕೆ ಆದ್ಯತೆ ನೀಡಲಾಗಿದೆ. ಇದು ಆರ್ಥಿಕ ಸಮೀಕ್ಷೆಯಲ್ಲಿ ಹೇಳಿರುವ 'ತಯಾರಿಕಾ ವಲಯದ ಸ್ಪರ್ಧಾತ್ಮಕತೆಯು ಉತ್ಪಾದನಾ ಪ್ರಮಾಣವನ್ನು ಹೆಚ್ಚಿಸುವುದರ ಮೇಲೆ, ಅದನ್ನು ಜಾಗತಿಕ ಜಾಲದ ಜೊತೆ ಬೆಸೆಯುವುದರ ಮೇಲೆ ಹೆಚ್ಚು ಅವಲಂಬಿತವಾಗಿದೆ' ಎಂಬ ಮಾತಿಗೆ ಪೂರಕವಾಗುವಂತಿದೆ.

ಬಜೆಟ್‌ನಲ್ಲಿನ ಸಂದೇಶ ಏನು?: ಒಟ್ಟಾಗಿ ನೋಡಿದರೆ ಈ ಬಜೆಟ್ ಹಳೆಯದರ ಮುಂದುವರಿಕೆಯನ್ನು ಹಾಗೂ ಒಂದಿಷ್ಟು ಎಚ್ಚರಿಕೆಯನ್ನು ಸೂಚಿಸುತ್ತಿದೆ. ಬಂಡವಾಳ ವೆಚ್ಚವು ಬಜೆಟ್‌ನ ಪ್ರಮುಖ ಅಂಶವಾಗಿ ಮುಂದುವರಿದಿದೆ. ಹಣಕಾಸಿನ ಶಿಸ್ತು ಇದಕ್ಕೆ ನೆರವಿನ ರೂಪದಲ್ಲಿ ನಿಂತಿದೆ. ತಯಾರಿಕಾ ವಲಯಕ್ಕೆ ಉತ್ತೇಜನ ನೀಡುವ ಕ್ರಮಗಳು ಇವೆ. ಆದರೆ ಅವುಗಳನ್ನು ಬಾಹ್ಯ ಬದಲಾವಣೆಗಳಿಗೆ, ಬಾಹ್ಯ ಅಂಶಗಳಿಗೆ ಅನುಗುಣವಾಗಿ, ಅವುಗಳಿಗೆ ಹೊಂದಿಕೆಯಾಗುವಂತೆ ಜಾರಿಗೆ ತರಲಾಗುತ್ತದೆ. ಎಂಎಸ್‌ಎಂಇ ಸಂಬಂಧಿತ ನೀತಿಯು ನಿಯಂತ್ರಣ ಮುಕ್ತವಾಗಿಸುವುದಕ್ಕಿಂತ ಹೆಚ್ಚಿನ ಮಟ್ಟದ ಆದ್ಯತೆಯನ್ನು ಸೌಲಭ್ಯಗಳನ್ನು ಕಲ್ಪಿಸುವುದಕ್ಕೆ ನೀಡುತ್ತಿದೆ. ಈ ಕಾರ್ಯತಂತ್ರವು ಬಹುಕಾಲ ಉಳಿಯುವಂತಹ ಬೆಳವಣಿಗೆಯನ್ನು ನೀಡುತ್ತದೆಯೇ ಎಂಬುದು ಅರ್ಥ ವ್ಯವಸ್ಥೆ ಅಂಕಿ–ಅಂಶಗಳಿಗಿಂತಲೂ ಹೆಚ್ಚಾಗಿ ಅನುಷ್ಠಾನ, ಕಾನೂನಿನಲ್ಲಿ ತರುವ ಸುಧಾರಣೆ ಮತ್ತು ಆಡಳಿತದಲ್ಲಿನ ಗುಣಮಟ್ಟವನ್ನು ಅವಲಂಬಿಸಿದೆ.

-ಲೇಖಕ ಸಾರ್ವಜನಿಕ ಹಣಕಾಸು ಮತ್ತು ಆಡಳಿತ ಕ್ಷೇತ್ರದಲ್ಲಿ ಕೆಲಸ ಮಾಡುತ್ತಾರೆ, ಸಿಇಜಿಐಎಸ್ ಪ್ರತಿಷ್ಠಾನದ ಹಿರಿಯ ಯೋಜನಾ ಸಹಾಯಕ. ಅಭಿಪ್ರಾಯ ಲೇಖಕರದು

ಪರಮಾಣು ಇಂಧನಕ್ಕೆ ಒತ್ತು



ಕಲ್ಲಿದ್ದಲು ಆಧಾರಿತ ವಿದ್ಯುತ್ ಉತ್ಪಾದನೆಯನ್ನು ಬದಲಾಯಿಸುವ ಅಗತ್ಯತೆ ಹಿನ್ನೆಲೆಯಲ್ಲಿ ಪರಮಾಣು ಶಕ್ತಿ ಇಂಧನ ಕ್ಷೇತ್ರಕ್ಕೆ ಹೆಚ್ಚಿನ ಪ್ರೋತ್ಸಾಹ ನೀಡಲಾಗಿದೆ.

'ದೇಶದ ಎಲ್ಲಾ ಪರಮಾಣುಗಳ ಈಗಿರುವ ಸಾಮರ್ಥ್ಯ ವಿಸ್ತರಿಸುವ ನಿಟ್ಟಿನಲ್ಲಿ ಇಂಧನ ಯೋಜನೆಗಳಿಗೆ ಅಗತ್ಯವಾದ ಸರಕುಗಳ ಮೇಲಿನ ಮೂಲ ಕಸ್ಟಮ್ ಸುಂಕವನ್ನು 2035ರವರೆಗೆ ವಿಸ್ತರಿಸಲಾಗುತ್ತದೆ' ಎಂದು ನಿರ್ಮಲಾ ಪ್ರಕಟಿಸಿದರು.

ನವೀಕರಿಸಬಹುದಾದ ಇಂಧನ ಕ್ಷೇತ್ರದಲ್ಲಿ ಭಾರತವು 500 ಗಿಗಾವಾಟ್ ಉತ್ಪಾದನೆಯ ಗುರಿ ಹೊಂದಿದ್ದು, ಈ ಪ್ರೋತ್ಸಾಹವು ಮಹತ್ವ ಪಡೆದುಕೊಂಡಿದೆ.

ಜೈವಿಕ ಅನಿಲ ಮಿಶ್ರಿತ ಸಿಎನ್‌ಜಿ (ಸಾಂದ್ರಿಕೃತ ನೈಸರ್ಗಿಕ ಅನಿಲ) ಮೇಲೆ ಪಾವತಿಸಬೇಕಾದ ಕೇಂದ್ರ ಅಬಕಾರಿ ಸುಂಕ ಲೆಕ್ಕಾಚಾರ ಮಾಡುವ ವೇಳೆ ಜೈವಿಕ ಇಂಧನ ಸಂಪೂರ್ಣ ಮೌಲ್ಯವನ್ನು ಸುಂಕದಿಂದಲೇ ಹೊರಗಿಡಲಾಗಿದೆ.

ಕೇಂದ್ರ ಬಜೆಟ್ - 2026-27

ರೈಲ್ವೆ ಸಂಪರ್ಕ ವೃದ್ಧಿಗೆ ಆದ್ಯತೆ, ಭರಪೂರ ಹಂಚಿಕೆ





ಸುಸ್ಥಿರ ಪರಿಸರ ಸಂಚಾರ ವ್ಯವಸ್ಥೆ: ಹಸಿರುಮನೆ ಅನಿಲ ಹೊರಸೂಸುವಿಕೆಯಿಂದ ಆರೋಗ್ಯದ ಮೇಲಾಗುವ ಪರಿಣಾಮವನ್ನು ತಗ್ಗಿಸುವುದರ ಸಲುವಾಗಿ ಪರಿಸರ ಸ್ನೇಹಿ ಸಂಚಾರ ವ್ಯವಸ್ಥೆ ರೂಪಿಸಲಾಗುವುದು ಎಂದು ಕೇಂದ್ರ ಸರ್ಕಾರ ಹೇಳಿದೆ. ಜೊತೆಗೆ, ಜನರಿಗೆ ಕಡಿಮೆ ಮೊತ್ತದಲ್ಲಿ ಪ್ರಯಾಣ ದರ ನಿಗದಿ ಮಾಡುವುದೂ ಸೇರಿದೆ ಎಂದಿದೆ

ರೈಲ್ವೆ: ಸಾರ್ವಕಾಲಿಕ ಗರಿಷ್ಠ ಹಂಚಿಕೆ

ಒಟ್ಟು ಅನುದಾನ

2025-26 ಆರ್ಥಿಕ ವರ್ಷ	₹2.52 ಲಕ್ಷ ಕೋಟಿ
2026-27	₹2.77 ಲಕ್ಷ ಕೋಟಿ

10.25% ಏರಿಕೆ

ಹಳಿ ನವೀಕರಣಕ್ಕೆ ಕಡಿಮೆ ಅನುದಾನ

ಆರ್ಥಿಕ ವರ್ಷ	
2025-26	₹25,166 ಕೋಟಿ
2026-27	₹22,853 ಕೋಟಿ

ರೈಲ್ವೆ ಸುರಕ್ಷತೆಯಲ್ಲಿ ಹಳಿ ನವೀಕರಣವು ಬಹುಮುಖ್ಯ ಭಾಗವಾಗಿದೆ. ಆದರೆ, ಇದಕ್ಕೆ ಕಳೆದ ಬಾರಿ ಬಜೆಟ್‌ನಲ್ಲಿ ಮೀಸಲಿಟ್ಟಿದ್ದ ಹಣಕ್ಕಿಂತ ಕಡಿಮೆ ಹಂಚಿಕೆ ಮಾಡಲಾಗಿದೆ. 2025–26ನೇ ಆರ್ಥಿಕ ವರ್ಷದಲ್ಲಿ ಅಂದಾಜಿಸಿದಂತೆ 7,500 ಕಿ.ಮೀಗೂ ಹೆಚ್ಚು ಉದ್ದಕ್ಕೆ ಹಳಿ ನವೀಕರಣ ಕಾಮಗಾರಿ ನಡೆಯುತ್ತಿದೆ ಎಂದು ರೈಲ್ವೆ ಸಚಿವಾಲಯ ಹೇಳಿತ್ತು. ಅದರಂತೆ ಇದಕ್ಕಾಗಿ ₹25,166 ಕೋಟಿ ಅನುದಾನ ಮೀಸಲಿಟ್ಟಿತ್ತು. ಆದರೆ, 2026–27ರಲ್ಲಿ 7,900 ಕಿ.ಮೀ ಉದ್ದದ ಹಳಿ ನವೀಕರಣ ಮಾಡಲಾಗುವುದು ಎಂದು ಸರ್ಕಾರ ಹೇಳಿದೆ. ಕಳೆದ ಬಾರಿಗಿಂತ ಹಳಿ ನವೀಕರಣ ಮಾಡುವ ಗುರಿಯನ್ನು ಹೆಚ್ಚಿಸಲಾಗಿದೆ. ಆದರೆ, ಅನುದಾನ ಕಡಿತ ಮಾಡಲಾಗಿದೆ.

ಆಧಾರ: ಪಿಐಬಿ, ಬಜೆಟ್ ದಾಖಲೆ

ದೇಶದ ಪುರಾತತ್ವ ಸ್ಥಳಗಳ ದಾಖಲೆ ಡಿಜಿಟಲೀಕರಣ



ದೇಶದಾದ್ಯಂತ ಇರುವ ಸಾಂಸ್ಕೃತಿಕ ಮತ್ತು ಧಾರ್ಮಿಕ ಸ್ಥಳಗಳು ಸೇರಿದಂತೆ ಪ್ರಮುಖ ಪುರಾತತ್ವ ತಾಣಗಳ ದಾಖಲೆಗಳನ್ನು ಡಿಜಿಟಲೀಕರಣಗೊಳಿಸಲು ರಾಷ್ಟ್ರೀಯ ಮಟ್ಟದ ಡಿಜಿಟಲ್ ವೇದಿಕೆಯನ್ನು ಸ್ಥಾಪಿಸುವುದಾಗಿ ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ.

ಲೋಥಲ್ ಮತ್ತು ಲೇಹ್ ಅರಮನೆ ಸೇರಿದಂತೆ ದೇಶದ 15 ಪುರಾತತ್ವ ಸ್ಥಳಗಳನ್ನು 'ವೈಭವಯುತ ಸಾಂಸ್ಕೃತಿಕ ತಾಣ'ಗಳನ್ನಾಗಿ ಅಭಿವೃದ್ಧಿಪಡಿಲಾಗುವುದು ಎಂದು ತಿಳಿಸಿದೆ.

ಇದರಿಂದಾಗಿ ಸ್ಥಳೀಯ ಸಂಶೋಧಕರಿಗೆ, ಇತಿಹಾಸಕಾರರಿಗೆ, ತಂತ್ರಜ್ಞಾನ ಕೌಶಲವಿರುವವರಿಗೆ ಉದ್ಯೋಗ ಸೃಷ್ಟಿಯಾಗಲಿದೆ ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಒಳನಾಡಿನ ಜಲಮಾರ್ಗಕ್ಕೆ ಒತ್ತು

ರಸ್ತೆ ಮತ್ತು ರೈಲು ಮಾರ್ಗದಲ್ಲಿ ಸರಕು ಸಾಗಣೆಯ ಒತ್ತಡವನ್ನು ಕಡಿಮೆಗೊಳಿಸಲು ಒಳನಾಡಿನ ಜಲಮಾರ್ಗಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. 2047ರ ವೇಳೆಗೆ ಒಳನಾಡಿನ ಜಲಮಾರ್ಗ ಮತ್ತು ಕರಾವಳಿಯಲ್ಲಿ ಸಾಗಣೆಯ ಪಾಲನ್ನು ಶೇ 6ರಿಂದ ಶೇ 12ಕ್ಕೆ ಹೆಚ್ಚಿಸುವ ಗುರಿಯನ್ನು ಹೊಂದಲಾಗಿದೆ. ಒಡಿಶಾದಲ್ಲಿ ಮುಂದಿನ ಐದು ವರ್ಷಗಳಲ್ಲಿ 20 ಹೊಸ ರಾಷ್ಟ್ರೀಯ ಜಲಮಾರ್ಗಗಳನ್ನು ಕಾರ್ಯಗತಗೊಳಿಸಲಾಗುವುದು ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

ಅಗತ್ಯ ಮಾನವಶಕ್ತಿಯ ಅಭಿವೃದ್ಧಿಗೆ ಪ್ರಾದೇಶಿಕ ಶ್ರೇಷ್ಠತಾ ಕೇಂದ್ರಗಳಾಗಿ ತರಬೇತಿ ಸಂಸ್ಥೆಗಳನ್ನು ಸ್ಥಾಪಿಸಲಾಗುವುದು. ಇದು ಜಲಮಾರ್ಗಗಳ ಕುರಿತು ಯುವ ಜನರಿಗೆ ತರಬೇತಿ ನೀಡುತ್ತದೆ. ಅಲ್ಲದೆ ಒಳನಾಡಿನ ಮಾರ್ಗಗಳಲ್ಲಿ ಸಂಚರಿಸುವ ಹಡಗುಗಳ ದುರಸ್ತಿಗಾಗಿ ವಾರಾಣಸಿ ಮತ್ತು ಪಟ್ನಾದಲ್ಲಿ ದುರಸ್ತಿ ಕೇಂದ್ರ ನಿರ್ಮಿಸಲಾಗುವುದು ಎಂದು ಪ್ರಸ್ತಾಪಿಸಲಾಗಿದೆ.



ರೈಲ್ವೆ: ಏಳು ಹೈಸ್ಪೀಡ್ ಕಾರಿಡಾರ್

ಬೆಂಗಳೂರು– ಹೈದರಾಬಾದ್, ಬೆಂಗಳೂರು– ಚೆನ್ನೈಗೆ ಒಲಿದ ಅತಿ ವೇಗದ ರೈಲು ಮಾರ್ಗ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ಬೆಂಗಳೂರು-ಹೈದರಾಬಾದ್, ಬೆಂಗಳೂರು-ಚೆನ್ನೈ ಸೇರಿದಂತೆ ದೇಶದ ವಿವಿಧ ನಗರಗಳ ನಡುವಿನ ಸಂಪರ್ಕ ಸೌಲಭ್ಯವನ್ನು ಇನ್ನಷ್ಟು ವೃದ್ಧಿಸಲು ಏಳು ಹೊಸ ಹೈಸ್ಪೀಡ್ ರೈಲ್ವೆ ಕಾರಿಡಾರ್‌ಗಳ ಯೋಜನೆಯನ್ನು ಕೇಂದ್ರ ಸರ್ಕಾರ ಅಭಿವೃದ್ಧಿಪಡಿಸಲಿದೆ.

ಈ ಕುರಿತು ಅದು 2026–27ರ ಬಜೆಟ್‌ನಲ್ಲಿ ಪ್ರಕಟಿಸಿದೆ. ಮುಂಬೈ-ಪುಣೆ, ಪುಣೆ-ಹೈದರಾಬಾದ್, ಹೈದರಾಬಾದ್-ಚೆನ್ನೈ, ದೆಹಲಿ-ವಾರಾಣಸಿ, ವಾರಾಣಸಿ-ಸಿಲಿಗುರಿ ನಡುವೆಯೂ ಹೈಸ್ಪೀಡ್ ರೈಲ್ವೆ ಕಾರಿಡಾರ್ ನಿರ್ಮಿಸುವ ಕುರಿತು ಉಲ್ಲೇಖಿಸಲಾಗಿದೆ. ನಗರಗಳ ನಡುವಿನ ಪ್ರಯಾಣದ ಅವಧಿಯನ್ನು ಕಡಿಮೆಗೊಳಿಸುವುದು ಇದರ ಉದ್ದೇಶ.

'ಪರಿಸರ-ಸುಸ್ಥಿರ ಪ್ರಯಾಣದ ವ್ಯವಸ್ಥೆಯನ್ನು ಉತ್ತೇಜಿಸಲು ಈ ಏಳು ಹೈಸ್ಪೀಡ್ ರೈಲು ಕಾರಿಡಾರ್‌ಗಳನ್ನು ಅಭಿವೃದ್ಧಿಪಡಿಸಲಾಗುವುದು. ಇವು ವಿವಿಧ ನಗರಗಳ ನಡುವೆ ಸಂಪರ್ಕವನ್ನು ಇನ್ನಷ್ಟು ವೃದ್ಧಿಸಲು ಸಹಕಾರಿ ಆಗಲಿವೆ' ಎಂದು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಬಜೆಟ್ ಭಾಷಣದಲ್ಲಿ ಹೇಳಿದರು.

ಪ್ರಸ್ತುತ, ಅಹಮದಾಬಾದ್ ಮತ್ತು ಮುಂಬೈ ನಡುವೆ ಒಂದು ಹೈಸ್ಪೀಡ್ ಕಾರಿಡಾರ್‌ನ ಕಾಮಗಾರಿ ಪ್ರಗತಿಯಲ್ಲಿದೆ.

ಸರಕು ಸಾಗಣೆಗೆ ಪ್ರತ್ಯೇಕ ಕಾರಿಡಾರ್: ಪಶ್ಚಿಮ ಬಂಗಾಳದ ಡಂಕುನಿ ಮತ್ತು ಗುಜರಾತ್‌ನ ಸೂರತ್ ನಡುವೆ ಸರಕು ಸಾಗಣೆಗೆ ಮೀಸಲಾದ ಕಾರಿಡಾರ್ ಅಭಿವೃದ್ಧಿಪಡಿಸಲಾಗುವುದು ಎಂದೂ ಪ್ರಸ್ತಾಪಿಸಲಾಗಿದೆ.

ಪ್ರಸ್ತುತ ಸರಕು ಸಾಗಣೆಗೆಂದೇ ಮೀಸಲಾದ ಎರಡು ಕಾರಿಡಾರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಅವು ದೇಶದ ಪೂರ್ವ ಮತ್ತು ಪಶ್ಚಿಮದ ವಿವಿಧ ರಾಜ್ಯಗಳು ಮತ್ತು ಜಿಲ್ಲೆಗಳನ್ನು ಸಂಪರ್ಕಿಸುತ್ತಿವೆ.

ಹೆದ್ದಾರಿ ಸಚಿವಾಲಯಕ್ಕೆ ₹3.09 ಲಕ್ಷ ಕೋಟಿ: ರಸ್ತೆ ಮತ್ತು ಹೆದ್ದಾರಿ ಸಚಿವಾಲಯಕ್ಕೆ ಈ ಬಾರಿ ₹3.09 ಲಕ್ಷ ಕೋಟಿ ಹಂಚಿಕೆ ಮಾಡಲಾಗಿದ್ದು, ಇದು ಕಳೆದ ವರ್ಷಕ್ಕಿಂತ ಶೇ 8ರಷ್ಟು ಹೆಚ್ಚಳವಾಗಿದೆ. ಅದರಲ್ಲಿ ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರಕ್ಕೆ ₹1.87 ಲಕ್ಷ ಕೋಟಿ ಹಂಚಲಾಗಿದೆ.

ವಿಮಾನ ತಯಾರಿಕೆಗೆ ಕಸ್ಟಮ್ಸ್ ಸುಂಕ ವಿನಾಯಿತಿ: ನಾಗರಿಕ, ತರಬೇತಿ ಮತ್ತು ಇತರ ವಿಮಾನಗಳ ತಯಾರಿಕೆಗೆ ಅಗತ್ಯವಿರುವ ಘಟಕಗಳು ಮತ್ತು ಬಿಡಿ ಭಾಗಗಳ ಮೇಲಿನ ಮೂಲ ಕಸ್ಟಮ್ಸ್ ಸುಂಕಕ್ಕೆ ಬಜೆಟ್‌ನಲ್ಲಿ ವಿನಾಯಿತಿ ಘೋಷಿಸಲಾಗಿದೆ. ಅಲ್ಲದೆ ರಕ್ಷಣಾ ವಲಯದ ಘಟಕಗಳಿಂದ ನಿರ್ವಹಣೆ, ದುರಸ್ತಿಗೆ ಬಳಸಲಾಗುವ ವಿಮಾನದ ಭಾಗಗಳ ತಯಾರಿಕೆಗಾಗಿ ಆಮದು ಮಾಡಿಕೊಳ್ಳುವ ಕಚ್ಚಾ ವಸ್ತುಗಳ ಮೇಲಿನ ಕಸ್ಟಮ್ಸ್ ಸುಂಕಕ್ಕೂ ವಿನಾಯಿತಿ ನೀಡಲಾಗಿದೆ.

ಬೆಂಗಳೂರು ಸಬ್ ಅರ್ಬನ್‌ಗೆ ₹500 ಕೋಟಿ

ಬೆಂಗಳೂರು ಸಬ್ ಅರ್ಬನ್ ಯೋಜನೆಗೆ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ₹500 ಕೋಟಿ ಒದಗಿಸಲಾಗಿದೆ. ಕಳೆದ ವರ್ಷ ₹350 ಕೋಟಿ ಹಂಚಿಕೆ ಮಾಡಲಾಗಿತ್ತು.

ಒಟ್ಟಾರೆ ರೈಲ್ವೆ ಸಚಿವಾಲಯಕ್ಕೆ ಈ ಬಾರಿ ₹2,77,830 ಕೋಟಿ ಹಂಚಿಕೆ ಮಾಡಲಾಗಿದೆ. ಇದು ಕಳೆದ ಬಜೆಟ್‌ಗಿಂತ ₹25,830 ಕೋಟಿ ಹೆಚ್ಚು. ಇದಲ್ಲದೆ ಹೆಚ್ಚುವರಿ ಬಜೆಟ್ ಸಂಪನ್ಮೂಲಗಳಿಂದ ₹15,000 ಕೋಟಿ ಒದಗಿಸಲಾಗುವುದು ಎಂದು ಉಲ್ಲೇಖಿಸಲಾಗಿದೆ.

ಪ್ರಸಕ್ತ ವರ್ಷ ಹೊಸ ರೈಲ್ವೆ ಮಾರ್ಗಗಳಿಗೆ ₹36,722 ಕೋಟಿ, ದ್ವಿಪಥ ಹಳಿ ನಿರ್ಮಾಣಕ್ಕೆ ₹37,750 ಕೋಟಿ, ರೈಲ್ವೆ ಬೋಗಿ ಸೇರಿದಂತೆ ರೋಲಿಂಗ್ ಸ್ಟಾಕ್‌ಗೆ ₹52,109 ಕೋಟಿ, ಹಳಿ ನವೀಕರಣಕ್ಕೆ ₹22,853 ಕೋಟಿ, ರೈಲ್ವೆ ಮೇಲ್ಸೇತುವೆ, ಕೆಳಸೇತುವೆಗೆ ₹8,225 ಕೋಟಿ, ಸಿಗ್ನಲಿಂಗ್ ಮತ್ತು ಟೆಲಿಕಾಂಗೆ ₹7,500 ಕೋಟಿ, ವಿದ್ಯುದೀಕರಣ ಯೋಜನೆಗೆ ₹5,000 ಕೋಟಿ, ಗೇಜ್ ಪರಿವರ್ತನೆಗೆ ₹4,600 ಕೋಟಿ ಹಂಚಿಕೆ ಮಾಡಲಾಗಿದೆ.

4,000 ಕಿ.ಮೀ ವ್ಯಾಪ್ತಿ, ₹16,000 ಕೋಟಿ ಹೂಡಿಕೆ

ಬಜೆಟ್‌ನಲ್ಲಿ ಘೋಷಿಸಲಾಗಿರುವ ಏಳು ಹೈಸ್ಪೀಡ್ ರೈಲ್ವೆ ಕಾರಿಡಾರ್‌ಗಳು ದೇಶದ ವಿವಿಧ ಭಾಗಗಳನ್ನು ಸಂಪರ್ಕಿಸಲಿದ್ದು, ಒಟ್ಟು 4,000 ಕಿ.ಮೀನಷ್ಟು ವ್ಯಾಪ್ತಿ ಹೊಂದಿರಲಿವೆ. ಇವು ಸುಮಾರು ₹16,000 ಕೋಟಿಯಷ್ಟು ಹೂಡಿಕೆಯನ್ನು ಆಕರ್ಷಿಸುತ್ತವೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಹೇಳಿದರು.

ಸುದ್ದಿಗಾರರ ಜತೆ ಮಾತನಾಡಿದ ಅವರು, ಬೆಂಗಳೂರು– ಚೆನ್ನೈ–ಹೈದರಾಬಾದ್ ಕಾರಿಡಾರ್‌ಗಳು ದಕ್ಷಿಣ ರಾಜ್ಯಗಳಲ್ಲಿ ಹೈಸ್ಪೀಡ್ 'ಟ್ರೈಯಾಂಗಲ್' ಅನ್ನು ರೂಪಿಸಲಿವೆ. ಇದರಿಂದ ಕರ್ನಾಟಕ, ಕೇರಳ, ಆಂಧ್ರಪ್ರದೇಶ, ತಮಿಳುನಾಡು, ತೆಲಂಗಾಣ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶವಾದ ಪುದುಚೇರಿಗೆ ಪ್ರಯೋಜನವಾಗಲಿದೆ ಎಂದರು.

ಚೆನ್ನೈ–ಬೆಂಗಳೂರು, ಬೆಂಗಳೂರು– ಹೈದರಾಬಾದ್ ಮತ್ತು ಚೆನ್ನೈ– ಹೈದರಾಬಾದ್ ನಡುವಿನ ಪ್ರಯಾಣದ ಅವಧಿಯು ಕ್ರಮವಾಗಿ 1.13 ಗಂಟೆ, 2 ಗಂಟೆ ಹಾಗೂ 2.55 ಗಂಟೆಗೆ ತಗ್ಗಲಿದೆ ಎಂದು ಅವರು ವಿವರಿಸಿದರು.

ಹಾಗೆಯೇ ಮುಂಬೈ– ಪುಣೆ ನಡುವಿನ ಪ್ರಯಾಣ 48 ನಿಮಿಷಕ್ಕೆ, ಪುಣೆ– ಹೈದರಾಬಾದ್ ನಡುವಿನ ಪ್ರಯಾಣ 1.55 ಗಂಟೆಗೆ, ವಾರಾಣಸಿ– ಸಿಲಿಗುರಿ ನಡುವಿನ ಪ್ರಯಾಣ 2.55 ಗಂಟೆಗೆ, ದೆಹಲಿ– ವಾರಾಣಸಿ ನಡುವಿನ ಪ್ರಯಾಣದ ಅವಧಿ 3.50 ಗಂಟೆಗೆ ಇಳಿಯಲಿದೆ ಎಂದರು.

ಉಡಾನ್: ಶೇ 27ರಷ್ಟು ಅನುದಾನ ಹೆಚ್ಚಳ

ನವದೆಹಲಿ (ಪಿಟಿಐ): 2026–27ನೇ ಸಾಲಿನ ಆರ್ಥಿಕ ವರ್ಷದಲ್ಲಿ ಸರ್ಕಾರದ ಮಹತ್ವಾಕಾಂಕ್ಷೆಯ ಪ್ರಾದೇಶಿಕ ವಾಯು ಸಂಪರ್ಕ ಯೋಜನೆಗೆ (ಉಡಾನ್) ಸುಮಾರು ಶೇ27ರಷ್ಟು ಹೆಚ್ಚುವರಿ ಅನುದಾನ ದೊರೆಯಲಿದೆ.

2025–26ನೇ ಸಾಲಿನ ಪರಿಷ್ಕೃತ ಬಜೆಟ್ ಅಂದಾಜಿನ ಪ್ರಕಾರ ಮಾರ್ಚ್ 31ಕ್ಕೆ ಕೊನೆಗೊಳ್ಳಲಿರುವ ಪ್ರಸಕ್ತ ಆರ್ಥಿಕ ವರ್ಷದಲ್ಲಿ ನಾಗರಿಕ ವಿಮಾನಯಾನ ಸಚಿವಾಲಯದ ಒಟ್ಟು ಅನುದಾನ ಹಂಚಿಕೆಯನ್ನು ₹4,688.03 ಕೋಟಿಗೆ ನಿಗದಿಪಡಿಸಲಾಗಿದೆ. ಮುಂದಿನ ಆರ್ಥಿಕ ವರ್ಷದಲ್ಲಿ ಈ ಅನುದಾನ ಹಂಚಿಕೆ ₹4,669.92 ಕೋಟಿಗೆ ತಲುಪಲಿದೆ.

ಹೀಗಾಗಿ ಉಡಾನ್‌ಗೆ ಹೆಚ್ಚಿನ ಅನುದಾನ ದೊರೆಯುವ ನಿರೀಕ್ಷೆ ಇದೆ. ಪ್ರಸಕ್ತ ವರ್ಷದಲ್ಲಿ ಉಡಾನ್ ಯೋಜನೆಯ ಅನುದಾನ 434.50 ಕೋಟಿ ಆಗಿದ್ದು, ಮುಂದಿನ ಆರ್ಥಿಕ ವರ್ಷದಲ್ಲಿ ಇದು ₹550 ಕೋಟಿಗೆ ಏರಿಕೆಯಾಗಲಿದೆ ಎಂದು ಬಜೆಟ್ ದಾಖಲೆಗಳಿಂದ ತಿಳಿದುಬಂದಿದೆ. ಹೀಗಾದರೆ ಉಡಾನ್ ಅನುದಾನ ಹಂಚಿಕೆಯಲ್ಲಿ ಶೇ 27ರಷ್ಟು ಹೆಚ್ಚಳವಾದಂತಾಗುತ್ತದೆ.

ಪ್ರಾದೇಶಿಕ ವಿಮಾನಯಾನ ಕ್ಷೇತ್ರದಲ್ಲಿ ಸುಧಾರಣೆ ತಂದು ವಾಯುಯಾನ ಸೇವೆಯನ್ನು ಉತ್ತೇಜಿಸುವ ಉದ್ದೇಶವನ್ನು ಉಡಾನ್ ಹೊಂದಿದೆ.

ನಗರಾಭಿವೃದ್ಧಿ

2ನೇ ಮತ್ತು 3ನೇ ಹಂತದ ನಗರಗಳಿಗೆ ₹5 ಸಾವಿರ ಕೋಟಿ

ಅನುದಾನ (₹ಕೋಟಿಗಳಲ್ಲಿ)

2025-26	2025-26	2026-27
96,777	57,204	85,522

ಎರಡನೇ ಮತ್ತು ಮೂರನೇ ಹಂತದ ಮತ್ತು ಧಾರ್ಮಿಕ ಕೇಂದ್ರಗಳಿರುವ ನಗರ ಮತ್ತು ಪಟ್ಟಣ ಪ್ರದೇಶಗಳ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಅಂಥ ನಗರಗಳ ಮೂಲಸೌಕರ್ಯ ಮತ್ತು ಆಧುನೀಕರಣದತ್ತ ಗಮನ ಹರಿಸಲಾಗುತ್ತದೆ. ನಗರದ ಅಭಿವೃದ್ಧಿಯ ವೇಗವರ್ಧಕಗಳಾಗಿರುವ ಆರ್ಥಿಕ ಪ್ರದೇಶಗಳಲ್ಲಿ (ಸಿಇಆರ್) ವಿವಿಧ ಅಭಿವೃದ್ಧಿ ಯೋಜನೆಗಳನ್ನು ಕೈಗೊಳ್ಳಲು 5 ವರ್ಷಗಳಲ್ಲಿ ಪ್ರತಿ ಸಿಇಆರ್‌ಗೆ ₹5 ಸಾವಿರ ಕೋಟಿ ಹಂಚಿಕೆ ಮಾಡಲಾಗಿದೆ.

ಮುನ್ಸಿಪಲ್ ಬಾಂಡ್‌ಗಳಿಗೆ ₹100 ಕೋಟಿ ಪ್ರೋತ್ಸಾಹಧನ

ದೊಡ್ಡ ನಗರಗಳಲ್ಲಿ ಅಧಿಕ ಮೌಲ್ಯದ ಮುನ್ಸಿಪಲ್ ಬಾಂಡ್‌ಗಳ ಒದಗಿಸುವುದನ್ನು ಉತ್ತೇಜಿಸಲು ಕೇಂದ್ರ ಸರ್ಕಾರ ನಿರ್ಧರಿಸಿದೆ. ₹1,000 ಕೋಟಿಗಿಂತ ಹೆಚ್ಚಿನ ಬಾಂಡ್‌ಗಳ ವಿತರಣೆಯ ಮೂಲಕ ಮೂಲ ಸೌಕರ್ಯ ಅಭಿವೃದ್ಧಿಗೆ ಸಾಲ ಪಡೆಯುವುದರ ಮೇಲೆ ₹100 ಕೋಟಿ ಪ್ರೋತ್ಸಾಹಧನ ಘೋಷಿಸಲಾಗಿದೆ.

ಸಣ್ಣ ಮತ್ತು ಮಧ್ಯಮ ಹಂತದ ನಗರಗಳಿಗೆ ನೆರವು ನೀಡಲು ₹200 ಕೋಟಿವರೆಗಿನ ಮೌಲ್ಯದ ಬಾಂಡ್‌ಗಳಿಗೆ ಅಮೃತ ಯೋಜನೆಯಡಿ ನೀಡಲಾಗುವ ಪ್ರೋತ್ಸಾಹಧನ ಮುಂದುವರಿಸಲಾಗುವುದು ಎಂದು ನಿರ್ಮಲಾ ಸೀತಾರಾಮನ್ ತಿಳಿಸಿದ್ದಾರೆ.

ಬಂಡವಾಳ ವೆಚ್ಚ: ₹12.22 ಲಕ್ಷ ಕೋಟಿ ನಿಗದಿ



ನವದೆಹಲಿ (ಪಿಟಿಐ): ದೇಶದ ಬಂಡವಾಳ ವೆಚ್ಚವು 2026–27ರ ಸಾಲಿನಲ್ಲಿ ದಾಖಲೆಯ ಗರಿಷ್ಠ ಮಟ್ಟ ತಲುಪಲಿದೆ. ದೇಶದ ಜಿಡಿಪಿಯ ಗಾತ್ರದ ಶೇ 4.4 ರಷ್ಟನ್ನು, ಅಂದರೆ ₹12.22 ಲಕ್ಷ ಕೋಟಿಯನ್ನು ಬಂಡವಾಳ ವೆಚ್ಚಗಳಿಗಾಗಿ ಮೀಸಲು ಇಡಲಾಗಿದೆ. ಈ ಮೂಲಕ ಮೂಲಸೌಕರ್ಯ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಲಾಗಿದೆ.

ಈ ಬಾರಿಯ ಬಜೆಟ್‌ನಲ್ಲಿ ಘೋಷಿಸಿರುವ ಬಂಡವಾಳ ವೆಚ್ಚವು 2025–26ರ ಹಣಕಾಸು ವರ್ಷದಲ್ಲಿ ಘೋಷಿಸಿರುವ ಮೊತ್ತಕ್ಕಿಂತ ಶೇ 10ರಷ್ಟು ಹೆಚ್ಚಾಗಿದೆ. ಕಳೆದ ಬಜೆಟ್‌ನಲ್ಲಿ ₹11.11 ಲಕ್ಷ ಕೋಟಿ ಬಂಡವಾಳ ವೆಚ್ಚವನ್ನು ಘೋಷಿಸಲಾಗಿತ್ತು.

'ಈ ಬಾರಿಯ ಬಂಡವಾಳ ವೆಚ್ಚವು ಜಿಡಿಪಿಯ ಶೇ 4.4 ರಷ್ಟಿದೆ. ಅಂದರೆ, ಇದು ಕಳೆದ 10 ವರ್ಷಗಳಲ್ಲೇ ಅತ್ಯಧಿಕ. 10 ವರ್ಷಗಳಿಗಿಂತ ಹಿಂದಿನ ಅವಧಿಯ ಅಂಕಿ–ಅಂಶವನ್ನು ನೀವು ತೆಗೆದುಕೊಂಡು ನೋಡಿದರೂ ಈ ಬಾರಿಯದ್ದು ಅತ್ಯಧಿಕವಾಗಿರಬಹುದು' ಎಂದು ನಿರ್ಮಲಾ ಸೀತಾರಾಮನ್ ಹೇಳಿದರು. 2021-22ರಲ್ಲಿ ಬಂಡವಾಳ ವೆಚ್ಚವು ಜಿಡಿಪಿಯ ಶೇ 2.5 ರಷ್ಟು ಮತ್ತು 2024-25ರಲ್ಲಿ ಜಿಡಿಪಿಯ ಶೇಕಡಾ 4ರಷ್ಟಿತ್ತು. 2015-16ರಲ್ಲಿ ಸರ್ಕಾರದ ಬಂಡವಾಳ ವೆಚ್ಚವು ₹2.35 ಲಕ್ಷ ಕೋಟಿಗಳಷ್ಟಿತ್ತು.

ಸಾರಿಗೆ ಮತ್ತು ಸಂಪರ್ಕ ವಲಯಕ್ಕೆ ಬಜೆಟ್‌ನಲ್ಲಿ ಹೆಚ್ಚಿನ ವೆಚ್ಚ ನಿಗದಿ ಮಾಡಲಾಗಿದೆ. ರಸ್ತೆ, ಹೆದ್ದಾರಿಗಳು ಮತ್ತು ದೂರಸಂಪರ್ಕ ವಲಯಗಳಿಗೆ ಆದ್ಯತೆ ಲಭಿಸಿದೆ. ರೈಲ್ವೆ ವಲಯಕ್ಕೂ ಹೆಚ್ಚಿನ ಬಂಡವಾಳ ನಿಗದಿ ಮಾಡಲಾಗಿದೆ.

ಬಂಡವಾಳ ವೆಚ್ಚಕ್ಕಾಗಿ ದಾಖಲೆಯ ಮೊತ್ತವನ್ನು ನಿಗದಿಪಡಿಸುವ ಮೂಲಕ, ಪ್ರಮುಖ ನಗರಗಳ ಆಚೆಗೂ ಅಭಿವೃದ್ಧಿಯನ್ನು ವಿಸ್ತರಿಸುವ ಪ್ರಧಾನ ಮಂತ್ರಿಯವರ ಇಚ್ಛೆಯಂತೆ 'ಭವಿಷ್ಯಕ್ಕೆ ಸಿದ್ಧವಾದ ಭಾರತ' ನಿರ್ಮಾಣಕ್ಕೆ ಈ ಬಜೆಟ್ ಒತ್ತು ನೀಡಿದೆ ಎಂದು ವಿಶ್ಲೇಷಿಸಲಾಗಿದೆ.






ಕೇಂದ್ರ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ವಿಕಸಿತ ಭಾರತ ನಿರ್ಮಾಣ ಹಾಗೂ ದೇಶದಲ್ಲಿನ ರೈಲ್ವೆ ಸಂಪರ್ಕ ಹೆಚ್ಚಳದ ದೃಷ್ಟಿಯಿಂದ ಏಳು ಹೈಸ್ಪೀಡ್ ರೈಲ್ವೆ ಕಾರಿಡಾರ್‌ಗಳನ್ನು ಘೋಷಣೆ ಮಾಡಿದ್ದಾರೆ. ಈ ಕಾರಿಡಾರ್‌ಗಳನ್ನು ದೇಶದ ಪಶ್ಚಿಮ, ದಕ್ಷಿಣ ಮತ್ತು ಪೂರ್ವ ಭಾರತದಾದ್ಯಂತ ಸಾರಿಗೆ ಸಂಪರ್ಕವನ್ನು ಬಲಪಡಿಸಲು ವಿನ್ಯಾಸಗೊಳಿಸಲಾಗಿದ್ದು, ತಂತ್ರಜ್ಞಾನ ಕೇಂದ್ರಗಳನ್ನು ಉತ್ಪಾದನಾ ಕೇಂದ್ರಗಳು ಮತ್ತು ಪ್ರಮುಖ ಜನಸಂಖ್ಯಾ ಸಮೂಹಗಳೊಂದಿಗೆ ಸಂಪರ್ಕಿಸುತ್ತದೆ

ವಿ. ಸೋಮಣ್ಣ, ರೈಲ್ವೆ ಖಾತೆ ರಾಜ್ಯ ಸಚಿವ



ಕೇಂದ್ರ ಸರ್ಕಾರದ ಬಜೆಟ್‌ನಲ್ಲಿ ಬೆಂಗಳೂರು-ಹೈದರಾಬಾದ್ ಮತ್ತು ಬೆಂಗಳೂರು- ಚೆನ್ನೈ ನಡುವೆ ಹೈಸ್ಪೀಡ್ ರೈಲು ಕಾರಿಡಾರ್ ಅಭಿವೃದ್ಧಿ ಘೋಷಣೆ ಮಾಡಿರುವುದು ಸ್ವಾಗತಾರ್ಹ. ಇದರಿಂದ ಕರ್ನಾಟಕಕ್ಕೆ ಹೆಚ್ಚು ಪ್ರಯೋಜನವೇನೂ ಇಲ್ಲ. ಇದರ ಬದಲು ಬೆಂಗಳೂರು-ಪುಣೆ ನಡುವೆ ಇಂಥ ಕಾರಿಡಾರ್ ಬರಬೇಕು. ಇದಕ್ಕಾಗಿ ರಾಜ್ಯ ಮತ್ತು ಮಹಾರಾಷ್ಟ್ರದ ಸಂಸದರು ಪಕ್ಷಾತೀತವಾಗಿ ಧ್ವನಿ ಎತ್ತಬೇಕು. ಕರ್ನಾಟಕದ ಅಭಿವೃದ್ಧಿ ಮಾದರಿಗಳನ್ನೇ ನಕಲು ಮಾಡಿ ಬಜೆಟ್‌ನಲ್ಲಿ ಘೋಷಿಸಲಾಗಿದೆ

ಎಂ.ಬಿ. ಪಾಟೀಲ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ



ದೇಶದ ಖಜಾನೆಗೆ ಅತಿ ಹೆಚ್ಚು ಕೊಡುಗೆ ನೀಡುವ ಮಹಾರಾಷ್ಟ್ರವನ್ನು ನಿರ್ಲಕ್ಷಿಸಲಾಗಿದೆ. ಸ್ಮಾರ್ಟ್ ಸಿಟಿ ಯೋಜನೆಯು ವಿಫಲಗೊಂಡು ದಶಕದ ಬಳಿಕ ಎರಡನೇ ಮತ್ತು ಮೂರನೇ ಹಂತದ ನಗರ ಪ್ರದೇಶಗಳ ಅಭಿವೃದ್ಧಿಗೆ ಯೋಜನೆಯನ್ನು ಘೋಷಿಸಲಾಗಿದೆ. ಇದರಲ್ಲೂ ಯಾವುದೇ ಸ್ಪಷ್ಟತೆ ಇಲ್ಲ. ಇದು ಹಾಸ್ಯಾಸ್ಪದ ಸಂಗತಿ. ಹೈ ಸ್ಪೀಡ್ ಯೋಜನೆಯ ಅನುಷ್ಠಾನದ ಬಗ್ಗೆಯೂ ಸ್ಪಷ್ಟತೆ ಬೇಕು. ಈ ಯೋಜನೆಗೆ ಹಣ ನೀಡುವುದು ಕೇಂದ್ರ ಸರ್ಕಾರವೋ ಅಥವಾ ರಾಜ್ಯ ಸರ್ಕಾರವೋ?

ಆದಿತ್ಯ ಠಾಕ್ರೆ, ಶಿವಸೇನಾ (ಯುಬಿಟಿ) ನಾಯಕ



ಒಡಿಶಾದಲ್ಲಿ ವಿರಳ ಲೋಹಗಳ ಕಾರಿಡಾರ್ ಸ್ಥಾಪನೆಯ ಪ್ರಸ್ತಾವ ಸ್ವಾಗತಾರ್ಹವಾದದ್ದು. ಮೌಲ್ಯಯುತ ಖನಿಜ ಪ್ರದೇಶಗಳನ್ನು ಸಂಪರ್ಕಿಸಲು ರಾಷ್ಟ್ರೀಯ ಜಲಮಾರ್ಗ ಆರಂಭಿಸುವ ಘೋಷಣೆಯನ್ನು ಮತ್ತೊಮ್ಮೆ ಮಾಡಲಾಗಿದೆ. ಈ ಪ್ರಸ್ತಾವ ಸಾಕಷ್ಟು ಹಳೆಯದು. ಬಜೆಟ್‌ನಲ್ಲಿ ಒಡಿಶಾ ಮತ್ತು ಇಲ್ಲಿನ ಜನರಿಗೆ ಉಪಯೋಗವಾಗುವ ಯಾವುದೇ ಕೊಡುಗೆಯನ್ನು ನೀಡಿಲ್ಲ. ಅಲ್ಲಿನ ಸ್ವಾಭಾವಿಕ ಸಂಪನ್ಮೂಲವನ್ನು ಕಬಳಿಸಿಕೊಳ್ಳುವ ಸಲುವಾಗಿ ಮಾತ್ರ ಕೆಲ ಯೋಜನೆಗಳನ್ನು ಘೋಷಿಸಲಾಗಿದೆ

ನವೀನ್ ಪಟ್ನಾಯಕ್, ಬಿಜೆಡಿ ಮುಖ್ಯಸ್ಥ

ಚಹಾ ತೋಟಗಳ ಕಾರ್ಮಿಕರಿಗೆ ನೆರವು



ಚಹಾ ತೋಟಗಳ ಕಾರ್ಮಿಕರಿಗಾಗಿ ರೂಪಿಸಲಾಗಿದ್ದ 'ಪ್ರಧಾನ ಮಂತ್ರಿ ಚಾ ಶ್ರಮಿಕ್ ಪ್ರೋತ್ಸಾಹನ್ ಯೋಜನೆ'ಯನ್ನು ಮತ್ತೊಂದು ವರ್ಷ ವಿಸ್ತರಿಸಲಾಗಿದೆ. 2024–25 ಮತ್ತು 2025–26ರ ಬಜೆಟ್‌ನಲ್ಲಿ ಒಟ್ಟು ₹1,000 ಕೋಟಿ ಅನುದಾನದೊಂದಿಗೆ ಯೋಜನೆ ಜಾರಿ ಮಾಡಲಾಗಿತ್ತು. ಅಸ್ಸಾಂ ಮತ್ತು ಪಶ್ಚಿಮ ಬಂಗಾಳದ ಚಹಾ ತೋಟಗಳ ಕಾರ್ಮಿಕರ ಕಲ್ಯಾಣಕ್ಕಾಗಿ ಯೋಜನೆ ರೂಪಿಸಲಾಗಿತ್ತು. ಅದರಲ್ಲೂ ವಿಶೇಷವಾಗಿ ಮಹಿಳೆಯರು ಮತ್ತು ಮಕ್ಕಳನ್ನು ದೃಷ್ಟಿಯಲ್ಲಿರಿಸಿಕೊಂಡು ಯೋಜನೆ ಜಾರಿ ಮಾಡಲಾಗಿತ್ತು.

ಚಹಾ ತೋಟಗಳ ಕಾರ್ಮಿಕರ ಅಗತ್ಯಗಳನ್ನು ಆಧರಿಸಿ ಯೋಜನೆಯ ಫಲಾನುಭವಿಗಳನ್ನಾಗಿ ಆಯ್ಕೆ ಮಾಡಲಾಗುತ್ತಿದೆ. ವಿಶೇಷವಾಗಿ, ಶಿಕ್ಷಣ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ಸೇವೆಗಳನ್ನು ಒದಗಿಸಲಾಗುತ್ತಿದೆ. ಯೋಜನೆಯ ಭಾಗವಾಗಿ ಕಾರ್ಮಿಕರಿಗೆ ಪಿಂಚಣಿ, ವಿಮಾ ಸೌಲಭ್ಯವನ್ನೂ ಕಲ್ಪಿಸಲಾಗುತ್ತಿದೆ.

ಸೀಮಿತ 'ಕಲ್ಯಾಣ', ರಾಜ್ಯಗಳ ಹೊರೆ ಉಲ್ಬಣ



ವಿಶ್ಲೇಷಣೆ

ವಸಂತ ಕಲಾಲ್

ಸರ್ವರನ್ನು ಒಳಗೊಳ್ಳುವಂತೆ ಅನಿಸಿದರೂ, ಸಾರ್ವಜನಿಕ ಹೊಣೆಗಾರಿಕೆಯಿಂದ ಸರ್ಕಾರವು ದೂರ ಸರಿಯುತ್ತಿರುವುದನ್ನು ಪ್ರಸ್ತುತ ಬಜೆಟ್ ತೋರಿಸುತ್ತಿದೆ.

ಶಿಕ್ಷಣ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಸುಮಾರು ₹1,39,285.95 ಕೋಟಿ (ಜಿಡಿಪಿಯಲ್ಲಿ ಶೇ 2.7ರಷ್ಟು) ಘೋಷಿಸಲಾಗಿದೆ. ಆದರೆ, ಇದರಲ್ಲಿ ಕೇಂದ್ರದ ಪಾಲು ಶೇ 0.5 ಮಾತ್ರ. ರಾಜ್ಯ ಸರ್ಕಾರಗಳೇ ಉಳಿದ ಶೇ 2.2 ರಷ್ಟು ಭರಿಸಬೇಕು. ಜಿಡಿಪಿಯಲ್ಲಿ ಶಿಕ್ಷಣ ವೆಚ್ಚದ ಪಾಲು ಇನ್ನೂ ಸುಮಾರು ಶೇ 2.7–ಶೇ 2.9ರಲ್ಲೇ ನಿಂತಿದ್ದು, ಶೇ 6ರ ಗುರಿಯಿಂದ ಇದು ಬಹಳ ದೂರದಲ್ಲಿದೆ. ಉದ್ಯೋಗ ಮಾರುಕಟ್ಟೆಗೆ ಅಗತ್ಯವಾದ ಮಾನವ ಸಂಪತ್ತನ್ನು ಉತ್ಪಾದಿಸುವ ಸಂಶೋಧನೆ ಮತ್ತು ಅಭಿವೃದ್ಧಿಯ ಬಗ್ಗೆ ಬಜೆಟ್‌ನಲ್ಲಿ ಪ್ರಸ್ತಾಪವೇ ಇಲ್ಲ.

ಆರೋಗ್ಯ ಕ್ಷೇತ್ರದಲ್ಲಿಯೂ ಇದೇ ಚಿತ್ರಣ ಕಾಣಿಸುತ್ತದೆ. ಆರೋಗ್ಯಕ್ಕೆ ನೀಡಲಾಗುವ ಮೊತ್ತದಲ್ಲಿ ಶೇ 10ರಷ್ಟು ಏರಿಸಿ ₹1,06,530 ಕೋಟಿ ಘೋಷಿಸಲಾಗಿದೆ. ಇದು ಜಿಡಿಪಿಯ ಶೇ 1.8ರಷ್ಟಿದೆ. ಇದರಲ್ಲಿ ಜಿಡಿಪಿಯ ಶೇ 0.3–ಶೇ 0.4 ರಷ್ಟು ಹಣವನ್ನು ಮಾತ್ರ ಕೇಂದ್ರ ಭರಿಸಲಿದ್ದು, ಉಳಿದದ್ದನ್ನು ರಾಜ್ಯ ಸರ್ಕಾರಗಳು ಭರಿಸಬೇಕು. ಆರೋಗ್ಯ ಕ್ಷೇತ್ರಕ್ಕೆ ಒದಗಿಸಿರುವ ಬಜೆಟ್ ಪ್ರಮಾಣವು ಜಾಗತಿಕ ಸರಾಸರಿ ಮಟ್ಟಕ್ಕಿಂತ ಅತಿ ಕಡಿಮೆಯಿದೆ.

2025ರ ವೇಳೆಗೆ ಜಿಡಿಪಿಯ ಶೇ 2.5ರಷ್ಟು ವೆಚ್ಚವನ್ನು ಆರೋಗ್ಯಕ್ಕೆ ವ್ಯಯಿಸುವುದಾಗಿ 2017ರ ಬಜೆಟ್‌ನಲ್ಲಿ ಘೋಷಿಸಲಾಗಿತ್ತು. ಸರ್ಕಾರ ಆ ಗುರಿ ತಲುಪುವಲ್ಲಿ ವಿಫಲವಾಗಿದೆ. ಬಜೆಟ್‌ನ ಬಹುಪಾಲು ಹಣ 'ಆಯುಷ್ಮಾನ್ ಭಾರತ'ದಂತಹ ವಿಮಾ ಆಧಾರಿತ ಯೋಜನೆಗಳಿಗೆ ಮತ್ತು ಆಸ್ಪತ್ರೆಗಳ ನಿರ್ವಹಣೆಗೆ ವ್ಯಯವಾಗುತ್ತಿದೆ. ಎರಡು ವರ್ಷದ ಹಿಂದೆ ಘೋಷಿಸಲಾಗಿದ್ದ ಹೊಸ ಏಮ್ಸ್‌ಗಳ ನಿರ್ಮಾಣ ಇನ್ನೂ ಮಂದ ಗತಿಯಲ್ಲೇ ಸಾಗುತ್ತಿದೆ. ಪೂರ್ಣಕಾಲಿಕ ವೈದ್ಯರು ಮತ್ತು ನರ್ಸ್‌ಗಳ ನೇಮಕ ಹಾಗೂ ಗ್ರಾಮೀಣ ಆರೋಗ್ಯ ಮೂಲಸೌಕರ್ಯದ ವಿಸ್ತರಣೆ ಸಾಕಷ್ಟು ವೇಗದಲ್ಲಿ ನಡೆಯುತ್ತಿಲ್ಲ. ಔಷಧಿ, ವೈದ್ಯಕೀಯ ಉಪಕರಣಗಳು ಮತ್ತು ವೈದ್ಯಕೀಯ ಸಿಬ್ಬಂದಿಯ ವೆಚ್ಚಗಳು ವೇಗವಾಗಿ ಹೆಚ್ಚುತ್ತಿವೆ. ಆರೋಗ್ಯ ವೆಚ್ಚವನ್ನು ನಾಮಕಾವಸ್ತೆ ಏರಿಸುವುದರಿಂದ ಯಾವುದೇ ಅನುಕೂಲವಿಲ್ಲ. ಆರೋಗ್ಯ ಕ್ಷೇತ್ರವನ್ನು ಸುಧಾರಿಸುವ ಬದಲು ಅವುಗಳನ್ನು ಆರೋಗ್ಯ ವಿಮಾ ವ್ಯವಸ್ಥೆಯ ಮೂಲಕ ನಿರ್ವಹಿಸುವಂತಹ ಕ್ರಮಗಳನ್ನು ಬಜೆಟ್ ಸೂಚಿಸುತ್ತಿದೆ.

ಕೈಗಾರಿಕಾ ನೀತಿಯಲ್ಲಿ ಸರ್ಕಾರವು ದೇಶೀಯ ಕೈಗಾರಿಕೆಗಳನ್ನು ನಿರ್ಮಿಸುವುದಕ್ಕಿಂತ ವಿದೇಶಿ ನೇರ ಬಂಡವಾಳ ಹೂಡಿಕೆಯನ್ನು ಆಕರ್ಷಿಸುವುದರ ಮೇಲೆ ಹೆಚ್ಚು ಅವಲಂಬಿತವಾಗಿದೆ. ದತ್ತಾಂಶ ಕೇಂದ್ರಗಳು ಮತ್ತು ಡಿಜಿಟಲ್ ಆಧಾರಿತ ಸಂಸ್ಥೆಗಳಿಗೆ ತೆರಿಗೆ ರಿಯಾಯಿತಿ ಮತ್ತು ನಿಯಂತ್ರಣ ಸಡಿಲಿಕೆಗಳನ್ನು ಈ ಬಜೆಟ್‌ನಲ್ಲಿ ನೀಡಲಾಗಿದೆ. ಆದರೆ ಇವು ಕೇವಲ ಅಲ್ಪ ಪ್ರಮಾಣದ ಉದ್ಯೋಗವನ್ನು ಮಾತ್ರ ಸೃಷ್ಟಿಸುತ್ತವೆ. ಮೂಲ ಕೈಗಾರಿಕೆಗಳ ಪುನಶ್ಚೇತನ ಮತ್ತು ಅಭಿವೃದ್ಧಿ ಕುರಿತಂತೆ ಏಳು ಪ್ರಮುಖ ವಲಯಗಳನ್ನು ಈ ಬಾರಿ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಇದು ಒಂದು ಒಳ್ಳೆಯ ಬೆಳವಣಿಗೆ. ಆದರೆ ಇದು ಎಷ್ಟು ಸಾಧ್ಯವಾಗುತ್ತದೆ ಎನ್ನುವುದನ್ನು ಕಾದು ನೋಡಬೇಕು. ಇನ್ನೊಂದು ಮುಖ್ಯ ಅಂಶವೆಂದರೆ, ಕಾರ್ಮಿಕರ ಸಾಮಾಜಿಕ ಭದ್ರತೆಯ ಯೋಜನೆಗಳಿಗೆ ಹಿಂದಿನ ಬಜೆಟ್‌ಗಿಂತ ₹128 ಕೋಟಿ ಹಣವನ್ನು ಕಡಿಮೆಗೊಳಿಸಿದೆ. ಹೊಸ ಉದ್ಯೋಗ ಯೋಜನೆಗಳು ಉದ್ಯೋಗದಾತರಿಗೆ ಸಾಲದ ಪ್ರೋತ್ಸಾಹ ನೀಡುವಿಕೆಗೆ ಮಾತ್ರ ಸೀಮಿತವಾಗಿದ್ದು, ಹೆಚ್ಚುತ್ತಿರುವ ಅಸಂಘಟಿತ ವಲಯ, ಕಾರ್ಮಿಕರ ಉದ್ಯೋಗ ಭದ್ರತೆ ಬಗ್ಗೆ ಈ ಬಜೆಟ್ ಹೆಚ್ಚೇನೂ ಪ್ರಸ್ತಾಪಿಸಿಲ್ಲ. ಅದೇ ಸಮಯದಲ್ಲಿ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಗೆ ನೀಡಲಾಗುವ ಅನುದಾನದ ಪ್ರಮಾಣವನ್ನು ಸರ್ಕಾರ ಹೆಚ್ಚಳ ಮಾಡಿದ್ದರೂ ಅದರ ಹೊರೆ ಕೇಂದ್ರ ಸರ್ಕಾರಕ್ಕಿಂತ ರಾಜ್ಯ ಸರ್ಕಾರಗಳ ಮೇಲೆಯೇ ಇರಲಿದೆ.

ಕಳೆದ 5 ವರ್ಷಗಳಲ್ಲಿ ಕಾರ್ಪೊರೇಟ್ ಲಾಭವು ಶೇ 180ಕ್ಕೂ ಹೆಚ್ಚು ಏರಿಕೆಯಾಗಿದ್ದರೆ, ಕಾರ್ಪೊರೇಟ್ ತೆರಿಗೆ ಸಂಗ್ರಹವು ಸುಮಾರು ಶೇ 110ರಷ್ಟು ಮಾತ್ರ ಏರಿಕೆಯಾಗಿದೆ. ಇದೇ ಸಮಯದಲ್ಲಿ ತೆರಿಗೆ ಭಾರವನ್ನು ಕ್ರಮೇಣ ವೈಯಕ್ತಿಕ ಆದಾಯ ತೆರಿಗೆ ಮತ್ತು ಜಿಎಸ್‌ಟಿ ಮುಂತಾದ ಪರೋಕ್ಷ ತೆರಿಗೆಗಳ ಮೂಲಕ ಸಾಮಾನ್ಯ ಜನರೇ ಹೊರುವಂತಾಗಿದೆ.

ಒಟ್ಟಾರೆಯಾಗಿ ಹೇಳುವುದಾದರೆ, ಈ ಬಜೆಟ್‌ನಲ್ಲಿ ಜನಕಲ್ಯಾಣದಂತಹ ಯೋಜನೆಗಳನ್ನು ನಿರ್ವಹಣೆ ಮತ್ತು ಪಿಂಚಣಿಗಳ ಮಟ್ಟಕ್ಕೆ ಮಾತ್ರಕ್ಕೆ ಸೀಮಿತಗೊಳಿಸಲಾಗಿದೆ. ಜಿಡಿಪಿ ಮಟ್ಟ ಹೆಚ್ಚಾದರೂ ಉದ್ಯೋಗಗಳು ಸೃಷ್ಟಿಯಾಗುವುದರಲ್ಲಿನ ವೈಫಲ್ಯವನ್ನು ಬಜೆಟ್ ಅಂಕಿಅಂಶಗಳು ಸೂಚಿಸುತ್ತಿವೆ.

ಲೇಖಕ: ದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಲ್ಲಿ ಸಂಶೋಧನಾ ವಿದ್ಯಾರ್ಥಿ

ಯಾವುದಕ್ಕೆ ಎಷ್ಟು ಅನುದಾನ?

ಸಾರಿಗೆ (₹ಕೋಟಿಗಳಲ್ಲಿ)

2025-26 (ಬಜೆಟ್ ಅಂದಾಜು)	2025-26 (ಪರಿಷ್ಕೃತ ಅಂದಾಜು)	2026-27 (ಬಜೆಟ್ ಅಂದಾಜು)
5,48,649	5,47,563	5,98,520

ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ (₹ಕೋಟಿಗಳಲ್ಲಿ)

2025-26 (ಬಜೆಟ್ ಅಂದಾಜು)	2025-26 (ಪರಿಷ್ಕೃತ ಅಂದಾಜು)	2026-27 (ಬಜೆಟ್ ಅಂದಾಜು)
1,70,266	1,70,266	1,87,293

ಮೆಟ್ರೊ ಯೋಜನೆಗಳು (₹ಕೋಟಿಗಳಲ್ಲಿ)

2025-26 (ಬಜೆಟ್ ಅಂದಾಜು)	2025-26 (ಪರಿಷ್ಕೃತ ಅಂದಾಜು)	2026-27 (ಬಜೆಟ್ ಅಂದಾಜು)
31,239	27,450	28,740

ವಾಣಿಜ್ಯ ಮತ್ತು ಕೈಗಾರಿಕೆ (₹ಕೋಟಿಗಳಲ್ಲಿ)

2025-26 (ಬಜೆಟ್ ಅಂದಾಜು)	2025-26 (ಪರಿಷ್ಕೃತ ಅಂದಾಜು)	2026-27 (ಬಜೆಟ್ ಅಂದಾಜು)
65,553	52,324	70,296

■ ಬಜೆಟ್ ಅಂದಾಜು ■ ಪರಿಷ್ಕೃತ ಅಂದಾಜು ■ ಬಜೆಟ್ ಅಂದಾಜು



2026-27

ಕೇಂದ್ರ ಬಜೆಟ್



ಜನಸಾಮಾನ್ಯರಿಗೆ ಇನ್ನಷ್ಟು ಸವಲತ್ತು ಘೋಷಿಸಬೇಕಿತ್ತು. ಪತಿ ಉದ್ಯೋಗದಲ್ಲಿದ್ದು, ಪತ್ನಿ ಗೃಹಿಣಿಯಾಗಿರುವ ಕುಟುಂಬಗಳಿಗೆ ಹೊಸ ರೀತಿಯ ಆದಾಯ ತೆರಿಗೆ ಪದ್ಧತಿ ಘೋಷಿಸುವ ನಿರೀಕ್ಷೆ ಈಡೇರಿಲ್ಲ. ಉದ್ಯೋಗ ಸೃಷ್ಟಿಗೆ ಹೆಚ್ಚು ಉತ್ತೇಜನ ನೀಡಿದಂತಿದೆ

ಪೂರ್ಣಿಮಾ ನಾಯಕ್, ಮಂಗಳೂರು



ರಾಜ್ಯಕ್ಕೆ ತೆರಿಗೆ ಪಾಲು 4.13ರಷ್ಟು ಹಂಚಿಕೆ ಮಾಡಿರುವುದು ಸ್ವಾಗತಾರ್ಹ. ದೀರ್ಘಕಾಲದಿಂದ ಬಾಕಿ ಇರುವ ತುಮಕೂರು-ರಾಯದುರ್ಗ ರೈಲ್ವೆ ಯೋಜನೆ ತ್ವರಿತವಾಗಿ ಪೂರ್ಣಗೊಳಿಸಲು ಆದ್ಯತೆ ನೀಡಿಲ್ಲ. ಹೈಸ್ಪೀಡ್ ರೈಲು ಯೋಜನೆ ಘೋಷಣೆಗೆ ಸೀಮಿತವಾಗುವ ಸಾಧ್ಯತೆಗಳಿವೆ

ವಾಸೀಂ ಅಕ್ರಂ, ತುಮಕೂರು



ಬಜೆಟ್ ಮಹಿಳೆಯರ ಪರವಾಗಿಲ್ಲ. ಸ್ತ್ರೀಯರ ಸ್ವಾವಲಂಬನೆಗೆ ಪೂರಕವಾದ ಯೋಜನೆ ಕಾಣಲಿಲ್ಲ. ಕ್ಯಾನ್ಸರ್, ಮಧುಮೇಹದಂತಹ ಕಾಯಿಲೆಗಳ ಚಿಕಿತ್ಸೆಗೆ ಬಳಸುವ ಔಷಧಗಳ ಸುಂಕ ಇಳಿಸಿದ್ದು ಸ್ವಾಗತಾರ್ಹ. ಬಜೆಟ್ ಇನ್ನಷ್ಟು ಜನಸಾಮಾನ್ಯರ ಪರ ಇರಬೇಕಿತ್ತು

ಎಂ.ಎ.ರೂಪಶ್ರೀ, ಮೈಸೂರು



ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.3ಕ್ಕೆ ಸೀಮಿತಗೊಳಿಸಿ, ವಿತ್ತೀಯ ಶಿಸ್ತು ಕಾಪಾಡಲಾಗಿದೆ. ಬಂಡವಾಳ ವೆಚ್ಚವನ್ನು ಹೆಚ್ಚಿಸುವ ಮೂಲಕ ಮೂಲಸೌಕರ್ಯ ಅಭಿವೃದ್ಧಿಗೆ ಒತ್ತು ನೀಡಲಾಗಿದೆ. ಉತ್ಪಾದನಾ ವಲಯಗಳಿಗೂ ಆದ್ಯತೆ ನೀಡಿದ್ದು, ಇದು ಸುಧಾರಣೆ ಆಧಾರಿತ ಬಜೆಟ್ ಆಗಿದೆ

ಪ್ರಸನ್ನ ಪಂಢರಿ, ಹುಬ್ಬಳ್ಳಿ



ರೈತರು, ಕಾರ್ಮಿಕರು, ನಿರುದ್ಯೋಗಿ ಯುವಜನರಿಗೆ ನಿರ್ದಿಷ್ಟ ಯೋಜನೆ ಇಲ್ಲ. ಮಹಿಳೆಯರ ಸಬಲೀಕರಣ ಇಲ್ಲವೇ ಇಲ್ಲ. ಆರ್ಥಿಕ ಪರಿಸ್ಥಿತಿ ಹದಗೆಡುತ್ತಿರುವ ಈ ದಿನಗಳಲ್ಲಿ ಬಜೆಟ್ ಬಡವರು, ರೈತರು, ಕಾರ್ಮಿಕರ ಪರವಾಗಿರಬೇಕು. ಬಜೆಟ್ ಯಾವುದೇ ಆಶಯವನ್ನು ಪೂರೈಸುವುದಿಲ್ಲ

ಅಶ್ವಿನಿ, ಕಲಬುರಗಿ



ರಾಜ್ಯಕ್ಕೆ ವಿಶೇಷ ಯೋಜನೆಗಳನ್ನು ಘೋಷಿಸಿಲ್ಲ. ದಾವಣಗೆರೆಯಂತಹ ವೇಗವಾಗಿ ಬೆಳೆಯುತ್ತಿರುವ ನಗರಗಳಿಗೆ ವಿಶೇಷ ಕೊಡುಗೆ ನೀಡಬೇಕಿತ್ತು. ದೇಶದ ಎಲ್ಲ ಜಿಲ್ಲೆಗಳಲ್ಲಿ ಬಾಲಕಿಯರ ವಸತಿ ನಿಲಯ ನಿರ್ಮಾಣ ಮಾಡುವ ಘೋಷಣೆಯು ಮಹಿಳಾ ಸಬಲೀಕರಣಕ್ಕೆ ಪೂರಕವಾಗಿದೆ

ಬಿಂದು ಎಸ್.ಪಿ., ದಾವಣಗೆರೆ



ದೇಶಿ ಉದ್ದಿಮೆಗಳಿಗೆ ಉತ್ತೇಜನ

ನವದೆಹಲಿ (ಪಿಟಿಐ): ಗಡಿಯಲ್ಲಿ ದಾಳಿ, ನೆರೆ ರಾಷ್ಟ್ರಗಳ ಜೊತೆಗಿನ ಬಿಗುವಿನ ಸಂಬಂಧದ ಮಧ್ಯೆಯೂ, ಕೇಂದ್ರ ಬಜೆಟ್‌ನಲ್ಲಿ ರಕ್ಷಣಾ ಕ್ಷೇತ್ರಕ್ಕೆ ಅನುದಾನ ಹಂಚಿಕೆಯಲ್ಲಿ ಸಮಾಧಾನಕರ ಎಂಬಂತೆ ತುಸು ಏರಿಕೆ ಮಾಡಲಾಗಿದೆ.

2026-27ನೇ ಸಾಲಿನ ಬಜೆಟ್‌ನಲ್ಲಿ ರಕ್ಷಣಾ ಕ್ಷೇತ್ರಕ್ಕೆ ₹ 7,84,678 ಕೋಟಿ ಕಾಯ್ದಿರಿಸಲಾಗಿದೆ. ಇದು ಕಳೆದ ವರ್ಷದ ಬಜೆಟ್‌ನಲ್ಲಿ ನಿಗದಿಯಾಗಿದ್ದಕ್ಕಿಂತ ₹1,03,468 ಕೋಟಿ ಅಧಿಕವಾಗಿದೆ.

ನಾಗರಿಕ, ತರಬೇತಿ ಮತ್ತು ಇತರೆ ವಿಮಾನಗಳ ಉತ್ಪಾದನೆಗೆ ಅಗತ್ಯವಿರುವ ಬಿಡಿಭಾಗಗಳು, ಉತ್ಪನ್ನಗಳಿಗೆ ಮೂಲ ಕಸ್ಟಮ್ಸ್ ಸುಂಕ ವಿನಾಯಿತಿಯನ್ನು ಸಚಿವೆ ಪ್ರಕಟಿಸಿದ್ದಾರೆ.

ಅಲ್ಲದೆ, ವಿಮಾನಗಳ ನಿರ್ವಹಣೆ, ದುರಸ್ತಿ ಅಥವಾ ರಕ್ಷಣಾ ಕ್ಷೇತ್ರದ ಉದ್ಯಮಗಳಿಗೆ ಅಗತ್ಯವಿರುವ ಉತ್ಪನ್ನಗಳ ತಯಾರಿಕೆಗಾಗಿ, ಎಂಜಿನ್ ಒಳಗೊಂಡಂತೆ ಆಮದು ಆಗಲಿರುವ ಕಚ್ಚಾ ವಸ್ತುಗಳಿಗೂ ಮೂಲ ಕಸ್ಟಮ್ಸ್ ಸುಂಕದಿಂದ ವಿನಾಯಿತಿ ಪ್ರಕಟಿಸಲಾಗಿದೆ.

ರಕ್ಷಣಾ ಸಚಿವಾಲಯದ ಅಡಿಯಲ್ಲಿ ಬರುವ ಸಾರ್ವಜನಿಕ ವಲಯದ ಘಟಕಗಳು ಆಮದು ಮಾಡಿಕೊಳ್ಳುವ ಕಚ್ಚಾ ವಸ್ತುಗಳಿಗೆ ಈ ವಿನಾಯಿತಿಗಳು ಅನ್ವಯವಾಗಲಿವೆ.

ಈ ಎರಡೂ ನಿರ್ಧಾರಗಳು ರಕ್ಷಣಾ ಕ್ಷೇತ್ರದಲ್ಲಿ ಪ್ರಮುಖವಾಗಿ ವೈಮಾನಿಕ ಉದ್ಯಮಗಳಿಗೆ ಸಹಕಾರಿಯಾಗಲಿವೆ ಎಂದು ಅಂದಾಜು ಮಾಡಲಾಗಿದೆ.

ಬಜೆಟ್‌ನಲ್ಲಿ ಗಣನೀಯ ಮೊತ್ತ ಹಂಚಿಕೆ ಆಗಿಲ್ಲ ಎಂಬುದಕ್ಕೆ ಷೇರುಪೇಟೆ ನಕಾರಾತ್ಮಕವಾಗಿ ಸ್ಪಂದಿಸಿದೆ. ನಿಫ್ಟಿಯಲ್ಲಿ ಭಾರತ ರಕ್ಷಣಾ ವಲಯದ ಸೂಚ್ಯಂಕ ಶೇ 5.6ರಷ್ಟು ಕುಸಿದಿದೆ. ಈ ಕ್ಷೇತ್ರಕ್ಕೆ ಹೆಚ್ಚಿನ ಮೊತ್ತ ಹಂಚಿಕೆ ಆಗಬಹುದು ಎಂಬ ನಿರೀಕ್ಷೆ ಹೂಡಿಕೆದಾರರದಾಗಿತ್ತು.

ಈಡೇರದ ನಿರೀಕ್ಷೆ: ಪಾಕಿಸ್ತಾನ ಜೊತೆಗಿನ ತಿಕ್ಕಾಟದ ಹಿನ್ನೆಲೆಯಲ್ಲಿ ರಕ್ಷಣಾ ವಲಯದ ಅನುದಾನವನ್ನು ಶೇ 20ರಷ್ಟು ಹೆಚ್ಚಿಸಬೇಕು ಎಂಬುದು ರಕ್ಷಣಾ ಸಚಿವಾಲಯದ ನಿರೀಕ್ಷೆ ಆಗಿತ್ತು.

ಇನ್ನೊಂದೆಡೆ, 2.5 ಲಕ್ಷ ಕಂಪನಿಗಳ ಸದಸ್ಯತ್ವ ಹೊಂದಿರುವ ಭಾರತೀಯ ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಒಕ್ಕೂಟವು, ರಕ್ಷಣಾ ಕ್ಷೇತ್ರದಲ್ಲಿ ರಫ್ತು ವಹಿವಾಟಿಗೆ ಉತ್ತೇಜನ ನೀಡಲು ರಫ್ತು ಉತ್ತೇಜನಾ ಕಾರಿಡಾರ್ ಸ್ಥಾಪಿಸಬೇಕು ಎಂದು ಮನವಿ ಮಾಡಿತ್ತು.

ಇದು, 2029ರ ವೇಳೆಗೆ 5.5 ಬಿಲಿಯನ್ ಡಾಲರ್ ಮೊತ್ತದ ರಫ್ತು ವಹಿವಾಟು ಗುರಿಯನ್ನು ಸಾಧಿಸಲು ಅನುಕೂಲ ಎಂದೂ ಪ್ರತಿಪಾದಿಸಿತ್ತು. ಆದರೆ, ಇದಕ್ಕೆ ಸ್ಪಂದನೆ ದೊರೆತಿಲ್ಲ.

> **ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ವಿಷಯದಲ್ಲಿ ಸಂಸ್ಥೆಗೆ ಎಂದಿಗೂ ಬಜೆಟ್ ಕೊರತೆ ಆಗಿಲ್ಲ. ಸರ್ಕಾರ ಯಾವತ್ತಿಗೂ ದೊಡ್ಡ ಪ್ರಮಾಣದಲ್ಲಿ ಬೆಂಬಲ ನೀಡಿದೆ**
>
> **ವಿನಯ್ ಕುಮಾರ್ ದಾಸ್**
> ಪ್ರಧಾನ ನಿರ್ದೇಶಕ, ಡಿಆರ್‌ಡಿಒ

ಕೇಂದ್ರ ಸರ್ಕಾರ 2026-27ನೇ ಆರ್ಥಿಕ ವರ್ಷದಲ್ಲಿ ಬೊಕ್ಕಸಕ್ಕೆ ಬರುವ ಪ್ರತಿ ರೂಪಾಯಿಯಲ್ಲಿ 11 ಪೈಸೆಯನ್ನು ರಕ್ಷಣಾ ಕ್ಷೇತ್ರಕ್ಕೆ ವಿನಿಯೋಗಿಸಲಿದೆ. 2025-26ನೇ ಸಾಲಿನಲ್ಲಿ ಈ ಕ್ಷೇತ್ರಕ್ಕೆ ಒಟ್ಟು ₹6,81,210 ಕೋಟಿ ಹಂಚಿಕೆ ಮಾಡಲಾಗಿತ್ತು.

ಆದರೆ, ರಕ್ಷಣಾ ಕ್ಷೇತ್ರದಲ್ಲಿ ದೇಶೀಯ ಉದ್ಯಮಗಳಿಗೆ ಉತ್ತೇಜನ ನೀಡುವ ಹೆಜ್ಜೆಯಾಗಿ ವಿತ್ತ ಸಚಿವೆ ನಿರ್ಧಾರ ಪ್ರಕಟಿಸಿದ್ದಾರೆ.



ಐದು 'ವಿಶ್ವವಿದ್ಯಾಲಯ ಟೌನ್‌ಶಿಪ್' ನಿರ್ಮಾಣ

ನವದೆಹಲಿ (ಪಿಟಿಐ): ಉನ್ನತ ಶಿಕ್ಷಣ ಹಾಗೂ ಉದ್ಯಮ ಕ್ಷೇತ್ರ ಪರಸ್ಪರ ಪೂರಕವಾಗಿರಬೇಕು, ಶಿಕ್ಷಣ, ಕೌಶಲಗಳು ಒಂದು ಕಡೆ ಸಿಗುವಂತಾಗಬೇಕು ಎಂಬ ಉದ್ದೇಶದಿಂದ ಹಲವು ಯೋಜನೆಗಳನ್ನು ನಿರ್ಮಲಾ ಅವರು ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಐದು 'ವಿಶ್ವವಿದ್ಯಾಲಯ ಟೌನ್‌ಶಿಪ್'ಗಳನ್ನು ಅಭಿವೃದ್ಧಿಪಡಿಸುವುದಕ್ಕೆ ರಾಜ್ಯಗಳಿಗೆ ನೆರವು ನೀಡಲಾಗುವುದು ಎಂದು ಅವರು ಹೇಳಿದ್ದಾರೆ.

ಪ್ರಮುಖ ಕೈಗಾರಿಕೆಗಳ ಸನಿಹದಲ್ಲಿ ಈ 'ವಿಶ್ವವಿದ್ಯಾಲಯ ಟೌನ್‌ಶಿಪ್'ಗಳು ಸ್ಥಾಪನೆ ಆಗಲಿದ್ದು, ಸುಸಜ್ಜಿತವಾದ ಶೈಕ್ಷಣಿಕ ವಲಯಗಳಾಗಿರಲಿವೆ. ವಿಶ್ವವಿದ್ಯಾಲಯ, ಕಾಲೇಜುಗಳು, ಸಂಶೋಧನಾ ಕೇಂದ್ರಗಳು, ಕೌಶಲ ಅಭಿವೃದ್ಧಿ ಕೇಂದ್ರಗಳು, ವಸತಿ ಸಮುಚ್ಚಯಗಳಿರಲಿವೆ.

ಉನ್ನತ ಶಿಕ್ಷಣ: ಉನ್ನತ ಶಿಕ್ಷಣದಲ್ಲಿ 'ಸ್ಟೆಮ್'ಗೆ (ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್ ಹಾಗೂ ಗಣಿತ) ಪ್ರಸ್ತುತ ಹೆಚ್ಚು ಪ್ರಾಮುಖ್ಯವಿದೆ. ಇಂತಹ ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿನಿಯರು ಅಧ್ಯಯನ, ಪ್ರಯೋಗಾಲಯ ಕಾರ್ಯಗಳಲ್ಲಿ ದೀರ್ಘ ಸಮಯ ಕಳೆಯುತ್ತಿರುತ್ತಾರೆ. ಹೀಗಾಗಿ ಅವರು ಹಲವಾರು ಸವಾಲುಗಳನ್ನು ಎದುರಿಸಬೇಕಾಗುತ್ತದೆ. ವಿದ್ಯಾರ್ಥಿನಿಯರ ಅನುಕೂಲಕ್ಕಾಗಿ ಪ್ರತಿ ಜಿಲ್ಲೆಯಲ್ಲಿ ಹಾಸ್ಟೆಲ್ ನಿರ್ಮಿಸುವ ಮೂಲಕ ಅವರ ಉನ್ನತ ಶಿಕ್ಷಣಕ್ಕೆ ಅನುಕೂಲ ಕಲ್ಪಿಸುವುದಾಗಿ ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಖಭೌತವಿಜ್ಞಾನ ಹಾಗೂ ಖಗೋಳವಿಜ್ಞಾನ ಅಧ್ಯಯನಕ್ಕೆ ಉತ್ತೇಜನ ನೀಡುವುದಕ್ಕಾಗಿ ಹಲವು ಯೋಜನೆಗಳನ್ನು ಪ್ರಸ್ತಾಪಿಸಲಾಗಿದೆ.

'ವೈದ್ಯಕೀಯ ಸೇವಾ ಹಬ್ ಆಗಿ ಭಾರತ': ಆರೋಗ್ಯ ಕ್ಷೇತ್ರದಲ್ಲಿ ಮೂಲಸೌಕರ್ಯಗಳನ್ನು ಅಭಿವೃದ್ಧಿಪಡಿಸುವುದಲ್ಲದೆ, 'ವೈದ್ಯಕೀಯ ಪ್ರವಾಸೋದ್ಯಮ ಸೇವಾ ಕ್ಷೇತ್ರದ ಹಬ್' ಆಗಿ ರೂಪಿಸುವ ಬಗ್ಗೆಯೂ ಪ್ರಸ್ತಾಪಿಸಲಾಗಿದೆ.

ಇದಕ್ಕಾಗಿ, ಖಾಸಗಿ ಸಹಯೋಗದಲ್ಲಿ ಐದು ಪ್ರಾದೇಶಿಕ ವೈದ್ಯಕೀಯ ಹಬ್‌ಗಳನ್ನು ಸ್ಥಾಪಿಸಲು ರಾಜ್ಯಗಳಿಗೆ ನೆರವು ನೀಡಲಾಗುತ್ತದೆ. ಈ ಹಬ್‌ಗಳು ಸಮಗ್ರ ಆರೋಗ್ಯ ಸೇವೆಯ ಸಂಕೀರ್ಣಗಳಾಗಿರಲಿದ್ದು, ವೈದ್ಯಕೀಯ ಸೇವೆ ಜೊತೆಗೆ ವೈದ್ಯಕೀಯ ಶಿಕ್ಷಣ, ಸಂಶೋಧನಾ ಸೌಲಭ್ಯಗಳನ್ನು ಒಳಗೊಂಡಿರಲಿವೆ ಎಂದು ಪ್ರಸ್ತಾಪಿಸಲಾಗಿದೆ.

ಆಯುಷ್ ಕೇಂದ್ರಗಳು, ವೈದ್ಯಕೀಯ ಪ್ರವಾಸೋದ್ಯಮ ಉತ್ತೇಜನಾ ಕೇಂದ್ರಗಳ ಜೊತೆಗೆ, ರೋಗಪತ್ತೆ ಸೌಲಭ್ಯಗಳು, ಚಿಕಿತ್ಸೆ ಬಳಿಕ ಆರೈಕೆ ಹಾಗೂ ಪುನರ್‌ವಸತಿ ಸೌಕರ್ಯಗಳನ್ನೂ ಈ ಹಬ್‌ಗಳು ಒಳಗೊಂಡಿರಲಿವೆ.

ಭಾರತೀಯ ವೈದ್ಯ ಪದ್ಧತಿಗೆ ಉತ್ತೇಜನ ನೀಡಲು ಮೂರು ಅಖಿಲ ಭಾರತ ಆಯುರ್ವೇದ ಸಂಸ್ಥೆಗಳನ್ನು ಸ್ಥಾಪಿಸಲು ಕೇಂದ್ರ ನಿರ್ಧರಿಸಿದೆ. ಜೊತೆಗೆ, ಆಯುಷ್ ಔಷಧ ಕೇಂದ್ರಗಳು, ಅವುಗಳ ಪ್ರಯೋಗಾಲಯಗಳನ್ನು ಮೇಲ್ದರ್ಜೆಗೇರಿಸಲು ಸಹ ಬಜೆಟ್‌ನಲ್ಲಿ ಪ್ರಸ್ತಾಪಿಸಲಾಗಿದೆ.

ಆಪ್ಟೊಮೆಟ್ರಿ, ರೇಡಿಯಾಲಜಿ, ಅನಸ್ತೇಷಿಯಾ, ಒ.ಟಿ ಟೆಕ್ನಾಲಜಿ, ಅನ್ವಯಿಕ ಮನೋವಿಜ್ಞಾನ ಮತ್ತು ನಡತೆಗೆ ಸಂಬಂಧಿಸಿದಂತಹ ವೈದ್ಯಕೀಯ ವೃತ್ತಿಗೆ ಪೂರಕವಾದ ಕೋರ್ಸ್‌ಗಳ ಕಲಿಕೆಗೆ ಉತ್ತೇಜನ ನೀಡುವ ಪ್ರಸ್ತಾವ ಮಂಡಿಸಲಾಗಿದೆ.

ಈ ಸ್ವರೂಪದ ಶಿಕ್ಷಣವನ್ನು ನೀಡುವ ಖಾಸಗಿ ಮತ್ತು ಸರ್ಕಾರಿ ವಲಯದ ಕೇಂದ್ರಗಳನ್ನು (ಎಎಚ್‌ಪಿ) ಮೇಲ್ದರ್ಜೆಗೇರಿಸಲಾಗುವುದು. ಇದರಿಂದ, ಮುಂದಿನ ಐದು ವರ್ಷಗಳಲ್ಲಿ 1 ಲಕ್ಷ ವೃತ್ತಿಪರರನ್ನು (ಅಲೈಡ್ ಹೆಲ್ತ್ ಪ್ರೊಫೆಷನಲ್) ಸೇವೆಗೆ ಸಜ್ಜುಗೊಳಿಸುವ ಉದ್ದೇಶವನ್ನು ಹೊಂದಲಾಗಿದೆ ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಮಾನಸಿಕ ಆರೋಗ್ಯ ಸೇವೆ ಒದಗಿಸುವ ನಿಮ್ಹಾನ್ಸ್‌ನಂತರ ಸಂಸ್ಥೆಗಳು ಉತ್ತರ ಭಾರತದಲ್ಲಿ ಇಲ್ಲ. ಈ ಕೊರತೆ ನೀಗಿಸುವ ಉದ್ದೇಶದಿಂದ ನಿಮ್ಹಾನ್ಸ್-2 ಸ್ಥಾಪಿಸಲಾಗುವುದು. ರಾಂಚಿ ಮತ್ತು ತೇಜ್‌ಪುರದಲ್ಲಿರುವ ರಾಷ್ಟ್ರೀಯ ಮಾನಸಿಕ ಆರೋಗ್ಯ ಕೇಂದ್ರಗಳನ್ನು ಮೇಲ್ದರ್ಜೆಗೇರಿಸಲಾಗುವುದು ಎಂದು ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- ಖಭೌತವಿಜ್ಞಾನ ಹಾಗೂ ಖಗೋಳವಿಜ್ಞಾನ ಅಧ್ಯಯನಕ್ಕೆ ಉತ್ತೇಜನ
- ಮೂರು ಅಖಿಲ ಭಾರತ ಆಯುರ್ವೇದ ಸಂಸ್ಥೆಗಳನ್ನು ಸ್ಥಾಪಿಸಲು ನಿರ್ಧಾರ

ಪ್ರಮುಖ ಘೋಷಣೆಗಳು

- ಜಾಮ್‌ನಗರದಲ್ಲಿ ಜಾಗತಿಕ ಪಾರಂಪರಿಕ ವೈದ್ಯಕೀಯ ಕೇಂದ್ರ ಸ್ಥಾಪನೆ
- ಐದು ಪ್ರಾದೇಶಿಕ ವೈದ್ಯಕೀಯ ಹಬ್ ಸ್ಥಾಪನೆಗೆ ಖಾಸಗಿ ಸಹಭಾಗಿತ್ವ
- ದೇಶದ ಪೂರ್ವ ಭಾಗದ ರಾಜ್ಯವೊಂದರಲ್ಲಿ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಡಿಸೈನ್ ಸ್ಥಾಪನೆ

'ಇಮ್ಮರ್ಸಿವ್' ತಂತ್ರಜ್ಞಾನ ಬಳಕೆಗೆ ಉತ್ತೇಜನ ನೀಡಲಾಗುವುದು. ನಾಲ್ಕು ಟೆಲಿಸ್ಕೋಪ್ ಮೂಲ ಸೌಕರ್ಯ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಇಲ್ಲವೇ, ಈಗಾಗಲೇ ಕಾರ್ಯನಿರ್ವಹಿಸುತ್ತಿರುವ ನ್ಯಾಷನಲ್ ಲಾರ್ಜ್ ಸೋಲಾರ್ ಟೆಲಿಸ್ಕೋಪ್, ನ್ಯಾಷನಲ್ ಲಾರ್ಜ್ ಆಪ್ಟಿಕಲ್ ಇನ್‌ಫ್ರಾರೆಡ್ ಟೆಲಿಸ್ಕೋಪ್, ಹಿಮಾಲಯನ್ ಚಂದ್ರ ಟೆಲಿಸ್ಕೋಪ್ ಹಾಗೂ ಕಾಸ್‌ಮೋಸ್ ಅನ್ನು ಮೇಲ್ದರ್ಜೆಗೆ ಏರಿಸಲಾಗುವುದು. ಎರಡು ತಾರಾಲಯಗಳನ್ನು ಸ್ಥಾಪಿಸಲಾಗುವುದು ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

	2025-26 ಬಜೆಟ್ ಅಂದಾಜು	2025-26 ಪರಿಷ್ಕೃತ ಅಂದಾಜು	2026-27 ಬಜೆಟ್ ಅಂದಾಜು
ಸಕ್ಷಮ್ ಅಂಗನವಾಡಿ ಮತ್ತು ಪೋಷಣ್ 2.0 (₹ಕೋಟಿಗಳಲ್ಲಿ)	21,960	20,949	23,100
ಮಿಷನ್ ಶಕ್ತಿ (₹ಕೋಟಿಗಳಲ್ಲಿ)	3,150	2,000	3,605

'ಶೀ ಮಾರ್ಟ್'ಗಳ ಸ್ಥಾಪನೆಗೆ ಒಲವು

ನವದೆಹಲಿ (ಪಿಟಿಐ): 'ಲಕ್‌ಪತಿ ದೀದಿ' ಕಾರ್ಯಕ್ರಮದ ಯಶಸ್ಸಿನ ಬೆನ್ನಲ್ಲೇ, ಮಹಿಳಾ ಉದ್ಯಮಿಗಳಿಗೆ ಅನುಕೂಲವಾಗುವಂತೆ ಸ್ವಸಹಾಯ ಸಂಘಗಳ ಮಾಲೀಕತ್ವದಲ್ಲಿ 'ಬಿಡಿ ಮಳಿಗೆ' ಸ್ಥಾಪಿಸುವ ಕಾರ್ಯಕ್ಕೆ ಕೇಂದ್ರ ಸರ್ಕಾರ ಉತ್ತೇಜನ ನೀಡಲಿದೆ.

ಕೇಂದ್ರ ಬಜೆಟ್‌ನಲ್ಲಿ ಈ ವಿಷಯವನ್ನು ಪ್ರಕಟಿಸಿರುವ ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು, ಮಹಿಳಾ ಸ್ವಸಹಾಯ ಸಂಘಗಳ (ಎಸ್‌ಎಚ್‌ಜಿ) ಉದ್ಯಮಗಳ ಮಾಲೀಕತ್ವವನ್ನು ಹೊಂದುವ ನಿಟ್ಟಿನಲ್ಲಿ ಈ ಕ್ರಮವು ಮಹತ್ವದ ಹೆಜ್ಜೆಯಾಗಿದೆ ಎಂದು ಪ್ರತಿಪಾದಿಸಿದರು.

'ಶೀ ಮಾರ್ಟ್' ಎಂದು ಹೇಳಲಾಗುವ ಈ ಬಿಡಿ ಮಳಿಗೆಗಳನ್ನು ಕ್ಲಸ್ಟರ್ ಹಂತದ ಒಕ್ಕೂಟಗಳ ನೇತೃತ್ವದಲ್ಲಿ ನವೀನ ಆರ್ಥಿಕ ನೆರವಿನ ವ್ಯವಸ್ಥೆ ಮೂಲಕ ಸ್ಥಾಪಿಸಲಾಗುವುದು ಎಂದರು.

ಒಂದು ಲಕ್ಷ ರೂಪಾಯಿ ಆದಾಯ ಗಳಿಸುವ ಸ್ವಸಹಾಯ ಸಂಘಗಳ (ಎಸ್‌ಎಚ್‌ಜಿ) ಸದಸ್ಯೆಯರನ್ನು ಪ್ರಸ್ತುತ 'ಲಕ್‌ಪತಿ ದೀದಿ' ಎಂದು ಗುರುತಿಸಲಾಗುತ್ತದೆ.

ಗ್ರಾಮೀಣ ಅಭಿವೃದ್ಧಿ ಸಚಿವಾಲಯದ ಮಾಹಿತಿ ಪ್ರಕಾರ, ಇದುವರೆಗೂ ಸುಮಾರು ಎರಡು ಕೋಟಿ ಮಹಿಳೆಯರು ವಾರ್ಷಿಕ ಒಂದು ಲಕ್ಷ ಆದಾಯ ಗಳಿಸಿದ ಹಿರಿಮೆಗೆ ಪಾತ್ರರಾಗಿದ್ದಾರೆ. 2027ರ ವೇಳೆಗೆ ಇವರ ಸಂಖ್ಯೆ 3 ಕೋಟಿ ದಾಟಬೇಕು ಎಂಬುದು ಕೇಂದ್ರದ ಗುರಿಯಾಗಿದೆ.

ಅಲ್ಲದೆ, ಯುವಜನರನ್ನು ಮುಖ್ಯವಾಗಿ ಗ್ರಾಮೀಣ ಭಾಗದ ಯುವಜನರಿಗೆ ಖಾದಿ, ಕೈಮಗ್ಗ, ಕರಕುಶಲ ಕ್ಷೇತ್ರಗಳಿಗೆ ಉತ್ತೇಜನ ನೀಡಲು 'ಮಹಾತ್ಮಗಾಂಧಿ ಗ್ರಾಮ ಸ್ವರಾಜ್' ಕಾರ್ಯಕ್ರಮವನ್ನು ಕೇಂದ್ರವು ಬಜೆಟ್‌ನಲ್ಲಿ ಪ್ರಕಟಿಸಿದೆ.

ಈ ಮೂಲಕ, ಉತ್ಪನ್ನಗಳಿಗೆ ಮಾರುಕಟ್ಟೆ, ಬ್ರ್ಯಾಂಡ್ ಸೇವೆ ಒದಗಿಸುವುದು ಹಾಗೂ ತರಬೇತಿ, ಕೌಶಲ, ಉತ್ಪಾದನಾ ಪ್ರಕ್ರಿಯೆಯ ಗುಣಮಟ್ಟ ಏರಿಕೆಗೆ ಒತ್ತು ನೀಡಲಾಗುತ್ತದೆ. ಇದು, ಗ್ರಾಮೀಣ ಭಾಗದ ಉದ್ಯಮಗಳಿಗೆ 'ಒಂದು ಜಿಲ್ಲೆ ಒಂದು ಉತ್ಪನ್ನ' ಯೋಜನೆಯ ಲಾಭ ಪಡೆಯಲು ಹೆಚ್ಚು ಅನುಕೂಲಕರವಾಗಲಿದೆ ಎಂದು ಕೇಂದ್ರ ಪ್ರತಿಪಾದಿಸಿದೆ.

ಮುಖ್ಯಾಂಶಗಳು

- ಮಹಿಳಾ ಸ್ವ ಸಹಾಯ ಸಂಘಗಳಿಗೆ ಉತ್ತೇಜನ
- ಲಕ್‌ಪತಿ ದೀದಿಗಳ ಸಂಖ್ಯೆಯನ್ನು 2027ರ ವೇಳೆಗೆ 3 ಕೋಟಿ ದಾಟಿಸುವ ಗುರಿ
- ಖಾದಿ, ಕೈಮಗ್ಗ ವಲಯದ ಉತ್ತೇಜನಕ್ಕಾಗಿ 'ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್'



ಬಟ್ಟೆ ತಯಾರಿಕೆಯಲ್ಲಿ ನಿರತವಾಗಿರುವ ಸ್ವಸಹಾಯ ಸಂಘಗಳ ಮಹಿಳೆಯರು

ಸಂಗ್ರಹ ಚಿತ್ರ

ಯಾವ ವಲಯಕ್ಕೆ ಎಷ್ಟು?

ರಕ್ಷಣೆ (₹ಲಕ್ಷ ಕೋಟಿಗಳಲ್ಲಿ): 6.81 (2025-26), 7.85 (2026-27)

(₹ಕೋಟಿಗಳಲ್ಲಿ)

	2025-26 ಬಜೆಟ್ ಅಂದಾಜು	2025-26 ಪರಿಷ್ಕೃತ ಅಂದಾಜು	2026-27 ಬಜೆಟ್ ಅಂದಾಜು
ಶಿಕ್ಷಣ	1,28,650	1,21,949	1,39,289
ಆರೋಗ್ಯ	98,311	94,625	1,04,599
ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ	26,889	24,374	28,183

ಎ.ಐ, ಗೇಮಿಂಗ್‌ಗೆ ಒತ್ತು



ನವದೆಹಲಿ (ಪಿಟಿಐ): 'ಅನಿಮೇಶನ್, ವಿಷುವಲ್ ಎಫೆಕ್ಟ್ಸ್, ಗೇಮಿಂಗ್ ಹಾಗೂ ಕಾಮಿಕ್ಸ್ (ಎವಿಜಿಸಿ) ಕ್ಷೇತ್ರವು ಭಾರತದಲ್ಲಿ ವೇಗವಾಗಿ ಬೆಳೆಯುತ್ತಿದೆ. ಅಗಾಧ ಉದ್ಯೋಗಾವಕಾಶಗಳು ಸೃಷ್ಟಿಯಾಗುವ ಸಾಧ್ಯತೆಗಳು ಇವೆ. ಸಮೀಕ್ಷೆ ಪ್ರಕಾರ, 2030ರ ವೇಳೆಗೆ ಈ ಕ್ಷೇತ್ರಕ್ಕೆ ಸಂಬಂಧಿಸಿದ 20 ಲಕ್ಷ ವೃತ್ತಿಪರರ ಅಗತ್ಯ ಕಂಡುಬರಲಿದೆ' ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಹೀಗಾಗಿ, ಈ ಕ್ಷೇತ್ರಕ್ಕೆ ಉತ್ತೇಜನ ನೀಡಲು ದೇಶದ 15 ಸಾವಿರ ಶಾಲೆ ಹಾಗೂ 500 ಕಾಲೇಜುಗಳಲ್ಲಿ 'ಎವಿಜಿಸಿ ಕಂಟೆಂಟ್ ಕ್ರಿಯೇಟರ್ ಲ್ಯಾಬ್' ಸ್ಥಾಪನೆಗೆ ಒತ್ತು ನೀಡಲಾಗುತ್ತದೆ. ಮುಂಬೈನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಕ್ರಿಯೇಟಿವ್ ಟೆಕ್ನಾಲಜೀಸ್ ಈ ಲ್ಯಾಬ್‌ಗಳನ್ನು ಸ್ಥಾಪಿಸಲಿದೆ ಎಂದೂ ಅವರು ಪ್ರಕಟಿಸಿದ್ದಾರೆ.

ಪ್ರಸಕ್ತ ದಿನಗಳಲ್ಲಿ ಹೆಚ್ಚಿನ ಕ್ಷೇತ್ರಗಳಲ್ಲಿ ಕೃತಕ ಬುದ್ಧಿಮತ್ತೆ (ಎ.ಐ) ಬಳಕೆ ವ್ಯಾಪಕವಾಗುತ್ತಿದೆ. ರೈತರು, ವಿದ್ಯಾರ್ಥಿಗಳು, ಆರೋಗ್ಯ ಸೇವೆ ಕಾರ್ಯಕರ್ತರು ಸೇರಿ ಎಲ್ಲ ಕ್ಷೇತ್ರದವರಿಗೂ ಎ.ಐ ಪ್ರಯೋಜನ ಸಿಗುವಂತಾಗಬೇಕು. ಇದಕ್ಕಾಗಿ ನಿಯಮಾವಳಿ ರೂಪಿಸುವುದಾಗಿ ಹೇಳಿದ್ದಾರೆ.

ಅನುಸಂಧಾನ ನ್ಯಾಷನಲ್ ರಿಸರ್ಚ್ ಫಂಡ್, ಸಂಶೋಧನೆ ಮತ್ತು ಅಭಿವೃದ್ಧಿ (ಆರ್ ಅಂಡ್ ಡಿ) ಹಾಗೂ ಇತರ ನಿಧಿಗಳ ಮೂಲಕ ಎ.ಐ, ಮಷಿನ್ ಲರ್ನಿಂಗ್, ಕ್ವಾಂಟಮ್ ಕಂಪ್ಯೂಟಿಂಗ್ ಕ್ಷೇತ್ರಕ್ಕೆ ನೆರವು ನೀಡುವುದನ್ನು ಪ್ರಸ್ತಾಪಿಸಿದ್ದಾರೆ.

ಎ.ಐ ಸೇರಿ ಆಧುನಿಕ ತಂತ್ರಜ್ಞಾನಗಳಿಂದ ಉದ್ಯೋಗ, ಕೌಶಲದ ಅಗತ್ಯತೆ ಮೇಲಿನ ಪರಿಣಾಮಗಳ ಮೌಲ್ಯಮಾಪನಕ್ಕಾಗಿ 'ಶಿಕ್ಷಣದಿಂದ ಉದ್ಯೋಗ ಹಾಗೂ ಉದ್ಯಮಶೀಲತೆ' ಕುರಿತ ಉನ್ನತಾಧಿಕಾರ ಸ್ಥಾಯಿ ಸಮಿತಿ ರಚಿಸುವ ಉದ್ದೇಶವಿದೆ ಎಂದೂ ಅವರು ಹೇಳಿದ್ದಾರೆ.

ಅಂಗವಿಕಲರಿಗಾಗಿ ಎ.ಐ ಆಧಾರಿತ ಸಾಧನಗಳನ್ನು ಅಭಿವೃದ್ಧಿಪಡಿಸಲಾಗುವುದು. ಇದಕ್ಕಾಗಿ ಭಾರತ ಕೃತಕ ಅಂಗ ತಯಾರಿಕಾ ನಿಗಮಕ್ಕೆ (ಎಎಲ್ಐಎಂಸಿಒ) ನೆರವು ನೀಡಲಾಗುವುದು ಎಂದು ಪ್ರಕಟಿಸಿದ್ದಾರೆ.

ದೇಶದ ಪ್ರಮುಖ ಬಂದರುಗಳಲ್ಲಿ ಕಂಟೇನರುಗಳ ಸ್ಕ್ಯಾನಿಂಗ್ ನಡೆಸಲು ಕೃತಕ ಬುದ್ಧಿಮತ್ತೆ (ಎ.ಐ) ತಂತ್ರಜ್ಞಾನ ಬಳಸಲಾಗುವುದು. ಈ ಸೌಲಭ್ಯವನ್ನು ಹಂತಹಂತವಾಗಿ ಜಾರಿಗೊಳಿಸಲಾಗುವುದು ಎಂದು ಪ್ರಸ್ತಾಪಿಸಿದ್ದಾರೆ.

'ಕೃತಕ ಬುದ್ಧಿಮತ್ತೆಯು ಉತ್ತಮ ಆಡಳಿತಕ್ಕೆ ವೇಗವರ್ಧಕವಾಗಿ ಕೆಲಸ ಮಾಡಲಿದೆ' ಆಡಳಿತದ ಎಲ್ಲ ಹಂತಗಳಲ್ಲಿ ಎ.ಐ ಬಳಕೆ ಸಾಧ್ಯವಾಗುವಂತಾಗಲು ಕ್ರಮ ಕೈಗೊಳ್ಳಲಾಗುವುದು ಎಂದು ಸಚಿವೆ ನಿರ್ಮಲಾ ಸೀತಾರಾಮನ್ ಪ್ರಕಟಿಸಿದ್ದಾರೆ.

ರಕ್ಷಣಾ ಕ್ಷೇತ್ರದಲ್ಲಿ ಪರಿವರ್ತನೆಯ ಘಟ್ಟ



ವಿಶ್ಲೇಷಣೆ

ಆದ್ಯಾ ಮಾಧವನ್

ಜಾಗತಿಕ ಮಟ್ಟದಲ್ಲಿ ಆಗುತ್ತಿರುವ ಬದಲಾವಣೆಗಳು, ಭಾರತವು ಪಾಕಿಸ್ತಾನದ ಜೊತೆ ಹೊಂದಿರುವ ಸಂಘರ್ಷದ ಹಿನ್ನೆಲೆಯಲ್ಲಿ ಈ ಬಾರಿಯ ಬಜೆಟ್‌ನಲ್ಲಿ ರಕ್ಷಣಾ ವಲಯದ ಬಗ್ಗೆ ಯಾವ ಘೋಷಣೆಗಳು ಇರಬಹುದು ಎಂಬ ಕುರಿತಾಗಿ ಬಹಳಷ್ಟು ನಿರೀಕ್ಷೆಗಳಿದ್ದವು. ಮುಂಬರುವ ಹಣಕಾಸು ವರ್ಷಕ್ಕೆ ಕೇಂದ್ರ ಸರ್ಕಾರ ರಕ್ಷಣಾ ಕ್ಷೇತ್ರಕ್ಕೆ ನಿಗದಿ ಮಾಡಿರುವ ಒಟ್ಟು ಮೊತ್ತವು ₹7.84 ಲಕ್ಷ ಕೋಟಿ ಆಗಿದೆ.

ಕಳೆದ ಕೆಲವು ವರ್ಷಗಳಿಂದ ರಕ್ಷಣಾ ಕ್ಷೇತ್ರಕ್ಕೆ ನಿಗದಿ ಮಾಡುವ ಮೊತ್ತದಲ್ಲಿ ಸ್ಥಿರವಾಗಿ, ಹಂತ ಹಂತವಾಗಿ ಹೆಚ್ಚಳ ಮಾಡಲಾಗಿದೆ. ಆದರೆ ಜಿಡಿಪಿ ಜೊತೆ ಹೋಲಿಸಿದಾಗ ಕಳೆದ ವರ್ಷದವರೆಗೆ ರಕ್ಷಣಾ ಕ್ಷೇತ್ರಕ್ಕೆ ನಿಗದಿ ಮಾಡಿದ ಪ್ರಮಾಣ ನಿಧಾನವಾಗಿ ಕಡಿಮೆ ಆಗುತ್ತಿತ್ತು. ರಕ್ಷಣಾ ಕ್ಷೇತ್ರಕ್ಕೆ ಮಾಡುವ ವೆಚ್ಚವು ಜಿಡಿಪಿಯ ಶೇ 3ರಷ್ಟಕ್ಕೆ ನಿಗದಿ ಮಾಡಬೇಕು ಎಂದು ತಜ್ಞರು ಆಗ್ರಹಿಸುತ್ತಿದ್ದಾರೆ. ಈಗ, 2020ರ ನಂತರ ಇದೇ ಮೊದಲ ಬಾರಿಗೆ ಪ್ರಮಾಣದಲ್ಲಿ ಗಣನೀಯ ಹೆಚ್ಚಳ ಆಗಿದೆ, ಅದು ಜಿಡಿಪಿಯ ಶೇ 1.91ರ ಮಟ್ಟದಿಂದ ಏರಿಕೆ ಕಂಡಿದೆ.


ಕುತೂಹಲಕರ ವಿಷಯವೆಂದರೆ, ವರ್ಷದಿಂದ ವರ್ಷಕ್ಕೆ ಏರಿಕೆಯು ಕಳೆದ ಒಂದು ದಶಕದಲ್ಲಿ ಹಂತ ಹಂತವಾಗಿ ಆಗುತ್ತಿದ್ದರೂ, ವಾರ್ಷಿಕ ಹಣದುಬ್ಬರ ಪ್ರಮಾಣಕ್ಕೆ ಸರಿಹೊಂದಿಸಿ ನೋಡಿದರೆ, ಏರಿಕೆಯ ಪ್ರಮಾಣ ಅಷ್ಟೊಂದು ಇಲ್ಲದಿರುವುದು ಗೊತ್ತಾಗುತ್ತದೆ.

ಈ ವರ್ಷದ ಬಜೆಟ್‌ನಲ್ಲಿ ರಕ್ಷಣಾ ವಲಯಕ್ಕೆ ನಿಗದಿ ಮಾಡಿರುವ ₹7.8 ಲಕ್ಷ ಕೋಟಿಯು ಕಳೆದ ವರ್ಷದ ₹6.81 ಲಕ್ಷ ಕೋಟಿಗಿಂತ ಶೇ 15.2ರಷ್ಟು ಹೆಚ್ಚು. ಇದನ್ನು 2025-26ನೇ ಸಾಲಿನ ಅಂದಾಜು ಹಣದುಬ್ಬರ ಪ್ರಮಾಣವಾದ ಶೇ 4ರ ಜೊತೆ ಹೋಲಿಸಿದಾಗ, 'ನಿಜವಾದ' ಖರೀದಿ ವೆಚ್ಚವು ಶೇ 11ರಷ್ಟು ಹೆಚ್ಚಾಗುತ್ತದೆ. ಇದು ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ವರ್ಷವೊಂದರಲ್ಲಿ ಆಗಿರುವ ದೊಡ್ಡ ಏರಿಕೆ.

ಈ ವರ್ಷದ ಬಜೆಟ್‌ನಲ್ಲಿ ರಕ್ಷಣಾ ಕ್ಷೇತ್ರದ ಪಾಲು ಶೇ 14.6ರಷ್ಟಿದೆ. ಇದರಲ್ಲಿ ₹2.19 ಲಕ್ಷ ಕೋಟಿ ಮೊತ್ತ ಬಂಡವಾಳ ವೆಚ್ಚಗಳಿಗೆ ವಿನಿಯೋಗವಾಗಲಿದೆ. ಪರಿಷ್ಕೃತ ಅಂದಾಜು ಮೊದಲ ಅಂದಾಜಿಗಿಂತ ಹೆಚ್ಚಾಗುತ್ತದೆಯಾದರೂ, 2025ರಲ್ಲಿ 'ಸಿಂಧೂರ ಕಾರ್ಯಾಚರಣೆ'ಯ ನಂತರದ ತುರ್ತು ಖರೀದಿಗಳ ಕಾರಣದಿಂದಾಗಿ ವೆಚ್ಚಗಳು ತುಸು ಜಾಸ್ತಿ ಆಗಿರಬಹುದು. ಹಿಂದಿನ ವರ್ಷದ ಬಜೆಟ್‌ನಲ್ಲಿ ಬಂಡವಾಳ ವೆಚ್ಚಗಳಿಗೆ ಆರಂಭದಲ್ಲಿ ₹1.80 ಲಕ್ಷ ಕೋಟಿ ಇರಿಸಲಾಗಿತ್ತು. ನಂತರ ಇದು ₹1.86 ಲಕ್ಷ ಕೋಟಿಗೆ ಹೆಚ್ಚಾಯಿತು. ಆ ಮೊತ್ತಗಳಿಗೆ ಹೋಲಿಸಿದರೆ ಈ ಬಾರಿ ನಿಗದಿ ಮಾಡಿರುವ ಮೊತ್ತ ದೊಡ್ಡದು. ಈ ಬಾರಿಯದ್ದು ರಕ್ಷಣಾ ವಲಯದ ಆಧುನೀಕರಣಕ್ಕೆ ನಿಗದಿ ಮಾಡಿರುವ ಅತಿದೊಡ್ಡ ಮೊತ್ತ.

ಒಟ್ಟಾರೆ ಬಂಡವಾಳ ವೆಚ್ಚದಲ್ಲಿ ರಕ್ಷಣಾ ವಲಯದ ಬಂಡವಾಳ ವೆಚ್ಚವು ಶೇ 18ರಷ್ಟು ಇರಲಿದೆ. ಈ ಬಾರಿಯ ರಕ್ಷಣಾ ಬಜೆಟ್‌ನಲ್ಲಿ ಬಂಡವಾಳ ವೆಚ್ಚಕ್ಕಾಗಿನ ಮೊತ್ತವು ಶೇ 27.9ರಷ್ಟಾಗುತ್ತದೆ. ಪಿಂಚಣಿಗೆ ನೀಡುವ ಮೊತ್ತವು ನಿಧಾನವಾಗಿ ಹೆಚ್ಚುತ್ತಿದ್ದರೂ, ರಕ್ಷಣಾ ವಲಯಕ್ಕೆ ನೀಡಿರುವ ಒಟ್ಟು ಮೊತ್ತ ಹೆಚ್ಚಾಗಿರುವ ಪರಿಣಾಮವಾಗಿ ಪಿಂಚಣಿಗಾಗಿ ಮೀಸಲಾಗಿ ಇಟ್ಟಿರುವ ಪ್ರಮಾಣವು ಕಡಿಮೆ ಆದಂತಾಗುತ್ತದೆ. ಬದ್ಧ ವೆಚ್ಚಗಳಿಗಿಂತಲೂ ಬಂಡವಾಳ ವೆಚ್ಚವು ನಿಧಾನವಾಗಿಯಾದರೂ ಸುಧಾರಿಸುತ್ತಿದೆ.

ಆಧುನೀಕರಣ ಹಾಗೂ ಖರೀದಿಗೆ ಗಮನ ನೀಡಲಾಗುತ್ತದೆ ಎಂದು ಹಣಕಾಸು ಸಚಿವರು ಹೇಳಿದ್ದಾರೆ. ಅದರಲ್ಲೂ ವಿಮಾನ ಹಾಗೂ ವಿಮಾನಗಳ ಎಂಜಿನ್‌ಗೆ ₹63,733 ಕೋಟಿ, ಯುದ್ಧ ನೌಕೆಗಳಿಗೆ ₹25,023 ಕೋಟಿ ನಿಗದಿ ಮಾಡಲಾಗಿದೆ. ಫ್ರಾನ್ಸ್‌ನಿಂದ 114 ರಫೇಲ್ ಯುದ್ಧ ವಿಮಾನಗಳನ್ನು ಖರೀದಿಸುವ ಘೋಷಣೆ ಆದ ನಂತರದಲ್ಲಿ ಈ ಕ್ರಮಗಳು ಬಂದಿವೆ. ಬಂಡವಾಳ ವೆಚ್ಚದಲ್ಲಿ ಹೆಚ್ಚಿನ ಪಾಲು ದೇಶಿ ಉತ್ಪಾದನೆಗೆ ಮತ್ತು ದೇಶಿ ಉದ್ಯಮಗಳಿಂದ ಖರೀದಿಗೆ ಮೀಸಲಾಗಿ ಇರಿಸಲಾಗಿದೆ ಎಂಬುದು ಇಲ್ಲಿ ಗಮನಾರ್ಹ. ಜಾಗತಿಕ ಮಟ್ಟದಲ್ಲಿ ಪೂರೈಕೆ ವ್ಯವಸ್ಥೆಯಲ್ಲಿನ ಅಡಚಣೆಗಳ ಸಂದರ್ಭದಲ್ಲಿ ಈ ಕ್ರಮವು ನಿರೀಕ್ಷಿತವೇ.



2026-27ನೇ ಸಾಲಿನ ಬಜೆಟ್ ಒಂದು ಪರಿವರ್ತನೆಯ ಹಂತದಂತಿದೆ. ಆದರೆ ಬಜೆಟ್‌ನಲ್ಲಿ ಹೇಳಿದ ಮಾತುಗಳ ಅನುಷ್ಠಾನ, ಕಾಲಮಿತಿ, ವೆಚ್ಚ ಹೆಚ್ಚು ಮಾಡದೆ ಹೇಳಿದ್ದನ್ನು ತಯಾರಿಸಿಕೊಡುವ ದೇಶಿ ಕಂಪನಿಗಳ ಸಾಮರ್ಥ್ಯ ಆಧುನೀಕರಣದ ಗತಿಯನ್ನು ನಿರ್ಧರಿಸಲಿವೆ. ಚೀನಾ ಮತ್ತು ಪಾಕಿಸ್ತಾನದ ಕಡೆಯಿಂದ ಎದುರಾಗುವ ಸವಾಲುಗಳು ಇರುತ್ತವೆ. ಹೀಗಾಗಿ ಮುಂದಿನ ದಿನಗಳಲ್ಲಿ ರಕ್ಷಣಾ ಕ್ಷೇತ್ರಕ್ಕೆ ಎಷ್ಟು ವೆಚ್ಚ ಮಾಡಲಾಗುತ್ತದೆ ಎಂಬುದು ಕೂಡ ಈಗಿನ ಉಮೇದು ಉಳಿಯುತ್ತದೆಯೇ ಎಂಬುದನ್ನು ತೀರ್ಮಾನಿಸುತ್ತದೆ.

ಲೇಖಕಿ ಬೆಂಗಳೂರಿನ ತಕ್ಷಶಿಲಾ ಇನ್‌ಸ್ಟಿಟ್ಯೂಷನ್‌ನಲ್ಲಿ ಸಂಶೋಧನಾ ವಿಶ್ಲೇಷಕಿ



ಯುವ ಜನತೆಗೆ ವಿಪುಲ ಅವಕಾಶ, ರೈತರಿಗೆ ರಕ್ಷಣೆ, ಉದ್ಯಮಿಗಳಿಗೆ ಪ್ರೋತ್ಸಾಹ ಹಾಗೂ ಮಧ್ಯಮ ವರ್ಗದವರಿಗೆ ನಿರಾಳತೆ ಒದಗಿಸುವುದರ ಜತೆಗೆ ಕಾರ್ಮಿಕರಿಗೆ ಗೌರವ ತಂದುಕೊಟ್ಟ ಬಜೆಟ್ ಇದಾಗಿದೆ. ಉತ್ಪಾದನೆ, ಉದ್ಯೋಗಕ್ಕೆ ಹೊಸ ವೇಗ ನೀಡಿದೆ
ಯೋಗಿ ಆದಿತ್ಯನಾಥ, ಉತ್ತರಪ್ರದೇಶ ಮುಖ್ಯಮಂತ್ರಿ



ಆಡಳಿತಾರೂಢ ಪಕ್ಷದ ನೀತಿ, ಉದ್ದೇಶಗಳ ಪ್ರತಿಬಿಂಬದಂತಿರುವ ಈ ಬಜೆಟ್ ನಿಜಕ್ಕೂ ಬಡವರ ಪರವಾದ ಹಾಗೂ ರಾಷ್ಟ್ರೀಯ ಹಿತಾಸಕ್ತಿಯ ನಿಲುವು ಹೊಂದಿದೆಯೇ? ಅಥವಾ ಬಂಡವಾಳಶಾಹಿ ಮನಃಸ್ಥಿತಿಯಲ್ಲಿ ಸ್ಥಿತಿವಂತರ ಪರವಾಗಿದೆಯೇ ಎಂಬ ಪ್ರಶ್ನೆಯನ್ನು ಹುಟ್ಟುಹಾಕಿದೆ
ಮಾಯಾವತಿ, ಬಿಎಸ್‌ಪಿ ಮುಖ್ಯಸ್ಥೆ




ಸಮಾಜದ ಎಲ್ಲಾ ಸ್ತರಗಳಿಗೂ ಅನ್ವಯವಾಗುವಂತಹ ಬಜೆಟ್ ಇದಾಗಿದ್ದು, ವ್ಯಾಪಾರ ಮತ್ತು ಉದ್ಯಮದಲ್ಲಿ ಹೊಸ ಆಯಾಮಗಳನ್ನು ಅನ್ವೇಷಿಸಲು ಉತ್ತೇಜನ ನೀಡಿದೆ. ವಿಶೇಷವಾಗಿ ಯುವಜನತೆಗೆ ಉದ್ಯೋಗ ಸೃಷ್ಟಿಸಲು ಒತ್ತು ನೀಡಲಾಗಿದೆ
ರೇಖಾ ಗುಪ್ತಾ, ದೆಹಲಿ ಮುಖ್ಯಮಂತ್ರಿ



ನಿರುದ್ಯೋಗಿ ಯುವಜನತೆ, ರೈತರು, ಶ್ರಮಿಕರು, ಎಸ್‌ಸಿ–ಎಸ್‌ಟಿ, ಒಬಿಸಿಗಳ ಬಗ್ಗೆ ಬಜೆಟ್‌ನಲ್ಲಿ ಸೊಲ್ಲೆತ್ತಿಲ್ಲ. ಕಾರ್ಮಿಕ ವಲಯ, ಸಾಮಾಜಿಕ ವಲಯ, ವಿರೋಧ ಪಕ್ಷ ಆಡಳಿತವಿರುವ ರಾಜ್ಯಗಳ ಕುರಿತು ಒಂದೂ ಮಾತು ಆಡಿಲ್ಲ
ರಣದೀಪ್ ಸುರ್ಜೇವಾಲ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



ಬಜೆಟ್‌ಗೆ ಸಂಬಂಧಿಸಿದಂತೆ ಸೃಷ್ಟಿಸಿದ್ದ ನಿರೀಕ್ಷೆ ಹುಸಿಯಾಗಿದೆ. ಇದೊಂದು ನೀರಸ ಮತ್ತು ಪಾರದರ್ಶಕವಲ್ಲದ ಬಜೆಟ್. ಪ್ರಮುಖ ಯೋಜನೆಗಳು, ಕಾರ್ಯಕ್ರಮಗಳಿಗೆ ಎಷ್ಟೆಷ್ಟು ಅನುದಾನ ಹಂಚಿಕೆಯಾಗಿದೆ ಎಂಬ ಬಗ್ಗೆ ಸ್ಪಷ್ಟತೆ ಇಲ್ಲ
ಜೈರಾಮ್ ರಮೇಶ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ



ಉತ್ಪಾದನಾ ಕ್ಷೇತ್ರದಲ್ಲಿ ನಮ್ಮ ಸ್ಥಾನ ಬಲಪಡಿಸಿ, ಸ್ವಾವಲಂಬನೆ ಸಾಧಿಸಲು ಪೂರಕವಾಗಿರುವ ಬಜೆಟ್ ಇದಾಗಿದ್ದು, ಎಂಎಸ್‌ಎಂಇಗಳನ್ನು ಉತ್ತೇಜಿಸುವಲ್ಲಿ ಮಹತ್ತರ ಪಾತ್ರ ವಹಿಸಲಿದೆ. ರೈತರು, ಯುವಕರು ಮತ್ತು ಮಹಿಳೆಯರಿಗೆ ಆದ್ಯತೆ ನೀಡಲಾಗಿದೆ
ಚಂದ್ರಬಾಬು ನಾಯ್ಡು, ಆಂಧ್ರಪ್ರದೇಶ ಮುಖ್ಯಮಂತ್ರಿ



2026-27 ಕೇಂದ್ರ ಬಜೆಟ್

ಪಿಐಎಸ್ ಮೂಲಕ ಷೇರುಗಳಲ್ಲಿ ಹೂಡಿಕೆ: ಎನ್‌ಆರ್‌ಐಗಳಿಗೆ ಅವಕಾಶ



ನವದೆಹಲಿ: ಅನಿವಾಸಿ ಭಾರತೀಯರು 'ಪೋರ್ಟ್‌ಫೋಲಿಯೊ ಇನ್ವೆಸ್ಟ್‌ಮೆಂಟ್ ಸ್ಕೀಂ' (ಪಿಐಎಸ್) ಮೂಲಕ ಭಾರತೀಯ ಷೇರುಗಳಲ್ಲಿ ಹೂಡಿಕೆ ಮಾಡಬಹುದು ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಭಾರತೀಯ ಷೇರು ಮಾರುಕಟ್ಟೆಗಳು ನಿರ್ಣಾಯಕ ಹಂತದಲ್ಲಿರುವಾಗ ಈ ಘೋಷಣೆ ಹೊರಬಿದ್ದಿದೆ. ವಿದೇಶಿ ಹೂಡಿಕೆದಾರರು 2025ರಲ್ಲಿ ₹1,900 ಕೋಟಿ ಮತ್ತು 2026ರ ಜನವರಿಯಲ್ಲಿ ₹400 ಕೋಟಿಯನ್ನು ಹಿಂಪಡೆದಿದ್ದಾರೆ. ಈ ಯೋಜನೆಯಡಿ ಹೂಡಿಕೆ ಮಾಡಲು ಹೂಡಿಕೆದಾರರು ಆರ್‌ಬಿಐನಿಂದ ಅನುಮೋದಿಸಲ್ಪಟ್ಟ ಬ್ಯಾಂಕ್‌ನಲ್ಲಿ ವಿಶೇಷ ಪಿಐಎಸ್ ಖಾತೆಯನ್ನು ಹೊಂದಿರಬೇಕು. ಒಬ್ಬ ವ್ಯಕ್ತಿಯು ಒಂದು ಕಂಪನಿಯಲ್ಲಿ ಗರಿಷ್ಠ ಶೇ 5ರಷ್ಟು ಮಾತ್ರ ಹೂಡಿಕೆ ಮಾಡಬಹುದು. ಇಡೀ ಕಂಪನಿಯಲ್ಲಿ ಒಟ್ಟು ಅನಿವಾಸಿ ಹೂಡಿಕೆ ಮಿತಿಯು ಸಾಮಾನ್ಯವಾಗಿ ಶೇ 10 ಆಗಿರುತ್ತದೆ.

ಸ್ಥಿರಾಸ್ತಿ: ಟಿಎಎನ್ ಸಂಖ್ಯೆ ಅಗತ್ಯವಿಲ್ಲ

ಅನಿವಾಸಿ ಭಾರತೀಯರಿಂದ ಸ್ಥಿರಾಸ್ತಿ ಖರೀದಿಸುವ ವ್ಯಕ್ತಿಗಳು ಇನ್ನು ಮುಂದೆ ತೆರಿಗೆ ಕಡಿತಕ್ಕಾಗಿ 'ತೆರಿಗೆ ಕಡಿತ ಮತ್ತು ಸಂಗ್ರಹ ಖಾತೆ ಸಂಖ್ಯೆ' (ಟಿಎಎನ್) ವಿವರಗಳನ್ನು ನೀಡುವ ಅಗತ್ಯವಿಲ್ಲ ಎಂದು ಕೇಂದ್ರ ಸರ್ಕಾರ ಬಜೆಟ್‌ನಲ್ಲಿ ಪ್ರಸ್ತಾಪಿಸಿದೆ.


ಈ ಮೊದಲು ಅನಿವಾಸಿ ಭಾರತೀಯರಿಂದ ಆಸ್ತಿ ಖರೀದಿಸುವಾಗ ಟಿಎಎನ್ ಸಂಖ್ಯೆ ನೀಡಬೇಕಿತ್ತು. ಆದರೆ, ಈಗ ಪ್ಯಾನ್ ಕಾರ್ಡ್ ಮೂಲಕವೇ ಈ ಪ್ರಕ್ರಿಯೆ ಮುಗಿಸಬಹುದು. ಇದು ಅಕ್ಟೋಬರ್ 1ರಿಂದ ಜಾರಿಗೆ ಬರಲಿದೆ.

ನಕ್ಸಲರ ನಿರ್ಮೂಲನೆ: ₹3,610 ಕೋಟಿ

ನವದೆಹಲಿ (ಪಿಟಿಐ): ನಕ್ಸಲರ ನಿರ್ಮೂಲನೆಯ ಕಾರ್ಯತಂತ್ರದ ಭಾಗವಾಗಿ ಭದ್ರತೆ ಮತ್ತು ಮೂಲಸೌಕರ್ಯ ವೆಚ್ಚಗಳಿಗಾಗಿ ಬಜೆಟ್‌ನಲ್ಲಿ ₹3,610.80 ಕೋಟಿ ಮೀಸಲಿಡಲಾಗಿದೆ.

ಕಳೆದ ವರ್ಷ ₹3,006.56 ಕೋಟಿ ಘೋಷಿಸಲಾಗಿತ್ತು. ಈ ಸಾಲಿನಲ್ಲಿ ಶೇ 20ರಷ್ಟು ಹೆಚ್ಚಿನ ಹಣವನ್ನು ಮೀಸಲಿಡಲಾಗಿದೆ. ಮಾರ್ಚ್ 31ರೊಳಗೆ ದೇಶದಿಂದ ನಕ್ಸಲರ ನಿರ್ಮೂಲನೆ ಮಾಡುವ ಗುರಿಯನ್ನು ಗೃಹ ಸಚಿವಾಲಯ ಹೊಂದಿದೆ.

ರೂಪಾಯಿ ಲೆಕ್ಕಾಚಾರ





ಏಳು ವಲಯ ಪ್ರಗತಿಗೆ ಒತ್ತು

ಉತ್ಪಾದನೆ

ಉತ್ಪಾದನೆ ಮತ್ತು ಸ್ಪರ್ಧಾತ್ಮಕತೆಯನ್ನು ಹೆಚ್ಚಿಸುವ ಮೂಲಕ ಆರ್ಥಿಕ ಬೆಳವಣಿಗೆಗೆ ವೇಗ ನೀಡುವ 'ಮೊದಲ ಕರ್ತವ್ಯ'ದ ಭಾಗವಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಆರು ಕ್ಷೇತ್ರಗಳನ್ನು ಆದ್ಯತೆಯನ್ನಾಗಿ ಪರಿಗಣಿಸಿದ್ದಾರೆ. ಅವುಗಳಲ್ಲಿ, ಏಳು ಪ್ರಮುಖ ವಲಯಗಳಲ್ಲಿ ಉತ್ಪಾದನೆ ಹೆಚ್ಚಿಸುವುದು ಮೊದಲ ಆದ್ಯತೆಯಾದರೆ, ಪಾರಂಪರಿಕ ಕೈಗಾರಿಕಾ ಸಮೂಹಗಳನ್ನು ಪುನಶ್ಚೇತನಗೊಳಿಸುವುದು ಎರಡನೆಯ ಆದ್ಯತೆಯಾಗಿದೆ ಎಂದು ಘೋಷಿಸಿದ್ದಾರೆ

ಪಾರಂಪರಿಕ ಕೈಗಾರಿಕಾ ಸಮೂಹಗಳ ಪುನಶ್ಚೇತನ

ಮೂಲಸೌಕರ್ಯ ಮತ್ತು ತಂತ್ರಜ್ಞಾನವನ್ನು ಮೇಲ್ದರ್ಜೆಗೆ ಏರಿಸುವ ಮೂಲಕ ದೇಶದ 200 ಪಾರಂಪರಿಕ ಕೈಗಾರಿಕಾ ಸಮೂಹಗಳನ್ನು ಪುನಶ್ಚೇತನಗೊಳಿಸುವುದು. ಈ ಮೂಲಕ ಅವುಗಳ ಸ್ಪರ್ಧಾತ್ಮಕತೆಯನ್ನು, ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಮುಖ ಯೋಜನೆಯನ್ನೂ ಹಣಕಾಸು ಸಚಿವರು ಬಜೆಟ್‌ನಲ್ಲಿ ಘೋಷಿಸಿದ್ದಾರೆ.

ಪ್ರಮುಖ ಏಳು ವಲಯಗಳು

'ಬಯೋಫಾರ್ಮಾ ಶಕ್ತಿ'

1 ಸಾಂಕ್ರಾಮಿಕವಲ್ಲದ ರೋಗಗಳು ಹೆಚ್ಚುತ್ತಿರುವ ದಿಸೆಯಲ್ಲಿ, ಭಾರತವನ್ನು ಜೈವಿಕ ಔಷಧಗಳ (ಬಯೋಫಾರ್ಮಾ) ತಯಾರಿಕೆಯ ಕೇಂದ್ರವನ್ನಾಗಿ ರೂಪಿಸಲು ಮುಂದಿನ ಐದು ವರ್ಷಗಳಲ್ಲಿ ₹10,000 ಕೋಟಿ ನಿಗದಿ ಮಾಡಲಾಗಿದೆ. ದೇಶದಲ್ಲಿ ಔಷಧ ಉತ್ಪಾದನೆಗೆ ಅಗತ್ಯವಾದ ವ್ಯವಸ್ಥೆ ಕಲ್ಪಿಸಲಾಗುವುದು. ಪ್ರಸ್ತುತ ಔಷಧ ವಿಜ್ಞಾನದ ಕಲಿಕೆ ಮತ್ತು ಸಂಶೋಧನೆಗಾಗಿ ಏಳು ಸಂಸ್ಥೆಗಳಿದ್ದು (ಎನ್‌ಐಪಿಇಆರ್), ಹೊಸದಾಗಿ ಮೂರು ಸಂಸ್ಥೆಗಳನ್ನು ಸ್ಥಾಪಿಸಿ, ಒಂದು ವ್ಯವಸ್ಥಿತ ಜಾಲವನ್ನು ರೂಪಿಸಲಾಗುವುದು.

ಜವಳಿ: ಸಂಯೋಜಿತ ರೂಪ

2 ಕಾರ್ಮಿಕ ಪ್ರಧಾನವಾದ ಜವಳಿ ಉದ್ಯಮಕ್ಕೆ ಐದು ಅಂಶಗಳ ಕಾರ್ಯಕ್ರಮವನ್ನು ಘೋಷಿಸಲಾಗಿದೆ; ಸ್ವಾವಲಂಬನೆಗಾಗಿ ರಾಷ್ಟ್ರೀಯ ನಾರು ಯೋಜನೆ, ಸಾಂಪ್ರದಾಯಿಕ ಗುಂಪುಗಳಿಗೆ ಆಧುನಿಕತೆಯ ಸ್ಪರ್ಶ ನೀಡುವ ಮೂಲಕ ಜವಳಿ ವಿಸ್ತರಣೆ ಮತ್ತು ಉದ್ಯೋಗ ಯೋಜನೆ, ನೇಕಾರರು ಮತ್ತು ಕುಶಲ ಕರ್ಮಿಗಳಿಗಾಗಿ ರಾಷ್ಟ್ರೀಯ ಕೈಮಗ್ಗ ಮತ್ತು ಕರಕುಶಲ ವಸ್ತು ಕಾರ್ಯಕ್ರಮ, ಜಾಗತಿಕವಾಗಿ ಸ್ಪರ್ಧಾತ್ಮಕವಾದ ಮತ್ತು ಸುಸ್ಥಿರವಾದ ಜವಳಿ ಉತ್ಪಾದನೆಗಾಗಿ ಸೂಕ್ತ ವ್ಯವಸ್ಥೆ ರೂಪಿಸುವುದು ಸಂಯೋಜಿತ ಯೋಜನೆಯ ಭಾಗಗಳಾಗಿವೆ. ಜವಳಿ ಕೌಶಲಗಳ ಉತ್ತೇಜನಕ್ಕಾಗಿ ಉದ್ಯಮ ಮತ್ತು ಶೈಕ್ಷಣಿಕ ರಂಗಗಳೊಂದಿಗೆ ಸಂಯೋಜಿತ ಪ್ರಯತ್ನವಾಗಿ ಸಮರ್ಥ್ 2.0 ಕಾರ್ಯಕ್ರಮ ರೂಪಿಸುವುದು.

ಮಹಾತ್ಮ ಗಾಂಧಿ ಗ್ರಾಮ ಸ್ವರಾಜ್ಯ ಯೋಜನೆ



3 ಖಾದಿ, ಕೈಮಗ್ಗ ಮತ್ತು ಕರಕುಶಲ ವಸ್ತುಗಳ ಗುಣಮಟ್ಟ ವರ್ಧನೆಗಾಗಿ ಕುಶಲಕರ್ಮಿಗಳಿಗೆ ಮಹಾತ್ಮಗಾಂಧಿ ಗ್ರಾಮ ಸ್ವರಾಜ್ಯ ಯೋಜನೆಯನ್ನು ಆರಂಭಿಸಿ ತರಬೇತಿ, ನೆರವು ನೀಡಲಾಗುವುದು. ಕ್ರೀಡಾ ಉತ್ಪಾದನೆ ಉತ್ತೇಜಿಸಲು ಕ್ರೀಡಾ ಸಾಮಗ್ರಿ ಯೋಜನೆ ಪ್ರಾರಂಭಿಸಲಾಗುವುದು. ಸಾಧನಗಳ ವಿನ್ಯಾಸ, ಸಂಶೋಧನೆ ಮತ್ತು ತಂತ್ರಜ್ಞಾನದ ಮೂಲಕ ಭಾರತದಲ್ಲಿ ಅತ್ಯುನ್ನತ ದರ್ಜೆಯ ಮತ್ತು ಕೈಗೆಟುಕುವ ಬೆಲೆಯ ಕ್ರೀಡಾ ಸಾಮಗ್ರಿಗಳು ದೊರೆಯುವಂತೆ ಮಾಡುವುದು ಯೋಜನೆ ಗುರಿ.

ಎಲೆಕ್ಟ್ರಾನಿಕ್ ಉಪಕರಣ: ಬಿಡಿಭಾಗಗಳ ಉತ್ಪಾದನೆ

4 2025ರಲ್ಲಿ ಈ ಯೋಜನೆಗೆ ₹22,919 ಕೋಟಿ ನೀಡಲಾಗಿತ್ತು. ಪ್ರಗತಿಯನ್ನು ಉತ್ತೇಜಿಸಲು ಮತ್ತು ಸ್ಥಳೀಯ ಪೂರೈಕೆ ಸರಪಳಿಯನ್ನು ಉತ್ತಮಪಡಿಸಲು ಅದರ ಮೊತ್ತವನ್ನು ದ್ವಿಗುಣಗೊಳಿಸಲಾಗಿದೆ (₹40,000 ಕೋಟಿ).

ಅಪರೂಪದ ಖನಿಜಗಳ ಕಾರಿಡಾರ್

5 ಅಪರೂಪದ ಖನಿಜವಾದ ಶಾಶ್ವತ ಅಯಸ್ಕಾಂತಕ್ಕಾಗಿ 2025ರ ನವೆಂಬರ್‌ನಲ್ಲಿ ಯೋಜನೆ ಜಾರಿಮಾಡಲಾಗಿತ್ತು. ಖನಿಜಗಳು ಸಮೃದ್ಧವಾಗಿರುವ ಒಡಿಶಾ, ಕೇರಳ, ಆಂಧ್ರಪ್ರದೇಶ ಮತ್ತು ತಮಿಳುನಾಡು ರಾಜ್ಯಗಳಲ್ಲಿ ಗಣಿಗಾರಿಕೆ, ಸಂಸ್ಕರಣೆ, ಸಂಶೋಧನೆ ಮತ್ತು ಉತ್ಪಾದನೆಗಾಗಿಯೇ ಅಪರೂಪದ ಖನಿಜಗಳ ಕಾರಿಡಾರ್ ಸ್ಥಾಪಿಸಲಾಗುವುದು. ಜತೆಗೆ, ವಿದೇಶಗಳ ಮೇಲಿನ ಅವಲಂಬನೆಯನ್ನು ಕಡಿಮೆ ಮಾಡಲು ರಾಜ್ಯಗಳಲ್ಲಿ ಮೂರು ರಾಸಾಯನಿಕ ಪಾರ್ಕ್‌ಗಳನ್ನು ಸ್ಥಾಪಿಸಲು ಬೆಂಬಲ ನೀಡಲಾಗುವುದು.

ಸೆಮಿಕಂಡಕ್ಟರ್ ಮಿಷನ್

6 ಐಎಸ್‌ಎಮ್ 1.0 ಯಶಸ್ಸಿನ ಆಧಾರದಲ್ಲಿ ಕೇಂದ್ರವು ಐಎಸ್‌ಎಂ 2.0 ಅನ್ನು ಘೋಷಿಸಿದೆ. ಸೆಮಿಕಂಡಕ್ಟರ್ ಸಾಧನಗಳು ಮತ್ತು ವಸ್ತುಗಳನ್ನು ಉತ್ಪಾದಿಸುವುದು, ಎಲ್ಲ ಹಂತಗಳಲ್ಲಿ ದೇಶೀಯ ತಂತ್ರಜ್ಞಾನವನ್ನೇ ಬಳಸುವುದು ಮತ್ತು ಪೂರೈಕೆ ಸರಪಳಿಗಳನ್ನು ಬಲಪಡಿಸಲಾಗುವುದು.

ಬಂಡವಾಳ ಸರಕುಗಳ ಉತ್ಪಾದನೆ

7 ವಿವಿಧ ವಲಯಗಳಲ್ಲಿ ಉತ್ಪಾದನೆ ಮತ್ತು ಗುಣಮಟ್ಟ ಕಾಯ್ದುಕೊಳ್ಳುವಲ್ಲಿ ಬಂಡವಾಳ ಸರಕುಗಳು ಪ್ರಮುಖ ಪಾತ್ರ ವಹಿಸುತ್ತಿವೆ. ಈ ದಿಸೆಯಲ್ಲಿ ಎರಡು ಸ್ಥಳಗಳಲ್ಲಿ ಟೂಲ್ ರೂಮ್ಸ್ ಸ್ಥಾಪನೆ ಮಾಡುವುದು ಮತ್ತು 5 ವರ್ಷಗಳಲ್ಲಿ ₹10,000 ಕೋಟಿ ವೆಚ್ಚದಲ್ಲಿ ಕಂಟೇನರ್ ಉತ್ಪಾದನಾ ವ್ಯವಸ್ಥೆ ರೂಪಿಸಲಾಗುವುದು.



'ಎಂಎಸ್‌ಎಂಇ ಚಾಂಪಿಯನ್' ₹10 ಸಾವಿರ ಕೋಟಿ ಮೀಸಲು

ನವದೆಹಲಿ (ಪಿಟಿಐ): ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಪ್ರಮಾಣದ ಉದ್ದಿಮೆಗಳನ್ನು (ಎಂಎಸ್‌ಎಂಇ) ಚಾಂಪಿಯನ್‌ಗಳಾಗಿ ರೂಪಿಸಲು ಬಜೆಟ್‌ನಲ್ಲಿ ₹10 ಸಾವಿರ ಕೋಟಿ ಮೀಸಲಿರಿಸಲಾಗಿದೆ.

ಎಂಎಸ್‌ಎಂಇ ಆರ್ಥಿಕಾಭಿವೃದ್ಧಿಯ ಪ್ರಮುಖ ಎಂಜಿನ್. ಹೀಗಾಗಿ, ಇವುಗಳನ್ನು ಚಾಂಪಿಯನ್‌ಗಳಾಗಿ ಬೆಳೆಸುವ ಉದ್ದೇಶದಿಂದ ಬಂಡವಾಳ ನೆರವು, ನಗದು ಲಭ್ಯತೆ ಮತ್ತು ವೃತ್ತಿಪರ ನೆರವು ಎಂಬ ಮೂರು ಹಂತದ ವಿಧಾನಗಳನ್ನು ಪರಿಚಯಿಸಲಾಗಿದೆ ಎಂದು ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್ ಮಂಡನೆ ವೇಳೆ ಪ್ರಸ್ತಾಪಿಸಿದರು.

ಬಂಡವಾಳ ನೆರವು: 2021ರಲ್ಲಿ ಸ್ಥಾಪಿಸಿದ 'ಸ್ವಾವಲಂಬಿ ಭಾರತ ನಿಧಿ'ಗೆ ಹೆಚ್ಚುವರಿಯಾಗಿ ₹2,000 ಕೋಟಿ ನೀಡುವುದಾಗಿ ಘೋಷಿಸಿದರು. ಇದು ಸಣ್ಣ ಉದ್ಯಮಗಳಿಗೆ ಅಗತ್ಯ ಬೆಂಬಲವನ್ನು ಮುಂದುವರಿಸಲು ಸಹಾಯ ಮಾಡುತ್ತದೆ.

ವೃತ್ತಿಪರ ನೆರವು: ಸಣ್ಣ ಮತ್ತು ಮಧ್ಯಮ ಗಾತ್ರದ ಉದ್ದಿಮೆಗಳಿಗೆ ಕಡಿಮೆ ಖರ್ಚಿನಲ್ಲಿ ಕಾನೂನು ಮತ್ತು ನಿಯಮಗಳ ಪಾಲನೆಗೆ ಸಹಾಯ ಮಾಡಲು ಸರ್ಕಾರವು ವೃತ್ತಿಪರ ಸಂಸ್ಥೆಗಳ ಮೂಲಕ 'ಕಾರ್ಪೊರೇಟ್ ಮಿತ್ರ' ಎಂಬ ಪರಿಕಲ್ಪನೆಯನ್ನು ವಿಶೇಷವಾಗಿ 2ನೇ ಮತ್ತು 3ನೇ ಹಂತದ ನಗರಗಳಲ್ಲಿ ಜಾರಿಗೊಳಿಸಲು ಉತ್ತೇಜನ ನೀಡಲಿದೆ.

ಟಿಆರ್‌ಇಡಿಎಸ್ ಮೂಲಕ ನಗದು ಲಭ್ಯತೆ

- ಕೇಂದ್ರ ಸಾರ್ವಜನಿಕ ವಲಯದ ಉದ್ದಿಮೆಗಳು (ಸಿಪಿಎಸ್‌ಇ) ಎಂಎಸ್‌ಎಂಇಗಳಿಂದ ವಸ್ತುಗಳನ್ನು ಖರೀದಿಸಿದಾಗ, ಹಣವನ್ನು ಕಡ್ಡಾಯವಾಗಿ ಟ್ರೇಡ್ ರಿಸೀವಬಲ್ಸ್ ಡಿಸ್ಕೌಂಟಿಂಗ್ ಸಿಸ್ಟಮ್ (ಟಿಆರ್‌ಇಡಿಎಸ್) ಎಂಬ ಡಿಜಿಟಲ್ ವೇದಿಕೆ ಮೂಲಕವೇ ಪಾವತಿಸಬೇಕು. ಇತರ ಕಾರ್ಪೊರೇಟ್ ಸಂಸ್ಥೆಗಳಿಗೆ ಇದನ್ನು ಒಂದು ಮಾದರಿಯಾಗಿಸುವ ಗುರಿ ಹೊಂದಲಾಗಿದೆ.
- ಸಣ್ಣ ಉದ್ಯಮಗಳು ತಮ್ಮ ಬಿಲ್‌ಗಳನ್ನು ಬ್ಯಾಂಕ್‌ಗಳಲ್ಲಿ ರಿಯಾಯಿತಿ ದರದಲ್ಲಿ ನಗದೀಕರಿಸಿಕೊಳ್ಳುವಾಗ (ಇನ್‌ವಾಯ್ಸ್ ಡಿಸ್ಕೌಂಟಿಂಗ್) ಒಂದು ವೇಳೆ ಹಣ ಮರುಪಾವತಿಯಲ್ಲಿ ತೊಂದರೆಯಾದರೆ ಅದಕ್ಕೆ ಸಿಜಿಟಿಎಂಎಸ್‌ಇ ಸಂಸ್ಥೆಯ ಮೂಲಕ ಸರ್ಕಾರವೇ ಗ್ಯಾರಂಟಿ ನೀಡಲಿದೆ.
- ಅಗ್ಗದ ಮತ್ತು ತ್ವರಿತ ಹಣಕಾಸು ಸೌಲಭ್ಯವನ್ನು ಉತ್ತೇಜಿಸಲು ಜಿಇಎಂ ಪೋರ್ಟಲ್‌ಅನ್ನು ಟಿಆರ್‌ಇಡಿಎಸ್ ಜೊತೆಗೆ ಸಂಯೋಜಿಸಲಾಗುತ್ತದೆ.
- ಎಂಎಸ್‌ಎಂಇಗಳು ಪಡೆಯಬೇಕಾದ ಹಣದ ದಾಖಲೆಗಳನ್ನು ಹೂಡಿಕೆ ಮಾಡಬಹುದಾದ ಬಾಂಡ್‌ಗಳಂತೆ ಪರಿವರ್ತಿಸಿ ಮಾರುಕಟ್ಟೆಯಲ್ಲಿ ಚಲಾವಣೆಗೆ ತರುವುದು. ಇದರಿಂದ ಹಣದ ಹರಿವು ಹೆಚ್ಚುತ್ತದೆ.
- ಟಿಆರ್‌ಇಡಿಎಸ್ ಮೂಲಕ ಎಂಎಸ್‌ಎಂಇಗಳಿಗೆ ₹7 ಲಕ್ಷ ಕೋಟಿಗಳಿಗೂ ಹೆಚ್ಚು ಹಣ ಲಭ್ಯವಾಗಲಿದೆ.

ಅಂಕಿಗಳಲ್ಲಿ ಅನುದಾನ ಮತ್ತು ಸಾಲ

ಗೃಹ ವ್ಯವಹಾರಗಳು (ಕೋಟಿಗಳಲ್ಲಿ)

₹2,33,211 ಬಜೆಟ್ ಅಂದಾಜು	₹2,41,485 ಪರಿಷ್ಕೃತ ಅಂದಾಜು	₹2,55,234 ಬಜೆಟ್ ಅಂದಾಜು
2025-26	2025-26	2026-27

ವಿದೇಶಾಂಗ ವ್ಯವಹಾರಗಳ ಇಲಾಖೆ (ಕೋಟಿಗಳಲ್ಲಿ)

₹20,517 ಬಜೆಟ್ ಅಂದಾಜು	₹21,743 ಪರಿಷ್ಕೃತ ಅಂದಾಜು	₹22,119 ಬಜೆಟ್ ಅಂದಾಜು
2025-26	2025-26	2026-27

ಸಾಲದ ಬಡ್ಡಿ ಪಾವತಿಗೆ ಸಿಂಹಪಾಲು (ಲಕ್ಷ ಕೋಟಿಗಳಲ್ಲಿ)

ಕೇಂದ್ರ ಸರ್ಕಾರ ಮಾಡಲಿರುವ ಒಟ್ಟಾರೆ ವೆಚ್ಚದಲ್ಲಿ ಮಾಡಿರುವ ಸಾಲಕ್ಕೆ ಬಡ್ಡಿ ಪಾವತಿಸಲು ದೊಡ್ಡ ಮೊತ್ತ ವ್ಯಯಿಸಲಿದೆ. ಒಂದು ರೂಪಾಯಿ ಲೆಕ್ಕಾಚಾರದಲ್ಲಿ 20 ಪೈಸೆಯನ್ನು ಬಡ್ಡಿ ಪಾವತಿಗೆ ಮೀಸಲಿಡಲಾಗಿದೆ.

2025-26	ಬಜೆಟ್ ಅಂದಾಜು	₹12.76
2025-26	ಪರಿಷ್ಕೃತ ಅಂದಾಜು	₹12.74
2026-27	ಬಜೆಟ್ ಅಂದಾಜು	₹14.04

ಎಷ್ಟು ಸಾಲ? (ಲಕ್ಷ ಕೋಟಿಗಳಲ್ಲಿ)

₹15.69 ಬಜೆಟ್ ಅಂದಾಜು	₹15.58 ಪರಿಷ್ಕೃತ ಅಂದಾಜು	₹16.96 ಬಜೆಟ್ ಅಂದಾಜು
2025-26	2025-26	2026-27

ಟ್ರಂಪ್ ತಾಳಕ್ಕೆ ತಕ್ಕಂತೆ ಕುಣಿಯಬಹುದೇ?



ವಿಶ್ಲೇಷಣೆ

ಕೃಷ್ಣಪ್ರಸಾದ್

ಕಳೆದ ವರ್ಷ ಜನವರಿ 31 ರಂದು—ಡೊನಾಲ್ಡ್ ಟ್ರಂಪ್ ಎರಡನೇ ಬಾರಿಗೆ ಅಧ್ಯಕ್ಷರಾದ ಕೇವಲ 11 ದಿನಗಳ ನಂತರ—ಭಾರತದ ಜಿಡಿಪಿ (ಒಟ್ಟು ದೇಶೀಯ ಉತ್ಪನ್ನ) ಶೇ 6.3ರಿಂದ ಶೇ 6.8 ರಷ್ಟು ಬೆಳೆಯಲಿದೆ ಎಂದು ಆರ್ಥಿಕ ಸಮೀಕ್ಷೆಯು ಮುನ್ಸೂಚನೆ ನೀಡಿತ್ತು. ಆರು–ಏಳು ತಿಂಗಳಲ್ಲೇ ಟ್ರಂಪ್ ಅವರು ಭಾರತದ ಮೇಲೆ ಎರಡು ಬಾರಿ ಸುಂಕ ಹೇರಿದ ಪರಿಣಾಮ ಒಟ್ಟು ಸುಂಕ ಶೇ 50ಕ್ಕೆ ತಲುಪಿತು. ಇದು ವಿಶ್ವದ ಯಾವುದೇ ರಾಷ್ಟ್ರದ ಮೇಲೆ ವಿಧಿಸಲಾದ ಗರಿಷ್ಠ ದಂಡ. ಈ ಕಥೆಯ ಪಾಠ ಏನೆಂದರೆ: 'ಟ್ರಂಪ್ ಸರ್ಕಾರ್' ಪರವಾಗಿ 2019ರಲ್ಲಿ ಪ್ರಚಾರ ಮಾಡಿದ್ದ ನರೇಂದ್ರ ಮೋದಿಯವರಿಗೂ ಟ್ರಂಪ್ ಆಯ್ಕೆಯು 2025ರ ಬಜೆಟ್ ಮೇಲೆ ಯಾವ ರೀತಿಯ ಪರಿಣಾಮ ಬೀರಲಿದೆ ಎಂಬ ಅರಿವಿರಲಿಲ್ಲ. 2026ರ ಭಾರತದ ಬಜೆಟ್‌ಗೆ ಟ್ರಂಪ್ ಹೇಗೆ ಅಚ್ಚರಿ ನೀಡಬಹುದು ಎಂಬುದು ಯಾರಿಗೂ ತಿಳಿದಿಲ್ಲ.

ಸುಂಕದ ಹೊರೆಯ ಹೊರತಾಗಿಯೂ ತನ್ನ ಬೆಳವಣಿಗೆ ಸರಿಯಾದ ಹಾದಿಯಲ್ಲಿದೆ ಎಂದು ಭಾರತವು ಪ್ರತಿಪಾದಿಸುತ್ತಿದೆ. ಈ ಸುಂಕಗಳ ಪರಿಣಾಮ ಕಡಿಮೆ ಇರಲು ಒಂದು ಕಾರಣವೆಂದರೆ, ಅಮೆರಿಕಕ್ಕೆ ಭಾರತದ ರಫ್ತು ತುಂಬಾ ಕಡಿಮೆ. ಇದು ಜಿಡಿಪಿಯ ಕೇವಲ ಶೇ 0.3ರಿಂದ ಶೇ 0.4 ರಷ್ಟಿದೆ. ಸುಂಕಗಳಿಂದಾಗಿ ಜವಳಿ, ರತ್ನಗಳು, ಆಭರಣ ಮತ್ತು ಚರ್ಮದಂತಹ ವಲಯಗಳಲ್ಲಿ ಭಾರತದ ರಫ್ತು ಆರಂಭದಲ್ಲಿ ಸುಮಾರು ಶೇ 30 ರಷ್ಟು ಕುಸಿದಿತ್ತು. ಆದರೆ ರಫ್ತುದಾರರು ತಮ್ಮ ಸರಕುಗಳನ್ನು ಐರೋಪ್ಯ ಒಕ್ಕೂಟ, ಯುಎಇ, ಜಪಾನ್ ಮತ್ತು ಆಫ್ರಿಕಾದಂತಹ ಇತರ ಮಾರುಕಟ್ಟೆಗಳಿಗೆ ತಿರುಗಿಸುವ ಮೂಲಕ ಭಾಗಶಃ ನಷ್ಟವನ್ನು ಸರಿದೂಗಿಸಿಕೊಂಡರು. ಆದರೆ, ಭಾರತದ ಆರ್ಥಿಕತೆಯು ದೇಶೀಯ ಬೇಡಿಕೆಯಿಂದ ನಡೆಸಲ್ಪಡುತ್ತಿರುವುದು ಈ ಚೇತರಿಕೆಗೆ ಪ್ರಮುಖ ಕಾರಣವಾಗಿದೆ.

ಇದಕ್ಕೆ ವ್ಯತಿರಿಕ್ತವಾಗಿ, ಸುಂಕಗಳಲ್ಲಿನ ಇಳಿಕೆಯು ಸೀಮಿತ ಪರಿಣಾಮವನ್ನು ಮಾತ್ರ ಬೀರಲಿದೆ.

ಇಲ್ಲಿಯವರೆಗೆ, ಭಾರತವು ಟ್ರಂಪ್ ಅವರ ಕೋಪ ಮತ್ತು ಹೆಚ್ಚಿನ ದಂಡಕ್ಕೆ ತುತ್ತಾಗದೇ ಇರುವ ರೀತಿಯಲ್ಲಿ ನಡೆದುಕೊಂಡಿದೆ. ಅವರ ಎಲ್ಲಾ ಬೇಡಿಕೆಗಳಿಗೆ ನಮ್ರತೆಯಿಂದ ಶರಣಾಗಿದೆ. ಶೇ 500ರಷ್ಟು ಸುಂಕದ ಹೊಸ ಭೀತಿಯಿಂದಾಗಿ ರಷ್ಯಾದ ತೈಲವನ್ನು ಖರೀದಿಸುವುದನ್ನು ಕಡಿಮೆ ಮಾಡಿದೆ. ಅಮೆರಿಕನ್ ಡಾಲರ್ ಎದುರಿಸಲು ಉದ್ದೇಶಿಸಲಾಗಿದ್ದ 'ಬ್ರಿಕ್ಸ್' (BRICS) ಕರೆನ್ಸಿಗೆ ನೀಡಿದ್ದ ಬೆಂಬಲವನ್ನು ಹಿಂತೆಗೆದುಕೊಂಡಿದೆ. ಆಯಕಟ್ಟಿನ ಚಾಬಹಾರ್ ಬಂದರು ಯೋಜನೆಯಿಂದ ಹೊರಬಂದಿದೆ. ವೆನೆಜುವೆಲಾದಲ್ಲಿ ಅಮೆರಿಕದ ಕ್ರಮಗಳು, ಗ್ರೀನ್‌ಲ್ಯಾಂಡ್ ಅನ್ನು ಆಕ್ರಮಿಸುವ ಬೆದರಿಕೆಗಳು ಅಥವಾ ಇರಾನ್ ಮೇಲಿನ ಸಂಭವನೀಯ ದಾಳಿಯನ್ನು ಭಾರತವು ಖಂಡಿಸಿಲ್ಲ. 'ವಿಶ್ವಗುರು' ತನ್ನ ಬೆನ್ನುಮೂಳೆ ಮುರಿಯುವ ಮುನ್ನ ಇನ್ನು ಎಷ್ಟು ಬಾಗಬಲ್ಲರು?

ಒಂದು ವೇಳೆ ಅಮೆರಿಕದ ಸುಂಕಗಳನ್ನು ಶೀಘ್ರದಲ್ಲೇ ಕಡಿತಗೊಳಿಸಿದರೂ, ಭಾರತವು ಇನ್ನೂ ಮೂರು ದೊಡ್ಡ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮೊದಲನೆಯದಾಗಿ, ಅಮೆರಿಕನ್ ಡಾಲರ್ ಎದುರು ರೂಪಾಯಿ ಮೌಲ್ಯದ ನಿರಂತರ ಕುಸಿತ. 2014ರಿಂದ ಮೋದಿಯವರ ಆಡಳಿತದಲ್ಲಿ ರೂಪಾಯಿ ತನ್ನ ಮೌಲ್ಯದ ಶೇ 50ಕ್ಕಿಂತ ಹೆಚ್ಚು ಕಳೆದುಕೊಂಡಿದೆ. 2014ರಲ್ಲಿ ಒಂದು ಡಾಲರ್ ಖರೀದಿಸಲು 62 ರೂಪಾಯಿ ಬೇಕಾಗಿತ್ತು; 2026ರಲ್ಲಿ ಅದು 92 ರೂಪಾಯಿಗಳಿಗೆ ಏರಿಕೆಯಾಗಿದೆ. ಇದು ಭಾರತದ ರಫ್ತನ್ನು ಅಗ್ಗವಾಗಿಸಿದೆ ಮತ್ತು ಸುಂಕಗಳ ವಿರುದ್ಧ ರಕ್ಷಣೆಯಾಗಿ ಕೆಲಸ ಮಾಡಿದೆ. ಆದರೆ, ವಿದ್ಯಾರ್ಥಿಗಳು ಮತ್ತು ಪ್ರವಾಸಿಗರು ಭಾರಿ ಬೆಲೆ ತೆರುತ್ತಿದ್ದಾರೆ.

ಎರಡನೇ ದೊಡ್ಡ ಸಮಸ್ಯೆ ಎಂದರೆ ವಿದೇಶಿ ನೇರ ಹೂಡಿಕೆಯಲ್ಲಿನ (ಎಫ್‌ಡಿಐ) ಭಾರಿ ಕುಸಿತ. ಉತ್ಪಾದನಾ ವಲಯದಲ್ಲಿ ಎಫ್‌ಡಿಐ 2022 ಮತ್ತು 2024ರ ನಡುವೆ ಶೇ 43ರಷ್ಟು ಕುಸಿದಿದೆ. ಜಾಗತಿಕ ಹೂಡಿಕೆದಾರರು ಚೀನಾದಿಂದ ಹೊರಬಂದು ಭಾರತಕ್ಕೆ ಬರುತ್ತಿದ್ದಾರೆ ಎಂದು ಹೇಳಲಾಗುತ್ತಿದ್ದ ಸಮಯದಲ್ಲಿ ಇದು ಸಂಭವಿಸಿದೆ. 2025ರಲ್ಲಿ, ವಿದೇಶಿ ಹೂಡಿಕೆದಾರರು ದೇಶದಿಂದ ನಿರ್ಗಮಿಸಿದ ಕಾರಣ ಎಫ್‌ಡಿಐ ಶೇ 96ಕ್ಕಿಂತ ಹೆಚ್ಚು ಕುಸಿಯಿತು. ಕಳೆದ ವರ್ಷ ಭಾರತದ ಷೇರು ಮಾರುಕಟ್ಟೆ ಆದಾಯವು ಪ್ರಮುಖ ದೇಶಗಳಿಗಿಂತ ಕಡಿಮೆಯಿರಲು ಇದು ಒಂದು ಕಾರಣ.

ಮೂರನೇ ಸಮಸ್ಯೆಯ ಪ್ರದೇಶವೆಂದರೆ ಬೆಳೆಯುತ್ತಿರುವ ತಾಂತ್ರಿಕ ಅಸಮಾನತೆ. ಅಮೆರಿಕವು ಕೃತಕ ಬುದ್ಧಿಮತ್ತೆ (ಎ.ಐ) ಮತ್ತು ಸೆಮಿಕಂಡಕ್ಟರ್ ವ್ಯವಸ್ಥೆಗಳನ್ನು ನಿಯಂತ್ರಿಸುತ್ತದೆ. ಸುಧಾರಿತ ಪ್ರೊಸೆಸರ್‌ಗಳ ರಫ್ತಿನ ಮೇಲೆ ಅಮೆರಿಕ ನಿಯಂತ್ರಣ ಹೇರುತ್ತಿರುವುದರಿಂದ ಭಾರತವು 'ತಂತ್ರಜ್ಞಾನ ನಿರಾಕರಣೆ'ಯ ಅಪಾಯವನ್ನು ಎದುರಿಸುತ್ತಿದೆ. ಈ ರಕ್ಷಣಾತ್ಮಕ ಧೋರಣೆಯು ಭಾರತದ ದೇಶೀಯ ಎ.ಐ ಮಹತ್ವಾಕಾಂಕ್ಷೆಗಳನ್ನು ಕುಂಠಿತಗೊಳಿಸಬಹುದು. ತಮ್ಮ ಸರ್ಕಾರದ ಸಹಾಯಧನದೊಂದಿಗೆ ರಚಿಸಲಾದ ತಮ್ಮ ಎ.ಐ ಆಸ್ತಿಗಳನ್ನು ಭಾರತ ಮತ್ತು ಚೀನಾದ ಬಳಕೆದಾರರಿಗೆ ನೀಡುತ್ತಿರುವುದಕ್ಕಾಗಿ ಈಗಾಗಲೇ ಅಮೆರಿಕನ್ ಟೆಕ್ ಕಂಪನಿಗಳನ್ನು ಟ್ರಂಪ್ ಸಲಹೆಗಾರರು ಟೀಕಿಸಿದ್ದಾರೆ. ಈ ಸಂಬಂಧ ಸೆಮಿಕಂಡಕ್ಟರ್, ಬಯೋಫಾರ್ಮಾ ಮತ್ತು ನವೀಕರಿಸಬಹುದಾದ ಇಂಧನ ಮೂಲಗಳ ಕ್ಷೇತ್ರಕ್ಕೆ ಕೇಂದ್ರ ಸರ್ಕಾರವು ಈ ಬಜೆಟ್‌ನಲ್ಲಿ ಒತ್ತು ನೀಡಿದೆ. ಆದರೆ ಈ ರೀತಿಯ ಘೋಷಣೆಗಳು ಈಗಾಗಲೇ ಬಹಳಷ್ಟು ಬಾರಿ ಕೇಳಿರುವುದರಿಂದ, ನಾಟಕೀಯ ಬೆಳವಣಿಗೆಯನ್ನೇನೂ ನಿರೀಕ್ಷಿಸಲಾಗದು.

ಮುಂದೆ ಟ್ರಂಪ್ ಏನು ಮಾಡುತ್ತಾರೆ ಅಥವಾ ಮಾಡುವುದಿಲ್ಲ ಎಂಬುದು ಮುಖ್ಯವಲ್ಲ. ಅವರು ಭಾರತವನ್ನು ಹಲವು ಬಾರಿ ಅವಮಾನಿಸಿದ್ದಾರೆ, ಇದರಿಂದಾಗಿ ಎರಡೂ ದೇಶಗಳ ನಡುವಿನ ಸಂಬಂಧದಲ್ಲಿ ಆಳವಾದ ಅನುಮಾನ ಮೂಡಿದೆ.

ಅಮೆರಿಕದೊಂದಿಗೆ ವ್ಯಾಪಾರ ಒಪ್ಪಂದ ಅಥವಾ ಬಜೆಟ್‌ನಲ್ಲಿನ ದೊಡ್ಡ ಭರವಸೆಗಳು ಸಾಮಾನ್ಯ ಮನುಷ್ಯನಿಗೆ ಅಲ್ಪ ಬದಲಾವಣೆಯನ್ನಷ್ಟೇ ತರಬಲ್ಲವು. ಕಾಗದದ ಮೇಲಷ್ಟೇ ಭಾರತದ್ದು ವಿಶ್ವದ ನಾಲ್ಕನೇ ದೊಡ್ಡ ಆರ್ಥಿಕತೆ. ವಾಸ್ತವದಲ್ಲಿ, ತಲಾ ಜಿಡಿಪಿ ವಿಷಯದಲ್ಲಿ 194 ದೇಶಗಳಲ್ಲಿ ಭಾರತ 166ನೇ ಸ್ಥಾನದಲ್ಲಿದೆ. ಮುಂದಿನ ವರ್ಷ ಭಾರತದ ಜಿಡಿಪಿ ಶೇ 7.4 ರಷ್ಟು ಬೆಳೆಯಲಿದೆ ಎಂದು ನಿರ್ಮಲಾ ಸೀತಾರಾಮನ್ ಘೋಷಿಸಿದರು. ಈ ಅಂಕಿಅಂಶ ಸಾಧಿಸಿದರೂ ಅದನ್ನು ಯಾರು ನಂಬುತ್ತಾರೆ? ಐಎಂಎಫ್ ಇತ್ತೀಚೆಗೆ ಭಾರತದ ರಾಷ್ಟ್ರೀಯ ಖಾತೆಗಳ ಅಂಕಿಅಂಶಗಳ ಗುಣಮಟ್ಟಕ್ಕೆ 'ಸಿ ಗ್ರೇಡ್' ನೀಡಿದೆ. ಭಾರತದ ಜಿಡಿಪಿಯನ್ನು ಶೇ 2.5ರಷ್ಟು ಅತಿಯಾಗಿ ಅಂದಾಜಿಸಲಾಗಿದೆ ಎಂದು ಕೆಲವು ಅರ್ಥಶಾಸ್ತ್ರಜ್ಞರು ನಂಬುತ್ತಾರೆ. ಜಾಗತಿಕ ಅನಿಶ್ಚಿತತೆಯಿಂದ ಕೂಡಿದ ಇಂತಹ ಅಪನಂಬಿಕೆಯ ವಾತಾವರಣದಲ್ಲಿ, ಟ್ರಂಪ್ ಒಪ್ಪಂದವಿರಲಿ ಅಥವಾ ಇಲ್ಲದಿರಲಿ, ಪ್ರತಿಯೊಂದನ್ನೂ ಅತೀವ ಎಚ್ಚರಿಕೆಯಿಂದ ಮತ್ತು ಸಂಶಯದಿಂದಲೇ ನೋಡಬೇಕಾಗಿದೆ.

ಲೇಖಕ: ಹಿರಿಯ ಪತ್ರಕರ್ತ



ತವರೂರಿನ ಸೀರೆ

ನಿರ್ಮಲಾ ಅವರ ಎಂಟು ಬಜೆಟ್‌ಗಳಿಗಿದ್ದ ಸೀರೆಯ ಆಕರ್ಷಣೆಯ ನಂಟು ಒಂಬತ್ತನೇ ಬಜೆಟ್‌ನಲ್ಲೂ ಮುಂದುವರಿಯಿತು. ಕಳೆದ ಬಜೆಟ್ ವೇಳೆ ಬಿಹಾರದ ಪದ್ಮಶ್ರೀ ಪುರಸ್ಕೃತೆ ದುಲಾರಿ ದೇವಿ ಅವರ ಕಸೂತಿಯ ಸೀರೆ ಉಟ್ಟಿದ್ದ ಅವರು, ಈ ಬಾರಿ ತವರು ಪ್ರೀತಿ ಮೆರೆದರು. ಶತಮಾನಗಳ ಇತಿಹಾಸ ಹೊಂದಿರುವ, ಕೈನಿಂದ ನೇಯ್ದ ತಮಿಳುನಾಡಿನ ಸಾಂಪ್ರದಾಯಿಕ ಕಾಂಚೀವರಂನ (ಕಾಂಚೀಪುರ) ರೇಷ್ಮೆ ಸೀರೆ ಈ ಬಾರಿಯ ಆಯ್ಕೆಯಾಗಿತ್ತು. ಕಡುಗೆಂಪು ಬಣ್ಣದ ಸೀರೆ, ಅರಿಶಿನ ಬಣ್ಣದ ತುಂಬುತೋಳಿನ, ಚಿನ್ನದ ಬಣ್ಣದ ಅಂಚಿನ ರವಿಕೆ ತೊಟ್ಟಿದ್ದರು.

85 ನಿಮಿಷಗಳ 'ನವ' ಬಜೆಟ್

ಪ್ರಸಕ್ತ ಸಾಲಿನ ಬಜೆಟ್ ಮಂಡಿಸಲು ನಿರ್ಮಲಾ ಅವರು ತೆಗೆದುಕೊಂಡಿದ್ದು ಬರೋಬ್ಬರಿ 85 ನಿಮಿಷಗಳು. ಈ ಬಾರಿ 1 ಗಂಟೆ 25 ನಿಮಿಷ ಬಜೆಟ್ ಪ್ರತಿ ಓದಿದರು. 2019ರಲ್ಲಿ 128 ನಿಮಿಷ, 2020ರಲ್ಲಿ ದಾಖಲೆಯ ಸುದೀರ್ಘ ಬಜೆಜ್ ಮಂಡಿಸಿದ್ದ ಅವರು 2 ಗಂಟೆ 42 ನಿಮಿಷ ತೆಗೆದುಕೊಂಡಿದ್ದರು. 2021ರಲ್ಲಿ 110 ನಿಮಿಷ, 2022ರಲ್ಲಿ 92 ನಿಮಿಷ. 2023ರಲ್ಲಿ 87 ನಿಮಿಷ, 2024ರಲ್ಲಿ (ಮಧ್ಯಂತರ ಬಜೆಟ್) 82 ನಿಮಿಷ, 2024ರಲ್ಲೇ ಮಂಡಿಸಿದ ಮತ್ತೊಂದು ಬಜೆಟ್ ಅನ್ನು 58 ನಿಮಿಷದಲ್ಲಿ ಮಂಡಿಸಿದ್ದರು. 2025ರಲ್ಲಿ 74 ನಿಮಿಷ ಬಜೆಟ್ ಮಂಡನೆ ಮಾಡಿದ್ದರು.

ಸಂತರ ನುಡಿಯಿಲ್ಲ...

ಪ್ರತಿ ಬಜೆಟ್‌ನಲ್ಲೂ ಸಂತರ ನುಡಿಯನ್ನು ಉಲ್ಲೇಖಿಸುತ್ತಿದ್ದ ನಿರ್ಮಲಾ ಅವರು ಈ ಬಾರಿ ಅದರ ಗೋಜಿಗೆ ಹೋಗಲಿಲ್ಲ. ಕವಿಗಳ ಕಾವ್ಯಗಳನ್ನು ಉಲ್ಲೇಖಿಸಿ ಬಜೆಟ್‌ನ ಒಳ ತಿರುಳನ್ನು ವಿವರಿಸುತ್ತಿದ್ದ ನಿರ್ಮಲಾ ಅವರ ಒಂಬತ್ತನೇ ಬಜೆಟ್‌ನಲ್ಲಿ ಕಾವ್ಯಗಳ ಮೆರುಗು ಕಂಡು ಬರಲಿಲ್ಲ. ಬಜೆಟ್ ಆರಂಭದಲ್ಲೇ ರವಿ ಪುಷ್ಯಯೋಗದ ಮಾಘ ಮಾಸವನ್ನು ಉಲ್ಲೇಖಿಸಿದ ಅವರು, ಪಂಜಾಬ್‌ನ ಸಂತ ಗುರು ರವಿದಾಸರ ಬೋಧನೆ ಸ್ಮರಿಸಿದರು.

₹1.93 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹ

ನವದೆಹಲಿ (ಪಿಟಿಐ): ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಮೂಲಕ ಜನವರಿ ತಿಂಗಳಿನಲ್ಲಿ ಒಟ್ಟು ₹1.93 ಲಕ್ಷ ಕೋಟಿ ವರಮಾನ ಸಂಗ್ರಹವಾಗಿದ್ದು, ಶೇ 6.2ರಷ್ಟು ಏರಿಕೆ ಆಗಿದೆ. ಜಿಎಸ್‌ಟಿ ಸಂಗ್ರಹ ಮೊತ್ತವು 3 ತಿಂಗಳ ಗರಿಷ್ಠ.

ನವೆಂಬರ್ ತಿಂಗಳಿನಲ್ಲಿ ₹1.70 ಲಕ್ಷ ಕೋಟಿ, ಡಿಸೆಂಬರ್‌ನಲ್ಲಿ ₹1.74 ಲಕ್ಷ ಕೋಟಿ ಮತ್ತು ಅಕ್ಟೋಬರ್‌ನಲ್ಲಿ ₹1.96 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿತ್ತು.

ಜಿಎಸ್‌ಟಿ ಮರುಪಾವತಿಯಲ್ಲಿ (ರೀಫಂಡ್) ಶೇ 3.1ರಷ್ಟು ಕಡಿಮೆ ಆಗಿದ್ದು, ₹22,665 ಕೋಟಿಯಾಗಿದೆ. ನಿವ್ವಳ ಜಿಎಸ್‌ಟಿ ಸಂಗ್ರಹವು ₹1.71 ಲಕ್ಷ ಕೋಟಿಯಾಗಿದೆ ಎಂದು ಕೇಂದ್ರ ಸರ್ಕಾರ ಭಾನುವಾರ ತಿಳಿಸಿದೆ.

ಒಟ್ಟು ಜಿಎಸ್‌ಟಿ ಸಂಗ್ರಹದ ಪೈಕಿ, ದೇಶದ ಆಂತರಿಕ ವಹಿವಾಟುಗಳಿಂದ ಬರುವ ಜಿಎಸ್‌ಟಿ ವರಮಾನವು ಶೇ 4.8ರಷ್ಟು ಏರಿಕೆ ಕಂಡಿದ್ದು, ₹1.41 ಲಕ್ಷ ಕೋಟಿಯಾಗಿದೆ. ಆಮದು ಮಾಡಿಕೊಂಡ ಸರಕುಗಳಿಂದ ಬಂದ ವರಮಾನವು ₹52,253 ಕೋಟಿಯಾಗಿದ್ದು, ಶೇ 10.1ರಷ್ಟು ಏರಿಕೆಯಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಏಪ್ರಿಲ್‌ನಿಂದ ಜನವರಿವರೆಗೆ ₹18.43 ಲಕ್ಷ ಕೋಟಿ ಜಿಎಸ್‌ಟಿ ಸಂಗ್ರಹವಾಗಿದೆ ಎಂದು ತಿಳಿಸಿದೆ.

‘ವಿತ್ತೀಯ ಶಿಸ್ತನ್ನು ಹೊಂದಿದ ಬಜೆಟ್’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿತ್ತೀಯ ಕೊರತೆ ಮತ್ತು ವಿತ್ತೀಯ ಶಿಸ್ತನ್ನು ಕೇಂದ್ರ ಬಜೆಟ್ ಹೊಂದಿದೆ’ ಎಂದು ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಷನ್‌ನ (ಬೆಂಗಳೂರು ಕ್ಯಾಂಪಸ್) ಪ್ರೊ ವೈಸ್ ಚಾನ್ಸಲರ್ ಮಧು ವೀರರಾಘವನ್ ಹೇಳಿದ್ದಾರೆ.



ಪ್ರಸಕ್ತ ಆರ್ಥಿಕ ವರ್ಷದಲ್ಲಿ ವಿತ್ತೀಯ ಕೊರತೆಯನ್ನು ಜಿಡಿಪಿಯ ಶೇ 4.4 ಎಂದು ಅಂದಾಜಿಸಲಾಗಿದೆ. 2026–27ರ ಆರ್ಥಿಕ ವರ್ಷದಲ್ಲಿ ಇದನ್ನು ಶೇ 4.3ಕ್ಕೆ ಇಳಿಕೆಸುವ ಗುರಿ ಹೊಂದಲಾಗಿದೆ. ಈ ಪಥವು ಹಣಕಾಸಿನ ಜವಾಬ್ದಾರಿಯನ್ನು ಪ್ರತಿಬಿಂಬಿಸುತ್ತದೆ ಎಂದಿದ್ದಾರೆ.

ಈ ಬಜೆಟ್ ಮೂಲಸೌಕರ್ಯ, ಸಂಶೋಧನೆಯ ದೀರ್ಘಕಾಲೀನ ಬೆಳವಣಿಗೆಗೆ ನಿರ್ಣಾಯಕವಾಗಿದೆ. ಕೌಶಲ ಉಪಕ್ರಮಗಳು, ಮೂಲಸೌಕರ್ಯದಲ್ಲಿನ ಹೂಡಿಕೆಗಳು, ಐಟಿ ಪ್ರಯೋಗಾಲಯಗಳು, ಹೊಸ ರಾಷ್ಟ್ರೀಯ ವಿನ್ಯಾಸ ಸಂಸ್ಥೆ (ನ್ಯೂ ನ್ಯಾಷನಲ್ ಡಿಸೈನ್ ಇನ್‌ಸ್ಟಿಟ್ಯೂಟ್) ಮತ್ತು ಪ್ರತಿ ಜಿಲ್ಲೆಯಲ್ಲಿ ಬಾಲಕಿಯರ ವಸತಿ ನಿಲಯಗಳು ಬಜೆಟ್‌ನ ಪ್ರಮುಖ ಘೋಷಣೆಗಳಾಗಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಎಸ್‌ಟಿಟಿ ಹೆಚ್ಚಳ, ಷೇರುಪೇಟೆ ಕುಸಿತ

ಒಂದೇ ದಿನದಲ್ಲಿ ಕರಗಿದ ಹೂಡಿಕೆದಾರರ ₹9.40 ಲಕ್ಷ ಕೋಟಿ ಸಂಪತ್ತು

ಮುಂಬೈ (ಪಿಟಿಐ): ಷೇರು ವಹಿವಾಟು ತೆರಿಗೆಯನ್ನು (ಎಸ್‌ಟಿಟಿ) ಹೆಚ್ಚು ಮಾಡುವುದಾಗಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಘೋಷಿಸಿದ ನಂತರದಲ್ಲಿ ದೇಶದ ಷೇರುಪೇಟೆ ಸೂಚ್ಯಂಕಗಳು ದೊಟ್ಟ ಮಟ್ಟದ ಕುಸಿತ ದಾಖಲಿಸಿದವು.

ಭಾನುವಾರ ಬಜೆಟ್ ಮಂಡನೆಯ ಕಾರಣದಿಂದಾಗಿ ಷೇರುಪೇಟೆಯಲ್ಲಿಯೂ ವಹಿವಾಟು ಇತ್ತು. ಆರಂಭಿಕ ಹಂತದಲ್ಲಿ ತುಸು ಏರಿಕೆ ಕಂಡಿದ್ದ ಬಿಎಸ್‌ಇ ಸೆನ್ಸೆಕ್ಸ್, ಫ್ಯೂಚರ್ಸ್ ವಹಿವಾಟಿನ ಮೇಲಿನ ಎಸ್‌ಟಿಟಿ ಪ್ರಮಾಣವನ್ನು ಶೇ 0.05ಕ್ಕೆ ಹೆಚ್ಚಿಸಲಾಗುವುದು ಎಂದು ಘೋಷಿಸಿದ ನಂತರದಲ್ಲಿ 2,370 ಅಂಶಗಳಷ್ಟು ಕುಸಿಯಿತು. ವಹಿವಾಟಿನ ಅಂತ್ಯಕ್ಕೆ 1,546 ಅಂಶಗಳಷ್ಟು (ಶೇ 1.88) ಇಳಿಕೆ ದಾಖಲಿಸಿತು. ಎನ್‌ಎಸ್‌ಇ ನಿಫ್ಟಿ 495 ಅಂಶಗಳಷ್ಟು (ಶೇ 1.96ರಷ್ಟು) ಕುಸಿದಿದೆ.

ಆರು ವರ್ಷಗಳ ಅವಧಿಯಲ್ಲಿ ಬಜೆಟ್ ಮಂಡನೆಯ ದಿನ ಸೆನ್ಸೆಕ್ಸ್ ಮತ್ತು ನಿಫ್ಟಿ ಈ ಪ್ರಮಾಣದಲ್ಲಿ ಕುಸಿದಿರುವುದು ಇದೇ ಮೊದಲು. 2020ರ ಫೆಬ್ರುವರಿ 1ರ ಸೆನ್ಸೆಕ್ಸ್ ಶೇ 2.42ರಷ್ಟು ಹಾಗೂ



ನಿಫ್ಟಿ ಶೇ 2.51ರಷ್ಟು ಇಳಿಕೆ ಕಂಡಿತ್ತು. ಭಾನುವಾರದ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹9.40 ಲಕ್ಷ ಕೋಟಿಯಷ್ಟು ಕರಗಿದೆ.

‘ವಾಯಿದಾ ವಹಿವಾಟಿಗೆ ಸಂಬಂಧಿಸಿದ ಎಸ್‌ಟಿಟಿ ಹೆಚ್ಚಳದ ಕಾರಣದಿಂದಾಗಿ ಸೂಚ್ಯಂಕಗಳು ಕುಸಿದಿವೆ. ಕಳೆದ ವರ್ಷದಲ್ಲಿ ಬಂಡವಾಳ ವೃದ್ಧಿ ತೆರಿಗೆಯನ್ನು ಹೆಚ್ಚು ಮಾಡಲಾಗಿತ್ತು. ಈಗ ಎಸ್‌ಟಿಟಿ ಹೆಚ್ಚಾಗಲಿದೆ. ಇದರಿಂದಾಗಿ ಮಾರುಕಟ್ಟೆಯಲ್ಲಿ ಹೂಡಿಕೆ ಮಾಡುವವರಿಗೆ ವೆಚ್ಚಗಳು ಹೆಚ್ಚಲಿವೆ’ ಎಂದು ಎಕ್ಸಿಸ್ ಸೆಕ್ಯುರಿಟೀಸ್‌ನ ಸಿಇಒ ಪ್ರಣವ್ ಹರಿದಾಸನ್ ಹೇಳಿದ್ದಾರೆ.

ಸಣ್ಣ ಹೂಡಿಕೆದಾರರು ಸಾಮಾನ್ಯವಾಗಿ ಫ್ಯೂಚರ್ಸ್ ವಹಿವಾಟಿನಲ್ಲಿ ಅತಿಯಾಗಿ ತೊಡಗಿಸಿಕೊಳ್ಳುವುದಿಲ್ಲ. ಹೀಗಾಗಿ ಎಸ್‌ಟಿಟಿ ಹೆಚ್ಚು ಮಾಡುವುದರಿಂದ ಉದ್ದೇಶ ಈಡೇರುತ್ತದೆಯೇ ಅಥವಾ ಅದರ ಪರಿಣಾಮವು ಭಾರತದ ಬಂಡವಾಳ ಮಾರುಕಟ್ಟೆಗಳ ಇತರ ಅಂಶಗಳ ಮೇಲೆ ಉಂಟಾಗುತ್ತದೆಯೇ ಎಂಬ ಬಗ್ಗೆ ಪ್ರಶ್ನೆಗಳನ್ನು ಮೂಡಿಸುತ್ತದೆ ಎಂದು ಅವರು ಹೇಳಿದ್ದಾರೆ.

‘ಈ ಕಳವಳವನ್ನು ವಿದೇಶಿ ಹೂಡಿಕೆದಾರರು ಹಾಗೂ ದೇಶಿ ವರ್ತಕರು ವ್ಯಕ್ತಪಡಿಸಿದ್ದಾರೆ. ಮಾರುಕಟ್ಟೆಯು ತಕ್ಷಣಕ್ಕೆ ನೀಡಿರುವ ಪ್ರತಿಕ್ರಿಯೆ ಎಸ್‌ಟಿಟಿಗೆ ಸಂಬಂಧಿಸಿದ್ದಾಗಿದೆ’ ಎಂದು ಅವರು ವಿವರಿಸಿದ್ದಾರೆ.

‘ಎಸ್‌ಟಿಟಿ ಪ್ರಮಾಣದಲ್ಲಿ ಹೆಚ್ಚಳ ಮಾಡುವ ಪ್ರಸ್ತಾವನೆಯು ಅಲ್ಪಾವಧಿಗೆ ಬಂಡವಾಳ ಮಾರುಕಟ್ಟೆಗಳ ಮೇಲೆ ನಕಾರಾತ್ಮಕ ಪರಿಣಾಮ ಉಂಟು ಮಾಡುತ್ತದೆ. ಆದರೆ ದೀರ್ಘಾವಧಿಯಲ್ಲಿ ಅದು ಒಳ್ಳೆಯದನ್ನು ಮಾಡಬಹುದು’ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್‌ನ ವ್ಯವಸ್ಥಾಪಕ ನಿರ್ದೇಶಕ ಮತ್ತು ಸಿಇಒ ಧೀರಜ್ ರೆಲ್ಲಿ ಹೇಳಿದ್ದಾರೆ.

ಜಾಗತಿಕ ವ್ಯಾಪಾರದಲ್ಲಿ ಸುಂಕದ ಪರಿಣಾಮವಾಗಿ ತೊಂದರೆಗೆ ಒಳಗಾಗಿರುವ ವಲಯಗಳಿಗೆ ಬಜೆಟ್ ನೆರವಾಗಿದೆ. ದತ್ತಾಂಶ ಕೇಂದ್ರಗಳು, ಜಿಸಿಸಿ, ಸೆಮಿ-ಕಂಡಕ್ಟರ್‌ಗಳು, ವಿರಳ ಲೋಹ ಮತ್ತು ತಯಾರಿಕೆ ಸೇರಿದಂತೆ ಮುಂದೆ ಅಭಿವೃದ್ಧಿಗೆ ಉತ್ತೇಜನ ನೀಡುವ ಕ್ಷೇತ್ರಗಳ ಮೇಲೆ ಗಮನ ನೀಡಿದೆ ಎಂದು ಜಿಯೋಜಿತ್ ಇನ್ವೆಸ್ಟ್‌ಮೆಂಟ್ಸ್ ಲಿಮಿಟೆಡ್‌ನ ಸಂಶೋಧನಾ ಮುಖ್ಯಸ್ಥ ವಿನೋದ್ ನಾಯರ್ ಹೇಳಿದ್ದಾರೆ.

‘ಹೀಗಿದ್ದರೂ ಮಾರುಕಟ್ಟೆಯು ನಕಾರಾತ್ಮಕ ಪ್ರತಿಕ್ರಿಯೆ ನೀಡಿದೆ. ಇದಕ್ಕೆ ಒಂದು ಮುಖ್ಯ ಕಾರಣ ಎಸ್‌ಟಿಟಿ ಶುಲ್ಕ ಹೆಚ್ಚಳ. ಇದರಿಂದಾಗಿ, ಹೆಚ್ಚಿನ ಆಲೋಚನೆ ಇಲ್ಲದ ತಕ್ಷಣದ ಪ್ರತಿಕ್ರಿಯೆ ಮಾರುಕಟ್ಟೆಗಳಲ್ಲಿ ಕಂಡುಬಂದಿದೆ’ ಎಂದು ಅವರು ವಿವರಿಸಿದ್ದಾರೆ.

ಸಣ್ಣ ಹೂಡಿಕೆದಾರರನ್ನು ರಕ್ಷಿಸಲು ಎಸ್‌ಟಿಟಿ ಏರಿಕೆ: ನಿರ್ಮಲಾ

ನವದೆಹಲಿ (ಪಿಟಿಐ): ಫ್ಯೂಚರ್ಸ್ ಮತ್ತು ಆಪ್ಷನ್ಸ್ ವಹಿವಾಟಿಗೆ ಸಂಬಂಧಿಸಿದ ಷೇರು ವಹಿವಾಟು ತೆರಿಗೆಯನ್ನು (ಎಸ್‌ಟಿಟಿ) ಹೆಚ್ಚಿಸುವ ಮೂಲಕ, ಹೆಚ್ಚು ಅಪಾಯದ ಹಾಗೂ ಊಹೆ ಆಧರಿಸಿದ ವಹಿವಾಟುಗಳನ್ನು ತಡೆಯುವ ಉದ್ದೇಶ ಸರ್ಕಾರದ್ದಾಗಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಿಳಿಸಿದರು. ಭಾರಿ ಪ್ರಮಾಣದಲ್ಲಿ ಹಣ ಕಳೆದುಕೊಳ್ಳುತ್ತಿರುವ ಹೂಡಿಕೆದಾರರನ್ನು ಕಾಪಾಡುವ ಉದ್ದೇಶ ಇದೆ ಎಂದು ಅವರು ಹೇಳಿದರು.

‘ಫ್ಯೂಚರ್ ಟ್ರೇಡಿಂಗ್’ನ ಎಸ್‌ಟಿಟಿ ಅನ್ನು ಶೇ 0.02ರಿಂದ ಶೇ 0.05ರಷ್ಟಕ್ಕೆ ಮತ್ತು ‘ಆಪ್ಷನ್ ಟ್ರೇಡಿಂಗ್’ ಎಸ್‌ಟಿಟಿಯನ್ನು ಶೇ 0.15ಕ್ಕೆ ಈ ಬಜೆಟ್‌ನಲ್ಲಿ ಏರಿಸಲಾಗಿದೆ.

ಸರ್ಕಾರ ಈ ವಹಿವಾಟಿನ ವಿರುದ್ಧ ಇಲ್ಲ. ಆದರೆ ದೊಡ್ಡ ಪ್ರಮಾಣದಲ್ಲಿ ನಷ್ಟಕ್ಕೆ ಒಳಗಾಗುವಂತಹ ಸಣ್ಣ ಹೂಡಿಕೆದಾರರನ್ನು ‘ಫ್ಯೂಚರ್ಸ್ ಆ್ಯಂಡ್ ಆಪ್ಷನ್ಸ್’ ಮಾರುಕಟ್ಟೆಯಿಂದ ದೂರ ಉಳಿಯುವಂತೆ ಮಾಡಲು ಬಯಸುತ್ತದೆ ಎಂದು ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಬಾರಿಯ ಬಜೆಟ್‌ನಲ್ಲಿ ವಿತ್ತೀಯ ಕೊರತೆಯನ್ನು ಶೇ 4.3ಕ್ಕೆ ಇಳಿಸಲು ಪ್ರಸ್ತಾಪಿಸಲಾಗಿದೆ. ಇದು ವಾಸ್ತವವೂ ಜವಾಬ್ದಾರಿಯುತವೂ ಹೌದು. ಕಳೆದ ಸಾಲಿನಲ್ಲಿ ಇದು ಶೇ 4.4ರಷ್ಟಿತ್ತು ಎಂದು ಅವರು ವಿವರಿಸಿದರು.

ಚುನಾವಣೆ ಎದುರಿಸಲಿರುವ ರಾಜ್ಯಗಳಿಗೆ ಬಜೆಟ್‌ನಲ್ಲಿ ಯಾವುದೇ ದೊಡ್ಡ ಘೋಷಣೆಗಳನ್ನು ಮಾಡದ ಬಗ್ಗೆ ಪ್ರತಿಕ್ರಿಯಿಸಿದ ಅವರು, ‘ದೇಶದ ಪೂರ್ವ ಮತ್ತು ಪಶ್ಚಿಮ ಭಾಗಗಳಲ್ಲಿ ಕೈಗಾರಿಕಾ ಕಾರಿಡಾರ್‌ಗಳು ಸೇರಿದಂತೆ ವಿವಿಧ ಯೋಜನೆಗಳ ಘೋಷಣೆಗಳನ್ನು ಮಾಡಲಾಗಿದೆ. ಇದು ಚುನಾವಣೆ ನಡೆಯುವ ರಾಜ್ಯಗಳು ಮತ್ತು ಇತರ ಎಲ್ಲ ರಾಜ್ಯಗಳನ್ನು ಒಳಗೊಳ್ಳುತ್ತದೆ’ ಎಂದು ಹೇಳಿದ್ದಾರೆ.

‘ಎಂಎಸ್‌ಎಂಇಗಳ ಬೆಳವಣಿಗೆಗೆ ಪೂರಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಸಕ್ತ ಬಜೆಟ್‌ನಲ್ಲಿ ಹೈ-ಸ್ಪೀಡ್ ರೈಲು ಕಾರಿಡಾರ್‌ಗಳ ಪ್ರಸ್ತಾಪ ಆಗಿದೆ. ಇದು ದೇಶದ ವಿವಿಧ ನಗರಗಳ ನಡುವೆ ಸಂಪರ್ಕ ವೃದ್ಧಿಸುವ ಜೊತೆಗೆ ರಾಜ್ಯದಲ್ಲಿನ ಎಂಎಸ್‌ಎಂಇಗಳ ಬೆಳವಣಿಗೆಗೆ ಅನುಕೂಲ ಕಲ್ಪಿಸಲಿದೆ’ ಎಂದು ಕರ್ನಾಟಕ ವಾಣಿಜ್ಯ ಮತ್ತು ಕೈಗಾರಿಕಾ ಮಹಾಸಂಸ್ಥೆಯ (ಎಫ್‌ಕೆಸಿಸಿಐ) ಅಧ್ಯಕ್ಷೆ ಉಮಾ ರೆಡ್ಡಿ ಹೇಳಿದ್ದಾರೆ.



ಉಮಾ ರೆಡ್ಡಿ

ಅಮೆರಿಕದ ಸುಂಕ ಹೇರಿಕೆ ನಡುವೆ ಎಂಎಸ್‌ಎಂಇ ವಲಯಕ್ಕೆ ಕೇಂದ್ರವು ನೆರವು ನೀಡಿದೆ. ಸರಕುಗಳನ್ನು ಸಾಗಿಸಲು ಕಂಟೇನರ್‌ಗಳ ಕೊರತೆ ಇತ್ತು. ಇದೀಗ ದೇಶದಲ್ಲಿ ಕಂಟೇನರ್‌ಗಳನ್ನು ತಯಾರಿಸಲು ಕಾರ್ಖಾನೆ ಸ್ಥಾಪಿಸಲಾಗುವುದು ಎಂದು ಬಜೆಟ್‌ನಲ್ಲಿ ಘೋಷಿಸಲಾಗಿದೆ. ಅಲ್ಲದೆ, ಹೊಸ ಜಲಮಾರ್ಗಗಳನ್ನು ಘೋಷಿಸಿದೆ. ಇದು ಸಾಗಣೆ ವೆಚ್ಚವನ್ನು ಕಡಿಮೆ ಮಾಡಲಿದೆ ಎಂದು ಹೇಳಿದ್ದಾರೆ.

ಎಂಎಸ್‌ಎಂಇ, ಎಲೆಕ್ಟ್ರಾನಿಕ್ಸ್, ಸೆಮಿಕಂಡಕ್ಟರ್ ವಲಯಕ್ಕೆ ನೆರವು ನೀಡಲಾಗಿದೆ. ಅಲ್ಲದೆ, ಎರಡು ಮತ್ತು ಮೂರನೇ ಹಂತಗಳ ನಗರಗಳ ಅಭಿವೃದ್ಧಿಯ ಮೇಲೆ ಬಜೆಟ್ ವಿಶೇಷ ಗಮನ ನೀಡಿದೆ ಎಂದು ತಿಳಿಸಿದ್ದಾರೆ.

ಕರ್ನಾಟಕದ ಕೈಗಾರಿಕಾ ಕಾರಿಡಾರ್‌ಗಳು ಹಾಗೂ ಇತರೆ ಬೆಳವಣಿಗೆ ಕೇಂದ್ರಗಳಿಗೆ ಬಜೆಟ್ ನೇರ ಲಾಭವನ್ನು ನೀಡಲಿದೆ. ಇದು ನಾವೀನ್ಯ ಮತ್ತು ಉದ್ಯೋಗ ಸೃಷ್ಟಿಯಲ್ಲಿ ಮುಂಚೂಣಿಯಲ್ಲಿರುವ ಕರ್ನಾಟಕದ ಸ್ಥಾನವನ್ನು ಇನ್ನಷ್ಟು ಬಲಪಡಿಸಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದ್ದಾರೆ.

2026–27ರ ಕೇಂದ್ರ ಬಜೆಟ್ ಭವಿಷ್ಯದತ್ತ ನೋಟ ಹೊಂದಿದ್ದು, ಆರ್ಥಿಕ ಶಿಸ್ತನ್ನು ಕಾಪಾಡಿಕೊಂಡೇ ಭಾರತದ ಆರ್ಥಿಕ ಬೆಳವಣಿಗೆಯ ವೇಗವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ತಿಳಿಸಿದ್ದಾರೆ.


ಎಂಎಸ್‌ಎಂಇ ವಲಯಕ್ಕೆ ನೆರವು ಬಂಡವಾಳದ ಕೊರತೆಯನ್ನು ಎದುರಿಸುತ್ತಿರುವ ಎಂಎಸ್‌ಎಂಇ ವಲಯದ ಉದ್ದಿಮೆಗಳಿಗೆ ಬಜೆಟ್ ಅನುಕೂಲ ಕಲ್ಪಿಸಿದೆ. ಬಜೆಟ್‌ನಲ್ಲಿ ಹೇಳಿರುವ ಕೆಲವು ಕ್ರಮಗಳು ಎಂಎಸ್‌ಎಂಇ ವಲಯಕ್ಕೆ ಹೆಚ್ಚು ನಗದು ಲಭ್ಯವಾಗುವಂತೆ ಮಾಡುತ್ತವೆ. ಕಾರ್ಪೊರೇಟ್ ಮಿತ್ರ ಉಪಕ್ರಮವು ಎಂಎಸ್‌ಎಂಇ ವಲಯದ ಬೆಳವಣಿಗೆಗೆ ನೆರವಾಗಲಿದೆ.

ಸಿಮ್ರನ್‌ಜೀತ್ ಸಿಂಗ್, ಆನಂದ ರಾಠಿ ಗ್ಲೋಬಲ್ ಫೈನಾನ್ಸ್‌ನ ಎಸ್‌ಎಂಇ ವಿಭಾಗದ ಸಿಇಒ

‘ಉದ್ಯಮಗಳಿಗೆ ದೃಢ ಅಡಿಪಾಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಕೇಂದ್ರ ಬಜೆಟ್ ದೃಢ ಅಡಿಪಾಯ ಹಾಕಿದೆ’ ಎಂದು ಕರ್ನಾಟಕ ಸಣ್ಣ ಕೈಗಾರಿಕಾ ಸಂಘ (ಕಾಸಿಯಾ) ಹೇಳಿದೆ.



ಬಿ.ಆರ್. ಗಣೇಶ್ ರಾವ್

‘ದೇಶದಲ್ಲಿ ತಯಾರಿಕಾ ವಲಯ ಬಲಪಡಿಸುವುದಕ್ಕೆ, ಎಂಎಸ್‌ಎಂಇಗಳ ವಿಸ್ತರಣೆ ಮತ್ತು ಮೂಲಸೌಕರ್ಯ ಅಭಿವೃದ್ಧಿಗೆ ಬಜೆಟ್ ಒತ್ತು ನೀಡಿದ್ದು, ಸಮಗ್ರ ಅಭಿವೃದ್ಧಿ ದೃಷ್ಟಿಕೋನವನ್ನು ಪ್ರತಿಬಿಂಬಿಸುತ್ತದೆ’ ಎಂದು ಕಾಸಿಯಾ ಅಧ್ಯಕ್ಷ ಬಿ.ಆರ್. ಗಣೇಶ್ ರಾವ್ ಹೇಳಿದ್ದಾರೆ.

ಬಜೆಟ್‌ನ ಕ್ರಮಗಳು ದೇಶದಾದ್ಯಂತ ಅತಿಸಣ್ಣ ಹಾಗೂ ಸಣ್ಣ ಉದ್ಯಮಗಳಿಗೆ ಪ್ರೇರಣೆ ನೀಡಲಿವೆ. ಈ ಕ್ರಮಗಳು ಉದ್ಯಮಗಳಿಗೆ ಹಣಕಾಸಿನ ನೆರವನ್ನು ಒದಗಿಸುವುದಲ್ಲದೆ, ರಫ್ತು ಮತ್ತು ತಂತ್ರಜ್ಞಾನ ಆಧಾರಿತ ಸಣ್ಣ ಉದ್ಯಮಗಳನ್ನು ಬೆಳೆಸುವ ಉದ್ದೇಶ ಹೊಂದಿದೆ ಎಂದು ತಿಳಿಸಿದ್ದಾರೆ.

ಕ್ಲಸ್ಟರ್ ಆಧುನೀಕರಣದ ಮೇಲೆ ಬಜೆಟ್ ನೀಡಿರುವ ಒತ್ತು ಸಣ್ಣ ಕೈಗಾರಿಕೆಗಳಿಗೆ ಹೊಸ ಅವಕಾಶಗಳನ್ನು ತೆರೆಯಬಹುದಾದರೂ ತಯಾರಿಕಾ ವೆಚ್ಚ ಕಡಿತ ಮತ್ತು ಸಾಲ ನೀಡುವ ಪ್ರಕ್ರಿಯೆಗಳ ಸುಧಾರಣೆಗೆ ಇನ್ನಷ್ಟು ಗಮನ ನೀಡುವ ಅಗತ್ಯವಿದೆ ಎಂದು ಹೇಳಿದ್ದಾರೆ.

ಕೇಂದ್ರ ಹಣಕಾಸು ಸಚಿವರಿಗೆ ಕಾಸಿಯಾ ಸಲ್ಲಿಸಿದ್ದ ಕೆಲವು ಸಲಹೆಗಳನ್ನು ಬಜೆಟ್ ಒಳಗೊಂಡಿಲ್ಲ. ಸಲಹೆಗಳನ್ನು ಅಂಗೀಕರಿಸಿದ್ದಲ್ಲಿ ವಿಶೇಷವಾಗಿ ತಯಾರಿಕಾ ವಲಯಕ್ಕೆ ಹೆಚ್ಚಿನ ಪ್ರೋತ್ಸಾಹ ದೊರಕುತ್ತಿತ್ತು ಎಂದು ತಿಳಿಸಿದ್ದಾರೆ.

ಐ.ಟಿ ವಿವರ ಸಲ್ಲಿಕೆಗೆ ಗಡುವು ವಿಸ್ತರಣೆ

ನವದೆಹಲಿ (ಪಿಟಿಐ): ಪರಿಷ್ಕೃತ ಆದಾಯ ತೆರಿಗೆ ವಿವರ ಸಲ್ಲಿಕೆಗೆ ಗಡುವನ್ನು ಡಿಸೆಂಬರ್ 31ರ ಬದಲು ಮಾರ್ಚ್ 31ರವರೆಗೆ ವಿಸ್ತರಿಸುವ ಘೋಷಣೆಯನ್ನು ಬಜೆಟ್ ಮೂಲಕ ಮಾಡಲಾಗಿದೆ.

ವಿದೇಶ ಪ್ರವಾಸದ ಪ್ಯಾಕೇಜ್‌ಗಳ ಮೇಲೆ ವಿಧಿಸಲಾಗುವ ಮೂಲದಲ್ಲೇ ತೆರಿಗೆ ಸಂಗ್ರಹವನ್ನು (ಟಿಸಿಎಸ್) ಶೇ 5ರಿಂದ ಶೇ 2ಕ್ಕೆ ಇಳಿಕೆ ಮಾಡಲಾಗಿದೆ. ಶಿಕ್ಷಣ, ವೈದ್ಯಕೀಯ ಶಿಕ್ಷಣವನ್ನು ಮುಂದುವರಿಸಲು ಟಿಸಿಎಸ್ ದರವನ್ನು ಉದಾರೀಕೃತ ಹಣ ವರ್ಗಾವಣೆ ಯೋಜನೆಯ ಅಡಿ ಶೇ 5ರಿಂದ ಶೇ 2ಕ್ಕೆ ಇಳಿಸಲಾಗಿದೆ.

ಸುದ್ದಿ 2 ನಿಮಿಷ

ಬ್ಯಾಂಕಿಂಗ್ ವಲಯದ ಪರಿಶೀಲನೆಗೆ ಸಮಿತಿ

ನವದೆಹಲಿ (ಪಿಟಿಐ): ‘ವಿಕಸಿತ ಭಾರತಕ್ಕಾಗಿ ಬ್ಯಾಂಕಿಂಗ್ ಕುರಿತ ಉನ್ನತ ಮಟ್ಟದ ಸಮಿತಿ’ಯೊಂದನ್ನು ರಚಿಸುವುದಾಗಿ ಬಜೆಟ್‌ನಲ್ಲಿ ಪ್ರಕಟಿಸಲಾಗಿದೆ. ಬ್ಯಾಂಕಿಂಗ್ ವಲಯವು ದೇಶದ ಮುಂದಿನ ಹಂತದ ಬೆಳವಣಿಗೆಗೆ ಪೂರಕವಾಗಿ ಇರುವಂತೆ ಮಾಡಲು ಈ ಸಮಿತಿಯು ಬ್ಯಾಂಕಿಂಗ್ ವಲಯದ ಬಗ್ಗೆ ಸಮಗ್ರ ಪರಿಶೀಲನೆ ನಡೆಸಲಿದೆ.

ಇಂದು ದೇಶದ ಬ್ಯಾಂಕಿಂಗ್ ವಲಯದ ಹಣಕಾಸಿನ ಸ್ಥಿತಿ ಬಹಳ ಗಟ್ಟಿಯಾಗಿದೆ. ದೇಶದ ಬ್ಯಾಂಕ್‌ಗಳು ಹಿಂದೆಂದೂ ಕಾಣದ ಮಟ್ಟದ ಲಾಭ ಗಳಿಸುತ್ತಿವೆ. ಬ್ಯಾಂಕ್‌ಗಳ ಆಸ್ತಿ ಗುಣಮಟ್ಟ ಬಹಳ ಸುಧಾರಿಸಿದೆ. ದೇಶದ ಶೇಕಡ 98ರಷ್ಟಕ್ಕಿಂತ ಹೆಚ್ಚು ಗ್ರಾಮಗಳಿಗೆ ಬ್ಯಾಂಕಿಂಗ್ ಸೇವೆ ತಲುಪಿದೆ ಎಂದು ನಿರ್ಮಲಾ ಸೀತಾರಾಮನ್ ಅವರು ಬಜೆಟ್‌ನಲ್ಲಿ ಹೇಳಿದ್ದಾರೆ.

ಹಣಕಾಸಿನ ಸ್ಥಿರತೆ, ಹಣಕಾಸಿನ ಒಳಗೊಳ್ಳುವಿಕೆ ಮತ್ತು ಗ್ರಾಹಕರಿಗೆ ನೀಡಿರುವ ರಕ್ಷಣೆಯನ್ನು ಕಾಪಾಡುವ ನಿಟ್ಟಿನಲ್ಲಿಯೂ ಈ ಸಮಿತಿಯು ಗಮನ ನೀಡಲಿದೆ ಎಂದು ನಿರ್ಮಲಾ ಅವರು ಹೇಳಿದ್ದಾರೆ.

ಸರ್ಕಾರಿ ಸ್ವಾಮ್ಯದ ಬ್ಯಾಂಕೇತರ ಹಣಕಾಸು ಕಂಪನಿಗಳ ಸಾಮರ್ಥ್ಯವನ್ನು ಹೆಚ್ಚು ಮಾಡಲು ಹಾಗೂ ಅವುಗಳ ಗಾತ್ರವನ್ನು ದೊಡ್ಡದಾಗಿಸಲು ಸರ್ಕಾರಿ ಸ್ವಾಮ್ಯದ ಪವರ್ ಫೈನಾನ್ಸ್ ಕಾರ್ಪೊರೇಷನ್ (ಪಿಎಫ್‌ಸಿ) ಮತ್ತು ರೂರಲ್ ಎಲೆಕ್ಟ್ರಿಫಿಕೇಷನ್ ಕಾರ್ಪೊರೇಷನ್ (ಆರ್‌ಇಸಿ) ಕಂಪನಿಗಳನ್ನು ಪುನರ್‌ರಚಿಸಲಾಗುತ್ತದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.



ಮೋಟಾರು ಅಪಘಾತ ಕ್ಲೇಮ್‌ಗಳಿಗೆ ತೆರಿಗೆ ವಿನಾಯಿತಿ

ನವದೆಹಲಿ (ಪಿಟಿಐ): ಮೋಟಾರು ಅಪಘಾತ ಕ್ಲೇಮ್‌ಗಳಿಗೆ ತೆರಿಗೆ ವಿನಾಯಿತಿಯನ್ನು ಬಜೆಟ್‌ನಲ್ಲಿ ಘೋಷಿಸಲಾಗಿದೆ.

ಅಪಘಾತ ಪ್ರಕರಣಗಳಲ್ಲಿ ಮೋಟಾರು ಅಪಘಾತ ಕ್ಲೇಮ್ ನ್ಯಾಯಮಂಡಳಿಯಿಂದ ಪಡೆದುಕೊಳ್ಳುವ ಬಡ್ಡಿ ರೂಪದಲ್ಲಿನ ಯಾವುದೇ ಆದಾಯಕ್ಕೆ ತೆರಿಗೆ ಇರುವುದಿಲ್ಲ ಎಂದು ಘೋಷಿಸಲಾಗಿದೆ.

1988ರ ಮೋಟಾರು ವಾಹನ ಕಾಯ್ದೆಯ ಪ್ರಕಾರ, ಅಪಘಾತಕ್ಕೆ ಒಳಗಾದ ವ್ಯಕ್ತಿಯ ಕಾನೂನುಬದ್ಧ ಉತ್ತರಾಧಿಕಾರಿಗೆ ವ್ಯಕ್ತಿಯ ಸಾವು ಅಥವಾ ಶಾಶ್ವತ ಅಂಗವೈಕಲ್ಯ ಅಥವಾ ಕಾಯ್ದೆಯ ಅಡಿಯಲ್ಲಿ ತಿಳಿಸಲಾದ ಯಾವುದೇ ದೈಹಿಕ ಗಾಯ ಆದಲ್ಲಿ ನ್ಯಾಯಮಂಡಳಿಯು ಪರಿಹಾರ ಮೊತ್ತ ಹಾಗೂ ಬಡ್ಡಿ ಒದಗಿಸುತ್ತದೆ.

ಯಾವುದೇ ವ್ಯಕ್ತಿ ಅಥವಾ ಅವರ ಕಾನೂನುಬದ್ಧ ಉತ್ತರಾಧಿಕಾರಿಗೆ ತೆರಿಗೆ ವಿನಾಯಿತಿ ನೀಡಲು ತಿದ್ದುಪಡಿ ಮಾಡಲು ಪ್ರಸ್ತಾಪಿಸಲಾಗಿದೆ ಎಂದು ಬಜೆಟ್‌ನಲ್ಲಿ ಹೇಳಲಾಗಿದೆ.

ಈ ತಿದ್ದುಪಡಿಯು ಪ್ರಸಕ್ತ ವರ್ಷದ ಏಪ್ರಿಲ್ 1ರಿಂದ ಜಾರಿಗೆ ಬರಲಿದೆ.

ರಾಜ್ಯದ ತೆರಿಗೆ ಪಾಲು ಅಲ್ಪ ಹೆಚ್ಚಳ

ಒಂದನೇ ಪುಟದಿಂದ...

ವಿಪತ್ತು ನಿರ್ವಹಣೆಗಾಗಿ ರಾಜ್ಯಕ್ಕೆ ಐದು ವರ್ಷಗಳ ಅವಧಿಗೆ ₹8,559 ಕೋಟಿ ಹಂಚಿಕೆ ಮಾಡಲಾಗಿದೆ. ಇದರಲ್ಲಿ ಎಸ್‌ಡಿಆರ್‌ಎಫ್‌ಗೆ (ರಾಜ್ಯ ವಿಪತ್ತು ನಿರ್ವಹಣೆ ನಿಧಿ) ₹6,847 ಕೋಟಿ ಹಾಗೂ ಎಸ್‌ಡಿಎಂಎಫ್‌ಗೆ (ರಾಜ್ಯ ವಿಪತ್ತು ತಗ್ಗಿಸುವಿಕೆ ನಿಧಿ) ₹1,712 ಕೋಟಿ. ಆದರೆ, ಇಲ್ಲಿ ಎಸ್‌ಡಿಆರ್‌ಎಫ್ ಹಾಗೂ ಎಸ್‌ಡಿಎಂಎಫ್‌ಗೆ ರಾಜ್ಯದ ಪಾಲು ತಲಾ ₹1,711 ಕೋಟಿ ಹಾಗೂ ₹428 ಕೋಟಿ ಇದೆ. ಆಯೋಗವು ಒಂದು ಕಡೆಯಲ್ಲಿ ತೆರಿಗೆ ಪಾಲನ್ನು ಹೆಚ್ಚಿಸಿ ಇನ್ನೊಂದು ಕಡೆಯಲ್ಲಿ ಕಿತ್ತುಕೊಳ್ಳುವ ಕೆಲಸ ಮಾಡಿದೆ. ಆಯೋಗ ವಿಧಿಸಿರುವ ಷರತ್ತುಗಳನ್ನು ಪಾಲನೆ ಮಾಡಿದರಷ್ಟೇ ನಗರ ಹಾಗೂ ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ದೊರಕಲಿದೆ. ಸ್ಥಳೀಯ ಸಂಸ್ಥೆಗಳಿಗೆ ಸಕಾಲಕ್ಕೆ ಚುನಾವಣೆ ನಡೆಸದ ಕಾರಣಕ್ಕೆ 15ನೇ ಹಣಕಾಸು ಆಯೋಗದ ₹1,219 ಕೋಟಿ ಅನುದಾನಕ್ಕೆ ಕೇಂದ್ರ ಸರ್ಕಾರ ಕತ್ತರಿ ಹಾಕಿರುವುದನ್ನು ಇಲ್ಲಿ ನೆನಪಿಸಬಹುದು.

15ನೇ ಹಣಕಾಸು ಆಯೋಗವು ಜನಸಂಖ್ಯೆಯನ್ನು 1971ರ ಬದಲಾಗಿ 2011ನ್ನು ಆಧಾರವಾಗಿರಿಸಿಕೊಂಡ ಕಾರಣದಿಂದಲೂ ರಾಜ್ಯಕ್ಕೆ ತೀವ್ರ ರೂಪದ ಅನ್ಯಾಯವಾಗಿದೆ. ಜನಸಂಖ್ಯಾ ನಿಯಂತ್ರಣದ ಮೂಲಕ ಅಭಿವೃದ್ಧಿ ಸಾಧಿಸುತ್ತಿರುವ ರಾಜ್ಯಗಳಿಗೆ ಇದರಿಂದ ದೊಡ್ಡ ಹೊಡೆತ ಬಿದ್ದಿತು’ ಎಂದು ಕರ್ನಾಟಕ ಸರ್ಕಾರವು ಆಕ್ಷೇಪ ವ್ಯಕ್ತಪಡಿಸಿತ್ತು. ಈ ಸಲವೂ 2011ರ ಜನಸಂಖ್ಯೆಯನ್ನೇ ಆಧಾರವಾಗಿಟ್ಟುಕೊಂಡು ತೆರಿಗೆ ಪಾಲು ಹಂಚಿಕೆ ಮಾಡಲಾಗಿದೆ.

ಇನ್ನೊಂದೆಡೆ, ವಿಶೇಷ ಮೂಲಸೌಕರ್ಯ ವ್ಯವಸ್ಥೆ ಒದಗಿಸಲು ಅರ್ಹ ನಗರಗಳನ್ನು ಆಯೋಗ ಪಟ್ಟಿ ಮಾಡಿದೆ. ಈ ಪಟ್ಟಿಯಲ್ಲಿ ರಾಜ್ಯದ ಯಾವ ನಗರವೂ ಸ್ಥಾನ ಪಡೆದಿಲ್ಲ.

ರಾಜ್ಯಗಳಿಗೆ ತೆರಿಗೆ ಪಾಲು (ಹಂಚಿಕೆ (₹ಕೋಟಿಗಳಲ್ಲಿ))

ರಾಜ್ಯ	ಶೇ	2026–27ರಲ್ಲಿ ಹಂಚಿಕೆ
ಆಂಧ್ರ ಪ್ರದೇಶ	4.21	64,362
ಅರುಣಾಚಲ ಪ್ರದೇಶ	1.35	20,665
ಅಸ್ಸಾಂ	3.25	49,725
ಬಿಹಾರ	9.94	1,51,831
ಛತ್ತೀಸಗಢ	3.30	50,427
ಗೋವಾ	0.36	5,570
ಗುಜರಾತ್	3.75	57,310
ಹರಿಯಾಣ	1.36	20,772
ಹಿಮಾಚಲ ಪ್ರದೇಶ	0.91	13,949
ಜಾರ್ಖಂಡ್	3.35	51,236
ಕರ್ನಾಟಕ	4.13	63,049
ಕೇರಳ	2.38	36,355
ಮಧ್ಯ ಪ್ರದೇಶ	7.34	1,12,133
ಮಹಾರಾಷ್ಟ್ರ	6.44	98,306
ಮಣಿಪುರ	0.62	9,554
ಮೇಘಾಲಯ	0.63	9,630
ಮಿಜೊರಾಂ	0.56	8,608
ನಾಗಾಲ್ಯಾಂಡ್	0.48	7,341
ಒಡಿಶಾ	4.42	67,460
ಪಂಜಾಬ್	1.99	30,464
ರಾಜಸ್ಥಾನ	5.92	90,445
ಸಿಕ್ಕಿಂ	0.33	5,112
ತಮಿಳುನಾಡು	4.09	62,530
ತೆಲಂಗಾಣ	2.17	33,180
ತ್ರಿಪುರ	0.64	9,783
ಉತ್ತರ ಪ್ರದೇಶ	17.61	2,68,910
ಉತ್ತರಾಖಂಡ	1.14	17,414
ಪಶ್ಚಿಮ ಬಂಗಾಳ	7.21	1,10,119

16ನೇ ಹಣಕಾಸು ಆಯೋಗ; ರಾಜ್ಯದ ಯಾವುದಕ್ಕೆ ಎಷ್ಟು?

ರಾಜ್ಯ ವಿಪತ್ತು ನಿರ್ವಹಣೆ ನಿಧಿ (ಎಸ್‌ಡಿಆರ್‌ಎಫ್)

ವರ್ಷ	ಮೊತ್ತ (₹ಕೋಟಿಗಳಲ್ಲಿ)
2026–27	1,239
2027–28	1,301
2028–29	1,366
2029–30	1,434
2030–31	1,507

ರಾಜ್ಯ ವಿಪತ್ತು ತಗ್ಗಿಸುವಿಕೆ ನಿಧಿ (ಎಸ್‌ಡಿಎಂಎಫ್)

ವರ್ಷ	ಮೊತ್ತ (₹ಕೋಟಿಗಳಲ್ಲಿ)
2026–27	310
2027–28	326
2028–29	342
2029–30	359
2030–31	375

ಗ್ರಾಮೀಣ ಸ್ಥಳೀಯ ಸಂಸ್ಥೆಗಳಿಗೆ ಅನುದಾನ

ವರ್ಷ	ಮೊತ್ತ
2026–27	2,427
2027–28	3,094
2028–29	4,000
2029–30	4,440
2030–31	4,928
ಒಟ್ಟು	18,889

ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ

ವರ್ಷ	ಮೊತ್ತ
2026–27	2,374
2027–28	3,420
2028–29	3,797
2029–30	4,214
2030–31	4,678
ಒಟ್ಟು	18,483

ಹಸ್ತಪ್ರತಿ ಡಿಜಿಟಲೀಕರಣ; ಆರ್ಥಿಕ ಕೊರತೆ

• ಗೋವರ್ಧನ ಎಸ್.ಎನ್.

ಹುಬ್ಬಳ್ಳಿ: ಪ್ರಾಚೀನ ಹಸ್ತಪ್ರತಿಗಳ ಡಿಜಿಟಲೀಕರಣಕ್ಕಾಗಿ, ‘ಕರ್ನಾಟಕ ಜ್ಞಾನಭಂಡಾರ ಹಸ್ತಪ್ರತಿಗಳು ಹಾಗೂ ಡಿಜಿಟಲೀಕರಣ ಮಸೂದೆ–2025’ಕ್ಕೆ ಈಚೆಗೆ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅನುಮೋದನೆ ದೊರೆತಿದೆ. ಆದರೆ, ತಾಳೆಗರಿಗಳಲ್ಲಿ ಇರುವ ವಚನ ಸಾಹಿತ್ಯವು ನಾಶವಾಗದಂತೆ, ಅದನ್ನು ಡಿಜಿಟಲೀಕರಣಗೊಳಿಸಿ ಶಾಶ್ವತವಾಗಿ ಕಾಪಾಡುವ ಕಾರ್ಯಕ್ಕೆ ಹಣಕಾಸಿನ ಕೊರತೆ ಉಂಟಾಗಿದೆ.

ಇ-ಸಾಹಿತ್ಯ ದಾಖಲೀಕರಣ, ಸಂಶೋಧನಾ ಕೇಂದ್ರದ ಮುಖ್ಯಸ್ಥ ಅಶೋಕ ದೊಮ್ಮಲೂರು ಅವರು ತಮ್ಮ ತಂಡದೊಂದಿಗೆ ಸ್ವಯಂಪ್ರೇರಿತವಾಗಿ, ಸ್ವಂತ ಹಣ ಹಾಗೂ ಇತರರ ನೆರವಿನೊಂದಿಗೆ ಈವರೆಗೆ 50 ಲಕ್ಷ ಹಸ್ತಪ್ರತಿಗಳನ್ನು ಡಿಜಿಟಲೀಕರಣ ಮಾಡಿದ್ದಾರೆ. ವಿವಿಧೆಡೆ ಕೋಟ್ಯಂತರ ಹಸ್ತಪ್ರತಿಗಳಿದ್ದು, ಆರ್ಥಿಕ ತೊಂದರೆಯಿಂದ ಅವುಗಳ ಡಿಜಿಟಲೀಕರಣಕ್ಕೆ ತೊಡಕಾಗಿದೆ.

‘ಹುಬ್ಬಳ್ಳಿಯ ಮೂರುಸಾವಿರ ಮಠ, ಗದುಗಿನ ತೋಂಟದಾರ್ಯ ಮಠ, ಬೆಳಗಾವಿಯ ನಾಗಲೂರು ರುದ್ರಾಕ್ಷಿ ಮಠ, ಚಿತ್ರದುರ್ಗದ ಸಿರಿಗೆರೆ ಮಠ, ತುಮಕೂರಿನ ಸಿದ್ದಗಂಗಾಮಠ ಸೇರಿ ಧಾರವಾಡ, ಗುಲಬರ್ಗಾ, ಶಿವಮೊಗ್ಗ ವಿಶ್ವವಿದ್ಯಾಲಯಗಳಲ್ಲಿ ಹಸ್ತಪ್ರತಿಗಳನ್ನು ಉಚಿತವಾಗಿ ಡಿಜಿಟಲೀಕರಣ ಮಾಡಲಾಗಿದೆ. ಬೆಂಗಳೂರು ವಿಶ್ವವಿದ್ಯಾಲಯ, ಕೆಳದಿ ವಸ್ತುಸಂಗ್ರಹಾಲಯದಲ್ಲಿನ ತಾಳೆಗರಿಗಳ ಡಿಜಿಟಲೀಕರಣ ಮಾಡಬೇಕಿದೆ. ದಿನಕ್ಕೆ 15,000 ಪ್ರತಿಗಳನ್ನು ಸ್ಕ್ಯಾನ್ ಮಾಡಲಾಗುತ್ತಿದ್ದು, ತಿಂಗಳಿಗೆ ಕನಿಷ್ಠ ₹4.50 ಲಕ್ಷ ಖರ್ಚಾಗುತ್ತಿದೆ’ ಎಂದು ಕೇಂದ್ರದ ಅಶೋಕ ದೊಮ್ಮಲೂರು ಹೇಳಿದರು.

‘ನನ್ನದೇ ಖಾಸಗಿ ಕಂಪನಿ ಇರುವುದರಿಂದ, ಅದರಿಂದ ಬರುವ ಹಣದಲ್ಲಿ ₹1.50 ಲಕ್ಷವನ್ನು ಈ ಕಾರ್ಯಕ್ಕೆ ವಿನಿಯೋಗಿಸುತ್ತಿರುವೆ. 6 ತಿಂಗಳಿನಿಂದ ದೆಹಲಿಯ ಇಂಧು ನೆಟ್‌ವರ್ಕ್ ಸಂಸ್ಥೆಯಿಂದ ಭಾಗಶಃ ನೆರವು ಸಿಗುತ್ತಿದೆ. ಸರ್ಕಾರದಿಂದಾಗಲೀ, ಮಠಗಳಿಂದಾಗಲೀ ನೆರವು ಸಿಕ್ಕಿಲ್ಲ’ ಎಂದರು.

‘ಇಲ್ಲಿಯವರೆಗೆ ಆಗಿರುವುದು ವಚನಗಳ ಸಂಗ್ರಹವಷ್ಟೇ, ಪರಿಷ್ಕರಣೆ ಅಲ್ಲವೆಂದು ಫ.ಗು.ಹಳಕಟ್ಟಿ, ಎಂ.ಎಂ. ಕಲಬುರ್ಗಿ ಅವರೂ ಹೇಳಿದ್ದಾರೆ. ವಚನ ಸಾಹಿತ್ಯ ಅಧಿಕೃತವಾಗಬೇಕಾದರೆ, ತಾಳೆಗರಿಗಳಲ್ಲಿನ ಹಸ್ತಪ್ರತಿಗಳ ಡಿಜಿಟಲೀಕರಣ ಹಾಗೂ ಸಮಗ್ರ ಅಧ್ಯಯನ ಅವಶ್ಯವಿದೆ. ಇದಕ್ಕಾಗಿ ನಾನು, ತಂಡದೊಂದಿಗೆ ಶ್ರಮಿಸುತ್ತಿರುವೆ. ಸೀಮಿತ ಆರ್ಥಿಕ ಸಂಪನ್ಮೂಲದಲ್ಲೇ 2013ರಿಂದ ಡಿಜಿಟಲೀಕರಣ ಪ್ರಕ್ರಿಯೆ ನಿರಂತರವಾಗಿ ಜರುಗುತ್ತಿದೆ. ಹೆಚ್ಚಿನ ನೆರವು ಸಿಕ್ಕರೆ ವಚನ ಸಾಹಿತ್ಯಕ್ಕೆ ಹೊಸ ಆಯಾಮ ಸಿಗಬಹುದು’ ಎಂದು ಹೇಳಿದರು.

‘ಸೂಕ್ತ ಸಂಗ್ರಹಕ್ಕೂ ಖರ್ಚು’


‘ವಿಶ್ವವಿದ್ಯಾಲಯಗಳಲ್ಲೂ ನಿಧಿ ಇಲ್ಲದ ಕಾರಣ ನಮಗೆ ನೆರವು ಸಿಗುತ್ತಿಲ್ಲ. ತಂಡದಲ್ಲಿರುವ 15 ಜನರಿಗೆ ತಿಂಗಳಿಗೆ ₹15,000 ವೇತನ, ಶಾಸನ ತಜ್ಞರು, ಹಸ್ತಪ್ರತಿ ತಜ್ಞರು, ಲಿಪಿ ಓದುವವರು, ಪರಿಷ್ಕರಣೆ ಮಾಡುವವರಿಗೆ ಗೌರವಧನ, ಊಟ-ವಸತಿ ವ್ಯವಸ್ಥೆ ಮಾಡಿಕೊಡಬೇಕು. ಬಹುತೇಕ ಕಡೆ ಹಸ್ತಪ್ರತಿಗಳನ್ನು ಸರಿಯಾಗಿ ಸಂಗ್ರಹಿಸದ ಕಾರಣ ತಾಳೆಗರಿಗಳು ಹಾಳಾಗಿವೆ. ಅವನ್ನು ಫಮಿಗೇಷನ್ ಚೇಂಬರ್‌ನಲ್ಲಿಟ್ಟು, ಲೆಮನ್ ಗ್ರಾಸ್ ಲೇಪನ ಮಾಡಿ, ನಂತರ ಅಧ್ಯಯನ ಮಾಡಬೇಕಿದೆ. ಹಾಳಾಗದಂತೆ ಹೊಸಬಟ್ಟೆಯಲ್ಲಿ ಸುತ್ತಿ ಕೊಡುತ್ತೇವೆ. ಇದಕ್ಕೆಲ್ಲ ಹೆಚ್ಚು ಖರ್ಚಾಗುತ್ತದೆ’ ಎಂದು ಅಶೋಕ ದೊಮ್ಮಲೂರು ವಿವರಿಸಿದರು.



ಮಂಡ್ಯ ಜಿಲ್ಲೆಯ ಮೇಲುಕೋಟೆಯ ಭಗವದ್ ರಾಮಾನುಜ ರಾಷ್ಟ್ರೀಯ ಸಂಶೋಧನಾ ಕೇಂದ್ರದಲ್ಲಿ ತಾಡೋಲೆ ಹಸ್ತಪ್ರತಿಗಳನ್ನು ಡಿಜಿಟಲೀಕರಣ ಮಾಡಲು ಸಿದ್ಧಗೊಳಿಸಲಾಯಿತು

ಸದ್ಯ ದೊರೆತ ಹಸ್ತಪ್ರತಿಗಳು 200–300 ವರ್ಷಗಳಷ್ಟು ಹಳೆಯವು. ಮೂಲ ಹಸ್ತಪ್ರತಿಗಳ ಹುಡುಕಾಟದಲ್ಲಿದ್ದೇವೆ. ಅದಕ್ಕಾಗಿ ಜೈನರ ಬಸದಿಗಳಲ್ಲಿ ಸಂಶೋಧನೆ ನಡೆಯುತ್ತಿದೆ

ಅಶೋಕ ದೊಮ್ಮಲೂರು, ಮುಖ್ಯಸ್ಥ, ಇ-ಸಾಹಿತ್ಯ ದಾಖಲೀಕರಣ, ಸಂಶೋಧನಾ ಕೇಂದ್ರ



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ:	25,320
ಇಂದಿನ ಅಂತ್ಯ:	24,825
ದಿನದ ಕನಿಷ್ಠ:	24,571
	495

ರಾಮನಗರ ರೇಷ್ಮೆಗೂಡು

ಮಿಶ್ರತಳಿ(ಸಿ.ಬಿ)	₹400-751
ದ್ವಿತಳಿ (ಬಿ.ವಿ)	₹244-923

ಮೊಟ್ಟೆ ಧಾರಣೆ (ಎನ್‌ಇಸಿಸಿ)

	ಬೆಂಗಳೂರು	ಮೈಸೂರು:
100 ಕ್ಕೆ	₹560	₹562
12 ಕ್ಕೆ	₹80	

ಚೆಸ್: ಪ್ರಶಸ್ತಿ ಸನಿಹದಲ್ಲಿ ನಾದಿರ್ಬೆಕ್

ವಿಯ್ಕ್ ಆನ್ ಝೀ (ನೆದರ್ಲೆಂಡ್ಸ್), (ಪಿಟಿಐ): ವಿಶ್ವ ಚಾಂಪಿಯನ್ ಡಿ. ಗುಕೇಶ್ ಅವರು ಭಾನುವಾರ ಟಾಟಾ ಸ್ಟೀಲ್ ಮಾಸ್ಟರ್ಸ್ ಚೆಸ್ ಟೂರ್ನಿಯ 12ನೇ ಸುತ್ತಿನಲ್ಲಿ ಅಮೆರಿಕದ ಹ್ಯಾನ್ಸ್ ಮೋಕ್ ನೀಮನ್ ವಿರುದ್ಧ ಡ್ರಾ ಮಾಡಿಕೊಂಡರು.

ಉಜ್ಬೇಕಿಸ್ತಾನದ ನಾದಿರ್ಬೆಕ್ ಅಬ್ದುಸತ್ತಾರೋವ್ (8 ಅಂಕ) ಅವರು ಜರ್ಮನಿಯ ಬ್ಲೂಬಾಮ್ ಮಥಾಯಸ್ ವಿರುದ್ಧ ಜಯ ಸಾಧಿಸುವ ಮೂಲಕ ಅಗ್ರಸ್ಥಾನದೊಂದಿಗೆ ಪ್ರಶಸ್ತಿಗೆ ಮತ್ತಷ್ಟು ಹತ್ತಿರವಾದರು.

ವಿಶ್ವಕಪ್ ವಿಜೇತ ಜಾವೊಖಿರ್ ಸಿಂದರೋವ್ ಅವರು ಭಾರತದ ಆರ್. ಪ್ರಜ್ಞಾನಂದ (5) ವಿರುದ್ಧ ಡ್ರಾಗೆ ತೃಪ್ತಿಪಟ್ಟು 7.5 ಅಂಕಗಳೊಂದಿಗೆ ಎರಡನೇ ಸ್ಥಾನಕ್ಕೆ ಕುಸಿದರು. ಅವರದೇ ದೇಶದ ನಾದಿರ್ಬೆಕ್ ಅರ್ಧ ಅಂಕದಿಂದ ಮುಂದಿದ್ದಾರೆ. ಹೀಗಾಗಿ, ವರ್ಷದ ಮೊದಲ ಸೂಪರ್ ಟೂರ್ನಿಯಲ್ಲಿ ಉಜ್ಬೇಕಿಸ್ತಾನದ ಆಟಗಾರರು ಪ್ರಾಬಲ್ಯ ಸಾಧಿಸುವ ಸಾಧ್ಯತೆಯಿದೆ.

ನೀಮನ್, ಹಾಲೆಂಡ್‌ನ ಜೋರ್ಡನ್ ವಾನ್ ಫೊರೀಸ್ಟ್, ಜರ್ಮನಿಯ ವಿನ್ಸೆಂಟ್ ಕೀಮರ್ ತಲಾ 7 ಅಂಕಗಳೊಂದಿಗೆ ನಂತರದ ಸ್ಥಾನದಲ್ಲಿದ್ದಾರೆ.



ನಾದಿರ್ಬೆಕ್

ತೆರಿಗೆ ಇಳಿಕೆಯ ನಿರೀಕ್ಷೆಗಳಿಗೆ ವಿರಾಮ



ವಿಶ್ಲೇಷಣೆ

ಕಾವ್ಯ ಡಿ.

ಹೊಸ ತೆರಿಗೆ ಪದ್ಧತಿ ಅಡಿಯಲ್ಲಿ ₹12 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ಇಲ್ಲ ಎಂಬ ಸುಧಾರಣೆಯನ್ನು 2025-26ನೇ ಸಾಲಿನ ಬಜೆಟ್ ಮೂಲಕ ತಂದಿದ್ದ ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್, 2026-27ನೇ ಸಾಲಿನ ಆಯವ್ಯಯದಲ್ಲಿ ಆದಾಯ ತೆರಿಗೆ ವಿಚಾರದಲ್ಲಿ ಬದಲಾವಣೆ ಮಾಡಿಲ್ಲ. ಜನಸಾಮಾನ್ಯರ ಖರೀದಿ ಶಕ್ತಿ ಹೆಚ್ಚಿಸಲು ತೆರಿಗೆ ಹೊರೆಯನ್ನು ಮತ್ತಷ್ಟು ಇಳಿಸುವುದು ಸೇರಿದಂತೆ ‘ಸ್ಟ್ಯಾಂಡರ್ಡ್ ಡಿಡಕ್ಷನ್’ ಮೊತ್ತವನ್ನು ₹1ಲಕ್ಷಕ್ಕೆ ಹೆಚ್ಚಿಸಲಿದ್ದಾರೆ ಎನ್ನುವ ನಿರೀಕ್ಷೆ ಹಲವರಲ್ಲಿತ್ತು. ಆದರೆ, ಉದ್ಯೋಗಸ್ಥರು ಮತ್ತು ಮಧ್ಯಮ ವರ್ಗದವರ ತೆರಿಗೆ ಹೊರೆಯನ್ನು ಈಗಾಗಲೇ ಇಳಿಸಲಾಗಿದೆ, ಸದ್ಯಕ್ಕೇನಿದ್ದರೂ ತೆರಿಗೆ ವ್ಯವಸ್ಥೆಯ ಒಟ್ಟಾರೆ ಸುಧಾರಣೆಗಷ್ಟೇ ಆದ್ಯತೆ ಎಂಬ ಸಂದೇಶವನ್ನು ಸಚಿವರು ಬಜೆಟ್ ಮೂಲಕ ನೀಡಿದ್ದಾರೆ. ಅರ್ಥ ವ್ಯವಸ್ಥೆಗೆ ಪೆಟ್ಟು ಕೊಡದ ಸಣ್ಣಪುಟ್ಟ ಸುಧಾರಣೆ ಗಳನ್ನಷ್ಟೇ ತರುವ ಜೊತೆಗೆ ಸೆಕ್ಯೂರಿಟಿ ಟ್ರಾನ್ಸಾಕ್ಷನ್ ಟ್ಯಾಕ್ಸ್ ಭಾರ ಹೆಚ್ಚಿಸುವ ಮೂಲಕ ಸಂಪನ್ಮೂಲ ಕ್ರೋಢೀಕರಣಕ್ಕೆ ಕೈ ಹಾಕಿದ್ದಾರೆ.

ಬಜೆಟ್ ಪ್ರಕಾರ ಫ್ಯೂಚರ್ಸ್ ಟ್ರೇಡಿಂಗ್‌ನ ಎಸ್‌ಟಿಟಿ ಶೇ 0.02ರಿಂದ ಶೇ 0.05ಕ್ಕೆ ಜಿಗಿಯಲಿದೆ. ಆಪ್ಷನ್ಸ್ ಟ್ರೇಡಿಂಗ್‌ನ ಎಸ್‌ಟಿಟಿ ಶೇ 0.15ಕ್ಕೆ ಹೆಚ್ಚಿಸಲಾಗಿದೆ. ಹಣಕಾಸು ಸಚಿವರ ಈ ತೀರ್ಮಾನದಿಂದಾಗಿ ಆಯವ್ಯಯದ ದಿನವೇ ಸೆನ್ಸೆಕ್ಸ್ 1,546 ಅಂಶ ಕುಸಿದಿದೆ. ಸಣ್ಣ ಹೂಡಿಕೆದಾರರು ಫ್ಯೂಚರ್ಸ್ ಆ್ಯಂಡ್ ಆಪ್ಷನ್ಸ್‌ನಿಂದ ದೂರ ಉಳಿಯುವಂತೆ ಮಾಡುವ ಜೊತೆಗೆ ಆದಾಯ ಸಂಗ್ರಹ ಹೆಚ್ಚಳಕ್ಕೆ ಇಲ್ಲಿ ವಿತ್ತ ಸಚಿವರು ಪ್ರಯತ್ನಿಸಿದಂತಿದೆ. ಆದರೆ, ಈ ನಿರ್ಧಾರ ಸರಿಯೇ ಎಂಬುದನ್ನು ಪೂರ್ತಿಯಾಗಿ ಹೇಳಲು ಇನ್ನಷ್ಟು ಸಮಯ ಬೇಕಾಗುತ್ತದೆ.

ತೆರಿಗೆ ವ್ಯವಸ್ಥೆಯಲ್ಲಿ ಹಲವು ಸುಧಾರಣೆಗಳನ್ನೂ ಸಚಿವರು ಘೋಷಿಸಿದ್ದಾರೆ. ಬ್ಬಿಣದ ಕಡಲೆ ಎನಿಸುವ ಆದಾಯ ತೆರಿಗೆ ವಿವರ ಸಲ್ಲಿಕೆ ಪ್ರಕ್ರಿಯೆ ಸರಳೀಕರಣಗೊಳ್ಳಲಿದೆ ಎಂಬ ವಿಶ್ವಾಸವನ್ನು ಸಚಿವರು ವ್ಯಕ್ತಪಡಿಸಿದ್ದಾರೆ. 22026ರ ಏಪ್ರಿಲ್ 1ರಿಂದ ಹೊಸ ಆದಾಯ ತೆರಿಗೆ ನೀತಿ-2025 ಜಾರಿಗೆ ಬರುತ್ತಿದ್ದು, ಜನಸಾಮಾನ್ಯರು ಸುಲಭವಾಗಿ ಆದಾಯ ತೆರಿಗೆ ವಿವರ ಸಲ್ಲಿಸುವ ವ್ಯವಸ್ಥೆ ಬರಲಿದೆ ಎಂದಿದ್ದಾರೆ.

ಆರ್ಥಿಕವಾಗಿ ತೆರಿಗೆದಾರರಿಗೆ ಇದರಿಂದ ಯಾವುದೇ ಅನುಕೂಲವಾಗದಿ ದ್ದರೂ ಇದೊಂದು ಜನಸ್ನೇಹಿ ಸುಧಾರಣೆ ಎನ್ನುವುದರಲ್ಲಿ ಅನುಮಾನವಿಲ್ಲ. ಇದರ ಜೊತೆಗೆ ಪರಿಷ್ಕೃತ ಆದಾಯ ತೆರಿಗೆ ವಿವರ ಸಲ್ಲಿಕೆಗೆ ಡಿಸೆಂಬರ್ 31ರವರೆಗೆ ಇದ್ದ ಗಡುವನ್ನು ಈಗ ಮಾರ್ಚ್ 31ರವರೆಗೆ ವಿಸ್ತರಿಸಲಾಗಿದೆ. ಆದರೆ, ಅದಕ್ಕೆ ಸಣ್ಣ ಮೊತ್ತದ ದಂಡ ಕಟ್ಟಬೇಕಾಗುತ್ತದೆ. ಅದೇ ರೀತಿ, ವಿದೇಶದಲ್ಲಿ ಶಿಕ್ಷಣ ಮತ್ತು ವೈದ್ಯಕೀಯ ವೆಚ್ಚಗಳಿಗೆ ವಿಧಿಸಲಾಗುತ್ತಿದ್ದ ಶೇ 5ರಷ್ಟು ಮೂಲದಲ್ಲೇ ತೆರಿಗೆ ಸಂಗ್ರಹ (ಟಿಸಿಎಸ್) ಮೊತ್ತವನ್ನು ಶೇ 2ಕ್ಕೆ ತಗ್ಗಿಸಲಾಗಿದೆ. ವಿದೇಶಿ ಪ್ರವಾಸ ಪ್ಯಾಕೇಜ್‌ಗಳಿಗೆ ವಿಧಿಸಲಾಗುತ್ತಿದ್ದ ಶೇ 5ರಿಂದ ಶೇ 20ರವರೆಗಿನ ಟಿಸಿಎಸ್ ಮೊತ್ತವನ್ನು ಶೇ 2ಕ್ಕೆ ತಗ್ಗಿಸಲಾಗಿದೆ. ಇವೆಲ್ಲ ಒಂದು ಬಗೆಯಲ್ಲಿ ಸಣ್ಣ–ಪುಟ್ಟ ತೆರಿಗೆ ಸುಧಾರಣೆಗಳು ಎಂದು ವಿಶ್ಲೇಷಿಸಬಹುದು.

ಇನ್ನು ವಿದೇಶಕ್ಕೆ ಹೋಗಿ ಅಲ್ಲಿ ದುಡಿಮೆ ಮಾಡುವ ವಿದ್ಯಾರ್ಥಿಗಳು, ಯುವ ವೃತ್ತಿಪರರು, ಟೆಕಿಗಳು, ಭಾರತಕ್ಕೆ ವಾಪಸ್ ಮರಳಿರುವ ಅನಿವಾಸಿ ಭಾರತೀಯರು ತಮ್ಮ ವಿದೇಶಿ ಆದಾಯವನ್ನು ಘೋಷಿಸಿಕೊಂಡು ತಪ್ಪು ಸರಿಪಡಿಸಿಕೊಳ್ಳಲು 6 ತಿಂಗಳ ಕಾಲಾವಕಾಶ ನೀಡಲಾಗಿದೆ. ಸಮಸ್ಯೆಯಲ್ಲಿ ಸಿಲುಕಿರುವವರು ತೆರಿಗೆ ತಪ್ಪುಗಳನ್ನು ಸರಿಪಡಿಸಿಕೊಳ್ಳಲು ಇದೊಂದು ಒಳ್ಳೆಯ ಅವಕಾಶ ಎನ್ನಬಹುದಾಗಿದೆ.

ಎಲ್ಲದಕ್ಕಿಂತಲೂ ಪ್ರಮುಖವಾಗಿ ಅಪಘಾತ ಪ್ರಕರಣಗಳಲ್ಲಿ ಮೋಟಾರು ಅಪಘಾತ ಕ್ಲೇಮ್ ನ್ಯಾಯಮಂಡಳಿಯಿಂದ ಪಡೆದುಕೊಳ್ಳುವ ಬಡ್ಡಿ ಮೊತ್ತಕ್ಕೆ ಯಾವುದೇ ಆದಾಯ ತೆರಿಗೆ ಅಥವಾ ಟಿಡಿಎಸ್ ವಿಧಿಸುವುದಿಲ್ಲ ಎಂದು ಘೋಷಿಸಲಾಗಿದೆ. ಅಪಘಾತದಿಂದ ನೊಂದು ಆರ್ಥಿಕ ಸಂಕಷ್ಟಕ್ಕೆ ಸಿಲುಕುವ ಕುಟುಂಬಗಳಿಗೆ ಸರ್ಕಾರದ ಈ ನಿರ್ಧಾರದಿಂದ ಒಂದಷ್ಟು ಸಮಾಧಾನ ಸಿಗಬಹುದು.

ಒಟ್ಟಾರೆಯಾಗಿ ₹13 ಲಕ್ಷದವರೆಗಿನ ಆದಾಯಕ್ಕೆ ತೆರಿಗೆ ವಿನಾಯಿತಿ, ಪತಿ-ಪತ್ನಿಗೆ ಒಂದೇ ಆದಾಯ ತೆರಿಗೆ ವಿವರ, ಸ್ಟ್ಯಾಂಡರ್ಡ್ ಡಿಡಕ್ಷನ್ ₹1 ಲಕ್ಷಕ್ಕೆ ಹೆಚ್ಚಳ, ದೀರ್ಘಾವಧಿ ಬಂಡವಾಳ ಗಳಿಕೆ ತೆರಿಗೆಗೆ (ಎಲ್‌ಟಿಸಿಜಿ) ಒಳಪಡುವ ಮೊತ್ತವನ್ನು ₹1.25 ಲಕ್ಷದಿಂದ ₹1.50 ಲಕ್ಷಕ್ಕೆ ಹೆಚ್ಚಳ ಮಾಡುವುದು ಸೇರಿದಂತೆ ಅನೇಕ ನಿರೀಕ್ಷೆಗಳು ವೇತನದಾರರಿಗೆ ಇದ್ದವು. ಅವೆಲ್ಲವಕ್ಕೂ ಮುಂದಿನ ಒಂದು ವರ್ಷದ ಅವಧಿಗೆ ವಿರಾಮ ನೀಡಲಾಗಿದೆ!

ಲೇಖಕಿ ಚಾರ್ಟರ್ಡ್ ಅಕೌಂಟೆಂಟ್

ಚಿಟಿಕೆ ಸುದ್ದಿ

ಆದಂಪುರ ವಿಮಾನ ನಿಲ್ದಾಣಕ್ಕೆ ರವಿದಾಸ್ ಹೆಸರು

ಜಲಂಧರ್ (ಪಂಜಾಬ್): ಆದಂಪುರ ವಿಮಾನ ನಿಲ್ದಾಣದ ಹೆಸರನ್ನು 'ಶ್ರೀ ಗುರು ರವಿದಾಸ್ ಮಹಾರಾಜ್ ಜಿ ವಿಮಾನ ನಿಲ್ದಾಣ' ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಭಾನುವಾರ ಮರುನಾಮಕರಣ ಮಾಡಿದರು.

ಲುಧಿಯಾನದ ಹಲ್ವಾರಾ ವಿಮಾನ ನಿಲ್ದಾಣದಲ್ಲಿನ ಟರ್ಮಿನಲ್ ಕಟ್ಟಡವನ್ನು ವರ್ಚುವಲ್ ಆಗಿ ಅವರು ಉದ್ಘಾಟಿಸಿದರು.

ಸಂಸತ್ತಿನಲ್ಲಿ ಕೇಂದ್ರ ಬಜೆಟ್ ಮಂಡನೆಯಾದ ಬಳಿಕ ಪ್ರಧಾನಿ ದೆಹಲಿಯಿಂದ ಮಧ್ಯಾಹ್ನ 3.45ರ ಸುಮಾರಿಗೆ ಆದಂಪುರ ವಿಮಾನ ನಿಲ್ದಾಣ ತಲುಪಿದರು.

ಗುರು ರವಿದಾಸ್ ಅವರ 649ನೇ ಜನ್ಮ ದಿನಾಚರಣೆ ಸಂದರ್ಭದಲ್ಲಿ ಮೋದಿ ಅವರು ಡೇರಾ ಸಚ್‌ಖಂಡ ಬಲ್ಲಾನ್‌ಗೆ ಭೇಟಿ ನೀಡಿದರು.

ಇಂದ್ರಪಾಲ್ ಸಿಂಗ್ ಪದಗ್ರಹಣ

ಕೋಲ್ಕತ್ತ (ಪಿಟಿಐ): ಭಾರತೀಯ ವಾಯುಪಡೆಯ (ಐಎಎಫ್) ಪೂರ್ವ ಏರ್ ಕಮಾಂಡ್ ವಿಭಾಗದ ಏರ್ ಆಫೀಸರ್ ಕಮಾಂಡಿಂಗ್ ಇನ್ ಚೀಫ್ ಆಗಿ ಏರ್ ಮಾರ್ಷಲ್ ಇಂದ್ರಪಾಲ್ ಸಿಂಗ್ ವಾಲಿಯಾ ಅವರು ಭಾನುವಾರ ಇಲ್ಲಿ ಪದಗ್ರಹಣ ಮಾಡಿದರು.


ಇಂದ್ರಪಾಲ್

1988ರಲ್ಲಿ ಐಎಎಫ್‌ನ ಯುದ್ಧ ವಿಮಾನ ಶಾಖೆಗೆ ನಿಯುಕ್ತರಾಗಿದ್ದ ವಾಲಿಯಾ ಅವರು, ಮಿಗ್ ಸರಣಿಯ ವಿಮಾನಗಳು, ಜಾಗ್ವಾರ್ ಮತ್ತು ಸುಖೋಯ್–30 ಎಂಕೆಐ ವಿಮಾನಗಳ ವಾಯು ಕಾರ್ಯಾಚರಣೆ ನಿರ್ವಹಿಸಿದ್ದಾರೆ ಎಂದು ರಕ್ಷಣಾ ಇಲಾಖೆ ಅಧಿಕಾರಿ ತಿಳಿಸಿದ್ದಾರೆ.

ಮತ್ತೊಂದೆಡೆ ಪೂರ್ವ ಏರ್ ಕಮಾಂಡ್ ವಿಭಾಗದ ಹಿರಿಯ ಸಿಬ್ಬಂದಿ ಅಧಿಕಾರಿಯಾಗಿ ಏರ್ ಮಾರ್ಷಲ್ ದೇವೇಂದ್ರ ಪಿ. ಹಿರಾನಿ ಅಧಿಕಾರ ಸ್ವೀಕರಿಸಿದರು.

ಶಾಂತಿ ಕದಡಲು ಭಾರತ ಯತ್ನ: ಆರೋಪ ನಿರಾಕರಣೆ


ನವದೆಹಲಿ (ಪಿಟಿಐ): ಬಲೂಚಿಸ್ತಾನದಲ್ಲಿ ಶಾಂತಿ ಕದಡಲು ಭಾರತವು ಯತ್ನಿಸುತ್ತಿದೆ ಎಂಬ ಪಾಕಿಸ್ತಾನದ ಆರೋಪವನ್ನು ಭಾರತವು ಸ್ಪಷ್ಟವಾಗಿ ನಿರಾಕರಿಸಿದೆ.

'ತನ್ನ ಆಂತರಿಕ ವೈಫಲ್ಯವನ್ನು ಬೇರೆಡೆಗೆ ತಿರುಗಿಸಲು ಪಾಕಿಸ್ತಾನವು ಮೊದಲಿನಿಂದಲೂ ಇಂತಹ ತಂತ್ರಗಳನ್ನು ಅನುಸರಿಸುತ್ತಿದೆ' ಎಂದು ತಿರುಗೇಟು ನೀಡಿದೆ. 'ಪಾಕಿಸ್ತಾನದ ಆರೋಪವು ನಿರಾಧಾರವಾಗಿದೆ' ಎಂದು ವಿದೇಶಾಂಗ ಇಲಾಖೆಯ ವಕ್ತಾರ ರಣ್‌ಧೀರ್ ಜೈಸ್ವಾಲ್ ತಿಳಿಸಿದ್ದಾರೆ.

ಎಪ್‌ಸ್ಟೈನ್: ಮತ್ತೊಬ್ಬ ಮಹಿಳೆ ಆರೋಪ

ಪ್ರಕರಣದಲ್ಲಿ ಮಾಜಿ ರಾಜಕುಮಾರ ಆ್ಯಂಡ್ರೂ ಮೌಂಟ್ ಹೆಸರು ತಳಕು


ಆ್ಯಂಡ್ರೂ ಮೌಂಟ್


ಜೆಫ್ರಿ ಎಪ್‌ಸ್ಟೈನ್

ಲಂಡನ್ (ಎಎಫ್‌ಪಿ): ಲೈಂಗಿಕ ಅಪರಾಧಿ ಜೆಫ್ರಿ ಎಪ್‌ಸ್ಟೈನ್ ವಿರುದ್ಧ ಮತ್ತೊಬ್ಬ ಮಹಿಳೆ ಗಂಭೀರ ಆರೋಪ ಮಾಡಿದ್ದಾರೆ. ಮಾಜಿ ರಾಜಕುಮಾರ ಆ್ಯಂಡ್ರೂ ಮೌಂಟ್ ಬ್ಯಾಟನ್ ಜೊತೆಯಲ್ಲಿ ಲೈಂಗಿಕ ಸಂಪರ್ಕ ಬೆಳೆಸುವಂತೆ ತನ್ನನ್ನು ಬ್ರಿಟನ್‌ಗೆ ಕಳುಹಿಸಲಾಗಿತ್ತು ಎಂದು ಮಹಿಳೆ ಆರೋಪಿಸಿರುವುದಾಗಿ ಬಿಬಿಸಿ ವರದಿ ಮಾಡಿದೆ.

2010ರಲ್ಲಿ ಮಹಿಳೆಗೆ 20 ವರ್ಷವಿದ್ದಾಗ ಪಶ್ಚಿಮ ಲಂಡನ್‌ನ ವಿಂಡ್‌ಸರ್ ಎಸ್ಟೇಟ್‌ನಲ್ಲಿರುವ ನಿವಾಸದಲ್ಲಿ ಲೈಂಗಿಕ ಸಂಪರ್ಕ ನಡೆದಿದೆ ಎಂದು ಮಹಿಳೆ ಪರ ಅಮೆರಿಕ ವಕೀಲರು ತಿಳಿಸಿದ್ದಾರೆ ಎಂದು ಬಿಬಿಸಿ ಹೇಳಿದೆ.

ಎಪ್‌ಸ್ಟೈನ್ ಪ್ರಕರಣದ ಕುರಿತಂತೆ ಅಮೆರಿಕದ ನ್ಯಾಯಾಂಗ ಇಲಾಖೆಯು ಭಾರಿ ಪ್ರಮಾಣದ ದಾಖಲೆಗಳನ್ನು ಬಿಡುಗಡೆ ಮಾಡಿದ ಬೆನ್ನಲ್ಲೇ, ಈ ಆರೋಪ ಕೇಳಿಬಂದಿದೆ.

'ಆ್ಯಂಡ್ರೂ ಅವರೊಂದಿಗೆ ಒಂದು ರಾತ್ರಿ ಕಳೆದ ನಂತರ ಅವರು ನನ್ನನ್ನು ಬಕಿಂಗ್‌ಹ್ಯಾಮ್ ಅರಮನೆಗೆ ಪ್ರವಾಸಕ್ಕೆ ಕರೆದುಕೊಂಡು ಹೋಗಿದ್ದರು' ಎಂದು ಮಹಿಳೆ ತಿಳಿಸಿದ್ದಾರೆ ಎಂದು ಎಡ್ವರ್ಡ್ಸ್ ಹೆಂಡರ್‌ಸನ್ ಕಾನೂನು ಸಂಸ್ಥೆಯ ಬ್ರಾಡ್ ಎಡ್ವರ್ಡ್ ಅವರು ಹೇಳಿದ್ದಾರೆ ಎಂದು ಬಿಬಿಸಿ ತಿಳಿಸಿದೆ.

ಎಪ್‌ಸ್ಟೈನ್ ಲೈಂಗಿಕ ಹಗರಣದ ಸುಮಾರು 200 ಸಂತ್ರಸ್ತೆಯರ ಪರ ವಕೀಲರು ಈ ಬಗ್ಗೆ ಪ್ರತಿಕ್ರಿಯೆ ನೀಡಿಲ್ಲ. ಆ್ಯಂಡ್ರೂ ಅವರೂ ಪ್ರತಿಕ್ರಿಯೆ ನೀಡಿಲ್ಲ. ಆದರೆ ಎಪ್‌ಸ್ಟೈನ್ ಹಗರಣಕ್ಕೆ ಸಂಬಂಧಿಸಿದ ತಮ್ಮ ವಿರುದ್ಧದ ಎಲ್ಲ ಆರೋಪಗಳನ್ನೂ ಅವರು ನಿರಾಕರಿಸಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯಿಸಿರುವ ಬ್ರಿಟನ್ ಪ್ರಧಾನಿ ಕಿಯರ್ ಸ್ಟಾರ್ಮರ್ ಅವರು, 'ಆ್ಯಂಡ್ರೂ ಅವರು ಅಮೆರಿಕದ ಸಂಸದೀಯ ಸಮಿತಿ ಮುಂದೆ ವಿಚಾರಣೆಗೆ ಹಾಜರಾಗಿ ಪರೀಕ್ಷೆಗೆ ಒಳಗಾಗಬೇಕು' ಎಂದು ಹೇಳಿದ್ದಾರೆ.

ಲೈಂಗಿಕ ವೃತ್ತಿಗೆ ಬಾಲಕಿಯರನ್ನು ಅಕ್ರಮವಾಗಿ ಸಾಗಿಸಿದ ಆರೋಪದಲ್ಲಿ ಬಂಧನಕ್ಕೆ ಒಳಗಾಗಿದ್ದ ಎಪ್‌ಸ್ಟೈನ್ 2019ರಲ್ಲಿ ಕಾರಾಗೃಹದಲ್ಲಿ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದ.

ಭದ್ರತಾ ಸಲಹೆಗಾರ ರಾಜೀನಾಮೆ

ಎಪ್‌ಸ್ಟೈನ್ ಪ್ರಕರಣದಲ್ಲಿ ಹೆಸರು ಕೇಳಿಬಂದ ಬೆನ್ನಲ್ಲೇ, ಸ್ಲೋವಾಕಿಯಾ ಸರ್ಕಾರದ ರಾಷ್ಟ್ರೀಯ ಭದ್ರತಾ ಸಲಹೆಗಾರ ಮಿರೋಸ್ಲಾವ್ ಲಾಜ್‌ಕಾಕ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ. 2018ರಲ್ಲಿ ಲಾಜ್‌ಕಾಕ್ ಅವರು ಮಹಿಳೆಯೊಬ್ಬರ ಬಗ್ಗೆ ಎಪ್‌ಸ್ಟೈನ್ ಜೊತೆಗೆ ಸಂದೇಶ ವಿನಿಮಯ ಮಾಡಿದ್ದರು ಎಂದು ಬಿಬಿಸಿ ಹೇಳಿದೆ.

ಲಾಜ್‌ಕಾಕ್ ಅವರ ರಾಜೀನಾಮೆಯನ್ನು ಅಂಗೀಕರಿಸಿರುವುದಾಗಿ ಪ್ರಧಾನಿ ರಾಬರ್ಟ್ ಫಿಕೊ ಅವರು ಫೇಸ್‌ಬುಕ್‌ನಲ್ಲಿ ಶನಿವಾರ ಪ್ರಕಟಿಸಿದ್ದಾರೆ.

ಮೋದಿ ಸ್ಪಷ್ಟನೆಗೆ ಕಾಂಗ್ರೆಸ್ ಆಗ್ರಹ

ನವದೆಹಲಿ (ಪಿಟಿಐ): 'ಅಮೆರಿಕದಲ್ಲಿ ಬಿಡುಗಡೆ ಮಾಡಿರುವ 'ಎಪ್‌ಸ್ಟೈನ್ ಫೈಲ್ಸ್'ನಲ್ಲಿ ತಮ್ಮ ಹೆಸರು ಉಲ್ಲೇಖ ಆಗಿರುವ ಕುರಿತಂತೆ ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ನೀಡಬೇಕು' ಎಂದು ಕಾಂಗ್ರೆಸ್ ಆಗ್ರಹಿಸಿದೆ.

ಎಐಸಿಸಿ ಸಂಘಟನಾ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಅವರು ಭಾನುವಾರ 'ಎಕ್ಸ್'ನಲ್ಲಿ ಈ ಬಗ್ಗೆ ಸ್ಪಷ್ಟನೆ ಬಯಸಿದ್ದಾರೆ.

'ವಿಕೃತ ವ್ಯಕ್ತಿಗಳು ಪ್ರಧಾನಿ ಮೋದಿ ಅವರ ಸಂಪರ್ಕಕ್ಕೆ ಬಂದಿದ್ದರು ಎಂಬ ಆಘಾತಕಾರಿ ಅಂಶವನ್ನು ಜೆಫ್ರಿ ಎಪ್‌ಸ್ಟೈನ್‌ನ ಇತ್ತೀಚಿನ ದಾಖಲೆಗಳು ಹೇಳಿವೆ. ಇದೊಂದು ಎಚ್ಚರಿಕೆ ಗಂಟೆಯಾಗಿದೆ. ವಿದೇಶಾಂಗ ವಿಚಾರಗಳಲ್ಲಿ ಎಪ್‌ಸ್ಟೈನ್ ಯಾವ ಮಟ್ಟಿಗೆ ಕೈಚಳಕ ಹೊಂದಿದ್ದ' ಎಂದು ವೇಣುಗೋಪಾಲ್ ಪ್ರಶ್ನಿಸಿದ್ದಾರೆ.

'ಎಪ್‌ಸ್ಟೈನ್‌ನನ್ನು ಅವರೇ (ಮೋದಿ) ಭೇಟಿಯಾಗಿದ್ದರೆ ಅಥವಾ ಆತನ ಭೇಟಿಗೆ ಯಾರನ್ನಾದರೂ ಕಳಿಸಿದ್ದರೆ? ಆತನ ಜೊತೆ ಏನು ಸಂಭಾಷಣೆ ನಡೆದಿತ್ತು' ಎಂಬುದನ್ನು ಬಹಿರಂಗ ಮಾಡಬೇಕು ಎಂದು ಆಗ್ರಹಿಸಿದ್ದಾರೆ.


'ಪ್ರಧಾನಿ ಮೋದಿ ಅವರು ಕಳಂಕಿತ ಎಪ್‌ಸ್ಟೈನ್‌ನ ತಾಳಕ್ಕೆ ತಕ್ಕಂತೆ ಕುಣಿದಿದ್ದರು, ಹಾಡಿದ್ದರು. ಆನಂತರ ದೇಶದ ವಿದೇಶಾಂಗ ವ್ಯವಹಾರದಲ್ಲಿ ಗಣನೀಯ ಬದಲಾವಣೆಯಾಗಿದೆ' ಎಂದು ವೇಣುಗೋಪಾಲ್ ಹೇಳಿದ್ದಾರೆ.

'ಕಾಂಗ್ರೆಸ್‌ನಿಂದ ಸುಳ್ಳು ಪ್ರಚಾರ'

ಕಾಂಗ್ರೆಸ್‌ನ ಆರೋಪಗಳಿಗೆ ಶನಿವಾರವೇ ಉತ್ತರ ನೀಡಿದ್ದ ಬಿಜೆಪಿ, 'ಪ್ರಧಾನಿ ಬಗ್ಗೆ ಕಾಂಗ್ರೆಸ್ ಸುಳ್ಳು ಹರಡುತ್ತಿದೆ. ತನಿಖಾ ದಾಖಲೆಗಳ ತಿರುಚಿದ ಸಾಮಾನ್ಯ ಇ–ಮೇಲ್ ತುಣುಕುಗಳನ್ನು ರಾಜಕೀಯಕ್ಕೆ ಬಳಸಲಾಗುತ್ತಿದೆ. ಇಬ್ಬರ ನಡುವೆ ಪ್ರತ್ಯಕ್ಷ ಅಥವಾ ಪರೋಕ್ಷ ಸಮಾಲೋಚನೆ ನಡೆದಿರುವ ಯಾವುದೇ ಸಾಕ್ಷ್ಯಗಳಿಲ್ಲ' ಎಂದು ಸ್ಪಷ್ಟಪಡಿಸಿತ್ತು.

ಭಾರತೀಯ ವಿದೇಶಾಂಗ ಇಲಾಖೆಯೂ ಶನಿವಾರ ನೀಡಿದ್ದ ಹೇಳಿಕೆಯಲ್ಲಿ ಎಪ್‌ಸ್ಟೈನ್ ಫೈಲ್ಸ್‌ನಲ್ಲಿ ಮೋದಿ ಅವರ ಪ್ರಸ್ತಾಪವನ್ನು ಸ್ಪಷ್ಟವಾಗಿ ನಿರಾಕರಿಸಿದೆ.

'ತಿರುಪತಿ ಲಡ್ಡು: ಪ್ರಾಣಿ ಕೊಬ್ಬು ದೃಢ'


ಚಂದ್ರಬಾಬು ನಾಯ್ಡು

ಕುಪ್ಪಂ (ಆಂಧ್ರ ಪ್ರದೇಶ) (ಪಿಟಿಐ): 'ವೈಎಸ್‌ಆರ್‌ಸಿಪಿ ಆಡಳಿತಾವಧಿಯಲ್ಲಿ ತಿರುಪತಿ ತಿರುಮಲ ದೇವಸ್ಥಾನಕ್ಕೆ (ಟಿಟಿಡಿ) ಸರಬರಾಜು ಮಾಡಲಾದ ತುಪ್ಪದಲ್ಲಿ ಪ್ರಾಣಿಗಳ ಕೊಬ್ಬಿನ ಅಂಶವಿದೆ ಎಂದು ಎನ್‌ಡಿಡಿಬಿ–ಸಿಎಎಲ್‌ಎಫ್ ಪ್ರಯೋಗಾಲಯದಿಂದ ವರದಿ ಬಂದ ನಂತರವೇ ಮಾತನಾಡಿದ್ದೇನೆ' ಎಂದು ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಹೇಳಿದ್ದಾರೆ.

ಇಲ್ಲಿ ಪತ್ರಿಕಾಗೋಷ್ಠಿಯನ್ನು ಉದ್ದೇಶಿಸಿ ಮಾತನಾಡಿದ ನಾಯ್ಡು, ದೇವಾಲಯವನ್ನು ಅನಗತ್ಯವಾಗಿ ವಿವಾದಗಳಿಗೆ ಎಳೆಯಲಾಗಿದೆ ಎಂಬ ವಿಪಕ್ಷಗಳ ಆರೋಪಕ್ಕೆ ಉತ್ತರಿಸಿದರು.

'ಶುದ್ಧೀಕರಣದ ಭಾಗವಾಗಿ ಆಗಿನ ಕಾರ್ಯನಿರ್ವಾಹಕ ಅಧಿಕಾರಿ ಶ್ಯಾಮಲಾ ರಾವ್ ಅವರು ಎನ್‌ಡಿಡಿಬಿಯಿಂದ ತುಪ್ಪದ ಮಾದರಿಗಳು ಬೇಕೆಂದು ಕೇಳಿದ್ದರು. ಅದು ವರದಿಯನ್ನು ನೀಡಿತ್ತು. ಆ ವರದಿಯನ್ನು ಆಧರಿಸಿ, ನಾನು ಅದರಲ್ಲಿ ಪ್ರಾಣಿಗಳ ಕೊಬ್ಬಿನ ಕಲಬೆರಕೆ ಇದೆ ಎಂದು ಹೇಳಿದೆ' ಎಂದು ತಿಳಿಸಿದರು.

'ರಾಜ್ಯದ ಆಡಳಿತಾಧಿಕಾರಿಯಾಗಿ ತುಪ್ಪದ ಕಲಬೆರಕೆಯನ್ನು ಪರಿಶೀಲಿಸಲು ವಿಶೇಷ ತನಿಖಾ ತಂಡವನ್ನು ನೇಮಿಸಿದ್ದೇನೆ. ಆದರೆ, ವೈಎಸ್‌ಆರ್‌ಸಿಪಿ ನನ್ನ ವ್ಯಕ್ತಿತ್ವಹರಣ ಮಾಡುತ್ತಿದ್ದು, ನಾನು ಕ್ಷಮೆ ಯಾಚಿಸುವಂತೆ ಕೇಳುತ್ತಿದೆ' ಎಂದು ಆರೋಪಿಸಿದರು. ತುಪ್ಪ ಕಲಬೆರಕೆ ಪ್ರಕರಣದ ಅಂತಿಮ ಆರೋಪ ಪಟ್ಟಿಯನ್ನು ಇತ್ತೀಚೆಗೆ ಎಸ್‌ಐಟಿ ಎಸಿಬಿ ನ್ಯಾಯಾಲಯದಲ್ಲಿ ಸಲ್ಲಿಸಿದೆ.

ಜಮ್ಮು: ಮುಂದುವರಿದ ಶೋಧ

ಜಮ್ಮು(ಪಿಟಿಐ): ಜೈಷ್–ಎ–ಮೊಹಮ್ಮದ್ ಸಂಘಟನೆಯ ಮೂವರು ಭಯೋತ್ಪಾದಕರಿಗಾಗಿ ಜಮ್ಮು–ಕಾಶ್ಮೀರದ ಕಿಶ್ತ್‌ವಾಡ ಜಿಲ್ಲೆಯಲ್ಲಿ ಭದ್ರತಾ ಪಡೆಗಳು ಭಾನುವಾರವೂ ಶೋಧ ನಡೆಸಿದವು.

'ಭಯೋತ್ಪಾದಕರು ಪದೇ ಪದೇ ತಮ್ಮ ಅಡಗುತಾಣಗಳನ್ನು ಬದಲಾಯಿಸುತ್ತಿದ್ದಾರೆ. ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗಿದೆ. ಕೆಲ ದಿನಗಳಿಂದ ಕಾರ್ಯಾಚರಣೆ ನಡೆಯುತ್ತಿದ್ದು, ಶನಿವಾರ ಗುಂಡಿನ ಚಕಮಕಿ ನಡೆದಿತ್ತು. ಅದರಲ್ಲಿ ಒಬ್ಬ ಭಯೋತ್ಪಾದಕ ಗಾಯಗೊಂಡಿರುವ ಸಾಧ್ಯತೆಯಿದೆ' ಎಂದು ಹಿರಿಯ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಮಾಘ ಪೂರ್ಣಿಮೆ

ಪಿಟಿಐ ಚಿತ್ರ


ಮಾಘ ಪೂರ್ಣಿಮೆಯ ಅಂಗವಾಗಿ ಉತ್ತರ ಪ್ರದೇಶದ ಪ್ರಯಾಗರಾಜ್‌ನ ಸಂಗಮದಲ್ಲಿ ಪುಣ್ಯಸ್ನಾನಕ್ಕಾಗಿ ಭಾನುವಾರ ಸೇರಿದ್ದ ಭಕ್ತರು

ಎನ್‌ಸಿಪಿ (ಎಸ್‌ಪಿ) ಬಣದ ಅಧ್ಯಕ್ಷ ಶಶಿಕಾಂತ್ ಶಿಂದೆ ಹೇಳಿಕೆ

'ಪದಗ್ರಹಣದ ವಿಚಾರ ತಿಳಿದಿರಲಿಲ್ಲ'


ಸುನೇತ್ರಾ

ಮುಂಬೈ (ಪಿಟಿಐ): ಎನ್‌ಸಿಪಿ ನಾಯಕಿ ಸುನೇತ್ರಾ ಪವಾರ್ ಅವರು ರಾಜ್ಯದ ಉಪ ಮುಖ್ಯಮಂತ್ರಿಯಾಗಿ ಪ್ರಮಾಣವಚನ ಸ್ವೀಕರಿಸುವ ಬಗ್ಗೆ ಶರದ್ ಪವಾರ್ ಅವರಿಗಾಗಲಿ ಅಥವಾ ಇನ್ನಿತರ ನಾಯಕರಿಗಾಗಲಿ ಯಾವುದೇ ಮುಂಚಿತ ಮಾಹಿತಿ ಇರಲಿಲ್ಲ ಎಂದು ಎನ್‌ಸಿಪಿ ಪವಾರ್ (ಎಸ್‌ಪಿ) ಬಣದ ಮಹಾರಾಷ್ಟ್ರ ಘಟಕದ ಅಧ್ಯಕ್ಷ ಶಶಿಕಾಂತ್ ಶಿಂದೆ ಹೇಳಿದ್ದಾರೆ.

ಸುನೇತ್ರಾ ಪವಾರ್ ಅವರ ಪ್ರಮಾಣವಚನ ಸಮಾರಂಭವನ್ನು ತರಾತುರಿಯಲ್ಲಿ ನಡೆಸಿದ್ದಕ್ಕೆ ಸಂಬಂಧಿಸಿದಂತೆ ಕೇಳಿದ ಪ್ರಶ್ನೆಗೆ ಉತ್ತರಿಸಿದ ಶಿಂದೆ, 'ಅಜಿತ್ ಪವಾರ್ ಅವರ ಅಗಲಿಕೆಯು ರಾಜ್ಯಕ್ಕೆ ತುಂಬಲಾರದ ನಷ್ಟ. ಈ ದುಃಖದ ಸಮಯದಲ್ಲಿ ಇಂಥ ನಿರ್ಧಾರವನ್ನು ಏಕೆ ತೆಗೆದುಕೊಂಡಿದ್ದಾರೆ ಎಂಬುದು ನಮಗೆ ತಿಳಿಯದು. ಈ ಬಗ್ಗೆ ಅವರೇ ಸ್ಪಷ್ಟನೆ ನೀಡಬೇಕು. ಈ ಬಗ್ಗೆ ನಮಗೂ ಮುಂಚಿತ ಮಾಹಿತಿ ಇರಲಿಲ್ಲ' ಎಂದಿದ್ದಾರೆ.

ಅಲ್ಲದೇ, 'ಜನವರಿ 17ರಂದು ಅಜಿತ್ ಪವಾರ್ ಅವರು ಶರದ್ ಪವಾರ್ ಅವರೊಂದಿಗೆ ಸಭೆ ನಡೆಸುವುದಕ್ಕೂ ಮುನ್ನವೇ 8–10 ಸಭೆಗಳನ್ನು ನಡೆಸಿದ್ದರು. ಸ್ಥಳೀಯ ಸಂಸ್ಥೆಗಳ ಚುನಾವಣೆ ಬಳಿಕ ಎನ್‌ಸಿಪಿಯ ಎರಡೂ ಬಣಗಳನ್ನು ಒಗ್ಗೂಡಿಸುವ ಕೆಲಸಗಳನ್ನು ಮಾಡಲು ನಿರ್ಧರಿಸಲಾಗಿತ್ತು. ಈ ನಿಲುವನ್ನು ಶರದ್ ಪವಾರ್ ಅವರಿಗೂ ತಿಳಿಸಲಾಗಿತ್ತು. ಆದರೆ, ಈಗ ಅಜಿತ್ ಅವರು ಇಲ್ಲ. ಹೀಗಾಗಿ ಮುಂದೆ ಏನು ಮಾಡಬೇಕು ಎಂಬುದನ್ನು ಚರ್ಚಿಸಿ ನಿರ್ಧಾರ ಕೈಗೊಳ್ಳುತ್ತೇವೆ. ಇತರರು ಹೇಗೆ ಪ್ರತಿಕ್ರಿಯಿಸುತ್ತಾರೆ ಎಂಬುದು ಅವರಿಗೆ ಬಿಟ್ಟ ವಿಚಾರ' ಎಂದೂ ಶಿಂದೆ ಹೇಳಿದ್ದಾರೆ.

ಅಜಿತ್ ಎಲ್ಲವನ್ನೂ ಹೇಳುತ್ತಿದ್ದರು–ಫಡಣವೀಸ್: ಎನ್‌ಸಿಪಿ ಬಣಗಳನ್ನು ವಿಲೀನಗೊಳಿಸಲು ಅಜಿತ್ ಪವಾರ್ ಬಯಸಿದ್ದರೆ ಅದನ್ನು ನಮ್ಮ ಗಮನಕ್ಕೆ ತರದಂತೆ ಮಾಡುತ್ತಿದ್ದರೆ? ಅವರು ನನಗೆ ಎಲ್ಲವನ್ನೂ ತಿಳಿಸಿರುತ್ತಿದ್ದರು ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ಹೇಳಿದ್ದಾರೆ.

ಎನ್‌ಸಿಪಿಯ ಎರಡೂ ಬಣಗಳ ವಿಲೀನ ಘೋಷಿಸಲು ಫೆಬ್ರುವರಿ 12ರ ದಿನಾಂಕವನ್ನು ಅಜಿತ್ ಪವಾರ್ ನಿಗದಿಪಡಿಸಿದ್ದರು ಎಂದು ಎನ್‌ಸಿಪಿ (ಎಸ್‌ಪಿ) ಬಣದ ಮುಖ್ಯಸ್ಥ ಶರದ್ ಪವಾರ್ ಹೇಳಿದ್ದರ ಬಗ್ಗೆ ಫಡಣವೀಸ್ ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ. 'ಫೆಬ್ರುವರಿ 12ರ ದಿನಾಂಕದ ಬಗ್ಗೆ ನನಗಂತೂ ಯಾವುದೇ ಮಾಹಿತಿ ಇರಲಿಲ್ಲ' ಎಂದೂ ಹೇಳಿದ್ದಾರೆ.

ಸುನೇತ್ರಾ ಅವರ ಆತುರದ ಪದಗ್ರಹಣಕ್ಕೆ ಸಂಬಂಧಿಸಿದ ಟೀಕೆಗಳ ಬಗ್ಗೆ ಪ್ರತಿಕ್ರಿಯಿಸಿದ ಫಡಣವೀಸ್, 'ಈ ಬಗ್ಗೆ ಎನ್‌ಸಿಪಿ ಅವರು ಉತ್ತರ ನೀಡಲಿದ್ದಾರೆ' ಎಂದಿದ್ದಾರೆ. 'ಕೆಲವು ನಿರ್ಧಾರಗಳನ್ನು ಸಂದರ್ಭಕ್ಕೆ ತಕ್ಕಂತೆ ತೆಗೆದುಕೊಳ್ಳಬೇಕಾಗುತ್ತದೆ. ಈ ಹಿಂದೆ ಇಂದಿರಾ ಗಾಂಧಿ ಅವರ ಅಂತ್ಯಕ್ರಿಯೆ ಮುಗಿಯುವ ಮುನ್ನವೇ ರಾಜೀವ್ ಗಾಂಧಿ ಅವರು ಪ್ರಧಾನಿಯಾಗಿ ಪ್ರಮಾಣವಚನ ಸ್ವೀಕರಿಸಿದ್ದರು' ಎಂದೂ ಅವರು ಉಲ್ಲೇಖಿಸಿದ್ದಾರೆ.

ಜಿ.ಪಂ ಚುನಾವಣಾ ಪ್ರಚಾರದಲ್ಲಿ ಭಾಗಿಯಾಗುವುದಿಲ್ಲ: ಫಡಣವೀಸ್


ದೇವೇಂದ್ರ ಫಡಣವೀಸ್

ಉಪ ಮುಖ್ಯಮಂತ್ರಿ ಅಜಿತ್ ಪವಾರ್ ಅವರ ಸಾವಿನ ಕಾರಣದಿಂದಾಗಿ ಮುಂಬರುವ ಜಿಲ್ಲಾ ಪರಿಷತ್ ಮತ್ತು ಪಂಚಾಯಿತಿ ಸಮಿತಿ ಚುನಾವಣಾ ಪ್ರಚಾರಗಳಲ್ಲಿ ಭಾಗಿಯಾಗದಿರಲು ಮಹಾರಾಷ್ಟ್ರ ಮುಖ್ಯಮಂತ್ರಿ ದೇವೇಂದ್ರ ಫಡಣವೀಸ್ ಅವರು ನಿರ್ಧರಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಚುನಾವಣೆ ಸಂಬಂಧಿತ ಯಾವುದೇ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸುವುದಿಲ್ಲ. ಫೆಬ್ರುವರಿ 7ರಂದು ನಡೆಯಲಿರುವ ಚುನಾವಣೆಗೆ ಸ್ಥಳೀಯ ನಾಯಕರು ಮತ್ತು ಪಕ್ಷದ ಪದಾಧಿಕಾರಿಗಳು ಪ್ರಚಾರ ಮಾಡುವಂತೆ ಫಡಣವೀಸ್ ಶನಿವಾರ ಸೂಚಿಸಿದ್ದಾರೆ ಎಂದು ಅವರು ಹೇಳಿದ್ದಾರೆ.

ಫಡಣವೀಸ್ ಅವರು ಏಳು ದಿನಗಳಲ್ಲಿ 22 ಚುನಾವಣಾ ಪ್ರಚಾರ ಸಭೆಗಳಲ್ಲಿ ಭಾಗವಹಿಸಬೇಕಿತ್ತು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

12 ಜಿಲ್ಲಾ ಪರಿಷತ್ ಮತ್ತು 125 ಪಂಚಾಯಿತಿ ಸಮಿತಿಗೆ ಚುನಾವಣೆ ನಡೆಯಲಿದ್ದು, ಫೆಬ್ರುವರಿ 5ರಂದು ಚುನಾವಣಾ ಪ್ರಚಾರ ಅಂತ್ಯಗೊಳ್ಳಲಿದೆ.

ರಾಜ್ಯ ಚುನಾವಣಾ ಆಯೋಗವು ಚುನಾವಣೆ ವೇಳಾಪಟ್ಟಿಯನ್ನು ಪರಿಷ್ಕರಿಸಿದೆ. ಫೆ.5ರಂದು ನಿಗದಿಯಾಗಿದ್ದ ಮತದಾನ 7ರಂದು ಮುಂದೂಡಲಾಗಿದೆ ಮತ್ತು ಮತ ಎಣಿಕೆ ಫೆ. 9ರಂದು ನಡೆಯಲಿದೆ.

ಇಂದು ವಾಂಗ್ಚುಕ್ ಅರ್ಜಿ ವಿಚಾರಣೆ


ಸೋನಮ್ ವಾಂಗ್ಚುಕ್

ನವದೆಹಲಿ (ಪಿಟಿಐ): ಪ್ರಸ್ತುತ ಜೋಧಪುರ ಕೇಂದ್ರ ಕಾರಾಗೃಹದಲ್ಲಿರುವ ಪರಿಸರ ಹೋರಾಟಗಾರ ಸೋನಮ್ ವಾಂಗ್ಚುಕ್ ಅವರನ್ನು ರಾಷ್ಟ್ರೀಯ ಭದ್ರತಾ ಕಾಯ್ದೆಯಡಿ ಬಂಧಿಸಿರುವುದನ್ನು ಪ್ರಶ್ನಿಸಿ ಅವರ ಪತ್ನಿ ಗೀತಾಂಜಲಿ ಜೆ ಆಂಗ್ಮೋ ಸಲ್ಲಿಸಿರುವ ಅರ್ಜಿಯನ್ನು ಸೋಮವಾರ ಸುಪ್ರೀಂ ಕೋರ್ಟ್ ವಿಚಾರಣೆ ನಡೆಸಲಿದೆ.

ನ್ಯಾಯಮೂರ್ತಿ ಅರವಿಂದ್ ಕುಮಾರ್ ಮತ್ತು ನ್ಯಾಯಮೂರ್ತಿ ಪಿ.ಬಿ. ವರಾಳೆ ಅವರ ಪೀಠವು ಈ ಪ್ರಕರಣದ ವಿಚಾರಣೆ ನಡೆಸುವ ಸಾಧ್ಯತೆಯಿದೆ.

'ಅರಬ್ ಕ್ರಾಂತಿ ಸರ್ಕಾರವನ್ನು ಉರುಳಿಸುವ ಹೇಳಿಕೆಯನ್ನು ನಾನು ನೀಡಿಲ್ಲ' ಎಂದು ಜನವರಿ 29ರಂದು ಹೇಳಿದ್ದ ವಾಂಗ್ಚುಕ್ ಅವರು, ಪ್ರಜಾಪ್ರಭುತ್ವದಲ್ಲಿ ತನಗೆ ಟೀಕಿಸುವ ಮತ್ತು ಪ್ರತಿಭಟಿಸುವ ಹಕ್ಕು ಇದೆ ಎಂದು ಒತ್ತಿ ಹೇಳಿದ್ದಾರೆ.

ಸೋನಮ್ ಅವರ ಪತ್ನಿಯ ಪರವಾಗಿ ಹಾಜರಾದ ವಕೀಲ ಕಪಿಲ್ ಸಿಬಲ್ ಅವರು, ಬಂಧನವನ್ನು ಸಮರ್ಥಿಸಲು 'ಆಯ್ದ ವಿಡಿಯೊವನ್ನು' ಅವಲಂಬಿಸಿದ್ದಾರೆ ಎಂದು ವಾದಿಸಿದ್ದಾರೆ.

'ಸಂಸತ್, ಕೋರ್ಟ್‌ಗಳಲ್ಲಿ ನ್ಯಾಯ ಸಿಗುತ್ತಿಲ್ಲ'

ಹೋರಾಟವೊಂದೇ ದಾರಿ: ಕಾರ್ಮಿಕರ ಸಮಾವೇಶದಲ್ಲಿ ನ್ಯಾ. ಗೋಪಾಲಗೌಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಾರ್ಮಿಕರಿಗೆ ಸಂಸತ್ತಿನಲ್ಲಿ,ಕೋರ್ಟ್‌ಗಳಲ್ಲಿ ನ್ಯಾಯ ಸಿಗುತ್ತಿಲ್ಲ. ನ್ಯಾಯ ಪಡೆಯಲು ಹೋರಾಟವೊಂದೇ ದಾರಿ' ಎಂದು ಸುಪ್ರೀಂ ಕೋರ್ಟ್‌ನ ವಿಶ್ರಾಂತ ನ್ಯಾಯಮೂರ್ತಿ ವಿ. ಗೋಪಾಲಗೌಡ ಅಭಿಪ್ರಾಯಪಟ್ಟರು.

ಫೆ.12ರಂದು ನಡೆಯುವ ಸಾರ್ವತ್ರಿಕ ಮುಷ್ಕರದ ಭಾಗವಾಗಿ, 'ಕಾರ್ಮಿಕ ವಿರೋಧಿ ಕಾರ್ಮಿಕ ಸಂಹಿತೆಗಳನ್ನು ರದ್ದುಪಡಿಸಲು' ಒತ್ತಾಯಿಸಿ ಆಲ್ ಇಂಡಿಯಾ ಸೆಂಟ್ರಲ್ ಕೌನ್ಸಿಲ್ ಆಫ್ ಟ್ರೇಡ್ ಯೂನಿಯನ್ಸ್ (ಎಐಸಿಸಿಟಿಯು) ಭಾನುವಾರ ಹಮ್ಮಿಕೊಂಡಿದ್ದ ಕಾರ್ಮಿಕರ ಸಮಾವೇಶದಲ್ಲಿ ಅವರು ಮಾತನಾಡಿದರು.



ಎಐಸಿಸಿಟಿಯು ಭಾನುವಾರ ಹಮ್ಮಿಕೊಂಡಿದ್ದ ಕಾರ್ಮಿಕರ ಸಮಾವೇಶದಲ್ಲಿ ವಿಶ್ರಾಂತ ನ್ಯಾಯಮೂರ್ತಿ ವಿ. ಗೋಪಾಲಗೌಡ ಮಾತನಾಡಿದರು

ಪ್ರಜಾವಾಣಿ ಚಿತ್ರ

'ದೇಶದ ಅಭಿವೃದ್ಧಿಗೆ, ಪ್ರಗತಿಗೆ ಟ್ರೇಡ್ ಯೂನಿಯನ್‌ಗಳೇ ಅಡ್ಡಿಯಾಗಿವೆ ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಹೇಳುತ್ತಾರೆ ಎಂದರೆ ಕಾರ್ಮಿಕರು ಎಲ್ಲಿ ನ್ಯಾಯ ಕೇಳಬೇಕು? ಕಾರ್ಮಿಕರ ಹಕ್ಕುಗಳ ಬಗ್ಗೆ ಗೊತ್ತಿಲ್ಲದವರಷ್ಟೇ ಈ ರೀತಿ ಹೇಳಲು ಸಾಧ್ಯ' ಎಂದು ಟೀಕಿಸಿದರು.

'ಕಾರ್ಮಿಕರು ಇಲ್ಲದೇ ಸುಪ್ರೀಂ ಕೋರ್ಟ್ ನಡೆಯಲು ಸಾಧ್ಯವೇ? ಅಲ್ಲಿ ಕಸ ಗುಡಿಸುವವರು, ಕಡತಗಳನ್ನು ತಂದು ಕೊಡುವವರು, ಕಂಪ್ಯೂಟರ್ ಆಪರೇಟರ್‌ಗಳು ಕೆಲಸ ಮಾಡದೇ ಇದ್ದರೆ ನೀವು ಹೇಗೆ ನ್ಯಾಯ ನೀಡುವಿರಿ? ಅವರೆಲ್ಲ ಕಾರ್ಮಿಕರು. ಅವರಿಗೆ ಕನಿಷ್ಠ ವೇತನ ಇರಬೇಕು ಎಂಬ ಪ್ರಜ್ಞೆ ನಿಮಗಿಲ್ಲವೇ' ಎಂದು ಪ್ರಶ್ನಿಸಿದರು.

ಕಾರ್ಮಿಕರ 29 ಕಾಯ್ದೆಗಳಿದ್ದವು. ಇವು ಪೂರ್ಣವಾಗಿ ಕಾರ್ಮಿಕರ ಹಕ್ಕುಗಳನ್ನು ರಕ್ಷಿಸಿದ್ದವು ಎಂದಲ್ಲ. ಆದರೂ ಪರವಾಗಿರಲಿಲ್ಲ. ಯಾವಾಗಲೂ ಹಳೇ ಕಾಯ್ದೆಗಳನ್ನು ರದ್ದು ಪಡಿಸಿ ಹೊಸ ಕಾಯ್ದೆ ತರುವಾಗ ಇಲ್ಲವೇ ಕಾಯ್ದೆಯನ್ನು ತಿದ್ದುಪಡಿ ಮಾಡುವಾಗ ಆ ಕಾಯ್ದೆಗಿಂತ ಹೆಚ್ಚು ಹಕ್ಕುಗಳು, ಸೌಲಭ್ಯಗಳು ಇರುವಂತೆ ರೂಪಿಸಬೇಕು. ಇಲ್ಲದೇ ಇದ್ದರೆ ಹಳೇ ಕಾಯ್ದೆಯನ್ನೇ ಮುಂದುವರಿಸಬೇಕು. ಆದರೆ, ಕಾರ್ಮಿಕರ ಹಳೇ ಕಾಯ್ದೆಗಳನ್ನು ರದ್ದು ಮಾಡಿ ಹೊಸ ನಾಲ್ಕು ಸಂಹಿತೆಗಳನ್ನು ರಚಿಸಿರುವ ಕೇಂದ್ರ ಸರ್ಕಾರವು ಕಾರ್ಮಿಕರ ಎಲ್ಲ ಹಕ್ಕುಗಳನ್ನು ಕಿತ್ತುಕೊಂಡಿದೆ ಎಂದರು.

'ಕಾರ್ಮಿಕ ಸಂಹಿತೆಗಳು: ಮೋದಿ ಕಟ್ಟುತ್ತಿರುವ ಸುಳ್ಳುಗಳ ಅನಾವರಣ' ಎಂಬ ಕೃತಿಯನ್ನು ಇದೇ ಸಂದರ್ಭದಲ್ಲಿ ಜನಾರ್ಪಣೆಗೊಳಿಸಲಾಯಿತು. ಎಐಸಿಸಿಟಿಯು ಮುಖಂಡರಾದ ಅಪ್ಪಣ್ಣ, ಕ್ರಿಫ್ಟನ್ ರೊಜಾರಿಯೊ, ಮೈತ್ರಿ ಕೃಷ್ಣನ್, ಶಂಕರ್, ನಿರ್ಮಲ ಉಪಸ್ಥಿತರಿದ್ದರು.

4ಕ್ಕೆ ರಷ್ಯಾ, ಉಕ್ರೇನ್, ಅಮೆರಿಕ ನಿಯೋಗದ ನಡುವೆ ಮಾತುಕತೆ


ವೊಲೊಡಿಮಿರ್ ಝೆಲೆನ್‌ಸ್ಕಿ

ಕೀವ್ (ಪಿಟಿಐ): ಅಮೆರಿಕ ಮಧ್ಯಸ್ಥಿಕೆಯಲ್ಲಿ ರಷ್ಯಾ ಮತ್ತು ಉಕ್ರೇನ್ ನಿಯೋಗಗಳ ನಡುವಿನ ಮತ್ತೊಂದು ಸುತ್ತಿನ ಮಾತುಕತೆಯು ಫೆ.4 ಮತ್ತು 5ರಂದು ನಡೆಯಲಿದೆ ಎಂದು ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಅವರು ಭಾನುವಾರ ತಿಳಿಸಿದರು.

'ಉಕ್ರೇನ್ ಮೇಲಿನ ರಷ್ಯಾದ ಸಂಪೂರ್ಣ ಆಕ್ರಮಣವನ್ನು ಕೊನೆಗೊಳಿಸುವುದು ಮಾತುಕತೆಯ ಉದ್ದೇಶವಾಗಿದೆ. ರಷ್ಯಾ, ಉಕ್ರೇನ್ ಹಾಗೂ ಅಮೆರಿಕದ ತ್ರಿಪಕ್ಷೀಯ ಸಭೆಯು ಅಬುಧಾಬಿಯಲ್ಲಿ ನಡೆಯಲಿದೆ. ಅರ್ಥಪೂರ್ಣ ಮಾತುಕತೆಗೆ ಉಕ್ರೇನ್ ಸಿದ್ಧವಾಗಿದೆ. ಯುದ್ಧವನ್ನು ಕೊನೆಗೊಳಿಸಲು ಎದುರು ನೋಡುತ್ತಿದ್ದೇವೆ' ಎಂದರು.

ಈ ಬಗ್ಗೆ ಅಮೆರಿಕ ಹಾಗೂ ರಷ್ಯಾದ ಅಧಿಕಾರಿಗಳು ಸದ್ಯಕ್ಕೆ ಪ್ರತಿಕ್ರಿಯೆ ನೀಡಿಲ್ಲ. ಅಮೆರಿಕದ ಶಾಂತಿಪಾಲನಾ ನಿಯೋಗದೊಂದಿಗೆ ಮಾತುಕತೆ ನಡೆಸಿರುವುದಾಗಿ ರಷ್ಯಾ ಅಧ್ಯಕ್ಷ ಪುಟಿನ್ ಅವರ ವಿಶೇಷ ರಾಯಭಾರಿ ಕಿರಿಲ್ ಡಿಮಿಟ್ರಿವ್ ಹೇಳಿದರು.

ಮುಖಂಡರ ಮುಂದೆ ಗ್ಲಾಮರಸ್ ಆಗಿರಲು ಬಯಸಬೇಡಿ: ಮೋಟಮ್ಮ



ಮಂಗಳೂರು: 'ಎಲ್ಲ ರಾಜಕೀಯ ಪಕ್ಷಗಳೂ ಮಹಿಳೆಯರನ್ನು ಕಡೆಗಣಿಸುತ್ತಿದ್ದು ಕೇವಲ ಸಾಂಬಾರ್‌ಗೆ ಪರಿಮಳ ತುಂಬುವ ಕರಿಬೇವಿನಂತೆ ಬಳಸಿಕೊಳ್ಳುತ್ತಿದ್ದಾರೆ. ಆದ್ದರಿಂದ ಪಕ್ಷಭೇದ ಬಿಟ್ಟು ಹೋರಾಡಬೇಕು. ಗ್ಲಾಮರಸ್ ಆಗಿ ಕಾಣಿಸಿಕೊಂಡು ನಾಯಕರ ಹಿಂದೆ ಓಡಾಡುವುದನ್ನು ನಿಲ್ಲಿಸಬೇಕು' ಎಂದು ಕಾಂಗ್ರೆಸ್ ನಾಯಕಿ ಮೋಟಮ್ಮ ಹೇಳಿದರು.

ನಗರದಲ್ಲಿ ಭಾನುವಾರ ಆರಂಭಗೊಂಡ ಮಹಿಳಾ ಮಂಡಲಗಳ ಒಕ್ಕೂಟದ ಸಮಾವೇಶದಲ್ಲಿ 'ರಾಜಕೀಯದಲ್ಲಿ ಮಹಿಳೆ' ವಿಷಯದ ಬಗ್ಗೆ ಮಾತನಾಡಿದ ಅವರು ಮಹಿಳಾ ರಾಜಕಾರಣಿಗಳು ನಾಯಕರ ಮುಂದೆ ಹಲ್ಲು ಕಿರಿದು ನಿಲ್ಲುವುದನ್ನು ಬಿಡಬೇಕು, ಸ್ವಂತ ಕಾಲ ಮೇಲೆ ನಿಂತು ಕೆಲಸ ಮಾಡಿ ನಾಯಕರು ತಮ್ಮ ಬಳಿ ಸಹಾಯ ಕೇಳುವಂತೆ ಮಾಡಬೇಕು ಎಂದರು.

'ಮತದಾರರಲ್ಲಿ ಶೇಕಡ 50ರಷ್ಟು ಮಹಿಳೆಯರಿದ್ದಾರೆ. ಆದರೆ ಯಾವ ಸರ್ಕಾರವೂ, ಯಾವ ಮುಖಂಡರೂ ಮಹಿಳೆಗೆ ಅಧಿಕಾರ ನೀಡಲು ಬಯಸಲ್ಲಿಲ್ಲ. ಎಲ್ಲೂ ನಿರ್ಣಯ ಕೈಗೊಳ್ಳುವ ಅವಕಾಶ ಮಹಿಳೆಗೆ ಸಿಗುತ್ತಿಲ್ಲ' ಎಂದು ಅವರು ಹೇಳಿದರು.

'ಸಮಾಜದಲ್ಲಿ ಅತ್ಯಾಚಾರದಂಥ ಮನಃಸ್ಥಿತಿ ನಿರ್ಮಾಣವಾಗಲು ಬಹುತೇಕ ಸಂದರ್ಭದಲ್ಲಿ ತಾಯಂದಿರೇ ಕಾರಣ. ಮಕ್ಕಳಿಗೆ ಅವರು ಗಟ್ಟಿತನ ಹೇಳಿಕೊಡುವುದಿಲ್ಲ. ಸಿನಿಮಾದವರನ್ನು ನೋಡಿ ಕಲಿಯುವಂತೆ ಪ್ರೇರಣೆ ನೀಡುತ್ತಾರೆ. ಸ್ಲೀವ್‌ಲೆಸ್ ಬ್ಲೌಸ್, ಟ್ರಾನ್ಸ್‌ಪರೆಂಟ್ ಲಂಗ ಹಾಕಲು ಪ್ರೇರೇಪಿಸುವುದಕ್ಕಿಂತ ಸ್ವಾವಲಂಬಿಯಾಗಲು ತಿಳಿಸಿಕೊಡಬೇಕು' ಎಂದರು.

ಮೋಳಕೇರಾ ಗ್ರಾಮದ ಸುತ್ತ ಆವರಿಸಿವೆ ವಿಷಪೂರಿತ ರಾಸಾಯನಿಕಗಳು

ಸ್ಫೋಟ ನಿಗೂಢ; ಆತಂಕದಲ್ಲಿ ಗ್ರಾಮಸ್ಥರು

• ಶಶಿಕಾಂತ ಎಸ್. ಶೆಂಬೆಳ್ಳಿ

ಬೀದರ್: ಹುಮನಾಬಾದ್ ತಾಲ್ಲೂಕಿನ ಮೋಳಕೇರಾ ಗ್ರಾಮದಲ್ಲಿ ಶನಿವಾರ ಸಂಭವಿಸಿದ ಸ್ಫೋಟ ಪ್ರಕರಣ ಇನ್ನೂ ನಿಗೂಢವಾಗಿಯೇ ಉಳಿದಿದೆ.

ಎರಡು ದಿನ ಕಳೆದರೂ ಸ್ಫೋಟಕ್ಕೆ ಕಾರಣವೇನು ಎಂಬುದು ದೃಢಪಟ್ಟಿಲ್ಲ. ಶನಿವಾರ ಸಂಭವಿಸಿದ ಪ್ರಬಲ ಸ್ಫೋಟದಲ್ಲಿ ನಾಲ್ವರು ಮಕ್ಕಳು ಸೇರಿದಂತೆ ಆರು ಜನ ಗಂಭೀರವಾಗಿ ಗಾಯಗೊಂಡಿದ್ದಾರೆ. ಇದರಲ್ಲಿ ಇಬ್ಬರು ವಯಸ್ಕರ ಪರಿಸ್ಥಿತಿ ಗಂಭೀರವಾಗಿದ್ದು, ಜೀವನ್ಮರಣದ ಹೋರಾಟ ನಡೆಸುತ್ತಿದ್ದಾರೆ.

ಬ್ಯಾರಲ್‌ನಲ್ಲಿ ಸಂಗ್ರಹಿಸಿ ಇಡಲಾಗಿದ್ದ ರಾಸಾಯನಿಕದಿಂದ ಸ್ಫೋಟ ಸಂಭವಿಸಿರುವ ಸಾಧ್ಯತೆ ಇದೆ ಎಂದು ಪೊಲೀಸರು ಅಂದಾಜಿಸಿದ್ದಾರೆ. ಆದರೆ, ಇದು ಇನ್ನೂ ದೃಢಪಟ್ಟಿಲ್ಲ. ಸ್ಫೋಟದ ತೀವ್ರತೆ ಹೆಚ್ಚಿರುವುದರಿಂದ ಎರಡನೇ ದಿನವೂ ಇಡೀ ಪ್ರದೇಶದಲ್ಲಿ ಪೊಲೀಸರು ಬ್ಯಾರಿಕೇಡ್ ಅಳವಡಿಸಿ, ಜನರ ಓಡಾಟ ನಿರ್ಬಂಧಿಸಿ, ತನಿಖೆ ಮುಂದುವರೆಸಿದ್ದಾರೆ. ಅವರಿಗೆ ವಿಧಿ ವಿಜ್ಞಾನ ಪ್ರಯೋಗಾಲಯದ ತಜ್ಞರು ನೆರವಾಗಿದ್ದಾರೆ.

ಮುಖ್ಯಾಂಶಗಳು


- ಜ.28ರಂದು ಸ್ಫೋಟ ಸಂಭವಿಸಿತ್ತು
- ಜ. 31ರ ಸ್ಫೋಟದಲ್ಲಿ ಆರು ಜನರಿಗೆ ಗಾಯ
- 1 ವರ್ಷದಲ್ಲಿ 5 ಸ್ಫೋಟ, ಎಂಟು ಜನರಿಗೆ ಗಾಯ

ರಾಜ್ಯಮಟ್ಟದ ತಜ್ಞರ ತಂಡವನ್ನು ಮೋಳಕೇರಾ ಗ್ರಾಮಕ್ಕೆ ಕಳಿಸಿ, ಅಲ್ಲಿನ ಮಣ್ಣು, ನೀರಿನ ಪರೀಕ್ಷೆ ಮಾಡಿಸಿ, ಆ ವರದಿ ಆಧರಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು

ಈಶ್ವರ ಬಿ. ಖಂಡ್ರೆ, ಅರಣ್ಯ ಸಚಿವ

ಸುತ್ತಲೂ ವಿಷಪೂರಿತ ರಾಸಾಯನಿಕ: ಕಳೆದ ಒಂದು ವರ್ಷದಲ್ಲಿ ಗ್ರಾಮದಲ್ಲಿ ಐದು ಸ್ಫೋಟಗಳು ಸಂಭವಿಸಿವೆ. ಜನವರಿ 28ರಂದು ಕೂಡ ಸ್ಫೋಟ ಸಂಭವಿಸಿತ್ತು. ಇದಾದ ಮೂರು ದಿನ ಕಳೆಯುವಷ್ಟರಲ್ಲಿ ಮತ್ತೆ ಸ್ಫೋಟ ಸಂಭವಿಸಿದೆ.

ಮೋಳಕೇರಾ, ಗಡವಂತಿ, ಮಾಣಿಕ್ ನಗರ ಹಾಗೂ ಧುಮ್ಮನಸೂರ ಗ್ರಾಮಗಳ ಅಂತರ್ಜಲ ಕಲುಷಿತವಾಗಿರುವುದರ ಕುರಿತು ಹೆಸರು ಹೇಳಲಿಚ್ಛಿಸದ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ದೃಢಪಡಿಸಿದ್ದಾರೆ.


ಸ್ಫೋಟ ಸಂಭವಿಸಿದ ಮೋಳಕೇರಾ ಗ್ರಾಮದ ಮುಖ್ಯರಸ್ತೆಯನ್ನು ಬ್ಯಾರಿಕೇಡ್‌ನಿಂದ ಬಂದ್ ಮಾಡಿ, ಭಾನುವಾರವೂ ತನಿಖೆ ನಡೆಸಿದ ಪೊಲೀಸರು

ಮೋಳಕೇರಾ ಗ್ರಾಮವು ಹೈದರಾಬಾದ್–ಮುಂಬೈ ರಾಷ್ಟ್ರೀಯ ಹೆದ್ದಾರಿಯ ಬದಿಯಲ್ಲಿದೆ. ಗ್ರಾಮಸ್ಥರ ಪ್ರಕಾರ, ಕೆಲ ರಾಸಾಯನಿಕ ಕೈಗಾರಿಕೆಗಳಿಗೆ ಸೇರಿದವರು ರಾತ್ರಿ ವೇಳೆ ಗ್ರಾಮದ ಸುತ್ತಲೂ ರಾಸಾಯನಿಕ ತ್ಯಾಜ್ಯವನ್ನು ಸುರಿದು ಹೋಗುತ್ತಿದ್ದಾರೆ. ಇದರ ಪರಿಣಾಮ ಇಡೀ ಗ್ರಾಮದ ಅಂತರ್ಜಲ ಕಲುಷಿತಗೊಂಡಿದೆ. ಮಣ್ಣಿನ ಸತ್ವ ಹೋಗಿದೆ. ಬಾವಿ, ಕೆರೆ ನೀರು ಸೇವಿಸಿ ದನ ಕರುಗಳು ಮೃತಪಟ್ಟಿವೆ. ಗ್ರಾಮಸ್ಥರು ಬೇರೆ ಕಡೆಗಳಿಂದ ನೀರು ತಂದು ಕುಡಿಯುತ್ತಿದ್ದಾರೆ. ಗ್ರಾಮಸ್ಥರಿಗೆ ತುರಿಕೆ, ಚರ್ಮ ರೋಗಗಳು ಬರುತ್ತಿವೆ. ಇದನ್ನು ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದರೂ ಯಾವುದೇ ಕ್ರಮ ಕೈಗೊಂಡಿಲ್ಲ' ಎಂದು ಗ್ರಾಮಸ್ಥರು ಆರೋಪಿಸಿದ್ದಾರೆ.

'ಮೋಳಕೇರಾ ಹಾಗೂ ಸುತ್ತಲಿನ ಗ್ರಾಮಗಳಲ್ಲಿ ನೀರು ಬಳಸಲು ಯೋಗ್ಯವಿಲ್ಲ. ಇನ್ನೂ ಸ್ವಲ್ಪ ದಿನಗಳು ಕಳೆದರೆ ಗಾಳಿ ಸಹ ವಿಷ ಆಗುವ ಆತಂಕವಿದೆ. ಗ್ರಾಮದ ಸುತ್ತಮುತ್ತ ವಿಷಪೂರಿತ ರಾಸಾಯನಿಕ ತ್ಯಾಜ್ಯ ಹಾಕದಂತೆ ಕ್ರಮ ಕೈಗೊಳ್ಳಬೇಕು' ಎಂದು ಗ್ರಾಮದ ಬಸವರಾಜ ಆಗ್ರಹಿಸಿದ್ದಾರೆ.

ವೆನೆಜುವೆಲಾದಿಂದ ತೈಲ ಖರೀದಿಸಲಿದೆ ಭಾರತ: ಟ್ರಂಪ್

ಒಂದನೇ ಪುಟದಿಂದ..

'ಭಾರತವೂ ಇರಾನ್ ಬದಲಾಗಿ ವೆನೆಜುವೆಲಾದಿಂದ ತೈಲ ಖರೀದಿಗೆ ಮುಂದಾಗಿದೆ. ಈ ಸಂಬಂಧ ಒಪ್ಪಂದ ಚಾಲ್ತಿಯಲ್ಲಿದೆ' ಎಂದು ಹೇಳಿದರು.

ಟ್ರಂಪ್ ಹೇಳಿಕೆಯ ಬಗ್ಗೆ ಭಾರತ ಸರ್ಕಾರ ತಕ್ಷಣಕ್ಕೆ ಯಾವುದೇ ಪ್ರತಿಕ್ರಿಯೆ ನೀಡಿಲ್ಲ.

ಭಾರತವು 2019ರವರೆಗೂ ಇರಾನ್‌ನಿಂದ ಕಚ್ಚಾತೈಲ ಖರೀದಿಸುವ ಪ್ರಮುಖ ರಾಷ್ಟ್ರವಾಗಿತ್ತು. ಇರಾನ್ ಮೇಲೆ ಅಮೆರಿಕ ನಿರ್ಬಂಧ ಹೇರಿದ ಬಳಿಕ ಆಮದು ಪ್ರಮಾಣ ಗಮನಾರ್ಹವಾಗಿ ತಗ್ಗಿತು. ನಿರ್ಬಂಧ ವಿಧಿಸಿರುವ ದೇಶಗಳಿಂದ ಕಚ್ಚಾತೈಲ ಖರೀದಿಯನ್ನು ನಿಲ್ಲಿಸುವಂತೆ ಪ್ರಮುಖ ಆಮದುದಾರ ದೇಶಗಳಿಗೆ ಅಮೆರಿಕ ಒತ್ತಡ ಹೇರುತ್ತಿದೆ.

ಇತ್ತೀಚಿನ ವರ್ಷಗಳಲ್ಲಿ ಭಾರತವು ರಷ್ಯಾದಿಂದ ರಿಯಾಯಿತಿ ದರದಲ್ಲಿ ಕಚ್ಚಾತೈಲ ಖರೀದಿಸುತ್ತಿದೆ. ಇದೇ ಕಾರಣಕ್ಕಾಗಿ ಅಮೆರಿಕವು ಭಾರತದ ಮೇಲೆ ಶೇ 50ರಷ್ಟು ಸುಂಕ ವಿಧಿಸಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ವೆನೆಜುವೆಲಾ ಹಂಗಾಮಿ ಅಧ್ಯಕ್ಷ ಡೆಲ್ಸಿ ರಾಡ್ರಿಗಸ್ ಅವರೊಂದಿಗೆ ಶುಕ್ರವಾರ ದೂರವಾಣಿ ಮೂಲಕ ಮಾತುಕತೆ ನಡೆಸಿದ್ದರು. ಉಭಯ ದೇಶಗಳ ದ್ವಿಪಕ್ಷೀಯ ಸಂಬಂಧವನ್ನು ವೃದ್ಧಿಸುವ ಬಗ್ಗೆ ಪರಸ್ಪರ ಸಹಮತ ವ್ಯಕ್ತಪಡಿಸಿದ್ದರು.

ಮೋದಿ ಸರ್ಕಾರದ ವಿರುದ್ಧ 'ಕೈ' ವಾಗ್ದಾಳಿ

ನವದೆಹಲಿ: ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿಕೆ ವಿಚಾರವಾಗಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಭಾನುವಾರ ವಾಗ್ದಾಳಿ ನಡೆಸಿದೆ.

'ನಮ್ಮ ಸರ್ಕಾರ ಏನು ಮಾಡಿದೆ ಅಥವಾ ಏನು ಮಾಡಲಿದೆ ಎಂಬ ಮಾಹಿತಿ ನೀಡುವುದನ್ನು ಅಮೆರಿಕ ಅಧ್ಯಕ್ಷರು ಮುಂದುವರಿಸಿದ್ದಾರೆ' ಎಂದು ಕಾಂಗ್ರೆಸ್ ಹೇಳಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್, 'ಟ್ರಂಪ್ ಅವರು 'ಆಪರೇಷನ್ ಸಿಂಧೂರ' ಕಾರ್ಯಾಚರಣೆಯನ್ನು ನಿಲ್ಲಿಸಲಾಗಿದೆ ಎಂದು ಹೇಳಿದ್ದರು. ಭಾರತವು ರಷ್ಯಾದಿಂದ ತೈಲ ಖರೀದಿಯನ್ನು ನಿಲ್ಲಿಸಿದೆ ಎಂದೂ ಹೇಳಿದ್ದರು. ಈಗ ವೆನೆಜುವೆಲಾದಿಂದ ತೈಲ ಖರೀದಿಗೆ ಒಪ್ಪಂದವಾಗಿದೆ ಎಂದು ಹೇಳಿದ್ದಾರೆ. ನಮ್ಮ ಸರ್ಕಾರದ ನಡೆಯ ಕುರಿತು ಮಾಹಿತಿ ನೀಡುವುದನ್ನು ಅವರು ಮುಂದುವರಿಸಿದ್ದಾರೆ' ಎಂದು 'ಎಕ್ಸ್'ನಲ್ಲಿ ಹೇಳಿದ್ದಾರೆ.

'ಕ್ಯೂಬಾದೊಂದಿಗೆ ಮಾತುಕತೆ'

ಕ್ಯೂಬಾ ದೇಶದ ನಾಯಕರೊಂದಿಗೆ ಅಮೆರಿಕ ಮಾತುಕತೆ ನಡೆಸುತ್ತಿದೆ ಎಂದು ಡೊನಾಲ್ಡ್ ಟ್ರಂಪ್ ಹೇಳಿದರು. ವೆನೆಜುವೆಲಾ ಮತ್ತು ಮೆಕ್ಸಿಕೊದಿಂದ ಕ್ಯೂಬಾ ದ್ವೀಪ ರಾಷ್ಟ್ರಕ್ಕೆ ತೈಲ ಪೂರೈಕೆಯನ್ನು ಸ್ಥಗಿತಗೊಳಿಸಿದ ಬೆನ್ನಲ್ಲೇ ಈ ಹೇಳಿಕೆ ನೀಡಿದರು.

ಆದರೆ ಕ್ಯೂಬಾ ದೇಶದ ಜೊತೆಗಿನ ಅಮೆರಿಕ ಒಪ್ಪಂದದ ಉದ್ದೇಶವೇನು ಎಂಬುದು ಅಸ್ಪಷ್ಟವಾಗಿದೆ. ಮಾತುಕತೆಯು ಯಾವ ಹಂತದಲ್ಲಿದೆ ಎಂಬ ಬಗ್ಗೆಯೂ ಟ್ರಂಪ್ ಅವರು ಮಾಹಿತಿ ನೀಡಿಲ್ಲ. ಜನವರಿ ಆರಂಭದಲ್ಲಿ ವೆನೆಜುವೆಲಾವನ್ನು ಅಮೆರಿಕ ವಶಕ್ಕೆ ಪಡೆದ ನಂತರದಲ್ಲಿ ಟ್ರಂಪ್ ಅವರು ಕ್ಯೂಬಾ ದೇಶದತ್ತ ಹೆಚ್ಚಿನ ಗಮನ ಹರಿಸಿದ್ದಾರೆ. ಕ್ಯೂಬಾಕ್ಕೆ ತೈಲ ಮಾರಾಟ ಮಾಡುವ ದೇಶಗಳ ಮೇಲೆ ಅಧಿಕ ಸುಂಕ ವಿಧಿಸುವುದಾಗಿ ಟ್ರಂಪ್ ಬೆದರಿಕೆ ಹಾಕಿದ್ದಾರೆ.

ದೇವದತ್ತ ಶತಕ: ಜಯದ ಪುಳಕ

ರಣಜಿ: ಎಂಟರ ಘಟ್ಟಕ್ಕೆ ಕರ್ನಾಟಕ
• ಬದ್ಧ ಎದುರಾಳಿ ಮುಂಬೈಗೆ ಸವಾಲು

ಪ್ರಜಾವಾಣಿ ವಾರ್ತೆ

ಕ್ವಾರ್ಟರ್‌ಫೈನಲ್
ಬಂಗಾಳ–ಆಂಧ್ರ (ಬಿಎಸಿ, ಕಲ್ಯಾಣಿ)
ಮಧ್ಯಪ್ರದೇಶ–ಜಮ್ಮು–ಕಾಶ್ಮೀರ (ಇಂದೋರ್)
ಜಾರ್ಖಂಡ್–ಉತ್ತರಾಖಂಡ (ಜೆಮ್ಶೆಡ್‌ಪುರ)
ಮುಂಬೈ–ಕರ್ನಾಟಕ (ಬಿಕೆಸಿ, ಮುಂಬೈ)
ದಿನಾಂಕ: ಫೆ 6ರಿಂದ 10

ಮೊಹಾಲಿ: ದೇವದತ್ತ ಪಡಿಕ್ಕಲ್ ಅವರು ಭಾನುವಾರ ದಾಖಲಿಸಿದ ಶತಕವು ಕರ್ನಾಟಕದ ಕ್ರಿಕೆಟ್‌ಪ್ರೇಮಿಗಳ ಮನದಲ್ಲಿ ಬಹುಕಾಲ ಸಿಹಿನೆನಪಾಗಿ ಉಳಿಯಲಿದೆ. ಏಕೆಂದರೆ; ಅವರ ಶತಕದ ಬಲದಿಂದ ಕರ್ನಾಟಕವು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಎಂಟರ ಘಟ್ಟಕ್ಕೆ ಲಗ್ಗೆ ಇಟ್ಟಿತು.

ತಂಡದ ನಾಯಕನಾಗಿ, ಆರಂಭಿಕ ಬ್ಯಾಟರ್ ಆಗಿ ಮತ್ತು ಫಿನಿಷರ್ ಪಾತ್ರವನ್ನೂ ನಿರ್ವಹಿಸಿದ ದೇವದತ್ತ (ಅಜೇಯ 120; 85ಎ, 4X6, 6X5) ಅವರಿಂದಾಗಿ ಕರ್ನಾಟಕವು ಎಲೀಟ್ ಬಿ ಗುಂಪಿನ ಕೊನೆಯ ಪಂದ್ಯದಲ್ಲಿ ಪಂಜಾಬ್ ಎದುರು 5 ವಿಕೆಟ್‌ಗಳಿಂದ ಗೆದ್ದಿತು. ಒಟ್ಟು 27 ಅಂಕಗಳೊಂದಿಗೆ ಗುಂಪಿನಲ್ಲಿ ಎರಡನೇ ಸ್ಥಾನ ಪಡೆಯಿತು. ಫೆ. 6ರಿಂದ 10ರವರೆಗೆ ನಡೆಯಲಿರುವ ಕ್ವಾರ್ಟರ್ ಫೈನಲ್‌ನಲ್ಲಿ 42 ಬಾರಿಯ ಚಾಂಪಿಯನ್ ಮುಂಬೈ ತಂಡವನ್ನು ಎದುರಿಸಲಿದೆ.

ಐ.ಎಸ್. ಬಿಂದ್ರಾ ಕ್ರೀಡಾಂಗಣದಲ್ಲಿ ನಡೆದ ಪಂದ್ಯದ ಅಂತಿಮ ದಿನದಾಟದಲ್ಲಿ ಪಂಜಾಬ್ ನೀಡಿದ್ದ 250 ರನ್‌ಗಳ ಗೆಲುವಿನ ಗುರಿಯನ್ನು ಕರ್ನಾಟಕ ಬೆನ್ನಟ್ಟಿತ್ತು. ಓವರ್‌ಗಳ ಸಂಖ್ಯೆ ಮತ್ತು ಸಮಯದ ಮಿತಿಯನ್ನು ನೋಡಿದಾಗ ಈ ಗುರಿಯು ಕಠಿಣ ಎಂದು ಮೇಲ್ನೋಟಕ್ಕೆ ಅನಿಸಿತ್ತು. ಪಡಿಕ್ಕಲ್ ಪಡೆಯು 27.3 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 252 ರನ್ ಗಳಿಸಿತು.

ಚಹಾ ವಿರಾಮಕ್ಕೆ ಸುಮಾರು ಅರ್ಧ ಗಂಟೆಗೂ ಮುನ್ನ ಕರ್ನಾಟಕ ಇನಿಂಗ್ಸ್ ಆರಂಭವಾಯಿತು. ಅಂದಾಜು 40 ಓವರ್‌ಗಳಲ್ಲಿ ಅವರು ಈ ಗುರಿಯನ್ನು ಮುಟ್ಟಬೇಕಿತ್ತು. ನಾಲ್ಕನೇ ದಿನದ ಪಿಚ್ ಸ್ಪಿನ್ನರ್‌ಗಳಿಗೆ ನೆರವು ನೀಡುವಂತಿತ್ತು. ಕೆಳಹಂತದಲ್ಲಿ ಪುಟಿದೆದ್ದು ತಿರುವು ಪಡೆಯುತ್ತಿದ್ದ ಎಸೆತಗಳನ್ನು ಎದುರಿಸುವುದು ಸವಾಲಾಗಿತ್ತು. ಆದರೆ ದೇವದತ್ತ ದಿಟ್ಟ ನಿರ್ಧಾರದ ಮುಂದೆ ಸವಾಲು ಸೋತಿತು. ತಮ್ಮ ಕಳೆದ ಮೂರು ಇನಿಂಗ್ಸ್‌ಗಳಲ್ಲಿಯೂ ವೈಫಲ್ಯ ಅನುಭವಿಸಿದ್ದ ದೇವದತ್ತ ಇಲ್ಲಿ ಅಮೋಘವಾಗಿ ಆಡಿ ಪ್ರಥಮ ದರ್ಜೆ ಕ್ರಿಕೆಟ್‌ನಲ್ಲಿ ಎಂಟನೇ ಶತಕ ದಾಖಲಿಸಿದರು.

ಅವರು ಆರಂಭದಿಂದಲೇ ಟಿ20 ಮಾದರಿಯ ಬೀಸಾಟವಾಡಿದರು. 13 ರನ್ ಗಳಿಸಿದ ರಾಹುಲ್ ಮೂರನೇ ಓವರ್‌ನಲ್ಲಿ ಅನ್ಮೋಲ್‌ಜೀತ್ ಸಿಂಗ್‌ಗೆ ಕ್ಯಾಚಿತ್ತರು. ಕ್ರೀಸ್‌ಗೆ ಬಂದ 'ನಿಕಟಪೂರ್ವ ನಾಯಕ' ಮಯಂಕ್ ಅಗರವಾಲ್ ಅವರು ದೇವದತ್ತಗಿಂತ ವೇಗವಾಗಿ ರನ್ ಗಳಿಸಿದರು. ಇಬ್ಬರ ಭರಾಟೆಯಿಂದಾಗಿ ಚಹಾ ವಿರಾಮಕ್ಕೆ ತಂಡವು 8 ಓವರ್‌ಗಳಲ್ಲಿ 1 ವಿಕೆಟ್‌ಗೆ 52 ರನ್ ಗಳಿಸಿತ್ತು.

ಭಾನುವಾರ ಮಂದಬೆಳಕಿನ ಸಮಸ್ಯೆ ಇರಲಿಲ್ಲ. ಸಂಜೆಯಾದರೂ ಚೆಲ್ಲಿದ್ದ ಚೆಂದದ ಬೆಳಕಿನಲ್ಲಿ ದೇವದತ್ತ ಮತ್ತು ಮಯಂಕ್ ಆಟ ರಂಗೇರಿತು. 15ನೇ ಓವರ್‌ನಲ್ಲಿ ಮಯಂಕ್ (53; 36ಎ, 4X6, 6X1) ಅವರು ಇಮಾನ್ಜೋತ್ ಸಿಂಗ್ ಚಾಹಲ್ ಬೌಲಿಂಗ್‌ನಲ್ಲಿ ಕ್ಲೀನ್‌ಬೌಲ್ಡ್ ಆದಾಗ ತಂಡದ ಖಾತೆಯಲ್ಲಿ 130 ರನ್‌ಗಳಿದ್ದವು. ಮಯಂಕ್ ಮತ್ತು ದೇವದತ್ತ ಎರಡನೇ ವಿಕೆಟ್ ಜೊತೆಯಾಟದಲ್ಲಿ 113 (72ಎ) ರನ್ ಸೇರಿಸಿದರು. ಅನೀಶ್ ಕೆ.ವಿ. ಮತ್ತು ಸ್ಮರಣ್ ರವಿಚಂದ್ರನ್ ಅವರು ತಲಾ 1 ರನ್ ಗಳಿಸಿ ಔಟಾದಾಗ ಕರ್ನಾಟಕ ಬಳಗದಲ್ಲಿ ಒತ್ತಡದ ಛಾಯೆ ಆವರಿಸಿತು.

ಮತ್ತೊಮ್ಮೆ ಶ್ರೇಯಸ್ ಗೋಪಾಲ್ ತಂಡಕ್ಕೆ ಆಸರೆಯಾದರು. ಸ್ವೀಪ್, ಡ್ರೈವ್ ಮೂಲಕ ಕ್ಲೋಸ್ ಇನ್ ಫೀಲ್ಡರ್‌ಗಳನ್ನು ವಂಚಿಸಿ ಚೆಂಡನ್ನು ಬೌಂಡರಿಗೆರೆ ದಾಟಿಸಿದರು. ಇನ್ನೊಂದೆಡೆ 25 ವರ್ಷದ ಎಡಗೈ ಬ್ಯಾಟರ್ ದೇವದತ್ತ ಕೂಡ ಬೌಲರ್‌ಗಳಿಗೆ ಬಿಸಿ ಮುಟ್ಟಿಸಿದರು. ತಂಡವು ಇನ್ನೂರರ ಗಡಿ ದಾಟಿದಾಗ ಶ್ರೇಯಸ್ ಅವರು ಅನ್ಮೋಲ್‌ಜೀತ್ ಸಿಂಗ್



ದೇವದತ್ತ ಪಡಿಕ್ಕಲ್

ಎಸೆತವನ್ನು ಮುನ್ನುಗ್ಗಿ ಹೊಡೆಯಲು ಯತ್ನಿಸಿ ಬೀಟ್ ಆದರು. ವಿಕೆಟ್‌ಕೀಪರ್ ಅನ್ಮೋಲ್ ಮಲ್ಹೋತ್ರಾ ಸ್ಟಂಪಿಂಗ್ ಮಾಡಿದರು. ಶ್ರೇಯಸ್ ಪಂದ್ಯದ ಈ ಮೊದಲ ಇನಿಂಗ್ಸ್‌ನಲ್ಲಿ ಅರ್ಧಶತಕ ಗಳಿಸಿದ್ದರು. ಒಟ್ಟು ಆರು ವಿಕೆಟ್ ಕೂಡ ಗಳಿಸಿದ್ದರು.

ಈ ನಡುವೆ ಪಂಜಾಬ್ ತಂಡದ ಕೆಲವು ಫೀಲ್ಡರ್‌ಗಳು ಸ್ನಾಯುಸೆಳೆತದ ನೆಪವೊಡ್ಡಿ ಪದೇ ಪದೇ ತಮ್ಮ ವೈದ್ಯಕೀಯ ಸಿಬ್ಬಂದಿಯನ್ನು ಕರೆಸಿಕೊಳ್ಳುತ್ತಿದ್ದರು. ಕಾಲಹರಣದ ಪ್ರಹಸನದಂತೆ ಕಂಡ ಈ ನಡೆಗೆ ಒಂದು ಹಂತದಲ್ಲಿ ಅಂಪೈರ್‌ಗಳು ಎಚ್ಚರಿಕೆ ಕೂಡ ನೀಡಿದರು. ಆದರೆ ಇದಾವುದೂ ದೇವದತ್ತ ಏಕಾಗ್ರತೆಗೆ ಭಂಗ ತರಲಿಲ್ಲ.

ಕ್ರೀಸ್‌ಗೆ ಬಂದ ವಿದ್ಯಾಧರ್ ಪಾಟೀಲ (ಅಜೇಯ 14) ತಮ್ಮ ನಾಯಕನ ಆಟಕ್ಕೆ ಸಾಥ್ ನೀಡಿದರು. ಇಬ್ಬರೂ ಸೇರಿ ತಂಡವನ್ನು ಗೆಲುವಿನ ದಡ ಮುಟ್ಟಿಸಿದರು. ಡ್ರೆಸಿಂಗ್ ರೂಮ್‌ನಲ್ಲಿದ್ದ ಕೋಚ್ ಯರೇಗೌಡ, ನೆರವು ಸಿಬ್ಬಂದಿ ಮತ್ತು ಸಹ ಆಟಗಾರರು ಓಡಿಬಂದು ದೇವದತ್ತ ಅವರನ್ನು ಅಭಿನಂದಿಸಿದರು.

ಶತಕವಂಚಿತ ಉದಯ್: ಮೂರನೇ ದಿನದಾಟದ ಅಂತ್ಯಕ್ಕೆ ಪಂಜಾಬ್ ತಂಡವು ಎರಡನೇ ಇನಿಂಗ್ಸ್‌ನಲ್ಲಿ 3 ವಿಕೆಟ್‌ಗಳಿಗೆ 119 ರನ್ ಗಳಿಸಿತ್ತು. ಒಟ್ಟು 112 ರನ್‌ಗಳ ಮುನ್ನಡೆ ಸಾಧಿಸಿತ್ತು. ಅರ್ಧಶತಕ ಗಳಿಸಿದ್ದ ನಾಯಕ ಉದಯ್ ಸಹರನ್ ಮತ್ತು ಅನ್ಮೋಲ್‌ಪ್ರೀತ್ ಸಿಂಗ್ (ಬ್ಯಾಟಿಂಗ್ 6) ಕ್ರೀಸ್‌ನಲ್ಲಿದ್ದರು. ಕೊನೆಯ ದಿನ ಬೆಳಿಗ್ಗೆಯ ಅವಧಿಯ ಬಹುತೇಕ ಸಮಯ ಉದಯ್ ಬ್ಯಾಟಿಂಗ್ ಮಾಡಿದರು. ಆದರೆ 93 ರನ್ ಗಳಿಸಿದ್ದ ಉದಯ್ ಅವರನ್ನು ಕ್ಲೀನ್ ಬೌಲ್ಡ್ ಮಾಡುವಲ್ಲಿ ಶಿಖರ್ ಶೆಟ್ಟಿ ಯಶಸ್ವಿಯಾದರು. ಅನ್ಮೋಲ್‌ಪ್ರೀತ್ ಸಿಂಗ್ (44ರನ್) ಮತ್ತು ಹರಪ್ರೀತ್ ಬ್ರಾರ್ (29 ರನ್) ಅವರನ್ನು ಬಿಟ್ಟರೆ ಉಳಿದ ಬ್ಯಾಟರ್‌ಗಳಿಗೆ ದೊಡ್ಡ ಇನಿಂಗ್ಸ್ ಆಡಲು ಬೌಲರ್‌ಗಳು ಬಿಡಲಿಲ್ಲ. ಇದರಿಂದಾಗಿ ತಂಡವು 101 ಓವರ್‌ಗಳಲ್ಲಿ 256 ರನ್ ಗಳಿಸಿತು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಪಂಜಾಬ್: 92 ಓವರ್‌ಗಳಲ್ಲಿ 309. ಕರ್ನಾಟಕ: 110.2 ಓವರ್‌ಗಳಲ್ಲಿ 316. ಎರಡನೇ ಇನಿಂಗ್ಸ್: ಪಂಜಾಬ್: 101 ಓವರ್‌ಗಳಲ್ಲಿ 256 (ಉದಯ್ ಸಹರನ್ 93, ಅನ್ಮೋಲ್‌ಪ್ರೀತ್ ಸಿಂಗ್ 44, ಶಿಖರ್ ಶೆಟ್ಟಿ 82ಕ್ಕೆ2, ಪ್ರಸಿದ್ಧ ಕೃಷ್ಣ 49ಕ್ಕೆ3, ಶ್ರೇಯಸ್ ಗೋಪಾಲ್ 43ಕ್ಕೆ3) ಕರ್ನಾಟಕ: 27.5 ಓವರ್‌ಗಳಲ್ಲಿ 5ಕ್ಕೆ252 (ದೇವದತ್ತ ಪಡಿಕ್ಕಲ್ ಔಟಾಗದೇ 120, ಮಯಂಕ್ ಅಗರವಾಲ್ 53, ಶ್ರೇಯಸ್ ಗೋಪಾಲ್ 33, ಅನ್ಮೋಲ್‌ಜೀತ್ ಸಿಂಗ್ 40ಕ್ಕೆ3)
ಫಲಿತಾಂಶ: ಕರ್ನಾಟಕಕ್ಕೆ 5 ವಿಕೆಟ್ ಜಯ.
ಪಂದ್ಯದ ಆಟಗಾರ: ದೇವದತ್ತ ಪಡಿಕ್ಕಲ್.

ಪಾಕ್ ವಿರುದ್ಧ ಸೇಡು ತೀರಿಸಿಕೊಂಡ ಆಯುಷ್ ಪಡೆ: ಕನಿಷ್ಕ್ ಆಲ್‌ರೌಂಡ್ ಆಟ

ಯೂತ್ ವಿಶ್ವಕಪ್: ಸೆಮಿಗೆ ಭಾರತ

ಬುಲವಾಯೊ (ಪಿಟಿಐ): ಆಲ್‌ರೌಂಡರ್ ಕನಿಷ್ಕ್ ಚೌಹಾಣ್ ಅವರ ಅಮೋಘ ಆಟದ ಹಾಗೂ ವೇದಾಂತ್ ತ್ರಿವೇದಿ ಅರ್ಧಶತಕದ ಬಲದಿಂದ ಭಾರತ 19 ವರ್ಷದೊಳಗಿನವರ ತಂಡವು ಐಸಿಸಿ ಯೂತ್ ವಿಶ್ವಕಪ್ ಟೂರ್ನಿಯಲ್ಲಿ ಪಾಕಿಸ್ತಾನ ಎದುರು ಜಯಿಸಿತು. ಇದರೊಂದಿಗೆ ಭಾರತದ ಯುವಪಡೆ ಸೆಮಿಫೈನಲ್‌ಗೆ ಲಗ್ಗೆ ಇಟ್ಟಿತು.

ಭಾನುವಾರ ಇಲ್ಲಿ ನಡೆದ ಸೂಪರ್ ಸಿಕ್ಸ್ ಪಂದ್ಯದಲ್ಲಿ ಭಾರತ ತಂಡವು 58 ರನ್‌ಗಳಿಂದ ಭರ್ಜರಿ ಗೆಲುವು ಸಾಧಿಸಿತು. ಸೆಮಿಫೈನಲ್‌ನಲ್ಲಿ ಆಯುಷ್ ಮ್ಹಾತ್ರೆ ನಾಯಕತ್ವದ ಭಾರತ ತಂಡವು ಅಫ್ಗಾನಿಸ್ತಾನ ಎದುರು ಕಣಕ್ಕಿಳಿಯಲಿದೆ.

ಕನಿಷ್ಕ್ ಅವರು 29 ಎಸೆತಗಳಲ್ಲಿ 35 ರನ್ ಗಳಿಸಿದರು. ಅಲ್ಲದೇ ಎಂಟನೇ ವಿಕೆಟ್ ಜೊತೆಯಾಟದಲ್ಲಿ ಖಿಲಾನ್ ಪಟೇಲ್ (ಅಜೇಯ 21, 15ಎ) ಅವರೊಂದಿಗೆ 50 ರನ್ ಸೇರಿಸಿದರು. ಇದರಿಂದಾಗಿ ತಂಡವು 49.5 ಓವರ್‌ಗಳಲ್ಲಿ 252 ರನ್ ಗಳಿಸಿತು.

ಪಾಕ್ ತಂಡವು ಸೆಮಿಫೈನಲ್ ಪ್ರವೇಶಿಸಲು ತನ್ನ ರನ್‌ರೇಟ್ ಕೂಡ ಉತ್ತಮಪಡಿಸಿಕೊಳ್ಳಬೇಕಾಗಿತ್ತು. ಅದಕ್ಕಾಗಿ 253 ರನ್ ಗುರಿಯನ್ನು 33.3 ಓವರ್‌ಗಳಲ್ಲಿ ಸಾಧಿಸಬೇಕಿತ್ತು. ಆದರೆ ತಂಡದ ಬ್ಯಾಟರ್‌ಗಳು ಅದಕ್ಕೆ ತಕ್ಕಂತೆ ಆಡಲಿಲ್ಲ. ಇದರಿಂದಾಗಿ ಪಾಕ್ ತಂಡವು 33.3 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 167 ರನ್ ಗಳಿಸಿತು.

ಕನಿಷ್ಕ್ ಬೌಲಿಂಗ್‌ನಲ್ಲಿಯೂ ಮಿಂಚಿದರು. 10 ಓವರ್‌ಗಳಲ್ಲಿ ಕೇವಲ 10 ರನ್ ಕೊಟ್ಟು 1 ವಿಕೆಟ್ ಕೂಡ



ಅರ್ಧಶತಕ ಗಳಿಸಿದ ವೇದಾಂತ್ ತ್ರಿವೇದಿ 'ಎಕ್ಸ್' ಚಿತ್ರ

ಗಳಿಸಿದರು. 40 ಡಾಟ್‌ಬಾಲ್‌ಗಳನ್ನು ಹಾಕಿದರು.

ಕಳೆದ ಯೂತ್ ಏಷ್ಯಾ ಕಪ್ ಕ್ರಿಕೆಟ್ ಟೂರ್ನಿಯ ಫೈನಲ್‌ನಲ್ಲಿ ಪಾಕ್ ತಂಡದ ಎದುರು ಭಾರತ ತಂಡ



ಕನಿಷ್ಕ್ ಚೌಹಾಣ್

ಸೋತಿತ್ತು. ಇಲ್ಲಿ ಆಯುಷ್ ಬಳಗವು ಮುಯ್ಯಿ ತೀರಿಸಿಕೊಂಡಿತು.

ಮೊದಲು ಬ್ಯಾಟಿಂಗ್ ಮಾಡಿದ ಭಾರತ ತಂಡದ ಆರಂಭಿಕ ಆಟಗಾರ ವೈಭವ್ ಸೂರ್ಯವಂಶಿ (30; 22ಎ) ತಮ್ಮ ಆಕ್ರಮಣಕಾರಿ ಶೈಲಿಯಲ್ಲಿ ಬ್ಯಾಟ್ ಬೀಸಿದರು. ಆದರೆ ಎಡಗೈ ವೇಗಿ ಮೊಹಮ್ಮದ್ ಸಯ್ಯಾಮ್ (69ಕ್ಕೆ2) ಬೌಲಿಂಗ್‌ನಲ್ಲಿ ಪುಲ್ ಹೊಡೆತ ಪ್ರಯೋಗಿಸಿ ಔಟಾದರು.

ನಾಯಕ ಆಯುಷ್ ವೈಫಲ್ಯ ಮುಂದುವರಿಯಿತು. ಅವರು ಇಲ್ಲಿಯೂ ಮೊದಲ ಎಸೆತದಲ್ಲಿಯೇ ಔಟಾದರು. ಇದರಿಂದಾಗಿ 47ಕ್ಕೆ3 ವಿಕೆಟ್ ಕಳೆದುಕೊಂಡ ತಂಡವು ಸಂಕಷ್ಟಕ್ಕೊಳಗಾಯಿತು.

ಈ ಹಂತದಲ್ಲಿ ವೇದಾಂತ್ ತ್ರಿವೇದಿ (68 ರನ್) ಅರ್ಧಶತಕ ಗಳಿಸಿದರು.


ಸಂಕ್ಷಿಪ್ತ ಸ್ಕೋರು: ಭಾರತ: 49.5 ಓವರ್‌ಗಳಲ್ಲಿ 252 (ವೈಭವ್ ಸೂರ್ಯವಂಶಿ 30, ವೇದಾಂತ್ ತ್ರಿವೇದಿ 68, ಅಂಬರೀಶ್ 29, ಕನಿಷ್ಕ ಚೌಹಾಣ್ 35, ಖಿಲಾನ್ ಪಟೇಲ್ 21, ಮೊಹಮ್ಮದ್ ಸಯ್ಯದ್ 69ಕ್ಕೆ2, ಅಬ್ದುಲ್ ಸುಬಾನ್ 33ಕ್ಕೆ3) ಪಾಕಿಸ್ತಾನ: 46.2 ಓವರ್‌ಗಳಲ್ಲಿ 194 (ಹಮ್ಜಾ ಝುಹೂರ್ 42, ಉಸ್ಮಾನ್ ಖಾನ್ 66, ಫರ್ಹಾನ್ ಯೂಸುಫ್ 38, ಖಿಲಾನ್ ಪಟೇಲ್ 35ಕ್ಕೆ3, ಆಯುಷ್ ಮ್ಹಾತ್ರೆ 21ಕ್ಕೆ3) ಫಲಿತಾಂಶ : ಭಾರತ ಯುವಪಡೆಗೆ 58 ರನ್ ಜಯ.

ಎಲಿಮಿನೇಟರ್‌ಗೆ ಜೆಮಿಮಾ ಪಡೆ ಲಗ್ಗೆ

ಮಹಿಳಾ ಪ್ರೀಮಿಯರ್ ಲೀಗ್

ವಡೋದರ (ಪಿಟಿಐ): ಮರೈಝನ್ ಕಾಪ್ ಅವರ ಪರಿಣಾಮಕಾರಿ ಬೌಲಿಂಗ್ ಹಾಗೂ ಲಾರಾ ವೋಲ್ವಾರ್ಟ್ ಅವರ ಬ್ಯಾಟಿಂಗ್ ಬಲದಿಂದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಮಹಿಳಾ ಪ್ರೀಮಿಯರ್ ಲೀಗ್ ಪಂದ್ಯದಲ್ಲಿ ಭಾನುವಾರ 5 ವಿಕೆಟ್‌ಗಳಿಂದ ಯು.ಪಿ. ವಾರಿಯರ್ಸ್ ತಂಡವನ್ನು ಮಣಿಸಿ, ಎಲಿಮಿನೇಟರ್ ಪ್ರವೇಶಿಸಿತು.

ಇಲ್ಲಿನ ಕೊತಂಬಿ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದ ಡೆಲ್ಲಿ ತಂಡದ ಜೆಮಿಮಾ ರಾಡ್ರಿಗಸ್ ಫೀಲ್ಡಿಂಗ್ ಆಯ್ದುಕೊಂಡರು. ಮರಿಝಾನ್ ಕಾಪ್ (30ಕ್ಕೆ 3), ಶಿನೆಲ್ ಹೆನ್ರಿ (25ಕ್ಕೆ 2) ಮತ್ತು ಶ್ರೀಚರಣಿ (22ಕ್ಕೆ 2) ಅವರು ನಾಯಕಿಯ ನಿರ್ಧಾರವನ್ನು ಸಮರ್ಥಿಸುವಂತೆ ಬಿಗುವಿನ ಬೌಲಿಂಗ್ ದಾಳಿ ನಡೆಸಿದರು.



ಮರೈಝನ್ ಕಾಪ್ ಪಿಟಿಐ ಚಿತ್ರ

ನಿರಂತರವಾಗಿ ವಿಕೆಟ್ ಕಳೆದುಕೊಂಡ ವಾರಿಯರ್ಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್ ಕಳೆದುಕೊಂಡು 122 ರನ್ ಗಳಿಸಲಷ್ಟೇ ಶಕ್ತವಾಯಿತು. ಆರಂಭಿಕ ಆಟಗಾರ್ತಿ ದೀಪ್ತಿ ಶರ್ಮಾ (24), ಮಧ್ಯಮ ಕ್ರಮಾಂಕದ ಸಿಮ್ರನ್ ಶೇಕ್ (22) ಹಾಗೂ ಕೆಳಕ್ರಮಾಂಕದ ಆಟಗಾರ್ತಿ ಶಿಖಾ ಪಾಂಡೆ (ಔಟಾಗದೇ 23) ಕೊಂಚ ಹೋರಾಟ ತೋರಿದರು.

94 ರನ್‌ಗಳಿಗೆ 8 ವಿಕೆಟ್ ಕಳೆದುಕೊಂಡು ಸಂಕಷ್ಟದಲ್ಲಿದ್ದ ತಂಡವನ್ನು ಸೋಫಿ ಎಕ್ಲೆಸ್ಟೋನ್ (ಔಟಾಗದೇ 10) ಮತ್ತು ಶಿಖಾ ಅವರು ನೂರರ ಗಡಿ ದಾಟಿಸಿದರು. ಅವರು ಮುರಿಯದ ಒಂಬತ್ತನೇ ವಿಕೆಟ್ ಜೊತೆಯಾಟದಲ್ಲಿ 28 ರನ್ ಪೇರಿಸಿದರು.

ಸುಲಭ ಗುರಿ ಬೆನ್ನಟ್ಟಿದ ಡೆಲ್ಲಿ ತಂಡದ ವೋಲ್ವಾರ್ಟ್ (47; 36ಎ, 4x5) ಹಾಗೂ ಶಫಾಲಿ ವರ್ಮಾ (25; 28ಎ) ಎರಡನೇ ವಿಕೆಟ್ ಜೊತೆಯಾಟದಲ್ಲಿ 73 ರನ್ ಸೇರಿಸಿದರು. ಬಳಿಕ, ನಾಯಕಿ ಜೆಮಿಮಾ (ಔಟಾಗದೇ 34; 18 ಎ; 4x5) ಬಿರುಸಿನ ಬ್ಯಾಟಿಂಗ್‌ನೊಂದಿಗೆ ತಂಡವನ್ನು ಸುಲಭವಾಗಿ ದಡ ತಲುಪಿಸಿದರು. ಅದರೊಂದಿಗೆ, ಎಲಿಮಿನೇಟರ್ ಗೇರುವ ಮುಂಬೈ ಇಂಡಿಯನ್ಸ್ ತಂಡದ ಕನಸು ಭಗ್ನಗೊಂಡಿತು.

ಡೆಲ್ಲಿ ತಂಡವು ಮಂಗಳವಾರ ನಡೆಯಲಿರುವ ಎಲಿಮಿನೇಟರ್ ಪಂದ್ಯದಲ್ಲಿ ಗುಜರಾತ್ ಜೈಂಟ್ಸ್ ತಂಡದೊಂದಿಗೆ ಹಣಾಹಣಿ ನಡೆಸಲಿದೆ. ವಿಜೇತ ತಂಡವು ಫೈನಲ್‌ನಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವನ್ನು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರು: ಯು.ಪಿ ವಾರಿಯರ್ಸ್: 20 ಓವರ್‌ಗಳಲ್ಲಿ 8 ವಿಕೆಟ್‌ಗೆ 122 (ದೀಪ್ತಿ ಶರ್ಮಾ 24, ಶಿಖಾ ಪಾಂಡೆ ಔಟಾಗದೇ 23; ಶಿನೆಲ್ ಹೆನ್ರಿ 25ಕ್ಕೆ2, ಮರೈಝನ್ ಕಾಪ್ 30ಕ್ಕೆ 3, ಶ್ರೀಚರಣಿ 22ಕ್ಕೆ 2). ಡೆಲ್ಲಿ ಕ್ಯಾಪಿಟಲ್ಸ್: 18.4 ಓವರ್‌ಗಳಲ್ಲಿ5 ವಿಕೆಟ್‌ಗೆ 126 (ಲಾರಾ ವೋಲ್ವಾರ್ಟ್ 47, ಔಟಾಗದೇ 34; ದೀಪ್ತಿ ಶರ್ಮಾ 27ಕ್ಕೆ2). ಫಲಿತಾಂಶ: ಡೆಲ್ಲಿ ಕ್ಯಾಪಿಟಲ್ಸ್ ತಂಡಕ್ಕೆ 5 ವಿಕೆಟ್ ಜಯ. ಪಂದ್ಯದ ಆಟಗಾರ್ತಿ: ಮರೈಝನ್ ಕಾಪ್.

ಚಿಟಿಕೆ ಸುದ್ದಿ

ಬಾಲ್ ಬಾಡ್ಮಿಂಟನ್: ಕರ್ನಾಟಕಕ್ಕೆ ಪ್ರಶಸ್ತಿ

ಮಂಗಳೂರು: ತಮಿಳುನಾಡಿನ ಈರೋಡ್‌ನಲ್ಲಿ ಭಾನುವಾರ ಮುಕ್ತಾಯಗೊಂಡ ರಾಷ್ಟ್ರೀಯ ಜೂನಿಯರ್ ಬಾಲ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನ ಬಾಲಕಿಯರ ವಿಭಾಗದ ಪ್ರಶಸ್ತಿ ಕರ್ನಾಟಕ ಗೆದ್ದುಕೊಂಡಿತು. ಬಾಲಕರ ತಂಡ ರನ್ನರ್ ಅಪ್ ಆಯಿತು.

ಭಾರತ ಬಾಲ್ ಬ್ಯಾಡ್ಮಿಂಟನ್ ಫೆಡರೇಷನ್ ಆಯೋಜಿಸಿದ್ದ ಚಾಂಪಿಯನ್‌ಷಿಪ್‌ನ ಫೈನಲ್ ಪಂದ್ಯದಲ್ಲಿ ಕರ್ನಾಟ ಬಾಲಕಿಯರು ಕಳೆದ ಬಾರಿಯ ಚಾಂಪಿಯನ್ ತಮಿಳುನಾಡು ವಿರುದ್ಧ 35–25, 35–31ರಲ್ಲಿ ಮಣಿಸಿದರು.

ನಾಯಕಿ ಗೀತಾ ಹಾಗೂ ಶುಭಶ್ರೀ, ಬಾಲಕರ ತಂಡದ ಚರಣ್ ಸ್ಟಾರ್ ಆಫ್ ಇಂಡಿಯಾ ಪ್ರಶಸ್ತಿ ಗಳಿಸಿದರು

ರಾಜ್ಯ ಬಾಲಕರ ತಂಡ ಪ್ರಶಸ್ತಿ ಸುತ್ತಿನ ಪಂದ್ಯದಲ್ಲಿ ತಮಿಳುನಾಡು ಎದುರು 26–35, 27–35ರಲ್ಲಿ ಸೋತಿತು.

ಚೆಸ್: ಸಾಯಿ ಅಗ್ನಿಗೆ 'ಪ್ರಶಸ್ತಿ ಡಬಲ್'

ಬೆಳ್ತಂಗಡಿ (ದಕ್ಷಿಣ ಕನ್ನಡ): ಇಂಟರ್ ನ್ಯಾಷನಲ್ ಮಾಸ್ಟರ್, ತೆಲಂಗಾಣದ ಸಾಯಿ ಅಗ್ನಿ ಜೀವಿತೇಶ್ ಇಲ್ಲಿ ನಡೆದ ಫಿಡೆ ರೇಟೆಡ್ 'ಎಸ್‌ಡಿಎಂ–ಆರ್‌ಸಿಸಿ ರೋಟೊ ಲಾಯರ್ಸ್' ಅಂತರ ರಾಷ್ಟ್ರೀಯ ರ್‍ಯಾಪಿಡ್ ಮತ್ತು ಬ್ಲಿಟ್ಜ್ ಚೆಸ್ ಟೂರ್ನಿಯ ಪ್ರಶಸ್ತಿಗಳನ್ನು ಗೆದ್ದರು.

ಟೂರ್ನಿಯ ರ್‍ಯಾಪಿಡ್ ವಿಭಾಗದಲ್ಲಿ ತೆಲಂಗಾಣದ ಭಾವನ್ ಕೊಲ್ಲ ಮತ್ತು ಬ್ಲಿಟ್ಜ್‌ನಲ್ಲಿ ಕರ್ನಾಟಕದ ಆರುಲ್ ಆನಂದ್ ರನ್ನರ್ ಅಪ್ ಆದರು. ಚಕ್ರವರ್ತಿ ರೆಡ್ಡಿ ಎರಡೂ ವಿಭಾಗದಲ್ಲಿ 4ನೇ ಸ್ಥಾನ ಪಡೆದರು. 10 ಸುತ್ತುಗಳ ರ್‍ಯಾಪಿಡ್‌ನಲ್ಲಿ 9 ಪಾಯಿಂಟ್ಸ್ ಗಳಿಸಿದ ಸಾಯಿ ಅಗ್ನಿ ₹35 ಸಾವಿರ ನಗದು ಮತ್ತು ಟ್ರೋಫಿ ತಮ್ಮದಾಗಿಸಿಕೊಂಡರು.

ಕಾರ್ಲೋಸ್ ಅಲ್ಕರಾಜ್ ಮುಡಿಗೆ ಕಿರೀಟ

ಕಿರಿಯ ವಯಸ್ಸಿನಲ್ಲಿ 'ಕ್ಯಾರೀರ್ ಗ್ರ್ಯಾನ್‌ಸ್ಲಾಮ್' ಸಾಧನೆ: ಜೊಕೊಗೆ ನಿರಾಸೆ

ಮೆಲ್ಬರ್ನ್ (ಎಎಫ್‌ಪಿ): ಸರ್ಬಿಯಾದ ದಿಗ್ಗಜ ನೊವಾಕ್ ಜೊಕೊವಿಚ್ ಅವರ ಸವಾಲನ್ನು ಬದಿಗೊತ್ತಿದ ವಿಶ್ವದ ಅಗ್ರಮಾನ್ಯ ಆಟಗಾರ ಕಾರ್ಲೋಸ್ ಅಲ್ಕರಾಜ್ ಅವರು ತಮ್ಮ ಮೊದಲ ಆಸ್ಟ್ರೇಲಿಯಾ ಓಪನ್ ಕಿರೀಟ ಮುಡಿಗೇರಿಸಿಕೊಂಡರು. ಇದರೊಂದಿಗೆ ಓಪನ್ ಯುಗದಲ್ಲಿ 'ಕ್ಯಾರೀರ್ ಗ್ರ್ಯಾನ್‌ಸ್ಲಾಮ್' ಸಾಧನೆ ಮಾಡಿದ ಅತಿ ಕಿರಿಯ ವಯಸ್ಸಿನ ಆಟಗಾರನೆಂಬ ಹೆಗ್ಗಳಿಕೆಯೂ ಅವರದಾಯಿತು.

ವಿಂಬಲ್ಡನ್, ಅಮೆರಿಕ ಓಪನ್ ಮತ್ತು ಫ್ರೆಂಚ್ ಓಪನ್‌ಗಳಲ್ಲಿ ತಲಾ ಎರಡು ಬಾರಿ ಚಾಂಪಿಯನ್ ಆಗಿದ್ದ ಅಲ್ಕರಾಜ್ ಅವರಿಗೆ ಇದು ಏಳನೇ ಗ್ರ್ಯಾನ್‌ಸ್ಲಾಮ್ ಪ್ರಶಸ್ತಿಯಾಗಿದೆ. 22ನೇ ವರ್ಷದಲ್ಲಿ ನಾಲ್ಕೂ ಗ್ರ್ಯಾನ್‌ಸ್ಲಾಮ್‌ಗಳನ್ನು ಜಯಿಸುವ ಮೂಲಕ ತಮ್ಮದೇ ದೇಶದ ರಫೆಲ್ ನಡಾಲ್ (24ನೇ ವಯಸ್ಸಿನಲ್ಲಿ) ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದರು. ವಿಶೇಷವೆಂದರೆ ಈ ಸಾಧನೆಗೆ ಕಿಕ್ಕಿರಿದು ಸೇರಿದ್ದ ಪ್ರೇಕ್ಷಕರೊಂದಿಗೆ ನಡಾಲ್ ಕೂಡ ಸಾಕ್ಷಿಯಾದರು.

ರಾಡ್ ಲೇವರ್ ಅರೇನಾದಲ್ಲಿ ಭಾನುವಾರ ನಡೆದ ಫೈನಲ್‌ನಲ್ಲಿ ಸ್ಪೇನ್‌ನ ಅಲ್ಕರಾಜ್ 2-6, 6-2, 6-3, 7-5ರಿಂದ ತಮಗಿಂತ 16 ವರ್ಷ ಹಿರಿಯ ಆಟಗಾರನನ್ನು ಹಿಮ್ಮೆಟ್ಟಿಸಿದರು. ಈ ಸೋಲಿನೊಂದಿಗೆ, ದಾಖಲೆಯ 25ನೇ ಗ್ರ್ಯಾನ್ ಸ್ಲಾಮ್ ಪ್ರಶಸ್ತಿ ಗೆಲ್ಲುವ ಜೊಕೊವಿಚ್ ಕನಸು ಮತ್ತೆ ಭಗ್ನಗೊಂಡಿತು.

'ಪ್ರತಿ ವರ್ಷ ಮೆಲ್ಬರ್ನ್‌ಗೆ ಬರುವುದು ನನಗೆ ಗೌರವದ ಸಂಗತಿ. ಈಗ ಕೆಲಸ ಮುಗಿದಿದೆ. ನಾಲ್ಕರಲ್ಲಿ ನಾಲ್ಕು ಪೂರ್ಣಗೊಂಡಿದೆ. ಕಠಿಣ ಸಂದರ್ಭದಲ್ಲಿ ನನ್ನನ್ನು ಪ್ರೋತ್ಸಾಹಿಸಿದ ಎಲ್ಲರಿಗೂ ಧನ್ಯವಾದಗಳು' ಎಂದು ಪಂದ್ಯದ ಬಳಿಕ ಅಲ್ಕರಾಜ್ ಪ್ರತಿಕ್ರಿಯಿಸಿದರು. ಜೊಕೊವಿಚ್ ಅವರನ್ನು ಕೊಂಡಾಡಿದ ಅವರು 'ಟೆನಿಸ್ ಆಟಗಾರರಿಗೆ



ಆಸ್ಟ್ರೇಲಿಯಾ ಓಪನ್ ಸಿಂಗಲ್ಸ್ ಪ್ರಶಸ್ತಿ ಗೆದ್ದ ಕಾರ್ಲೋಸ್ ಅಲ್ಕರಾಜ್ (ಎಡ) ರನ್ನರ್‌ಅಪ್ ನೊವಾಕ್ ಜೊಕೊವಿಚ್ ಎಎಫ್‌ಪಿ ಚಿತ್ರ

'ಕ್ಯಾರೀರ್ ಗ್ರ್ಯಾನ್‌ಸ್ಲಾಮ್' ಸಾಧಿಸಿದ ಕಿರಿಯ ಆಟಗಾರರು (ಓಪನ್ ಯುಗ)			
ಆಟಗಾರ	ದೇಶ	ಪ್ರಾಯ	ವರ್ಷ
ಕಾರ್ಲೋಸ್ ಅಲ್ಕರಾಜ್	ಸ್ಪೇನ್	22 ವರ್ಷ, 272 ದಿನ	2026
ರಫೆಲ್ ನಡಾಲ್	ಸ್ಪೇನ್	24 ವರ್ಷ 102 ದಿನ	2010
ರೋಜರ್ ಫೆಡರರ್	ಸ್ವಿಟ್ಜರ್ಲೆಂಡ್	27 ವರ್ಷ 303 ದಿನ	2009
ನೊವಾಕ್ ಜೊಕೊವಿಚ್	ಸರ್ಬಿಯಾ	29 ವರ್ಷ 15 ದಿನ	2016
ಆ್ಯಂಡ್ರೆ ಅಗಾಸಿ	ಅಮೆರಿಕ	29 ವರ್ಷ 68 ದಿನ	1999

ಮಾತ್ರವಲ್ಲದೆ ಪ್ರಪಂಚದಾದ್ಯಂತ ಇರುವ ಕ್ರೀಡಾಪಟುಗಳಿಗೆ ಅವರು ಸ್ಫೂರ್ತಿ' ಎಂದು ಹೇಳಿದರು.

ಮೆಲ್ಬರ್ನ್ ಪಾರ್ಕ್‌ನ ಫೈನಲ್‌ನಲ್ಲಿ ಜೊಕೊವಿಚ್ ಅವರಿಗೆ ಇದು ಮೊದಲ ಸೋಲಾಗಿತ್ತು. ಈ ಹಿಂದೆ ದಾಖಲೆಯ 10 ಫೈನಲ್‌ನಲ್ಲಿಯೂ ಜಯ ಗಳಿಸಿದ್ದರು. 24 ಗ್ರ್ಯಾನ್‌ಸ್ಲಾಮ್‌ಗಳೊಂದಿಗೆ ಆಸ್ಟ್ರೇಲಿಯಾದ ಮಾರ್ಗರೇಟ್ ಕೋರ್ಟ್ ಅವರ ದಾಖಲೆಯನ್ನು ಹಂಚಿಕೊಂಡಿರುವ ಜೊಕೊವಿಚ್ ಇಲ್ಲಿ ಪ್ರಶಸ್ತಿಗೆ ಮುತ್ತಿಕ್ಕಿ ಚಾರಿತ್ರಿಕ ದಾಖಲೆ ನಿರ್ಮಿಸುವ ಛಲದಲ್ಲಿದ್ದರು.

ಗ್ರ್ಯಾನ್‌ಸ್ಲಾಮ್ ಸಿಂಗಲ್ಸ್ ಟ್ರೋಫಿಯನ್ನು ಗೆದ್ದ ಅತ್ಯಂತ ಹಿರಿಯ ಆಟಗಾರನೆಂಬ ಹೆಗ್ಗಳಿಕೆಗೆ ಪಾತ್ರರಾಗಲು ಶ್ರಮಿಸುತ್ತಿರುವ ಜೊಕೊವಿಚ್, 2023ರಲ್ಲಿ ಕೊನೆಯ ಬಾರಿ ಅಮೆರಿಕ ಓಪನ್ ಗೆದ್ದಿದ್ದರು. ಅಂದಿನಿಂದ ಅಲ್ಕರಾಜ್ ಮತ್ತು ಇಟಲಿಯ ಯಾನಿಕ್ ಸಿನ್ನರ್ ಪಾರಮ್ಯ ಮೆರೆಯುತ್ತಿದ್ದಾರೆ.

'ಪ್ರಾಮಾಣಿಕವಾಗಿ ಹೇಳಬೇಕೆಂದರೆ ನಾನು ಮತ್ತೆ ಗ್ರ್ಯಾನ್‌ಸ್ಲಾಮ್‌ನ ಸಮಾರೋಪ ಸಮಾರಂಭದಲ್ಲಿ ನಿಲ್ಲುತ್ತೇನೆ ಎಂದು ಭಾವಿಸಿರಲಿಲ್ಲ. ಆದ್ದರಿಂದ ಕಳೆದ ಎರಡು ವಾರಗಳಲ್ಲಿ

ಅಲ್ಕರಾಜ್ ಗೆದ್ದ ಏಳು ಗ್ರ್ಯಾನ್‌ಸ್ಲಾಮ್‌ಗಳು	
ಅಮೆರಿಕ ಓಪನ್	2022, 2025
ವಿಂಬಲ್ಡನ್	2023, 2024
ಫ್ರೆಂಚ್ ಓಪನ್	2024, 2025
ಆಸ್ಟ್ರೇಲಿಯಾ ಓಪನ್	2026

₹26 ಕೋಟಿ ಚಾಂಪಿಯನ್ ಕಾರ್ಲೋಸ್ ಅಲ್ಕರಾಜ್ ಅವರಿಗೆ ಸಿಕ್ಕ ನಗದು ಬಹುಮಾನ

₹14 ಕೋಟಿ ರನ್ನರ್ ಅಪ್ ನೊವಾಕ್ ಜೊಕೊವಿಚ್ ಅವರಿಗೆ ಸಿಕ್ಕ ನಗದು ಬಹುಮಾನ

ನನ್ನನ್ನು ಬೆಂಬಲಿಸಿದ ನಿಮಗೆ ಕೃತಜ್ಞನಾಗಿದ್ದೇನೆ' ಎಂದು ಜೊಕೊವಿಚ್ ಅಭಿಮಾನಿಗಳನ್ನು ಉದ್ದೇಶಿಸಿ ಹೇಳಿದರು. ಇದೇ ವೇಳೆ ಮೆಲ್ಬರ್ನ್ ಪಾರ್ಕ್‌ನಲ್ಲಿ ಇದು ಅವರ ಕೊನೆಯ ಟೂರ್ನಿಯಾಗಿರಬಹುದು ಎಂದು ಸುಳಿವು ನೀಡಿದರು. 'ನಾಳೆ ಏನಾಗುತ್ತದೆಯೋ ದೇವರೇ ಬಲ್ಲ' ಎಂದರು.

ಸ್ಟ್ಯಾಂಡ್‌ನಲ್ಲಿದ್ದ ನಡಾಲ್ ಅವರನ್ನು ಉದ್ದೇಶಿಸಿ, 'ಇಲ್ಲಿ ಸ್ಪ್ಯಾನಿಷ್ ದಂತಕಥೆಗಳು ತುಂಬಾ ಇವೆ. ಇಂದು ನಾನು ಇಬ್ಬರು ಸ್ಪೇನ್ ದಿಗ್ಗಜರ ವಿರುದ್ಧ ಒಬ್ಬನೇ ಸೆಣಸಿದೆ ಎಂದು ಅನಿಸುತ್ತದೆ. ಇದು ನ್ಯಾಯಯುತವೇ' ಎಂದು ಜೊಕೊ ಹಾಸ್ಯ ಚಟಾಕಿ ಹಾರಿಸಿದರು.

ನಾಲ್ಕನೇ ಶ್ರೇಯಾಂಕದ ಜೊಕೊವಿಚ್ ಅವರು ಹಾಲಿ ಚಾಂಪಿಯನ್ ಯಾನಿಕ್ ಸಿನ್ನರ್ ವಿರುದ್ಧ; ಅಲ್ಕರಾಜ್ ಅವರು ಮೂರನೇ ಶ್ರೇಯಾಂಕದ ಅಲೆಕ್ಸಾಂಡರ್ ಜ್ವರೇವ್ ವಿರುದ್ಧ ತಮ್ಮ ಸೆಮಿಫೈನಲ್‌ಗಳಲ್ಲಿ ಐದು ದೀರ್ಘ ಸೆಟ್‌ಗಳಲ್ಲಿ ಹೋರಾಡಿ ಗೆದ್ದಿದ್ದರು. ಅಲ್ಕರಾಜ್ ಇಲ್ಲಿ ಇದೇ ಮೊದಲ ಬಾರಿ ಕ್ವಾರ್ಟರ್ ಫೈನಲ್ ಹಂತವನ್ನು ದಾಟಿ ಬಂದಿದ್ದರು.

ಕರ್ನಾಟಕ ಬುಲ್ಡೋಜರ್ಸ್ ಚಾಂಪಿಯನ್

ಬೆಂಗಳೂರು: ಕರ್ನಾಟಕ ಬುಲ್ಡೋಜರ್ಸ್ ತಂಡವು ಭಾನುವಾರ ಸೆಲೆಬ್ರಿಟಿ ಕ್ರಿಕೆಟ್ ಲೀಗ್ (ಸಿಸಿಎಲ್) ಟಿ20 ಟೂರ್ನಿ–2026ರ ಚಾಂಪಿಯನ್ ಆಗಿ ಹೊರಹೊಮ್ಮಿತು. ಅದರೊಂದಿಗೆ, 12 ವರ್ಷಗಳ ಬಳಿಕ ಟೂರ್ನಿಯಲ್ಲಿ ಮತ್ತೆ ಪ್ರಶಸ್ತಿ ತನ್ನದಾಗಿಸಿಕೊಂಡಿತು.

ಕಿಚ್ಚ ಸುದೀಪ್ ನೇತೃತ್ವದ ಬುಲ್ಡೋಜರ್ಸ್ ತಂಡವು ತಮಿಳುನಾಡಿನ ಕೊಯಮತ್ತೂರಿನಲ್ಲಿ ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಆರು ವಿಕೆಟ್‌ಗಳಿಂದ ಬೆಂಗಾಲ್ ಟೈಗರ್ಸ್ ತಂಡವನ್ನು ಮಣಿಸಿತು.

ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಬೆಂಗಾಲ್ ತಂಡವು ಕುರಿ ಪ್ರತಾಪ್ (13ಕ್ಕೆ3) ಹಾಗೂ ಸುನೀಲ್ ಕುಮಾರ್ (33ಕ್ಕೆ2) ಅವರ ಪರಿಣಾಮಕಾರಿ ಬೌಲಿಂಗ್ ಎದುರು ರನ್ ಗಳಿಸುವಲ್ಲಿ ತಿಣುಕಾಡಿತು. ಒಂದೆಡೆ



ಕರ್ನಾಟಕ ಬುಲ್ಡೋಜರ್ಸ್ ತಂಡದ ನಾಯಕ ಕಿಚ್ಚ ಸುದೀಪ್ ಅವರು ಟ್ರೋಫಿ ಎತ್ತಿ ಹಿಡಿದು ಸಂಭ್ರಮಿಸಿದರು

ನಿರಂತರವಾಗಿ ವಿಕೆಟ್ ಉರುಳುತ್ತಿದ್ದರೂ ಧೃತಿಗೆಡದೆ ಆಡಿದ ಆರಂಭಿಕ ಬ್ಯಾಟರ್ ಜಾಯ್ ಕುಮಾರ್ ಮುಖರ್ಜಿ ಅರ್ಧಶತಕದೊಂದಿಗೆ ಆಸರೆಯಾದರು. ಅದರಿಂದಾಗಿ, ಬೆಂಗಾಲ್ ತಂಡವು 20 ಓವರ್‌ಗಳಲ್ಲಿ 129 ರನ್ ಗಳಿಸಿತು.

ಸಾಧಾರಣ ಗುರಿ ಬೆನ್ನಟ್ಟಿದ ಸುದೀಪ್ ಪಡೆಯು ರಾಜೀವ್ ಹನು (69; 37ಎ, 4x14, 6x1) ಅವರ ಬಿರುಸಿನ ಬ್ಯಾಟಿಂಗ್ ಬಲದಿಂದ 16.4 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು ದಡ ಸೇರಿತು.

2013 ಮತ್ತು 2014ರ ಚಾಂಪಿಯನ್ ಬುಲ್ಡೋಜರ್ಸ್ ತಂಡವು ಟೂರ್ನಿಯಲ್ಲಿ ಅಜೇಯವಾಗಿ ಫೈನಲ್ ತಲುಪಿತ್ತು.

ಸಂಕ್ಷಿಪ್ತ ಸ್ಕೋರು: ಬೆಂಗಾಲ್ ಟೈಗರ್ಸ್: 20 ಓವರ್‌ಗಳಲ್ಲಿ 129 (ಜಾಯ್ ಕುಮಾರ್ ಮುಖರ್ಜಿ 54; ಕುರಿ ಪ್ರತಾಪ್ 13ಕ್ಕೆ3, ಸುನೀಲ್ ಕುಮಾರ್ 33ಕ್ಕೆ2). ಕರ್ನಾಟಕ ಬುಲ್ಡೋಜರ್ಸ್: 16.4 ಓವರ್‌ಗಳಲ್ಲಿ 4 ವಿಕೆಟ್‌ಗೆ 133 (ರಾಜೀವ್ ಹನು 69, ಮಂಜುನಾಥ್ ಗೌಡ ಔಟಾಗದೇ 20; ರತ್ನದೀಪ್ ಘೋಷ್ 17ಕ್ಕೆ3).

ಕ್ರೀಡಾ ಸಾಮಗ್ರಿ ತಯಾರಿಕೆಗೆ ಬೆಂಬಲ

ಕೇಂದ್ರ ಬಜೆಟ್ 20206–27

ನವದೆಹಲಿ (ಪಿಟಿಐ): ಕ್ರೀಡಾ ಸಾಮಗ್ರಿಗಳ ತಯಾರಿಕಾ ವಲಯಕ್ಕೆ ಈ ಬಾರಿಯ ಕೇಂದ್ರ ಬಜೆಟ್‌ನಲ್ಲಿ ಆದ್ಯತೆ ನೀಡಲಾಗಿದ್ದು, ₹500 ಕೋಟಿ ಅನುದಾನ ನಿಗದಿಪಡಿಸಲಾಗಿದೆ. ಅಲ್ಲದೆ, ಮುಂದಿನ 10 ವರ್ಷಗಳಲ್ಲಿ ಕ್ರೀಡಾ ವಲಯದ ಸರ್ವತೋಮುಖ ಅಭಿವೃದ್ಧಿಗಾಗಿ 'ಖೇಲೊ ಇಂಡಿಯಾ ಮಿಷನ್' ಯೋಜನೆಯನ್ನು ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದಾರೆ.

ಕ್ರೀಡಾ ಸಲಕರಣೆಗಳ ತಯಾರಿಕೆ, ಅವುಗಳ ಉತ್ಪಾದನೆಗೆ ಸಂಬಂಧಿಸಿದ ಸಂಶೋಧನೆ ಹಾಗೂ ಆವಿಷ್ಕಾರಗಳನ್ನು ಬೆಂಬಲಿಸಲು ಕೇಂದ್ರ ಸರ್ಕಾರವು ಇದೇ ಮೊದಲ ಬಾರಿಗೆ ಈ ಬಗ್ಗೆ ಯೋಜನೆ ರೂಪಿಸಿದೆ. ಈ ಯೋಜನೆಯು ಕ್ರೀಡಾ ಸಾಮಗ್ರಿ ತಯಾರಿಸುವ ನವೋದ್ಯಮ ಸಂಸ್ಥೆಗಳಿಗೆ ಪ್ರೋತ್ಸಾಹ ನೀಡಲಿದೆ ಎನ್ನಲಾಗಿದೆ.

ಖೇಲೊ ಇಂಡಿಯಾ ಮಿಷನ್

ಮುಂದಿನ ಒಂದು ದಶಕದಲ್ಲಿ ದೇಶದಲ್ಲಿ ಕ್ರೀಡಾ ತರಬೇತಿ ಕೇಂದ್ರಗಳ ಉನ್ನತೀಕರಣ ಹಾಗೂ ಕೋಚಿಂಗ್ ವ್ಯವಸ್ಥೆಯ ಸುಧಾರಣೆಗಾಗಿ 'ಖೇಲೊ ಇಂಡಿಯಾ ಮಿಷನ್' ಆರಂಭಿಸುವುದಾಗಿ ಕೇಂದ್ರ ಸರ್ಕಾರ ಘೋಷಿಸಿದೆ. ಕ್ರೀಡಾ ಪ್ರತಿಭೆಗಳನ್ನು ಗುರುತಿಸಿ, ಅವರಿಗೆ ಗುಣಮಟ್ಟದ ತರಬೇತಿ ನೀಡಲು ಈ ಯೋಜನೆ ನೆರವು ನೀಡಲಿದೆ.

ಖೇಲೊ ಇಂಡಿಯಾ ಮಿಷನ್‌ನ ಐದು ಕ್ರಮಗಳು:

1. ತರಬೇತಿ ಕೇಂದ್ರಗಳ ಮೂಲಕ ಕ್ರೀಡಾ ಪ್ರತಿಭೆಗಳ ಅನ್ವೇಷಣೆ
2. ಕೋಚ್‌ಗಳು ಮತ್ತು ಸಹಾಯಕ ಸಿಬ್ಬಂದಿಗೆ ಕಾರ್ಯದಕ್ಷತೆಯ ತರಬೇತಿ
3. ಕ್ರೀಡಾ ವಿಜ್ಞಾನ ಮತ್ತು ತಂತ್ರಜ್ಞಾನದ ಸಮನ್ವಯ
4. ಕ್ರೀಡಾ ಸಂಸ್ಕೃತಿ ಪ್ರೋತ್ಸಾಹಿಸಲು ಸ್ಪರ್ಧೆಗಳು ಹಾಗೂ ಲೀಗ್‌ಗಳ ಆಯೋಜನೆ
5. ಕೂಟಗಳ ಆಯೋಜನೆ, ತರಬೇತಿಗಾಗಿ ಕ್ರೀಡಾ ಮೂಲಸೌಕರ್ಯ ಅಭಿವೃದ್ಧಿ

ಕ್ರೀಡಾ ಸಚಿವಾಲಯಕ್ಕೆ ಒಟ್ಟಾರೆ ₹4,479.88 ಕೋಟಿಯನ್ನು ಹಂಚಲಾಗಿದೆ. ಕಳೆದ ಬಾರಿಯ ಬಜೆಟ್‌ನಲ್ಲಿ ₹3,346.54 ಕೋಟಿಯನ್ನು ಹಂಚಿಕೆ ಮಾಡಲಾಗಿತ್ತು.

ಕ್ರೀಡಾಪಟುಗಳ ಪ್ರೋತ್ಸಾಹಧನ ಹೆಚ್ಚಳ: ಕ್ರೀಡಾಪಟುಗಳಿಗೆ ನೀಡಲಾಗುವ ಪ್ರೋತ್ಸಾಹ ಧನವನ್ನು ₹28 ಕೋಟಿಯಿಂದ ₹40 ಕೋಟಿಗೆ ಹೆಚ್ಚಿಸಲಾಗಿದೆ. ಖೇಲೊ ಇಂಡಿಯಾ ಯೋಜನೆಗೆ ₹924.35 ಕೋಟಿ ನಿಗದಿಪಡಿಸಲಾಗಿದೆ. ಕಾಮನ್‌ವೆಲ್ತ್ ಕೂಟಕ್ಕೆ ನೀಡಲಾಗುವ ನೆರವನ್ನು ₹28.05 ಕೋಟಿಯಿಂದ ₹50 ಕೋಟಿಗೆ ಏರಿಕೆ ಮಾಡಲಾಗಿದೆ.

ಥಾಯ್ಲೆಂಡ್ ಮಾಸ್ಟರ್ಸ್ ಗೆದ್ದ ದೇವಿಕಾ

ಬ್ಯಾಂಕಾಕ್ (ಪಿಟಿಐ): ಭಾರತದ ಉದಯೋನ್ಮುಖ ಬ್ಯಾಡ್ಮಿಂಟನ್ ಆಟಗಾರ್ತಿ ದೇವಿಕಾ ಸಿಹಾಗ್ ಅವರು ಭಾನುವಾರ ಥಾಯ್ಲೆಂಡ್ ಮಾಸ್ಟರ್ಸ್ ಫೈನಲ್‌ನಲ್ಲಿ ಜಯಿಸುವ ಮೂಲಕ ಚೊಚ್ಚಲ ಬಿಡಬ್ಲ್ಯುಎಫ್ ಸೂಪರ್ 300 ಕಿರೀಟ ಮುಡಿಗೇರಿಸಿಕೊಂಡರು.

ಹರಿಯಾಣದ ದೇವಿಕಾ ಮಹಿಳಾ ಸಿಂಗಲ್ಸ್ ಫೈನಲ್‌ನಲ್ಲಿ 21-8, 6-3ರಲ್ಲಿ ಮುನ್ನಡೆಯಲ್ಲಿದ್ದಾಗ ಮಲೇಷ್ಯಾದ ಗೋ ಜಿನ್ ವೀ ಅವರು ಮಂಡಿರಜ್ಜು ಗಾಯದಿಂದಾಗಿ ಸ್ಪರ್ಧೆಯಿಂದ ಹಿಂದೆ ಸರಿದರು. ಇದರೊಂದಿಗೆ 20 ವರ್ಷದ ದೇವಿಕಾ ವೃತ್ತಿಜೀವನದ ಪ್ರತಿಷ್ಠಿತ ಪ್ರಶಸ್ತಿಗೆ ಮುತ್ತಿಕ್ಕಿ, ₹17.19 ಲಕ್ಷ ಬಹುಮಾನ ಗೆದ್ದುಕೊಂಡರು. ಈ ಟೂರ್ನಿ ಒಟ್ಟು ₹2.29 ಕೋಟಿ ಬಹುಮಾನ ಮೊತ್ತವನ್ನು ಒಳಗೊಂಡಿತ್ತು.

ಪ್ರಸ್ತುತ ವಿಶ್ವ ರ‍್ಯಾಂಕಿಂಗ್‌ನಲ್ಲಿ 63ನೇ ಸ್ಥಾನದಲ್ಲಿರುವ ದೇವಿಕಾ ಅವರು ಬೆಂಗಳೂರಿನ ಪಡುಕೋಣೆ – ದ್ರಾವಿಡ್ ಶ್ರೇಷ್ಠತಾ ಕೇಂದ್ರದಲ್ಲಿ ಕೋಚ್



ದೇವಿಕಾ ಸಿಹಾಗ್

ಉಮೇಂದ್ರ ರಾಣಾ ಅವರಿಂದ ತರಬೇತಿ ಪಡೆಯುತ್ತಿದ್ದಾರೆ. 2025ರಲ್ಲಿ ಮಲೇಷ್ಯಾ ಇಂಟರ್‌ನ್ಯಾಷನಲ್‌ನಲ್ಲಿ ತನ್ನ ಚೊಚ್ಚಲ ಅಂತರರಾಷ್ಟ್ರೀಯ ಪ್ರಶಸ್ತಿಯನ್ನು ಗೆದ್ದಿದ್ದ ದೇವಿಕಾ, ಅದೇ ವರ್ಷ ಜಾಗತಿಕ ವಿಶ್ವ-ವಿದ್ಯಾಲಯ ಕ್ರೀಡಾಕೂಟದಲ್ಲಿ ಕಂಚಿನ ಪದಕ ಗೆದ್ದ ಭಾರತ ಮಿಶ್ರ ತಂಡದ ಭಾಗವಾಗಿದ್ದರು.

ದೇವಿಕಾ ಅವರು ಕಳೆದ ಋತುವಿನಲ್ಲಿ ಇಂಡೊನೇಷ್ಯಾ ಮಾಸ್ಟರ್ಸ್ ಸೂಪರ್ 100 ಟೂರ್ನಿಯಲ್ಲಿ ರನ್ನರ್ ಅಪ್ ಆಗಿದ್ದರು.